
పాశుపతి
M.SHIVARAM

ಹಿರಿಯರಿಗೆ ಮಾತ್ರ

ಶ್ರೀ ಯು.ಕೆ. ಅಮ್ಮೆಂಬಳ ಶಂಕರನಾರಾಯಣ ನಾವಡರಿಗೆ
ಪ್ರೀತಿಪುರಸ್ಸರವಾಗಿ
ಎಮ್. ಎಸ್. ಭಟ್ಟ
8-7-50.

ಪಾಶುಪತ

ಮೊಳೆಯಾರು ಶಂಕರನಾರಾಯಣ ಭಟ್ಟ, ವಿದ್ವಾನ್
ಗವರ್ನಮೆಂಟು ಕಾಲೇಜು, ಮಂಗಳೂರು.

1950 2-4-0.

ಉದಯ ಪ್ರಿಂಟರಿ ಎಂಡ್ ಪಬ್ಲಿಕೇಶನ್ಸ್, ಲಿಮಿಟೆಡ್, ಮಂಗಳೂರು.

ಬಿನ್ನಹ

ಅನೇಕ ಸಾವಿರ ವರುಷಗಳ ಹಿಂದೆಯೇ ಭರತಖಂಡದ ಆಸ್ತಿಕ ಶಿರೋಮಣಿಗಳ ಜ್ಞಾನಭಾಸ್ಕರನ ಮೂಲಕ ಪ್ರಪಂಚದ ಎಲ್ಲಾ ಭಾಗ ಗಳೂ ತೊಳಗಿ ಬೆಳಗಿದುವು. ಅವರ ಕೀರ್ತಿಯು ದಿಗಂತವಿಶ್ರಾಂತ ವಾಯಿತು. ಮಾನವಕುಲಕ್ಕೇ ಆರ್ಯಸಂಸ್ಕೃತಿಯನ್ನು ಸಾರಿದ ಪೂರ್ವ ಜರು ತಮ್ಮ ಪೀಳಿಗೆಯವರಾದ ನಮಗೆ ಸಂಪಾದಿಸಿ ಇಟ್ಟಿರುವ ಬದು ಕೆಂದರೆ ಚಂಚಲವೂ ನಶ್ವರವೂ ಎನಿಸಿದ ಹಣಕಾಸಲ್ಲ; ಮನೆಮಠವಲ್ಲ; ಆಸ್ತಿಪಾಸ್ತಿಯಲ್ಲ; ಬುದ್ಧಿಯನ್ನು ಸಂಸ್ಕರಿಸಿ ಇಹಪರಗಳಲ್ಲಿ ಶ್ರೇಯಸ್ಸನ್ನು ಅನುಗೊಳಿಸುವ ಸರ್ವಸನ್ಮಾನ್ಯಗಳೂ ಚಿರಭಾಸುರಗಳೂ ಎನಿಸುವ ಅನಂತಕೃತಿರತ್ನಗಳು. "ಹಿರಿಯರ ಬದುಕನ್ನು ಅನುಭವಿಸುವುದು ಕಿರಿ ಯರ ಹಕ್ಕು" ಎಂಬುದಾಗಿ ವಾದಿಸುತ್ತ ಅವುಗಳನ್ನು ಮನನಮಾಡ ದಿದ್ದರೆ ನಾವು ನಮ್ಮ ಅನರ್ಹತೆಯನ್ನು ತೋರಿಸಿಕೊಂಡಂತೆಯೂ ಅವರ ಸದುದ್ದೇಶವನ್ನು ಅಲ್ಲಗಳೆದಂತೆಯೂ ಆಗಿ ಇಹಪರಸುಖಸಾಧನೆಯ ದಾರಿಯನ್ನು ಬಿಟ್ಟು ಅಡ್ಡಾಡಿದಂತಾಗುವುದಿಲ್ಲವೆ? ಸತಿಯರು ಹಿತವಾದ ಗಳಿಂದ ಪುರುಷರನ್ನು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುವುದು ಲೋಕಪದ್ಧತಿಯು. ಹಾಗೆಯೇ ಸತ್ಕಾವ್ಯಗಳು ಹಿತಬೋಧನೆಗಳ ಮೂಲಕ ಸಮಾಜವನ್ನು ಬಹುಸುಲಭವಾಗಿ ದಾರಿಗೆ ತರುವುದರಿಂದ ಅವುಗಳ ಪ್ರಯೋಜನವನ್ನು ಹೇಳಿತೀರದು. ಅಂತಹ ಮಹಾಕಾವ್ಯಗಳು ಸಂಸ್ಕೃತಭಾಷೆಯಲ್ಲಿ ಅನೇಕವಾಗಿವೆ. ಅವುಗಳ ಮಹಿಮೆಯನ್ನು ತಿಳಿದುಕೊಳ್ಳಬೇಕಾದರೆ ಆ ದಿವ್ಯಭಾಷೆಯನ್ನೇ ಅಭ್ಯಾಸಮಾಡಬೇಕು. ಬರಬರುತ್ತ ಆ ಪದ್ಧತಿಯು ನಮ್ಮಲ್ಲಿ ಕಾರಣಾಂತರಗಳಿಂದ ಖಿಲವಾಗು ತ್ತಿರುವುದು ವಿಷಾದಿಸತಕ್ಕ ಸಂಗತಿಯೇ ಸರಿ.

ವಿದ್ವಾಂಸರಿಂದ ಮಹಾಕಾವ್ಯಗಳೆಂದು ಪರಿಗಣಿಸಲ್ಪಟ್ಟವುಗಳಲ್ಲಿ "ಕಿರಾತಾರ್ಜುನೀಯ"ವು ಒಂದಾಗಿರುವುದು. ಅದನ್ನು ವ್ಯಾಕರಣಶಾಸ್ತ್ರ ಪಾರಂಗತನೂ, ನೀತಿಶಾಸ್ತ್ರವಿಶಾರದನೂ, ರಾಜತಂತ್ರಕೋವಿದನೂ ಆಗಿದ್ದ

"ಭಾರವಿ"ಯೆಂಬ ಮಹಾಕವಿಯು ಬರೆದನು. ಅವನು ಬ್ರಾಹ್ಮಣನೆಂದೂ, ವಿದ್ವನ್ಮಂಡಲಿಯಿಂದ "ಸಾರತರನವಾರ್ಥಘೋಷಣಧುರೀಣ"ನೆಂದೂ ತಿಳಿ ಮಬರುತ್ತದೆ. ಈತನು ತನ್ನ ಕಾವ್ಯಕ್ಕೆ ಮಹಾಭಾರತದ ಅರಣ್ಯಪರ್ವ ಭಾಗದಿಂದ ವಸ್ತುವನ್ನು ಆಯ್ದುಕೊಂಡಿರುವನು. ಆದರೂ ಕಾವ್ಯಕ್ಕೆ ಶೋಭೆಯುಂಟಾಗುವಂತೆ ಸಂದರ್ಭಾನುಸಾರವಾಗಿ ಕಥೆಯನ್ನು ಅಲ್ಪ ಸ್ವಲ್ಪವಾಗಿ ವ್ಯತ್ಯಾಸಪಡಿಸುವ ಸ್ವಾತಂತ್ರ್ಯವು ಕವಿಯ ಅಧೀನದಲ್ಲಿರುವು ದರಿಂದಲೇ ಕಾವ್ಯವು ಶಾಶ್ವತವಾಗಿ ನೆಲಸಿರುವುದು.

ಭಾರವಿಯ ವಸ್ತುಗ್ರಥನಕೌಶಲ—ಅರ್ಜುನನಲ್ಲಿ ತಪಶ್ಚರಣೆ ಯೆಂಬ ಕಾರ್ಯತತ್ಪರತೆಯು ಉಂಟಾಗುವಂತೆ ಯುಧಿಷ್ಠಿರನೊಡನೆ ತಮ್ಮ ಹಾಗೂ ವೈರಿಗಳಾದ ಕೌರವರ ಸ್ಥಿತಿಗತಿಗಳ ವಿಚಾರವಾಗಿ ದ್ರೌಪದೀ ಭೀಮಸೇನರ ಚರ್ಚೆಯು ನಡೆಯುವುದಾದರೂ, ಅದರಿಂದಲೇ ತೃಪ್ತಿ ಹೊಂದದ ಕವಿಯು ವನೇಚರನ ಮೂಲಕ ದುರ್ಯೋಧನನ ಆಳಿಕೆ ಯನ್ನು ವರ್ಣಿಸುವ ಸಂದರ್ಭವನ್ನು ಪ್ರತಿಭೆಯ ಬಲದಿಂದಲೇ ಕಲ್ಪಿಸಿ ಕೊಂಡಿರುವನು. ಕೆರಳಿಸುವ ಹಾಗೆ ಮಾತಾಡಿದ ದ್ರೌಪದಿಗೆ ಯುಧಿಷ್ಠಿ ರನು ಉತ್ತರಕೊಡುವುದನ್ನು ಭಾರತದಲ್ಲಿ ನೋಡುವೆವಾದರೂ, ಭೀಮ ಸೇನನನ್ನು ಸಮಾಧಾನಗೊಳಿಸುವ ವಿಧಾನದಿಂದಲೇ ದ್ರೌಪದಿಯು ಪ್ರತ್ಯೇಕವಾಗಿ ಉತ್ತರವನ್ನು ಅಪೇಕ್ಷಿಸಲು ಎಡೆಯಿಲ್ಲದಂತೆ ಮಾಡಿದ ಕವಿಯ ಜಾಣ್ಮೆಯು ಶ್ಲಾಘನೀಯವಾಗಿರುವುದು. ವೇದವ್ಯಾಸನ ಮಂತ್ರೋಪದೇಶವನ್ನು ಅರ್ಜುನನಿಗೇ ಮಾಡುವಂತೆ ಕಲ್ಪಿಸಿದ ಸಂದ ರ್ಭವು ಬಹಳ ಚೆನ್ನಾಗಿರುವುದು. ಪಾಂಡವರು ಕಾಮ್ಯಕಾವನಕ್ಕೆ ಹೋದರೆಂಬ ಸಂಗತಿಯನ್ನು ರಸಭಂಗವಾಗಬಾರದೆಂಬ ಯೋಚನೆಯಿಂದ ಬಿಟ್ಟಿರಬಹುದು. ಅರ್ಜುನನಿಗೆ ಇಂದ್ರಕೀಲಪರ್ವತದ ದಾರಿಯನ್ನು ತೋರಿಸಲು ಯಕ್ಷನೊಬ್ಬನು ಬರುವಂತೆ ಕಲ್ಪಿಸಿರುವುದರಿಂದ ವ್ಯಾಸನ ಅನುಗ್ರಹಾತಿಶಯವನ್ನೂ ದೈವಾನುಕೂಲತೆಯನ್ನೂ ತಿಳಿಯಬಹುದಾಗಿದೆ. ಶರತ್ಕಾಲಹಿಮಾದ್ರಿಗಳನ್ನು ವಿಶೇಷವಾಗಿ ವರ್ಣಿಸಲು ಮಹಾಕಾವ್ಯಲಕ್ಷ ಣವೇ ಕಾರಣವಾಗಿರಬಹುದಾದರೂ ಕವಿಯ ದೃಷ್ಟಿಕೋಣದ ವೈವಿ ಧ್ಯವು ಬಹುಚಮತ್ಕಾರಜನಕವಾಗಿರುವುದು. ಅರ್ಜುನನ ತಪಸ್ಸನ್ನು

ಕೆಡಿಸುವ ಸಲುವಾಗಿ ಇಂದ್ರನು ಗಂಧರ್ವರ ಮೇಳದೊಡನೆ ಅಪ್ಸರಾಂಗನೆಯರನ್ನು ಕಳುಹಿಸುವುದೂ, ಅವರು ಸೋತು ಹಿಂದಿರುಗುವುದೂ, ಅರ್ಜುನನ ಮನೋದಾರ್ಢ್ಯವನ್ನು ವ್ಯಕ್ತಪಡಿಸುವುದಕ್ಕಾಗಿಯೆಂಬುದರಲ್ಲಿ ಸಂಶಯವಿಲ್ಲ. ಮೂಕಾಸುರನ ವಧೆಯಾದ ಬಳಿಕ ನಡೆಯುವ ಕಿರಾತನ ದೌತ್ಯವು ಬಹುಸ್ವಾರಸ್ಯವಾಗಿದೆ. ಇದು ಕವಿಯ ಯೋಗ್ಯತೆಯನ್ನು ಪ್ರಕಟಿಸುವ ಒರೆಗಲ್ಲೆಂದರೂ ಹೆಚ್ಚಾಗದು. ಕಿರಾತಾರ್ಜುನರೊಳಗೆ ನಾನಾವಿಧವಾಗಿ ನಡೆದ ಯುದ್ಧವು ಸಂಸ್ಮರಣೀಯವಾಗಿದೆ.

ವೀರರಸ ಪ್ರಧಾನವಾದ ಈ ಕಾವ್ಯವು ತ್ರಿವಿಕ್ರಮನ ಪಾದನ್ಯಾಸದಂತೆ ಮೂರು ಹಜ್ಜೆಗಳಿಂದ ಸಾಗುತ್ತಿರುವುದನ್ನು ನಾವು ಹೀಗೆ ನೋಡಬಹುದು—

೧. ಅರ್ಜುನನು ವೇದವ್ಯಾಸನ ಉಪದೇಶದಂತೆ ಇಂದ್ರನ ಅನುಗ್ರಹಸಂಪಾದನೆಗಾಗಿ ತಪಸ್ಸುಮಾಡುವುದು.

೨. ಪ್ರತ್ಯಕ್ಷನಾದ ದೇವೇಂದ್ರನ ಸೂಚನೆಯಂತೆ ಮಹಾರುದ್ರನನ್ನೊಲಿಸಲು ಮಾಡಿದ ಕಠಿನತಪಸ್ಸು.

೩. ಮಹಾದೇವನ ಪ್ರಸಾದರೂಪವಾಗಿ ಪಾಶುಪತಪ್ರಾಪ್ತಿ.

"ಈ ದೃಷ್ಟಿಯಿಂದ ಕಾವ್ಯವಿದು ಸ್ವರಾಜ್ಯಕ್ಕಾಗಿ ದೇಶಭಕ್ತನು ಹೇಗೆ ದುಡಿಯಬೇಕೆಂಬುದಕ್ಕೆ ಮಾರ್ಗದರ್ಶಿಯಾಗಿರುವುದಲ್ಲವೆ? ಶೌರ್ಯಗಾಂಭೀರ್ಯಸೌಶೀಲ್ಯಾದಿಗುಣಗಳಿಂದ ಕೂಡಿರುವ ಪಾತ್ರಗಳು ನಮ್ಮನು ಹುರಿದುಂಬಿಸಲಾರವೆ? ಓಜಪ್ರಸಾದವೇ ಮೊದಲಾದ ಗುಣವಿಶೇಷಗಳಿಂದ ಕೂಡಿ ಚಮತ್ಕಾರಜನಕಗಳಾದ ವಾಕ್ಯಗಳೇ ಹಾಸುಹೊಕ್ಕಾಗಿ ಉತ್ತಮನಾಯಕನನ್ನೊಳಗೊಂಡಿರುವ ಕಾವ್ಯವು ನಮ್ಮ ಜನಾಂಗಕ್ಕೆ ನೂತನವಾದ ಸ್ಫೂರ್ತಿಯನ್ನು ಉಂಟುಮಾಡಲಾರದೆ" ಎಂಬುದಾಗಿ ಕಿರಾತಾರ್ಜುನೀಯವನ್ನೋದಿ ಹುರುಪುಗೊಂಡ ಹೃದಯವು ಅದರ ರೂಪರೇಖೆಯನ್ನಾದರೂ ನಮ್ಮ ಭಾಷೆಗೆ ಹೊಂದಿಸಬಾರದೆ ಎಂದು ಹಲವು ಕಾಲದಿಂದಲೂ ಪ್ರಶ್ನಿಸುತ್ತಿತ್ತು. ಅರ್ಥಗೌರವವುಳ್ಳ ಭಾರವಿಯ ಮಹಾಕಾವ್ಯವೆಲ್ಲಿ! ಸಾಮಾನ್ಯರಾದ ನಮ್ಮ ಪ್ರಯತ್ನವೆಲ್ಲಿ! ಎಂಬ ಹೆದರಿಕೆಯು ಕೂಡಲೆ ಒಡಮೂಡಿ ಬಂದು ಪ್ರಶ್ನೆಯನ್ನು ಒತ್ತಟ್ಟಿಗೆ ಸರಿಸಿನುದು

ರಿಂದ ಸುಮ್ಮನೆ ಇರಬೇಕಾಯಿತು. ಆದರೂ "ಪ್ರಕೃತಿಮಧುರಾಭಾರವಿಗಿರಃ" ಎಂಬ ಸೂಕ್ತಿಯೊಂದು ಬಂಧುವಿನಂತೆ ಮುಂದೆ ಬಂದು ಕಯ್ಗೊಟ್ಟು ಲಗುಬಗೆಯಿಂದ ಪ್ರೋತ್ಸಾಹಿಸಿದ ಕಾರಣ ಸುಮ್ಮನಿರುವುದಕ್ಕಿಂತಲೂ ಅಂಬೆಗಾಲಿಕ್ಕುವ ಮಗುವಿನ ಹಾಗೆ ದಟ್ಟಡಿಯಿಡುವುದಾದರೂ ಮೇಲೆಂಬ ಬಯಕೆಯಿಂದ ಮಹಾಕವಿ ಭಾರವಿಯ ಭಾವನೆಯನ್ನು ಅನುಸರಿಸಿ ಬರೆದ ಗದ್ಯರೂಪದ ಪ್ರಯತ್ನವಿದು. ವನವಾಸದಿಂದ ಮನೋವ್ಯಥೆಯನ್ನು ತುಂಬಿಕೊಂಡವನು ಶೃಂಗಾರಾದಿಗಳನ್ನು ವರ್ಜಿಸುವುದು ಸ್ವಾಭಾವಿಕವಾಗಿರುವಂತೆಯೇ ಅಲ್ಲಿಯೂ ಹಲಕೆಲವು ಬದಲಾವಣೆಗಳು ಬಂದು ಹೋಗಿರುವುವು. ಉದ್ದೇಶಸಿದ್ಧಿಗಳೆರಡೂ ಪಾಶುಪತವನ್ನೇ ಸಂಬಂಧಿಸಿರುವುದರಿಂದ ಕಾವ್ಯವನ್ನು "ಪಾಶುಪತ"ವೆಂದು ಕರೆಯಲಾಯಿತು.

ಇದರ ಹಸ್ತಪ್ರತಿಯನ್ನು ನೋಡಿ ಹಲಕೆಲವು ಸೂಚನೆಗಳನ್ನಿತ್ತು ಉಪಕಾರಮಾಡಿದ ನನ್ನ ಸಹೋದ್ಯೋಗಿಗಳೂ ಜೀವದ ಗೆಳೆಯರೂ ಆದ ಶ್ರೀ ಯಸ್. ರಾಮಚಂದ್ರ ಬಿ. ಒ. ಎಲ್. ಇವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಅಲ್ಪಾವಕಾಶದಲ್ಲಿಯೂ ಕೂಡ ನನ್ನ ಕೋರಿಕೆಯನ್ನು ಮನ್ನಿಸಿ ಮುನ್ನುಡಿಯನ್ನು ದಯಪಾಲಿಸಿ ಪ್ರೋತ್ಸಾಹಿಸಿದ ಹಿರಿಯ ಸಾಹಿತಿಗಳಾದ ರಾಷ್ಟ್ರಕವಿ ಶ್ರೀಮಾನ್ ಮಂಜೇಶ್ವರ ಗೋವಿಂದಪೈಗಳವರಿಗೆ ನಾನು ಚಿರಋಣಿಯಾಗಿರುವೆನು. ಇದರ ಮುಖ ಚಿತ್ರವನ್ನು ಬರೆದುಕೊಟ್ಟ ಶ್ರೀ ಎನ್. ಶಿವರಾಮಾಚಾರ್ಯರನ್ನು ಸದಾ ಸ್ಮರಿಸಿಕೊಳ್ಳುವೆನು. ಸಕಾಲದಲ್ಲಿ ಮುದ್ರಿಸಿಕೊಟ್ಟ ಮಂಗಳೂರು ಉದಯ ಪ್ರಿಂಟರಿ ಎಂಡ್ ಪಬ್ಲಿಕೇಷನ್ಸ್ ಲಿಮಿಟೆಡ್ ಸಂಸ್ಥೆಯವರಿಗೆ ನನ್ನ ಅನಂತ ಧನ್ಯವಾದಗಳು.

ಇಂತು ಬಿನ್ನಯಿಸುವ
ಸಜ್ಜನವಿಧೇಯ

ಮೊಳೆಯೂರು ಶಂಕರನಾರಾಯಣ ಭಟ್ಟ

ಮುನ್ನುಡಿ

ವಿದ್ವಾನ್ ಶ್ರೀ ಮೊಳೆಯಾರು ಶಂಕರನಾರಾಯಣ ಭಟ್ಟರನ್ನು ಇನ್ನು ಬೇರೆ ಪರಿಚಿಸಿ ಕೊಡಬೇಕೆಂದಿಲ್ಲ. ಭಾಸ ಮಹಾಕವಿಯ ಮಧ್ಯಮ ವ್ಯಾಯೋಗ, ದೂತಘಟೋತ್ಕಚ ಮತ್ತು ಕರ್ಣಭಾರ ಎಂಬ ಮೂರು ಏಕಾಂಕ ನಾಟಕಗಳ ಅನುವಾದಕರಾದ ಅವರ ಹೆಸರನ್ನು ಕನ್ನಡದ ಸಾಹಿತ್ಯ ಪ್ರಪಂಚ ಸುತರಾಂ ಬಲ್ಲುದು. ಇದೀಗ ಪುಣ್ಯಶ್ಲೋಕ ನಾದ ಸಂಸ್ಕೃತ ಕವಿ ಭಾರವಿಯ ಕಿರಾತಾರ್ಜುನೀಯವೆಂಬ ೧೮ ಸರ್ಗ ಗಳ ಮಹಾಕಾವ್ಯವನ್ನು ಅನುಪದವಾಗಿ ಕನ್ನಡಿಸಿದ ಅನುವಾದವೇ ಅಲ್ಲ, ಅದಕ್ಕೆ ಅಲ್ಲಲ್ಲಿ ಸ್ವಂತ ಕೆಯ್ಗಾರಿಕೆಯನ್ನು ಸಂಕಲಿಸಿಯೂ, ಶ್ರೀ ರಾಮನ ಜತೆಯಲ್ಲಿ ವನಚಾರಿಯಾಗಿದ್ದ ಜಾನಕಿ ಆತನ ಹೆಜ್ಜೆಗಳ ಅವಾಂ ತರದಲ್ಲಿ ತನ್ನವನ್ನು ಇಡುತ್ತ ಆ ಪದಪಂಕ್ತಿಯನ್ನು ದಟ್ಟಯಿಸಿದಂತೆ, ಭಾರವಿಯ ಕಾವ್ಯವನ್ನು ಯಥಾವಸರವಾಗಿ ಕೊಂಚ ಉದ್ದಯಿಸಿದ ಗದ್ಯಗಂಥ. ಆಕಾರಣವೇ ಇದನ್ನು ಕಿರಾತಾರ್ಜುನೀಯ ಎನ್ನದೆ ಪಾಶು ಪತ ಎಂದದೆ. 'ಭಾರವೇರರ್ಥಗೌರವಮ್' ಎಂಬ ಲೋಕೋಕ್ತಿಯಂತೆ ತನ್ನ ಅರ್ಥಗೌರವದಿಂದ ಮಹಾಕವಿ ಎನಿಸಿಕೊಂಡ ಭಾರವಿಯ ಓಜೆ ಯನ್ನೂ ಓಜಸ್ವಿತೆಯನ್ನೂ ಅವಾಕ್ಷರಕ್ಕೂ ತಪ್ಪದಂತೆ ಈ ಕನ್ನಡದಲ್ಲಿ ನೇರಾಗಿ ಕಾಪಾಡಿದೆ. ಇಂಥಾ ಮೇಲಾದ ಕೃತಿಯ ಸಲುವಾಗಿ ಶ್ರೀ ಶಂಕರನಾರಾಯಣ ಭಟ್ಟರನ್ನು ಅಭಿನಂದಿಸುತ್ತೇನೆ.

ಭಾರವಿ ಯಾವಂದು ಆಗಿಹೋಗಿರಬಹುದು? ಎಂದು ವಿಚಾರಿಸು ವಲ್ಲಿ, ಶಾಲಿವಾಹನ ಶಕದ ೫೫೬ನೆಯ ವರ್ಷ ಕಳೆದಂದು, ಅಂದರೆ ಕ್ರಿ.ಶ. ೬೩೪–೩೫ರಲ್ಲಿ ಬಾದಾಮಿಯ ಚಲುಕ್ಯವಂಶದ ಸಮ್ರಾಜನಾದ ಇಮ್ಮಡಿ ಪುಲಕೇಶಿಯ ಆಳೊತ್ತಿನಲ್ಲಿ ಜೈನ ರವಿಕೀರ್ತಿ ರಚಿಸಿದ ಐಹೊಳೆಯ ಶಿಲಾಶಾಸನದ ಕೊನೆಯಲ್ಲಿ 'ಕವಿತಾಶ್ರಿತ ಕಾಲಿದಾಸಭಾರವಿಕೀರ್ತಿಃ' ಎಂದು ತನ್ನನ್ನಾತನು ಭಾರವಿಗೆ ಹೋಲಿಸಿಕೊಂಡಿರುವುದರಿಂದ, ಭಾರವಿ ಕ್ರಿ. ಶ. ೬೩೪–೩೫ಕ್ಕೆ ತಕ್ಕಷ್ಟು ಹಿಂದೆಯೇ ಆಗಿಹೋಗಿರಲೂ ಬೇಕು,

ಅಷ್ಟರಲ್ಲಿ ಭಾರತದ ತುಂಬ ಹೆಸರುವಾಸಿ ಆಗಿರಲೂ ಬೇಕು ಎಂದು ಸ್ವಯಂವ್ಯಕ್ತವಿದೆ. ತಲಕಾಡಿನ ಪಶ್ಚಿಮಗಂಗರ ತಾಮ್ರಪಟ್ಟಗಳಲ್ಲಿ ಅವರಲ್ಲಿಯ ದುರ್ವಿನೀತನೆಂಬ ಅರಸನನ್ನು 'ಕಿರಾತಾರ್ಜುನೀಯ ಪಂಚದಶ ಸರ್ಗ್ಗ ಟೀಕಾಕಾರೋ ದುರ್ವಿನೀತ ನಾಮಧೇಯಃ' ಎಂದದೆ ಮಾತ್ರವಲ್ಲ, ಸಂಸ್ಕೃತ ದಶಕುಮಾರ ಚರಿತದ ಪ್ರಣೇತಾರನಾದ ಮಹಾ ಕವಿ ದಂಡಿಯಿಂದ ರಚಿತವಾದುದೆಂಬ ಅವಂತಿಸುಂದರೀಕಥಾ ಎಂಬ ಸದ್ಯಕ್ಕೆ ಅಪೂರ್ಣವೂ ತ್ರುಟಿತವೂ ಆಗಿ ದೊರಕಿರುವ ಸಂಸ್ಕೃತ ಗದ್ಯ ಗ್ರಂಥದಿಂದ ಸ್ವಯಂ ಭಾರವಿಯೇ ದಂಡಿಯ ಮುತ್ತಜ್ಜನೆಂದೂ, ಆತನು ಕಾಂಚಿಯ ಪಲ್ಲವ ಅರಸನಾದ ಸಿಂಹವಿಷ್ಣುವಿನ ಹಾಗೂ ಗಂಗರಸನಾದ ದುರ್ವಿನೀತನ ಸಮಕಾಲೀನನೆಂದೂ ತಿಳಿಯುತ್ತದೆ. ಆದರೆ ಗಂಗ ದುರ್ವಿನೀತನ ಮತ್ತು ಪಲ್ಲವ ಸಿಂಹವಿಷ್ಣುವಿನ ಆಳೊತ್ತುಗಳು ಇಂಥವೇ ಎಂದು ಇದುವರೆಗೆ ಕಂಡಿತವಾಗಿಲ್ಲ, ವಿದ್ವಾಂಸರಲ್ಲಿ ಆಕುರಿತು ಸಾಕಷ್ಟು ಮತಭೇದವಿದೆ. ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ದುರ್ವಿನೀತನು ಕ್ರಿ.ಶ. ೪೭೮ರಿಂದ ಸುಮಾರು ೫೨೦ರ ವರೆಗೂ ಸಿಂಹವಿಷ್ಣು ಕ್ರಿ. ಶ. ೪೭೨ರಿಂದ ೫೨೦ರ ವರೆಗೂ ಆಳಿರಬೇಕೆಂದು ನಾನು ಹಲವು ವರ್ಷಗಳ ಹಿಂದೆ ನಿಶ್ಚಯಿಸಿರುತ್ತೇನೆ. ಅದನ್ನು ಒಪ್ಪಿದರೆ, ಭಾರವಿ ಕ್ರಿ. ಶ. ೫ನೆಯ ಶತಮಾನದ ಉತ್ತರಾರ್ಧದಲ್ಲಿ ಇದ್ದನೆಂದು ನಿರ್ಣಯಿಸಬಹುದು.

ಅರ್ಜುನನು ಮಹಾದೇವನನ್ನು ಕುರಿತು ತಪಶ್ಚರಿಸಿ, ಆತನೆಂದು ಗೊತ್ತಿಲ್ಲದೆ ಅತನೊಡನೆ ಕಾದಿ, ಕೊನೆಗೆ ತನ್ನ ಪರಾಕ್ರಮವನ್ನು ಕಂಡು ಮನಮೆಚ್ಚಿದ ಆತನಿಂದ ಪಾಶುಪತಾಸ್ತ್ರವನ್ನು ಪಡೆಕೊಂಡ ಕಥೆ ಸಂಸ್ಕೃತ ಮಹಾಭಾರತದ ವನಪರ್ವದಲ್ಲಿ (ಅ. ೩೭–೪೦) ಇದೆ, ಹಾಗೂ ಕನ್ನಡ ದಲ್ಲಿ ಪಂಪ ಭಾರತದಲ್ಲಿಯೂ (VII. ೪೦—VIII. ೨೬) ಗದುಗಿನ ಭಾರತದ ಆರಣ್ಯಕ ಪರ್ವದಲ್ಲಿಯೂ (ಸಂಧಿ ೪–೬) ಇದೆ. ಭಾರವಿಯ ಕಾವ್ಯದಲ್ಲಾದರೆ ಆ ಕಥೆ ಹೀಗದೆ—

ದುರ್ಯೋಧನನ ಪ್ರಜಾಪಾಲನೆಯ ಮೊದಲಾದ ವೃತ್ತಾಂತವನ್ನು ತಿಳಿದು ಬರಲೆಂದು ದ್ವೈತವನದಲ್ಲಿದ್ದ ಯುಧಿಷ್ಠಿರನಿಂದ ಹಸ್ತಿನಾವತಿಗೆ ಪ್ರೇಷಿಸಲ್ಪಟ್ಟ ವಟುವೇಷಧಾರಿಯಾದ ಬೇಡರ ಬೇಹುಕಾರನು ಅದನ್ನು

ಅರಿತುಕೊಂಡು ಮರಳಿ ಬಂದು, ದುರ್ಯೋಧನನ ರಾಜ್ಯಭಾರವನ್ನು ಕುರಿತು ಬಂಗಾರದ ಸುದ್ದಿಯನ್ನು ಯುಧಿಷ್ಠಿರನಿಗೆ ಕಥಿಸುತ್ತಾನೆ. ಅದನ್ನು ಕೇಳಿ ಕೆರಳಿದ ದ್ರೌಪದಿ ದುರ್ಯೋಧನನೊಡನೆ ಕೂಡಲೆ ಯುದ್ಧಮಾಡ ಬೇಕೆಂದು ಪ್ರೇರಿಸುತ್ತಾಳೆ. ಅವಳ ಮಾತುಗಳಿಗೆ ಭೀಮನು ಮತ್ತೂ ಸಿಟ್ಟಿಗೆದ್ದು ತನ್ನವನ್ನು ಒಗ್ಗರಿಸುತ್ತಾನೆ. ಯುಧಿಷ್ಠಿರನಾದರೆ ದ್ಯೂತವನ್ನು ಆಡುವಾಗ ಒಪ್ಪಿಕೊಂಡ ಕಂಡಣೆಯನ್ನು ಸರ್ವಥಾ ಮುರಿಯಲೊಲ್ಲನು. ಆಗ್ಗೆ ವ್ಯಾಸ ಮಹರ್ಷಿ ಅಲ್ಲಿಗಯ್ದಿ, ಯುದ್ಧಕ್ಕೆ ಅನುವಾಗುವಿರಾದರೆ ಇಂದ್ರನ ನೆರವನ್ನು ಗಳಿಸಿಕೊಳ್ಳಿರೆಂದು ಪಾಂಡವರಿಗೆ ಬೋಧಿಸಿ, ಆ ಬಗ್ಗೆ ಅರ್ಜುನನು ಹಿಮಾಲಯದಲ್ಲಿಯ ಇಂದ್ರಕೀಲಕ್ಕೆ ಹೋಹಂತೆ ಆತನಿಗೆ ದಾರಿತೋರಿಸಲಿಕ್ಕೆ ಜತೆಗೊಬ್ಬ ಯಕ್ಷನನ್ನು ಕಳುಹುವನು. ಆಗ್ಗೆ ಪ್ರಾಪ್ತ ವಾದ ಶರತ್ಕಾಲದಲ್ಲಿ ಅವರು ಹಿಮಾಲಯಕ್ಕೆ ಹೋಗುತ್ತಿರುವ ದಾರಿಯಲ್ಲಿ ಗೋವ್ರಜಗಳನ್ನೂ ಗೋಷ್ಠಗಳನ್ನೂ ಕಾಣುತ್ತ, ಗೊಲ್ಲರ ಪಾಳೆಯಗಳನ್ನು ದಾಟುತ್ತ, ಹಿಮಾಲಯದ ಸೃಷ್ಟಿಸೌಂದರ್ಯವನ್ನು ಅವಲೋಕಿಸುತ್ತ ಇಂದ್ರಕೀಲವನ್ನಯ್ದಿ, ಅಲ್ಲಿಂದ ಆ ಯಕ್ಷನು ತನ್ನಿಂದ ಅಗಲುತ್ತಲೆ ಧನಂಜಯನು ಅಲ್ಲಿ ನೆಲಸಿ ತಪಸ್ಸನ್ನು ಕೈಗೊಳ್ಳುವನು. ಆತನ ತಪೋ ತಿಶಯದಿಂದ ಕಂಗೆಟ್ಟ ಇಂದ್ರಕೀಲವನದ ಕಾಹುಗಾರರು ಆ ಕುರಿತು ಇಂದ್ರನಲ್ಲಿ ದೂರುಕೊಡುತ್ತಲೆ, ಆತನೂ ಒಂದು ಸಲ ಅಳುಕಿ ಅಪ್ಸರೆಯ ರನ್ನೂ ಗಂಧರ್ವರನ್ನೂ ಕರೆದು, ಆ ತಪಸ್ವಿಯ ತಪಸ್ಸಿಗೆ ಬೇಕಾದ ವಿಘ್ನಾರ ಗಳನ್ನುಒಡ್ಡಿರೆಂದು ಆಜ್ಞಾಪಿಸುವನು. ಅವರೆಲ್ಲರೂ ಪಾರ್ಥನಿದ್ದಲ್ಲಿಗೆ ತೆರಳಿ ಆಯಾ ಋತುಧರ್ಮಕ್ಕೆ ತಕ್ಕಂತೆ ಹವಣಿಸಿದ ತಮ್ಮ ಹಾವಭಾವಗಳಿಂದ ಆತನಲ್ಲಿ ಮೋಹಜಾಲವನ್ನು ಬೀರಿ ಆತನನ್ನು ಹಿಡಕೊಳ್ಳಲಿಕ್ಕೆ ಬೇಕಾ ದಷ್ಟು ಪೇಚಾಡುತ್ತಾರೆ, ಪೇಚಾಡಿ ಸೋಲುತ್ತಾರೆ. ಹಾಗೆ ಅವರು ಹತಾಶರಾಗಿ ಮರಳುತ್ತಲೆ, ಸ್ವಯಂ ದೇವೇಂದ್ರನೇ ವೇಷಾಂತರಿಸಿ ಅಲ್ಲಿಗೆ ಬಂದು, ಆತನನ್ನು ಪರೀಕ್ಷಿಸಲೆಂದು ಮೊದಲು ಆತನ ತಪೋನಿಷ್ಠೆಯನ್ನು ಹೊಗಳಿ, ಬಳಿಕ ಅದಕ್ಕೂ ಆತನ ಯುದ್ಧೋಚಿತವಾದ ವೇಷಭೂಷೆಗೂ ಉಳ್ಳ ಧ್ರುವಗಳಷ್ಟರ ಅಂತರವನ್ನು ಟೀಕಿಸಿದುದಕ್ಕೆ ಮರುಮಾತಾಗಿ ಆತನು ತನ್ನ ಪೂರ್ವೋತ್ತರವನ್ನು ಬಿಚ್ಚಿ ಹೇಳಿ, ತಾನು ವ್ಯಾಸಮುನಿಯ

ಉಪದೇಶದಿಂದ ಇಂದ್ರನ ಸಹಾಯವನ್ನು ಯಾಚಿಸಿ ತಪೋನಿರತನಾಗಿರು ತ್ತೇನೆ ಎನ್ನುವನು. ಆಗ್ಗೆ ಇಂದ್ರನು ಆತನಲ್ಲಿ ಪ್ರಸನ್ನನಾಗಿ ಆ ಸಲುವಾಗಿ ಮಹಾದೇವನನ್ನು ಆರಾಧಿಸೆಂದು ನಿಯಾಮಿಸುವನು. ಅಲ್ಲಿಂದ ಮುಂದೆ ಅರ್ಜುನನು ಶಿವನ ತಪಸ್ಸನ್ನು ಮಾಡತೊಡಗಿದನು. ಅದರ ಬೇಗೆ ಯಿಂದ ಸಂತ್ರಸ್ತರಾದ ಸಿದ್ಧರ್ಷಿಗಳು ಶಿವನ ಸನ್ನಿಧಿಗಯ್ದಿ ಅದರ ನಿವಾ ರಣೆಗೋಸುಗ ಆತನಲ್ಲಿ ಬಿನ್ನವಿಸುತ್ತಲೆ, ಎಕ್ಕಲದ ರೂಪದಿಂದ ಅರ್ಜುನ ನನ್ನು ಘಾತಿಸಲಿಕ್ಕೆ ಅಲ್ಲಿಗೆ ತೆರಳುತ್ತಿರುವ ಮೂಕನೆಂಬ ದಾನವನನ್ನು ವಧಿಸಲಿಕ್ಕೂ ಅರ್ಜುನನನ್ನು ಅನುಗ್ರಹಿಸಲಿಕ್ಕೂ ಬೇಕಾಗಿ ಶಿವನು ಮಾಯಾಕಿರಾತನಾಗಿ ಮೃಗಯಾವ್ಯಾಜದಿಂದ ಗಣಸಮೇತನಾಗಿ ಅಲ್ಲಿಗೆ ಹೊರಟುಬಂದು, ಆ ದಾನವನಲ್ಲಿ ಪಾರ್ಥನೂ ಶಿವನೂ ಬಾಣವನ್ನು ಎಚ್ಚು ಆತನನ್ನು ಕೆಡವಿಸುವರು. ಹಾಗೆ ಕೆಡೆದಾತನ ಮೆಯ್ಯಲ್ಲಿ ಚುಚ್ಚಿ ಕೊಂಡ ತನ್ನ ಬಾಣವನ್ನು ಅರ್ಜುನನು ಕೀಳುತ್ತಿರುವಾಗ ಶಿವನಿಂದ ಕಳು ಹಲ್ಪಟ್ಟ ಕಿರಾತನೊಬ್ಬನು ಅಲ್ಲಿಗೆ ಬಂದು, ಆ ಕಾಡುಹಂದಿ ತನ್ನ ಒಡೆ ಯನ ಕೊಳ್ಳೆ ಎಂದು ವಾದಿಸಿ, (ಅವರೊಳಗಣ ಮಾತುಕಥೆ ತೀರ ಸುರಸ ವಾಗಿದೆ) ಹಾಗೆ ಮಾತಿಗೆ ಮಾತು ಮಥಿಸುತ್ತಲೆ ಆ ಕಿರಾತನು ತನ್ನ ಒಡೆ ಯನಾದ ಶಿವನ ಬಳಿಗೆ ಹೋಗಿ ದೂರು ಹೇಳುವನು. ಅದನ್ನು ಆಲಿಸಿದ ಆ ಲೀಲಾಕಿರಾತನು ಆಗ ಸಸೈನ್ಯನಾಗಿ ಧನಂಜಯನೊಡನೆ ಕಾದಾಡ ಲೆಂದು ಬಂದು ಯುದ್ಧ ಮಾಡಲಿಕ್ಕೆ, ಅರ್ಜುನನು ತನ್ನ ಮೇಲಕ್ಕೆಹಾಯ್ದ ಶತ್ರುಸೇನೆಯನ್ನು ಹೊಡೆದಟ್ಟಿ ದಿಕ್ಕಾಪಾಲಾಗಿಸುವನು. ಆಗ್ಗೆ ಸಾಕ್ಷಾತ್ ಶಿವನೇ ಕೆಯ್ಗಟ್ಟಿ ಅರ್ಜುನನೊಡನೆ ಕಾದಾಡಲಿಕ್ಕೆ ಮುಂದಾಗಲು, ಅವ ರಲ್ಲಿ ಘೋರ ಯುದ್ಧವೂ ಅದರಲ್ಲಿ ಆಭೀಲವಾದ ಬಾಹುಯುದ್ಧವೂ ನಡೆದು, ಕೊನೆಗೆ ಶಿವನು ಪ್ರಸನ್ನನಾಗಿ ತನ್ನ ನಿಜರೂಪವನ್ನು ಪ್ರಕಟೀಕರಿಸಿ ಅದನ್ನು ಕಣ್ತುಂಬ ಅಂಜಲಿಬದ್ಧನಾಗಿ ಕಂಡ ವಿಜಯನಿಂದ ಸಂಸ್ತುತ ನಾಗಿ, ಆತನಿಗೆ 'ಜ್ವಲದನಲಪರೀತಮ್' ಅಂದರೆ ಪ್ರಜ್ವಲಿಸುವ ಅಗ್ನಿಯ ತೇಜದಿಂದ ವ್ಯಾಪ್ತವಾದ ಪಾಶುಪತಾಸ್ತ್ರವನ್ನು ಇತ್ತುದಲ್ಲದೆ, ಅದರೊಂದಿಗೆ ಧನುರ್ವೇದವನ್ನೂ ಉಪದೇಶಿಸಿದನು —'ಧನುರುಪಪದಮಸ್ಮೈ ವೇದ ಮಭ್ಯಾದಿದೇಶ.' ಆ ಯುದ್ಧವನ್ನು ನೋಡಲೆಂದು ಅಲ್ಲಿಗೆ ಇಳಿತಂದ ದೇವ

ತೆಗಳೂ ಅರ್ಜುನನ ಶೌರ್ಯಕ್ಕೆ ತಲೆದೂಗಿ ಆತನಿಗೆ ತಂತಮ್ಮ ದಿವ್ಯಾಸ್ತ್ರಗಳನ್ನು ನೀಡಿದರು. ಹೀಗೆ 'ವ್ರಜ ಜಯ ರಿಪುಲೋಕವಮ್', ಹೋಗು ಶತ್ರುಗಳನ್ನು ಗೆಲ್ಲು ಎಂದು ಮಹಾದೇವನಿಂದ ಹರಸಲ್ಪಟ್ಟ ಅರ್ಜುನನು, ದೇವತೆಗಳು ತನ್ನನ್ನು ಶ್ಲಾಘಿಸುತ್ತಿರಲು, ಶಿವನನ್ನೂ ಮಿಕ್ಕ ದೇವತೆಗಳನ್ನೂ ಬೀಳ್ಕೊಂಡು, ಅಲ್ಲಿಂದ ಹೊರಟು ಧರ್ಮರಾಯನಿದ್ದ ವನಪ್ರದೇಶವನ್ನು ಸೇರಿದನು. ಕಿರಾತಾರ್ಜುನೀಯದಲ್ಲಿ ಕೃತಕಕಿರಾತನಾದ ಈಶ್ವರನ ಸಂಗಾತ ಗಿರಿಜೆಯೂ ಕಪಟಪುಳಿಂದಿಯಾಗಿ ಇದ್ದಂತೆ ಹೇಳಿಲ್ಲದ ಕಾರಣ, ಆಕೆ ಅರ್ಜುನನಿಗೆ ಕೊಟ್ಟುದೆಂಬ ಅಂಜನಾಸ್ತ್ರ ಅಥವಾ ಅಂಜಲಿಕಾಸ್ತ್ರದ ಸಂಗತಿ ಅದರಲ್ಲಿ ಇಲ್ಲ.

ಭಾರವಿಯ ಈ ಉದ್ಗ್ರಂಥವನ್ನು ಕನ್ನಡಿಸುವಲ್ಲಿ ಶ್ರೀ ಶಂಕರನಾರಾಯಣ ಭಟ್ಟರು ತಮ್ಮ ಹೊಣೆಗಾರಿಕೆಯನ್ನು ಚಕ್ರಬಡ್ಡಿಯಿಂದ ಸಲ್ಲಿಸಿರುತ್ತಾರೆ. ಅಕ್ಷರಶಃ ಚಕ್ರಬಡ್ಡಿಯಿಂದ ಏಕೆಂದರೆ, ಈ ಅನುವಾದದಲ್ಲಿ ಕೂಡಿಸಿದ್ದ ಇವರ ಖಾಸಾ ಕೆಯ್ಗಾರಿಕೆಯಾದರೆ ಭಾರವಿಯ ಮೂಲಧನಕ್ಕೆ ಮನಸೋತು ಇವರು ಕೂಡಿಸಿ ಕೊಟ್ಟ ಬಡ್ಡಿಯೊ ಬಡ್ಡಿಯ ಬಡ್ಡಿಯೊ ಅಲ್ಲದೆ ಮತ್ತೇನು? ಆದರೆ ಮಹಾಕವಿಗಳ ಮಹಾಕೃತಿಗಳೊಂದಿಗೆ ಈ ಬಗೆಯ ಸಲುಗೆಯನ್ನು ಕೊಳಕೂಡದು, ಕೊಳಸಲ್ಲದು ಎಂಬ ನಿಯಮ ಅನುಲ್ಲಂಘ್ಯವಾದರೂ, ಸರ್ವಥಾ ಹಳಸದ ಸರ್ವಥಾ ಸವೆಯದ ಕಿರಾತಾರ್ಜುನೀಯದಂಥಾ ಲೋಹಕವಚದಲ್ಲಿ ಇವರು ಅಲ್ಲಲ್ಲಿ ತೇಪೆಹಚ್ಚಿರುವ ಈ ಬೆಸುಗೆಗಳು ದೈವಯೋಗದಿಂದಲೊ ಇವರ ಸೂಕ್ಷ್ಮದೃಷ್ಟಿಯಿಂದಲೊ ಅಥವಾ ಅವೆರಡರ ಜೋಡಣೆಯಿಂದಲೋ ಹಾಕಲಾಪಲ್ಲೇ ಹಾಕಲ್ಪಟ್ಟು, ಈ ಅನುವಾದದಲ್ಲಿ ಹಳತೂ ಹೊಸತೂ ಅದಾವುದು? ಇದಾವುದು? ಎಂದು ಬೇರ್ಪಡಿಸಲಾರದಷ್ಟು ಅಭಿನ್ನವಾಗಿ ಒಡಗೂಡಿವೆ. ಇದು ನೇರಾದ ಮಾತು, ಪ್ರಾಚೀನ ಸಾಹಿತ್ಯದ ಅಭ್ಯಾಸದಲ್ಲಿ ಪಳಗಿ ಬೆಳೆದ ಕೆಯ್ವಾಡಕ್ಕೆ ಸಲತಕ್ಕ ಮನ್ನಣೆಯ ಮಾತು.

ಕೊನೆಯದಾಗಿ, ಈ ಗ್ರಂಥವು ಕನ್ನಡಿಗರು ಓದತಕ್ಕಂಥಾದ್ದು, ಸಾಹಿತಿಗಳು ಓದಬೇಕಾದದ್ದು, ವಿದ್ಯಾರ್ಥಿಗಳ ಓದಿಗೆ ಒಪ್ಪುವಂಥಾದ್ದು.

ಇಂಥಾ ಉತ್ತಮ ಕೃತಿಯನ್ನು ಕನ್ನಡಕ್ಕೆ ಒದಗಿಸಿರುವುದಕ್ಕಾಗಿ ಶ್ರೀ ಶಂಕರನಾರಾಯಣ ಭಟ್ಟರನ್ನು ಪುನಶ್ಚ ಅಭಿನಂದಿಸುತ್ತ, ಇವರು ಮತ್ತೂ ಮೇಲಾದ ಗ್ರಂಥಗಳನ್ನು ರಚಿಸುವಂತೆ ಶ್ರೀ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ. ಇತಿ ಶಮ್.

ಗೋವಿಂದ ಪೈ.



॥ ಶುಭಾಶಂಸನಂ ॥

ಸತತಂ ಧಾತ್ರಿಯ ಶಿಷ್ಟದುಷ್ಟರನಿತುಂ ಕೃತ್ಯಂಗಳಂ ನೋಡುತುಂ
ವ್ಯತಿರೇಕಂ ಸಲದಂತೆ ಕರ್ಮಫಲಮಂ ಕಯ್ಗೂಡಿಸಲ್ಕಮ್ಮ ಸ- ॥
ನ್ಮತಿಸತ್ಕೃತ್ಯ ಪರೋಪಕಾರ ನುತಿಗಂ ನಮ್ಮಂ ಮನೋಬುದ್ಧ್ಯಹಂ
ಕೃತಿಚಿತ್ತಂಗಳಿನೊಲ್ದು ಪಾಲಿಕೆ ಶಿವಾದ್ವೈತಾತ್ಮಕಂ ಶಂಕರಂ ॥

ಭಾರವಿಭಾವವಿವರ್ಧಿತ–
ಮಾರಯೆ ಕರ್ಣಾಟಭಾಷೆಗಿಂತಿದು ನವ್ಯಂ ।
ಸಾರಸ್ವತಸೇವ್ಯಂ ಸಂ-
ಸಾರಮೆನಲ್ಮೆರೆಗೆ ಗದ್ಯಬಂಧದ ಕಾವ್ಯಂ ॥

ಗುರುವೆಂಬ ಬೀಜಮಂತ್ರಮ
ನುರೆ ಭಾವಿಸಿ ಬರೆದ "ಪಾಶುಪತ"ಮಂ ಗುರು ಶಂ–
ಕರ ಭಕ್ತಿರೂಪಸುಮಮಂ
ಗುರುಪದಸನ್ನಿಧಿಯೊಳರ್ಪಿಪೆಂ ನಲವಿಂದಂ ॥

ಎಂ. ಶಂಕರನಾರಾಯಣ ಭಟ್ಟ.

ಪರಿವಿಡಿ

೧. ಪಾಂಡವರ ವನವಾಸ

ಪುಣ್ಯಭೂಮಿಯಲ್ಲಿ ಪರಮಪಾವನವಾದ ಸರಸ್ವತೀನದಿಯು ಕಲಿಯ ಮಹಿಮೆಯನ್ನು ಲೋಕಕ್ಕೆಲ್ಲ ಸಾರಿ ಹೇಳುತ್ತಿರುವಂತೆ ಕಲಕಲನಾದ ಧೊಡನೆ ಪ್ರವಹಿಸುತ್ತಿರುವುದು. ದೇವತೆಗಳೂ, ಋಷಿಶ್ರೇಷ್ಠರೂ ಛಂದೋರೂಪವಾಗಿ ಹಾಡಿ ಹೊಗಳಿದ ಪುಣ್ಯತೀರ್ಥದ ಸೇವನೆಗಾಗಿ ತ್ರಿಭುವನದ ಭಾಗ್ಯಶಾಲಿಗಳೂ ಬಂದು ನೆಲಸಿದ, ಫಲವತ್ತಾದ ಸಮತಲವುಳ್ಳ ಆ ನದೀತೀರವು ಬಹು ವಿಸ್ತಾರವಾದ ಪವಿತ್ರಕ್ಷೇತ್ರವು. ಕಂದ, ಮೂಲ, ಫಲ, ಪುಷ್ಪ, ದರ್ಭೆ, ಸಮಿತ್ತುಗಳನ್ನು ಧಾರಾಳವಾಗಿ ಬೆಳೆಯುವ ಅರಣ್ಯಭಾಗಗಳಿಂದಲೂ, ದವಸಧಾನ್ಯಗಳನ್ನು ಹುಲುಸಾಗಿ ಬೆಳೆಯುವ ಕೃಷಿಕ್ಷೇತ್ರಗಳಿಂದಲೂ, ವಿಶಾಲವಾದ ಹುಲ್ಲುಗಾವಲುಗಳಿಂದಲೂ ಪ್ರಸಿದ್ಧವಾದ ಪುಣ್ಯಕ್ಷೇತ್ರದ ನಡುವೆ ಬಹು ರಮಣೀಯವಾಗಿ ಕಂಗೊಳಿಸುವ ಪ್ರಖ್ಯಾತವಾದ ಒಂದು ಸರೋವರವಿರುವುದು. ಆ ವಿಶಾಲ ಪ್ರಾಂತವೆಲ್ಲವೂ ಆ ಜಲಾಶಯದ ಹೆಸರಿನಿಂದಲೇ "ದ್ವೈತವನ"ವೆಂದು ಪ್ರಸಿದ್ಧವಾಗಿದೆ.

ಅಲ್ಲಿ ಋತುಭೇದವಿಲ್ಲದೆ ಯಾವಾಗಲೂ ಒಂದೇ ವಿಧವಾದ ಸುಮನೋಲ್ಲಾಸವು; ಜೇನಿಗಾಗಿ ಹಂಬಲಿಸುತ್ತ ಝುಂಕಾರದೊಡನೆ ಹಾರಾಡುವ ತುಂಬಿಗಳ ಬಳಗವು; 'ಎಲ್ಲರೂ ಬಂದಿಲ್ಲಿ ಸುಖಶಾಂತಿಯನ್ನನುಭವಿಸಿರಿ' ಎಂದು ಅಕ್ಕರೆಯಿಂದ ಒಕ್ಕಣಿಸುವಂತೆ ಗಜಬಜಿಸುವ ಪಕ್ಷಿಸಂಕುಲವು; ಜಾತಿವೈರವನ್ನು ತೊರೆದು ಬಂಧುಬಾಂಧವರಂತೆ ಕೂಡಿ ನಡೆಯುವ ಮೃಗಸಂದಣಿಯು; ಋತ್ವಿಜರು ಯಾಗಗಳ ಮೂಲಕ ಕೊಡುತ್ತಿರುವ ಹವಿರ್ಭಾಗಗಳನ್ನುಣಲೆಂದು ಬಿಡುಗಣ್ಣರು ಇಳಿದು ಬರುವ ನಿಚ್ಚಣಿಗೆಯಂತೆ ಅನಂತವ್ಯಾಪಿಯಾಗಿ ಶೋಭಿಸುವ ಹೋಮಧೂಮವು; ಅದನ್ನು ನೋಡಿ ಮುಂಗಾರ ವಿಭ್ರಮವೆಂದು ಭ್ರಮಿಸಿ ಹಿಂಡುಗೂಡಿ ಕೇಗುವ ನವಿಲುಗಳ ಕುಣಿದಾಟವು; ವಿಕಸಿತಸುಮಸೌರಭ್ಯವನ್ನು ಹೊತ್ತುಕೊಂಡು ಮೆಲ್ಲಗೆ ಹೊರಡುವ ವೇಳೆಗೆ, ಕೇಳಿಸುವ ಅಲಿಮಾಲೆಗಳ ಗುಂಜಾರವಕ್ಕೆ ಬೆಚ್ಚಿ,

ಮರಗಳ ಎಡೆಯೆಡೆಯಲ್ಲಿ ಎಡಹುತ್ತ ಬಿದ್ದೆದ್ದು ಸುಳಿಯುವ ಮಂದಾನಿಲವು. ಹೀಗೆ ಕೋಪತಾಪಕ್ಕೆ ಎಡೆಯಿಲ್ಲದೆ ಸುಖಕಲ್ಪನೆಯ ಶಾಂತಿಪಾಠದ ಶಾಲೆಗೆ ಪ್ರಕೃತಿಮಾತೆಯು ಹಾಕಿದ ತಳಹದಿಯಂತೆ ಎಲ್ಲಿ ನೋಡಿದರಲ್ಲಿ ಪ್ರಶಾಂತತೆಯೇ ನೆಲಸಿ ಕಂಗೊಳಿಸುತ್ತಿತ್ತು. ಶಾಂತಿಯ ಮಡಿಲಲ್ಲಿ ಧರ್ಮಮೂರ್ತಿಯು ತಾನೇ ಬಂದು ನೆಲಸಿರಲು, ದ್ವೈತವನಕ್ಕೆ ನವೀನವಾದೊಂದು ಶೋಭೆಯುಂಟಾದುದರಲ್ಲಿ ಆಶ್ಚರ್ಯವೇನು?

ಹಸ್ತಿನಾವತಿಯಲ್ಲಿ ದುರಹಂಕಾರಮಾತ್ಸರ್ಯಕ್ರೋಧಗಳೊಂದಾಗಿ ಅವತರಿಸಿದ ದುರ್ಯೋಧನನು 'ಸತ್ಯವೇಗತಿ'ಯೆಂದು ನಂಬಿದ ಪಾಂಡವರ ಹೆಸರನ್ನಡಗಿಸಿಬಿಡಬೇಕೆಂದು ಬಗೆಬಗೆಯಿಂದ ಯತ್ನಿಸಿಯೂ ಕೃತಾರ್ಥನಾಗದೆ, ಅವರನ್ನು ಶಕುನಿಯ ಕುತಂತ್ರದ್ಯೂತದ ಮೂಲಕ ಸೋಲಿಸಿ, ನಿರ್ಗತಿಗೊಳಿಸಿ, ವನವಾಸಕ್ಕೆ ಗುರಿಪಡಿಸಿದನು. ಕಟ್ಟುಪಾಡಿನ ಮೇರೆಗೆ ವನವಾಸದ ಸಲುವಾಗಿ ಪತ್ನೀಸಹೋದರರೊಂದಿಗೆ ಹೊರಟ ಧರ್ಮಜನು, ತನ್ನನ್ನು ಅನುಸರಿಸಿ ಬಂದ ಧೌಮ್ಯನೇ ಮೊದಲಾದ ಪುರೋಹಿತವರ್ಗದವರಿಗೆ ವನವಾಸದ ಸಂಕಷ್ಟವನ್ನು ವಿವರಿಸಿ ಅವರನ್ನು ಬಗೆಬಗೆಯಿಂದ ಪ್ರಾರ್ಥಿಸಿಕೊಂಡೂ ಮರಳಿಸಲಾರದಾದನು. ಹಾಗೆಯೇ ಮುಂದುವರಿದು ವಿಶಾಲವಾದ ದ್ವೈತವನದ ಅದೊಂದು ಭಾಗದಲ್ಲಿ ಬಹುಕಾಲದ ವರೆಗೂ ತಮ್ಮವರೆಲ್ಲರಿಗೂ ಅನುಕೂಲವಾಗುವಂತೆ ವಸತಿಯನ್ನೇರ್ಪಡಿಸಿಕೊಂಡನು.

ನಡುವೆ ಧರ್ಮಜನಿಗಾಗಿ ಸಮೆದ ಭವ್ಯವಾದ ಪರ್ಣಮಂದಿರವು; ನಾಲ್ಕುದಿಕ್ಕುಗಳಲ್ಲೂ ಭೀಮಾರ್ಜುನನಕುಲಸಹದೇವರ ವಸತಿಗಳು; ಬಲದಲ್ಲಿ ವಿಪ್ರೋತ್ತಮರ ಅಗ್ರಹಾರವು; ಮುಂದೆ ಗೋಪುರದಂತೆ ತಲೆಯೆತ್ತಿ ಮೆರೆಯುವ ಆಲದ ಅಡಿಯೇ ಚಾವಡಿಯು; ಸುತ್ತಲೂ ವಿಸ್ತಾರವಾದ ಅಂಗಳದಲ್ಲಿ ವೈವಿಧ್ಯತೆಯಿಂದ ಮನೋರಂಜಕವಾದ ಹೂದೋಟವು. ಹೀಗೆ ಸುಖಕರವಾದ ವಾತಾವರಣದಲ್ಲಿ ಧರ್ಮವನ್ನು ಪುಣ್ಯದಂತೆ ಕರ್ಮವನ್ನು ಫಲದಂತೆ ವಿಧಾತನನ್ನು ವೇದದಂತೆ ಸದಾ ಅನುಸರಿಸುವ ದ್ರೌಪದಿಯ ಸೇವೆಯಿಂದಲೂ, ಉಪಾಯಗಳಂತೆ ವರ್ಗಗಳಂತೆ ಮೀರಿ

ಗಳಂತೆ ಪರಮಾತ್ಮನ ತೋಳುಗಳಂತೆ ಮೆರೆಯುವ ಸಹೋದರರ ಸ್ವಾಮಿನಿಷ್ಠೆಯಿಂದಲೂ, ಧರ್ಮಜನು ಧರ್ಮತತ್ಪರನಾಗಿ ಸಜ್ಜನಸಹವಾಸದಿಂದ ಮನಸ್ಸಿಗೆ ಶಾಂತಿಯನ್ನು ತುಂಬಿಕೊಳ್ಳುತ್ತ, ಸಾಮ್ರಾಜ್ಯಕಾರ್ಯದ ಸಂಕಷ್ಟವನ್ನೂ, ವನಸಾಮ್ರಾಜ್ಯದ ಸುಖವನ್ನೂ ಮನಸ್ಸಿನಲ್ಲೇ ಹೀಗೆ ತೂಗಿ ನೋಡುತ್ತಿದ್ದನು— "ಅರಸರಿಗೆ ಸಂಪತ್ತಿನ ಮೂಲಕವುಂಟಾಗುವ ಆಲಸ್ಯವು ವಿಷವಿಕಾರದಂತೆ ನಿಮಿಷದಿಂದ ನಿಮಿಷಕ್ಕೂ ಹೆಚ್ಚುವುದು. ಗರ್ವಾಂಧಕಾರದಿಂದ ಮುಸುಕಿದ ಅವರ ಸ್ವಭಾವವು ಸದಾ ಭಯಾವಹವು. ಸಹವಾಸದೋಷದಿಂದ ದೂಷಿತವಾದ ರಾಜ್ಯಸಂಪತ್ತು 'ಪರಿಚಿತರು ಅಪರಿಚಿತರೆ'ಂಬ ಭಿನ್ನಭಾವವಿಲ್ಲದೆ ನಿತ್ತಲ್ಲಿ ನಿಲ್ಲದೆ ತಿಗರಿಯಂತೆ ಸದಾ ತಿರುಗುತ್ತಿದ್ದು ಮಿಂಚಿನ ಶೋಭೆಯಂತೆ ಕ್ಷಣಭಂಗುರವು. ಕೆಲವು ವೇಳೆ ಕಾಠಿನ್ಯವನ್ನು ಅಭ್ಯಸಿಸುವಂತೆ ಅದು ಶಸ್ತ್ರಧಾರಿಗಳಲ್ಲಿ ನೆಲಸುವುದು. ಅಂತಹ ರಾಜ್ಯಲಕ್ಷ್ಮಿಯ ಕಟಾಕ್ಷಕ್ಕೆ ಪಾತ್ರರಾದವರು ಸಂಪನ್ನರೆನಿಸಿಯೂ ಹೀನ ಕೃತ್ಯಗಳಲ್ಲೇ ಅಭಿರುಚಿಯುಳ್ಳವರಾಗುವರು. ದೊಡ್ಡವರೆನಿಸಿಯೂ ವಿಡಂಬನಗೆ ಗುರಿಯಾಗಿ ಲಘುವೆನಿಸುವರು. ಅವರಲ್ಲಿ ಮೊದಲಿದ್ದ ದಾಕ್ಷಿಣ್ಯವು ಪಟ್ಟಾಭಿಷೇಕದ ವೇಳೆ ಮಂಗಲಕಲಶಸ್ನಾನದ ದೆಸೆಯಿಂದ ಸಂಪೂರ್ಣ ತೊಳೆದು ಹೋಗುವುದು. ಹೋಮಧೂಮದ ಮೂಲಕ ಅವರ ಚಿತ್ತವು ಮಲಿನವಾಗುವುದು. ಪುರೋಹಿತರ ದರ್ಭಾಗ್ರಗಳೆಂಬ ಕಸಬರಿಕೆಯು ಅವರ ಸಹನೆಯನ್ನು ತೀರ ಗುಡಿಸಿ ಕಳೆಯುವುದು. ಜರೆಯು ಬಂದು ಅಡಸಿ ಪೀಡಿಸಬಹುದು ಎಂಬ ಸ್ಮರಣೆಯನ್ನು ಅವರ ಕಿರೀಟಧಾರಣೆಯು ನಿವಾರಿಸುವುದು. ಶ್ವೇತಾತಪತ್ರಚ್ಛಾಯೆಯು ಅವರ ಪರಲೋಕದರ್ಶನವನ್ನು ಅಪವಾರಿಸುವುದು. ನಿವಾಳಿಸುವ ಚಾಮರಾನಿಲವು ಅವರ ಸತ್ಯವನ್ನು ತೊಲಗಿಸುವುದು. ರಾಜದಂಡವು ಅವರ ಗುಣಗಳನ್ನು ಹೊಡೆದೋಡಿಸುವುದು. 'ಜಯ! ಜೀಯ' ಎಂಬ ವಂದಿಮಾಗಧರ ಹೊಗಳಿಕೆಗಳು ಅವರ ಏಳಿಗೆಯನ್ನು ತಡೆಯುವುವು. ಬಾವುಟವು ಅವರ ಯಶಸ್ಸನ್ನು ತಟಪಟನೆ ಜಾಡಿಸುವುದು. ರಾಜಕೀಯರಂಗದಲ್ಲಿರತಕ್ಕವರು, ಆಪ್ತರು ಬಂಧುಗಳು ಎಂಬ ಅಭಿಮಾನವನ್ನು ಯಾರಲ್ಲಿಯೂ ತೋರಿಸಿಕೊಳ್ಳಲವಕಾಶವಿಲ್ಲದೆ, ಯಾವಾಗಲೂ ಬಿಗುಮಾನ

ದಿಂದ ರಾಜದಂಡವನ್ನು ಧರಿಸಿಕೊಂಡಿರಬೇಕಾಗುವುದು. ಪರಿವಾರ ಪರಿವೃತನಾಗಿ ನಿಷ್ಠುರವ್ರತವನ್ನು ಪರಿಪಾಲಿಸುತ್ತ, ಪ್ರಾಕಾರದೊಳಗಣ ಭವ್ಯಮಂದಿರಗಳಲ್ಲಿ ಪ್ರಕೃತಿಯ ಪ್ರಸಾದವಾಗಿ ದೊರೆಯತಕ್ಕ ಗಾಳಿ, ಬೆಳಕು, ಚೆಲುವು ಮೊದಲಾದುವುಗಳಿಂದ ವಂಚಿತನಾಗಿ ಪಂಜರದೊಳಗಿನ ಅರಗಿಳಿಯಂತೆ ಕಟ್ಟುನಿಟ್ಟಾಗಿರಬೇಕು. ಮನಬಿಚ್ಚಿ ಮಾತಾಡಿದರೆ ಗೌರವಹಾನಿಯಾಗುವುದರಿಂದ ಗುಮ್ಮನಂತೆ ಬಿಮ್ಮನಿರಬೇಕಾಗುವುದು. ಹೇಗೆ ಯೋಚಿಸಿದರೂ ರಾಜತ್ವವೆಂಬುದು ಅವಧಿಯಿಲ್ಲದ ಕಷ್ಟಕರವಾದ ವ್ರತಪರಿಪಾಲನೆಯೇ ಸರಿ.

ವನಸಾಮ್ರಾಜ್ಯದಲ್ಲಿ ದ್ರವ್ಯದ ಹವ್ಯಾಸವಿಲ್ಲದುದರಿಂದ ಲಕ್ಷ್ಮೀ ವಿಷಯಕವಾದ ಕೋಪತಾಪಗಳಿಗೆ ಅವಕಾಶವಿಲ್ಲ. ನದೀಜಲ, ಗಾಳಿ, ಬೆಳಕು, ವನಲತೆ, ಫಲ, ಪುಷ್ಪ, ಕಂದ, ಮೂಲ ಮೊದಲಾದ ಪ್ರಾಕೃತಿಕ ಸಂಪತ್ತು ಸರ್ವಸಮಾನವು. ಶಾಂತ್ಯಾರಾಧನೆಗೆ ಸಮಯಾಭಾವದ ಕೊರತೆಯಿಲ್ಲ. 'ಐಹಿಕಪಾರಲೌಕಿಕಸುಖಸಾಧನೆಗೆ ವನಸಾಮ್ರಾಜ್ಯವೇ ಮೂಲ'ವೆಂಬುದರಲ್ಲಿ ಸಂಶಯವಿಲ್ಲ. ಆರ್ಯರ ಯೋಚನಾಸೂಚಕವಾಗಿರುವ ಸಾಹಿತ್ಯಸಂಸ್ಕೃತಿಗಳ ಸಾರವನ್ನರಿಯದೆ ಲೌಕಿಕವನ್ನೇ ಮೆಚ್ಚಿರುವುದು ಗತಿಮತಿಗಳ ದಾರಿದ್ರ್ಯಸೂಚನೆಯಾಗಿದೆ. ಮೃಗತೃಷ್ಣೆಯಂತೆ ಕೇವಲ ಶ್ರಮದಾಯಕವಾದ ಸಾಮ್ರಾಜ್ಯಕಾರ್ಯವೆಲ್ಲಿ? ಚಿರಶಾಂತಿದಾಯಕವಾದ ವನಸಾಮ್ರಾಜ್ಯವೆಲ್ಲಿ?"

ಹೀಗೆ ಅಲ್ಲಿ ವನವಾಸವನ್ನನುಭವಿಸುತ್ತಿದ್ದ ಧರ್ಮಜನು "ಕಷ್ಟಕರವಾದ ಭುವನ ಸಾಮ್ರಾಜ್ಯಸುಖಕ್ಕಿಂತ ಸಾವಿರಪಾಲಿಗೂ ವನಸಾಮ್ರಾಜ್ಯವೇ ಸುಖಕರವು" ಎಂಬ ನಂಬಿಕೆಯಿಂದ ಕಾಲವನ್ನು ಸುಖವಾಗಿ ಕಳೆಯುತ್ತಿದ್ದನು.

೨. ಯುಧಿಷ್ಠಿರನ ಮನೋವ್ಯಥೆ

ಮುಂದೆ ನಡೆಯಲಿರುವ ಕಾರ್ಯವು ಏನಾದರೊಂದು ನಿಮಿತ್ತದ ಮೂಲಕ ಸರ್ವರಿಗೂ ತಾನಾಗಿ ತಿಳಿದು ಬರಲವಕಾಶವಿರುವುದು.

ಆದರೂ 'ಅನುಭವಿಸಲಿರುವಂತೆಯೇ ಎಲ್ಲವೂ ನಡೆಯುವುದು! ಆದರಿಂದ ನಮಗೇನು' ಎಂದು ಮಂದಮತಿಗಳು ಅದರ ವಿಷಯವಾಗಿ ಯೋಚಿಸುವುದಿಲ್ಲ. ಯೋಚಿಸಿ ತಿಳಕೊಳ್ಳುವ ಶಕ್ತಿಯಿದ್ದರೂ, ಆದರ ಗೊಡವೆಗೆ ಹೋಗದೆ ಮಧ್ಯಮವರ್ಗದವರು ಅಲಸರಾಗಿ ಸುಮ್ಮನಿರುವರು. ಆ ಸಂಗತಿಯಲ್ಲಿ ಯೋಚಿಸಿ ತದನುಸಾರವಾದ ಕರ್ತವ್ಯದಲ್ಲಿ ನಿರತರಾಗುವವರನ್ನು ಸರ್ವಜ್ಞರಾದ ಮಹಾತ್ಮರೆಂದು ಲೋಕವು ಸಂಭಾವಿಸುವುದಲ್ಲದೆ, ಅವರ ಕಾರ್ಯಗಳ ಸಾರವನ್ನರಿಯದೆ ಬೆರಗಾಗುವುದು.

ಯುಧಿಷ್ಠಿರನು ಎಂದಿನಂತೆ ನಿತ್ಯ ನಿಯಮಗಳನ್ನು ತೀರಿಸಿ ಆಹಾರವನ್ನು ಸ್ವೀಕರಿಸಿದ ಮೇಲೆ ಧರ್ಮ ಚಿಂತನೆಯಲ್ಲಿ ಲೀನನಾಗಿದ್ದನು. ಇದ್ದಂತೆಯೇ ಆತನಿಗಾಗ ವಾಮಾಕ್ಷಿಸ್ಪಂದನವು ಬಲವಾದ ನಿಮಿತ್ತದಂತೆ ತೋರಿಕೊಂಡಿತು. ದುಃಖಾನುಭವವೇ ಫಲವಾಗಿರುವ ಅದರ ವಿಚಾರವು ಆ ಶಾಂತ್ಯಾರಾಧಕನ ಮನಸ್ಸಿಗೆ ಹೊಳೆಯದಿರಲಿಲ್ಲ. ಒಮ್ಮೆ ತೋರಿದ ವಿಚಾರವು ಬೇರೂರಿ ಬಲವಾಗುವಂತೆ ಮತ್ತಿನ ಯೋಚನೆಗಳಲ್ಲೆಲ್ಲ ಚಿತ್ತವು ವ್ಯಸನದ ಛಾಯೆಯನ್ನೇ ಕಾಣುತ್ತಿತ್ತು. ಆಗ ಮುಂಗಾಣದ ಧರ್ಮ ವಿಚಾರವು ಅಲ್ಲೇ ನಿಂತು ಹೋಯಿತು. ಎಂದೆಂದೋ ಹಿಂದೆ ನಡೆದ ಕಾರ್ಯಸ್ಮರಣೆಗಳು ಒಂದೊಂದಾಗಿ ಬಂದು ಕಳವಳವನ್ನುಂಟುಮಾಡುವ ಸಾವಿರಾರು ದೃಶ್ಯಗಳು ಚಿತ್ತಭಿತ್ತಿಯ ಮೂಲಕ ಹಾದುಹೋದುವು. ಎಲ್ಲವೂ ದುಸ್ವಪ್ನಗಳಂತೆ ಕಂಡೂ ಕಾಣಿಸದಾದುವು. 'ತಮ್ಮಂದಿರೂ ದ್ರೌಪದಿಯೂ ತನ್ನ ಸಲುವಾಗಿ ಸಂಕಷ್ಟಗಳನ್ನನುಭವಿಸಬೇಕಾಯಿತೇ! ಶಾಂತಿಗಾಗಿ ತವಕಿಸುವ ನನ್ನ ದಾಕ್ಷಿಣ್ಯಕ್ಕಾಗಿ ಸುಮ್ಮನಿರುವ ಅವರ ಯೋಗ್ಯತೆಯನ್ನು ಗ್ರಹಿಸುವುದು ನನ್ನ ಕರ್ತವ್ಯವಲ್ಲವೆ?" ಎಂಬುದಾಗಿ ನೆಲೆದಪ್ಪಿದ ಧರ್ಮಜನ ಮನಸ್ಸು ನಾನಾಮುಖವಾಗಿ ಯೋಚಿಸತೊಡಗಿತು.

ಆತನು ತಳಮಳದಿಂದ ನಿತ್ತಲ್ಲಿ ನಿಲ್ಲಲಾರದೆ, ಚಿತ್ತಶಾಂತಿಗಾಗಿ ಪರ್ಣಕುಟಿಯಿಂದೆದ್ದು ಹೊರಗೆ ಸುಳಿದಾಡುತ್ತ, ಮೆಲ್ಲಮೆಲ್ಲನೆ ಮುಂದುವರಿಯುತ್ತ ಕಂಡು ಬಂದ ದೃಶ್ಯಗಳೊಡನೆ ಉನ್ಮತ್ತನಂತೆ ಹೀಗೆ ಮಾತಾಡತೊಡಗಿದನು—“ಎಲೆ ಗಂಧದ ಮರವೆ! ಲೋಕಪ್ರಸಿದ್ಧವಾದ ಪರಿಮ

ಳವೂ ತಂಪೂ ತನ್ನಲ್ಲಿರುವುದರಿಂದ ತನಗೆ ದಿಗಂತವಿಶ್ರಾಂತವಾದ ಕೀರ್ತಿಯಿರುವುದೆಂದು ಹೆಚ್ಚಿ ಬೆಳೆದಿರುವೆಯಾ? ವಿಷಧರಸಂತತಿಗಳು ಬಂದು ಸೇರಿ ನಿನ್ನೊಡನೆ ನಂಜುಕಾರುತ್ತಿರುವುದನ್ನು ಲಕ್ಷಿಸಲಾರದಾದೆಯಾ? ಫಲಪುಷ್ಪಗಳಿಲ್ಲದ ಕೊರತೆಯಿಂದ ನಿನ್ನಲ್ಲಿ ಶಕುಂತಾಲಿಸಂತತಿಗಳ ಪಕ್ಷಪಾತವಿಲ್ಲ! ಸೊಬಗಿಂದ ಮೆರೆವ ಮಾಕಂದ! ಲೋಕದಲ್ಲಿ ವಿವಿಧ ಜಾತಿಯ ತರುಗಳಿದ್ದರೂ ಮಧುಕರವೃಂದವು ನಿನ್ನ ಉದಾರ ಚರಿತೆಯನ್ನೇ ಹಾಡಿ ಹೊಗಳುತ್ತಿರುವುದು. ಕೋಗಿಲೆಗಳು ನಿನ್ನ ಪರವಾಗಿ ಪಂಚಮಾಲಾಪದಿಂದ ಮೇಳೈಸುವುವೆಂದರೆ, ಸರ್ವಕಾರ್ಯಗಳನ್ನೂ ತೊರೆದು ದಾನವೊಂದನ್ನೇ ಮುಖ್ಯವಾಗಿಟ್ಟುಕೊಂಡ ನಿನ್ನ ಧನ್ಯತೆಗೆ ಸಮಾನವಿಲ್ಲ. ಪಂಡಿತವಕ್ಕಿ! ನೀನೀಕಾನನದಲ್ಲಿ ಬಿನ್ನನೆ ತಲೆವಾಗಿರಲು ಕಾರಣವೇನು? ರಸಾಲಫಲವೆಲ್ಲ ಮುಗಿಯಿತೆಂದೇ? ವನಸಾಮ್ರಾಜ್ಯವೇ ನಿನ್ನ ಅಧೀನವಾಗಿರಲು ತೃಷ್ಣಾತುರಂಗಮವನ್ನು ಜಗ್ಗುವ ಸಹನೆಯ ಕಡಿವಾಣಕ್ಕೂ ಬಿಡುವೆ? ಏನೇನು! ಪುರುಳಿಯ ವಿಪ್ರಲಾಪವನ್ನು ಕೇಳಲಾರದೆ, ಪ್ರಕೃತಿಯ ಸೊಬಗಿನಿಂದ ಮನಸ್ಸಿಗೆ ಶಾಂತಿಯೆಂದು ಹೊರಗಿಳಿದು ಬಂದೆನೆನ್ನುವೆಯಾ? ಸುಗಮವಾದ ನಿನ್ನೀ ಉಪಾಯವೇ ಅನುಕರಣೀಯವು! ಎಲೆಲೆ ರಾಜಹಂಸ! ನೀನು ಮನಬಂದಂತೆ ಕಮಲನಾಳಗಳನ್ನು ಮೆದ್ದು ಸೌರಭ್ಯಶೀತಲವಾದ ತಣ್ಣೀರನ್ನು ಕುಡಿದು ನಲಿನವನದಲ್ಲಿ ವಿಹರಿಸಿ ಸಂತೋಷದಿಂದ ಮೆರೆದುದು ನಿಜವಾದರೂ, ನಿನ್ನ ದೆಸೆಯಿಂದ ಕಮಲಾಕರಕ್ಕಾದ ಪ್ರಯೋಜನವೇನೆಂಬುದನ್ನು ನೆನಸಿದೆಯಾ! ನೀರಕ್ಷೀರವಿಭೇದನಪಟುವೇ! ಕರ್ತವ್ಯದ ಗೊಡವೆಯಿಲ್ಲದೆ ನೀನು ಹೀಗೆ ಸುಮ್ಮನಿರುವುದಾದರೆ ಕುಲವ್ರತವನ್ನು ಪಾಲಿಸುವವರಾರು?"

ಈ ಬಗೆಯಿಂದ ಧರ್ಮರಾಜನು ಸೃಷ್ಟಿಮಾತೆಯ ಮಡಿಲಂತಿರುವ ಅಡವಿಯಲ್ಲಿ ಸುಳಿದಾಡುತ್ತ ಸುಂದರವಾದ ಸರೋವರದೆಡೆಗೆ ಬಂದು ಶಿಲಾಸನದ ಮೇಲೆ ಕುಳಿತುಕೊಂಡನು. ನೋಡುತ್ತಿದ್ದಂತೆಯೇ ಮದ್ದಾನೆಯ ಜಲಕೇಳಿಯಿಂದ ಕಮಲಾಕರವು ಕದಡಿ ಕಮಲಿನಿಯು ಕ್ಷಣಭಂಗುರೆಯಾಗಲು, ಅವನ ಹೃದಯಕಮಲದಲ್ಲಿ ಬಗೆಬಗೆಯ ಭಾವನಾತರಂಗಗಳೆದ್ದೆದ್ದು ಹೀಗೆ ಹೊರಳಿದುವು—ಜೀವನವಿಕಸಿತ ಲಲಿತ ಕಮಲಿನಿ!

ಲೋಕದ ಸುಂದರಸೃಷ್ಟಿಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದ ಸೌಂದರ್ಯದೊಡನೆ ನಿನ್ನ ಜೀವನವೂ ಕೊನೆಗೊಂಡುದೆ? ದುರ್ಗಮಾರಣ್ಯಗಳಿಂದ ನಿಬಿಡವಾಗಿ ಗಗನತಲಸ್ಪರ್ಶಿಗಳಾದ ಶಿಖರಗಳಿಂದೊಪ್ಪುವ ಪರ್ವತಾವಲಿಗಳಲ್ಲಿ ಸ್ವೇಚ್ಛಾವಿಹಾರಿಯಾಗಿ ಮೆರೆಯುತ್ತಿದ್ದ ಆ ಮತ್ತಮತಂಗಜವೆಲ್ಲಿ? ಮನುಜಸೌಕರ್ಯಸಹಕಾರಿಯಾದ ಸರೋವರವೆಲ್ಲಿ? ಅಲ್ಲಿ ಮೆಲ್ಲಮೆಲ್ಲನೆ ಹುಟ್ಟಿ ಬೆಳೆದು ಕೆಸರ್ಮಲ್ಲಿಗೆಯೆನಿಸಿಯೂ ಪ್ರಮೋದಾಮೋದಪ್ರದೆಯೆನಿಸಿ ಎಲ್ಲಾ ಜನರ ತಲ್ಲಣವನ್ನೂ ಬಲ್ಲಂತೆ ಪರಿಹರಿಸಿದ ನೀನೆಲ್ಲಿ? ಕಾಲನೇ ಮುನಿದು ಬಂದಂತೆ ಮದ್ದಾನೆ ತಾನಾಗಿಯೇ ಇಲ್ಲಿಗೆ ಏಕೆ ಬರಬೇಕು? ನೀರಡಿಸಿ ಬಂದರೆ ಮನಸಾರೆ ಕುಡಿದು ನಡೆಯುವುದನ್ನು ಬಿಟ್ಟು ನೀರಾಟವೆ? ಏರಾಟಹಾರಾಟಗಳಿಂದ ಓರಂತೆ ದಣುವಾರಿಸಲುಪಕ್ರಮಿಸಿದರೆ ತಡೆವವರಾರು? ಮದದಿಂದ ಮಲೆತ ಮಹಾಗಜದ ಮುಂದೆ ನಿಲ್ಲುವವರಾರು?

ಸಚರಾಚರಸೃಷ್ಟಿಯಲ್ಲಿ ಸೌಂದರ್ಯನಿಧಿಗಳನ್ನು ಜಾಗರೂಕತೆಯಿಂದ ಸೃಜಿಸುವ ವಿಧಾತನೆ! ನಿನ್ನ ರಚನಾಕೌಶಲವೇನು? ಅದನ್ನು ಮರುಕ್ಷಣವೇ ಉಪಾಯಾಂತರದಿಂದ ಪರಿಹರಿಸಿಕೊಳ್ಳುವುದರಲ್ಲಿರುವ ನಿನ್ನ ಉದ್ದೇಶವೇನು? ಜಗನ್ನಿಯಾಮಕನೆ! “ಹೇಗಿದ್ದರೂ ತನ್ನ ರಚನೆಯು ತನಗೆ ತೃಪ್ತಿಕರವೆನಿಸದು” ಎಂಬ ಸೂತ್ರವನ್ನನುಸರಿಸಿ, ಇನ್ನೂ ಬಲು ಸೊಗಸೆನಿಸುವಂತೆ ಬೇರೆ ಸುಂದರವಸ್ತುಗಳ ನಿರ್ಮಾಣಕ್ಕಾಗಿ, ಮೊದಲು ಉಪಯೋಗಿಸಿದ ಸೃಷ್ಟಿಸಾಮಗ್ರಿಗಳನ್ನು ಕೈಚಾಚಿ ಸೆಳೆದು ಕೊಳ್ಳುವೆಯಾ? ಕಮಲಯೋಗಿಯೆನಿಸಿದ ಬ್ರಹ್ಮನೆ! “ಊರಿಗೆ ಅರಸನಾದರೂ ತಾಯಿಗೆ ಮಗನು” ಎಂಬ ಮಾತಿನ ಸಾರವನ್ನರಿಯದೆ,—‘ಬೆಟ್ಟದಿಂದಿಳಿದು ಅಹಂಕಾರದಿಂದೇರಿದ ಮದಗಜದ ಸೊಂಡಿಲ ಹೊಡೆತಕ್ಕೆ ಗುರಿಯಾಗು”—ಎಂದು ಅಮ್ಮನ ತಲೆಯಲ್ಲಿಯೂ ನೀನು ನಿನ್ನ ಬ್ರಹ್ಮಲಿಪಿಯನ್ನು ಬರೆಯದಿರಲಿಲ್ಲವೆ? ನಿನ್ನ ಸ್ಥೂಲದೇಹದ ಭಾರವನ್ನು ಧರಿಸಿ ಪುತ್ರವಾತ್ಸಲ್ಯವನ್ನು ನಿರ್ವಹಿಸಿದ ಕೋಮಲನಲಿನಿಯಲ್ಲಿಯೂ ವಿಧಿಯೇ, ನೀನು ನಿನ್ನ ಧಾರ್ಷ್ಟ್ಯವನ್ನು ತೋರಿಸುವುದೆ? ಪದ್ಮಜನೆ, ನಿನ್ನ ಮಾತೃಭಕ್ತಿಯ ಚರಮಸೀಮೆಯಿದಲ್ಲವೆ? ನೀನು ಜಡಜಸಂಭವನಾಗಿ ಜಡನೆನಿಸಿದೆಯೊ? ಹುಟ್ಟಿದಂದಿನಿಂದಲೇ ಚತುರ್ಮುಖಗಳಿಂದಲೂ ನಿರಂತರವೂ ವೇದಾಭ್ಯಾಸನಿರತನಾಗಿ

ಜಡಭರಿತನಾದೆಯೊ? ಪಿತಾಮಹನಾಗಿ ನಿನ್ನ ಮತಿಯು ಕರ್ತವ್ಯಾಕರ್ತವ್ಯ
ವಿಕಲವೆನಿಸಿತೆ? ಅಥವಾ ನಿನ್ನ ತಪ್ಪೇನು? ಪ್ರಪಂಚವೆಲ್ಲವೂ ನಿನ್ನ ಸೃಷ್ಟಿ
ಯಾಗಿರುವಾಗ ಕಮಲಿನಿಯನ್ನೂ ನೀನೇ ಸೃಜಿಸಿರಬೇಕಲ್ಲವೆ? ಆಹಾ! ಜನ್ಮ
ದಾತನಾಗಿಯೂ ಪಿತೃವಾತ್ಸಲ್ಯದಿಂದ ನಲಿನಿಯನ್ನು ಸಲಹದೆ ಹೋದೆಯಾ?
ಕಮಲಾಸನನೆ, ಕಮಲವು ನಿನಗೆ ತತ್ಕಾಲದ ಆಸನಮಾತ್ರವೆನಿಸಿತೆ?
ಲಾವಣ್ಯಸಾರಸಂಗ್ರಹ ತತ್ಪರನಾಗಿ ನಿನ್ನ ವಿವೇಕವೂ ವಿಕಲವೆನಿಸಿತೆ?
ವಿಧಿವಿಲಸಿತವೇ ವಿಚಿತ್ರತರವು!

ದಿನಕರನೇ! ಪ್ರೇಮದಿಂದೊಲಿದ ಕಮಲಿನಿಯ ಪಾಣಿಗ್ರಹಣವನ್ನು
ಸಹಸ್ರಕರಗಳಿಂದಲೂ ನೆರವೇರಿಸಿ, ಅಬ್ಜಿನೀಪತಿಯೆನಿಸಿದೆಯಲ್ಲವೆ?
ದುಷ್ಟಗಜದ ಶುಂಡಾದಂಡದ ಆಘಾತಕ್ಕೆ ಗುರಿಯಾಗಿ ಪ್ರಾಣೋ
ತ್ಕ್ರಮಣದಿಂದ ತತ್ತರಿಸುವ ನಲಿನಿಯನ್ನೇಕೆ ಕಡೆಗಣಿಸುವೆ? "ಮಾತಂಗ
ಕರಾಕೃಷ್ಟಳು ಕೇವಲವರ್ಜ್ಯಳು" ಎಂದು ತಟಸ್ಥನಾದೆಯೊ? ಆಹಾ!
ನಿನ್ನ ಜಾತೀಯತೆಯ ಮೇಲ್ಮೆಯೆ! ಅಬಲೆಯರು ದುಷ್ಟರ ಹಾವಳಿಯಿಂದ
ತಪ್ಪಿ ಎಲ್ಲರಂತೆ ಸಮಾಜದಲ್ಲಿ ತಲೆಯೆತ್ತಿ ಬದುಕುವ ಹದನವೆಂತು!
ಲೋಕಬಂಧು! ಪ್ರದೋಷಕಾಲದಿಂದಲೂ ನಿನ್ನ ಅಗಲಿಕೆಯ ಬೇಸರ
ದಿಂದಲೇ ಯಮಯಾತನೆಯಿಂದಲೆಂಬಂತೆ ಯಾಮಿನೀಯಾಮಗಳಿಂದ
ಬಿಡುಗಡೆ ಹೊಂದಿ ಸಡಗರದಿಂದ ನಿನ್ನೊಲವಿನ ಬರವನ್ನೇ ಸ್ವಾಗತಿಸಲು
ತವಕಿಸುತ್ತಿದ್ದ ಕಮಲಿನಿಗೆ ಅನಿರೀಕ್ಷಿತವಾಗಿ ದುಷ್ಟಮತಂಗಜದ ದಂದ
ಲೆಯೆ? ನಲ್ಲೆಯ ಎಲ್ಲಾ ಕಷ್ಟಗಳನ್ನೂ ಪರಿಹರಿಸತಕ್ಕ ಕರ್ತವ್ಯದಲ್ಲಿಯೂ
ವಿಮುಖತೆಯೆ? ಜಗಚ್ಚಕ್ಷು! ಅಸ್ತಮಾನ ಶಿಖರವನ್ನೇರಿ ಕಣ್ಮರೆಯಾ
ದೊಡನೆ ಮಧುಪಗಳ ಬಳಗವನ್ನೊಳಗೊಂಡು ಸಂಕುಚಿತೆಯಾದ
ಕಮಲಿನಿಯ ಕರ್ಮದ ಮರ್ಮವನ್ನರಿತು, "ಅನ್ಯ ಸಂಸರ್ಗದೂಷಿತೆ"
ಯೆಂದರಿತು ಬಹಿರ್ಮುಖನಾದೆಯೊ? ಕರ್ಮಸಾಕ್ಷಿ! "ಸ್ಥಿಮಿತಮತಿ
ಯಲ್ಲದವರಿಗೆ ಬೆಂಗಾವಲೇಕೆ" ಎಂಬ ಸದಭಿಪ್ರಾಯವೇ ನಿನಗೆ? ಸರಿ!
ಸರಿ! ನೀನು ಸರಿಯುತ್ತಿರುವುದು ಸಹಜ. ಅನಂತಪಥಸಂಚಾರದಿಂದ
ಲೋಕವನ್ನು ಬೆಳಗಿಸುವ ಸ್ವಕಾರ್ಯನಿರತನಿಗೆ ಬಿಡುವಿಲ್ಲ.

ಗಗನಾಂಗಣದಲ್ಲಿ ತಾರಾಮಣಿಯಂತೆ ಪಾವನತರಸರೋವರದಲ್ಲಿ
ನಲಿದ ನಲಿನಿ! ವಂದಿಗಳ ವಂದನೆಗೆ ಮನಸೊಚ್ಚಿ ಎಚ್ಚರಗೊಳ್ಳುವಂತೆ

ತುಂಬಿಗಳ ಮಧುರಝುಂಕಾರಕ್ಕೆ ವಿಕಾಸಗೊಂಡು ತಲೆದೂಗುತ್ತ, ತುಂಬಿ ತುಳುಕಾಡುವ ಮಧುಭರಕ್ಕೆ ತೊನೆದಾಡುತ್ತ, ಮಂದಮಾರುತನಿಗೊಲಿದು ನಿಜಪರಿಮಳವನ್ನೀಯುತ್ತ, ಅಂತರಾಳಚಂಚಲೆಯೆನಿಸಿಯೂ ಚಪಲೆಯಾದ ಸಿರಿಗೆ ಕರುವಾಡವೆನಿಸಿದ ಕಮಲಿನಿ, ನೀನು ಮಹಾಗಜದ ಗಂಡದಾಳಿಗೆ ಕಾತರಿಸಿದೆಯೆಂಬುದು ಸೋಜಿಗವೇ ಸರಿ. ಕ್ಷೀರಸಾಗರಕನ್ನಿಕೆ ಮಹಾವಿಷ್ಣುವಿನ ಮಡದಿ, ಲೋಕಮಾತೆಯೆನಿಸಿದ ರಮೆಯಾದರೂ ನಿನ್ನ ಔದಾರ್ಯದ ಸ್ಮರಣೆಗಾಗಿ ಕಮಲೆಯೆನಿಸಿಯೂ ತ್ರಿಭುವನವನ್ನು ಸಲಹುವ ಕೃಪಾಕಟಾಕ್ಷವನ್ನು ಬೀರಿಯೂ ಸ್ವಭವನವೆನಿಸಿದ ನಿನ್ನನ್ನು ಪರಿಪಾಲಿಸಲಾರದೆ ಹೋದಳೆ?

ತ್ರಿಲೋಕವಿಜಯಿಯೆನಿಸಿ ಪ್ರಖ್ಯಾತನಾದ ಕಾಮನೇ! ನೀನಾದರೂ ಪಂಚಬಾಣಗಳಿಂದಲ್ಲವೆ ಸಕಾಮನು? ಕೈಲಾಸವಾಸಿಯಾದ ರುದ್ರನನ್ನು ಜಯಿಸಿ ರಜತಗಿರಿಶಿಖರದಲ್ಲಿ ವಿಜಯಧ್ವಜವನ್ನು ನೆಲೆಗೊಳಿಸಿದೆಯಷ್ಟೆ! ನಿನ್ನ ಮುಖ್ಯಬಾಣವಾದ ಅರವಿಂದವೇ ಸ್ವರಕ್ಷಣೋಪಾಯಶೂನ್ಯತೆಯಿಂದ ತಲ್ಲಣಿಸುತ್ತಿದ್ದಾಗ ಅದರ ರಕ್ಷಣಾಕಾರ್ಯವನ್ನೂ ಮರೆತುಬಿಟ್ಟೆಯೊ? ಅಥವಾ "ಲೋಕವನ್ನೆಲ್ಲಾ ಜಯಿಸಿದ ಮೇಲೆ ಬಾಣವೇಕೆ" ಎಂದು ಸುಮ್ಮನಾದೆಯೊ? ವೀರನೇ! "ಆತ್ಮರಕ್ಷಣೆಗಾದರೂ ವೀರರು ಶಸ್ತ್ರಾಸ್ತ್ರಗಳನ್ನು ಧರಿಸಬೇಕು" ಎಂಬ ನಿಯಮವನ್ನೂ ಮೀರುವೆಯೊ? "ಶಸ್ತ್ರಸನ್ಯಾಸದಿಂದ ವಿಪತ್ಪರಂಪರೆಗಳು ಸಂಭವಿಸುವುವು" ಎಂಬ ಭ್ರಮೆಯನ್ನು ಕಿತ್ತೊಗೆದು ಇಡೀ ವಿಶ್ವವನ್ನೇ ಸಮಾನಭಾವದಿಂದ ನೋಡುವ ಸಮತಾವಾದಕ್ಕೆ ತಲೆವಾಗಿ ಅರವಿಂದವನ್ನೂ ಅಲ್ಲಗಳೆಯುವೆಯೊ? ಆಹಾ! ಇದೆಂತಹ ಭ್ರಾಂತು? ನೀನಂದೇ ಮುಕ್ಕಣ್ಣನ ತ್ರಿಣೇತ್ರಾಗ್ನಿಗೆ ಆಹುತಿಯಾಗಿ ನಾಮಮಾತ್ರಾವಶಿಷ್ಟನೋ ಅನಂಗನೋ ಎನಿಸಿರುವಾಗ ಸ್ವಕೀಯ ಶರರಕ್ಷಣೆಗದೆಂತು ಸಮರ್ಥನಾಗುವೆ? ಆದುದರಿಂದ ನೀನು ನಿರ್ವಿಣ್ಣನೋ ವಿಷಣ್ಣನೋ ಆಗಿರುವುದು ಸಹಜ.

ಕಮಲಿನಿ! ನೀನು ಉನ್ನತಕುಲಸಂಜಾತೆಯೆನಿಸಿ, ಚತುರ್ಮುಖ ಬ್ರಹ್ಮನಿಗೆ ಜನ್ಮದಾತೆಯೆನಿಸಿ, ಗ್ರಹಪತಿಗೆ ಧರ್ಮಪತ್ನಿಯೆನಿಸಿ, ಐಶ್ವರ್ಯದೊಡತಿಯಾದ ಲಕ್ಷ್ಮೀದೇವಿಗೆ ಆಶ್ರಯದಾತೆಯೆನಿಸಿ, ಕುಸುಮಶರನಿಗೆ

ಮೊದಲನೆಯ ಸರಳೆನಿಸಿ ಉನ್ನತೋನ್ನತಕುಲಸಂಬಂಧದಿಂದ ಮೇಲ್ಮೆಗೊಂಡು ಭುವನದಲ್ಲಿ ಅಗ್ರಸ್ಥಾನವನ್ನು ಪಡೆದು ಅದರ ಬಲದಿಂದ ಬೀಗಿಕೂಗಿದೆಯೊ? ಹಂಬಲಿಸಿ ಯಾಚಿಸುವ ತುಂಬಿಗಳನ್ನು ಬಂಧನಗೊಳಿಸಿ ಮೇಲ್ಮೆಗಾಗಿ ಜಗ್ಗನೆ ಹಿಗ್ಗುತ್ತಿದ್ದ ನಿನ್ನ ಗತಿಯೆ? "ದೊಡ್ಡವರ ಬಾಂಧವ್ಯದ ಹೆಮ್ಮೆಯಿಂದ ಬಡವರನ್ನು ಕಡೆಗಣಿಸಬಾರದೆ"ಂಬ ರಹಸ್ಯವು ಈಗಲಾದರೂ ನಿನಗೆ ಮನವರಿಕೆಯಾದುದೇ? "ಏಳಿಗೆಯಲ್ಲಿ ಬಂಧುಗಳು" ಎಂಬ ಲೋಕಮರ್ಯಾದೆಯಿರುವುದಾದರೂ, "ಆಪದ್ಬಂಧುಗಳೇ ನಿಜವಾದ ಬಂಧುಗಳು; ಪಾಪಪುಣ್ಯಗಳೇ ಒಡನಾಡಿಗಳು" ಎಂಬ ತತ್ವವು ಈಗಲಾದರೂ ನಿನ್ನ ಹೃದಯದಲ್ಲಿ ನೆಲಸದಿರಲಾರದು. ಕಮಲಿನಿ, ಅಕಾಲದ ಘೋರವಿಪತ್ತಿಗೊಳಗಾಗಿ ಕಾಲನ ದವಡೆಯೆಂಬ ಅಗಾಧವಾದ ಮಡುವಿನಲ್ಲಿ ಕೆಡೆದುಹೋದೆಯೊ? ಹಾ! ಸೌಂದರ್ಯದ ಗನಿಗಳು ದುಷ್ಟರ ಬಾಧೆಗೊಳಗಾಗಿ ಮನಮರುಗಿಸುವ ಪ್ರಾಣಾಪಾಯ ನಿವೇದಕಚರಿತೆಗಳೆಷ್ಟಿಲ್ಲ!

ನಳಿನಿ! ನೀನು ಮೃಣಾಳನಾಳಸಮುದ್ಭವೆಯೆನಿಸಿ ವಿಕಾಸನೆಂಬ ಮಂದಹಾಸದೊಡನೆ ಚೆಲ್ವ ಕಂಪನ್ನುಣಿಸುತ್ತ, ಸಾಂಸಾರಿಕತಾಪಗಳಿಂದ ಬೆಂದು ಕಂದಿದ ಜನರ ಬಗೆಯನ್ನು ಬಗೆಬಗೆಯ ವಿಧಾನಗಳಿಂದ ತಣಿಸುತ್ತ, ಮೇಧಾವಿಗಳೆನ್ನದೆ ಜಡಮತಿಗಳೆನ್ನದೆ ಸ್ತ್ರೀಯರೆನ್ನದೆ ಪುರುಷರೆನ್ನದೆ ಕವಿಗಳೆನ್ನದೆ ವಿದ್ವಾಂಸರೆನ್ನದೆ ಬಾಲರೆನ್ನದೆ ವೃದ್ಧರೆನ್ನದೆ ಸಮಸ್ತರೂ ಭಿನ್ನಭಿನ್ನರೀತಿಗಳಿಂದ ಮಾಡುವ ನಿನ್ನ ಗುಣಗಾನವನ್ನು ಕೇಳುತ್ತ, ತ್ರಿಭುವನದಲ್ಲಿಯೂ ಪ್ರಸಿದ್ಧಚರಿತ್ರಳೆನಿಸಿ ಯಶಸ್ವಿನಿಯಾದೆಯೊ? ಸುಂದರವಾದ ಸರೋವರದ ಅಂತರಾಳದಿಂದ ನಾಳವೆನಿಸಿ ಬಂದು ನೆರೆದು ಬಿರಿದು ಮೆರೆದ ಕೆಂದಾವರೆ! ಸುಯೋಗದ ಘಟನೆಯು ದೈವಚಿಂತನೆಗೊಳಗಾಗಿರುವಾಗ ಯಾರೇನು ತಾನೇ ಮಾಡಬಲ್ಲರು?"

ಹೀಗೆ ಯುಧಿಷ್ಠಿರನು, ಸುಯೋಧನನಿಂದ ಅಪಹೃತವಾದ ತನ್ನ ರಾಜ್ಯಲಕ್ಷ್ಮಿಯನ್ನು ಮದಗಜದ ದಂದಲೆಗೀಡಾದ ಕಮಲಿನಿಯೊಡನೆ ಹೋಲಿಸಿನೋಡುತ್ತ, ಅನಂತವಾದ ಭಾವಲೋಕದಲ್ಲಿ ಸಂಚರಿಸುತ್ತ ಐಹಿಕವನ್ನೇ ಮರೆಯುವಂತಿದ್ದನು.

೩. ಸುಯೋಧನನ ರಾಜ್ಯಭಾರನಿವೇದನೆ

ಲೋಕದ ಯಾವ ಭಾಗವನ್ನೂ ಬಿಡದೆ ನಿರಂಕುಶತೆಯಿಂದ ಮೆರೆಯುವ ಕಪಟರೂಪದ ಮಾಯೆ! ನಿನ್ನ ಪ್ರಭಾವಕ್ಕೆ ಮೆಚ್ಚಿ ತಲೆದೂಗದವರಾರು? ಪ್ರಭಾವಶಾಲಿನಿ! ನಿರಾಕಾರಿಣಿಯಾಗಿಯೂ ನೀನು ಬದ್ಧಾಂಜಲಿಯಾದ ಭಕ್ತವೃಂದಕ್ಕೆ ಸಾಕಾರಮಮಕಾರಗಳಿಂದ ರಂಜಿಸುವ ನೇತ್ರಾಂಜನವು. ಅಜ್ಞಾತಕುಲಗೋತ್ರೇ! ಲೋಕದ ಮಾನವನ್ನೇಕೀಕರಿಸಿ ಏಕಸೂತ್ರಾನ್ವಯಿಯಾಗಿಸುವ ಮಹಾಪ್ರಾಜ್ಞನಂತೆ ನಟಿಸುವ ನಿನ್ನ ನಟನೆಗೆ ಬೆರಗಾಗದವರಾರು? ಕರ್ಮಕ್ಷೇತ್ರದಲ್ಲಿ ನಟ್ಟ ಧರ್ಮವೃಕ್ಷಕ್ಕೆ ನೀನು ಕೀಟಸಂತತಿಯೊ, ಕುಠಾರವೊ, ಅಗ್ನಿಜ್ವಾಲೆಯೊ, ಅನಾಚಾರದ ಕೂಲಂಕಷಪ್ರವಾಹವೊ? ಮಾಯೇ ನೀನು ಕಣ್ಣಿಗೆ ಕಾಣಿಸದಿದ್ದೂ ಫಲವನ್ನುಣಿಸುವೆಯಲ್ಲವೆ? ಜಗನ್ನಿಯಾಮಕನು ತಾನೇ ಕಪಟನಾಟಕಸೂತ್ರಧಾರಿಯಾಗಿರಲು, ಕಪಟವೇ! ನಿನ್ನ ಉಪಟಳದಿಂದ ಕೋಟಲೆಗೊಳ್ಳದವರಾರು?" ಎಂದು ಬಗೆಬಗೆಯಿಂದ ಕಪಟವಿದ್ಯೆಯನ್ನು ಹೊಗಳುತ್ತ ವಟುವೇಷಧಾರಿಯಾದ ಗೂಢಚರನೊಬ್ಬನು ಸರೋವರದ ತಡಿಯಲ್ಲಿ ಅನ್ಯಮನಸ್ಕನಾಗಿ ಕುಳಿತುಕೊಂಡಿದ್ದ ಯುಧಿಷ್ಠಿರನ ಬಳಿಗೆ ಬಂದು "ದೇವ! ಬಿನ್ನಹವು" ಎಂದು ಹೇಳುತ್ತ ದೊರೆಯ ಪಾದಕಮಲಗಳಿಗೆ ಸಾಷ್ಟಾಂಗವೆರಗಿದನು.

ಆಗ ಧರ್ಮಜನು ಎಚ್ಚರಗೊಂಡು "ಓಹೋ! ಇದೇನು! ವಿಚಿತ್ರವಾದ ವೇಷವನ್ನು ಧರಿಸಿಕೊಂಡಿರುವೆ? ಒಡೆಯನ ಪಾದಸೇವೆಯೇ ತಮ್ಮ ಜೀವಿತದ ಧ್ಯೇಯವೆಂಬ ಅನುಯಾಯಿವರ್ಗದಲ್ಲಿ ಕುಶಾಗ್ರಮತಿಯೆನಿಸಿದ ಸೋಮಕನೇ! ನಮ್ಮ ಕುರುಕುಲದ ಸಾಮ್ರಾಜ್ಯವನ್ನು ದುರ್ಯೋಧನನು ಹೇಗೆ ತಾನೇ ಆಳುತ್ತಿರುವನು? ಅರಸನಲ್ಲಿ ಪ್ರಜೆಗಳೆಲ್ಲರೂ ಅನುರಕ್ತರಾಗಿರುವರೇ ಎಂಬುದನ್ನು ತಿಳಿದುಬರುವೆನೆಂದು ನೀನು ಹೊರಟುಹೋಗಿ ಬಹಳ ದಿನಗಳಿಂದಲೂ ಏನೇನು ಮಾಡಿದೆ? ನಮ್ಮ ರಾಜ್ಯದ ರಹಸ್ಯಗಳನ್ನು ಹೇಗೆ ತಾನೇ ತಿಳಿದಿರುವೆ? ಚಾಣಾಕ್ಷರಾದ ಅಧಿಕಾರಿಗಳ ಗೃಧ್ರದೃಷ್ಟಿಗಳಿಂದ ಹೇಗೆ ಪಾರಾಗಿ ಬಂದೆ ಎಂಬ ಸಂಗತಿಗಳೆಲ್ಲವನ್ನೂ ತಿಳಿಸು" ಎಂದು ಬೆಸಸಿದನು.

ಆಗ ಸೋಮಕನು ವಿನೀತನಾಗಿ—"ಒಡೆಯನೇ ಲಾಲಿಸಬೇಕು! 'ಅರಸರು ಚಾರೇಕ್ಷಣರು' ಎಂದಿರುವಾಗ, ನಿಯೋಗಿಗಳು ಸುಳ್ಳಾಡುತ್ತ ಅವರನ್ನೆಂದಿಗೂ ವಂಚಿಸಬಾರದು. ಈಗ ನಾನು ವಿಜ್ಞಾಪಿಸಿಕೊಳ್ಳುವ ಸಂಗತಿಯು ಹಿತವಾಗಲಿ, ಅಹಿತವಾಗಲಿ, ಸ್ವಾಮಿಯು ಕೋಪಿಸಿಕೊಳ್ಳದೆ ಅದನ್ನು ಪರಾಂಬರಿಸಬೇಕು—ಹಿತವೂ, ಕರ್ಣಾನಂದಕರವೂ ಆಗಿರುವ ಮಾತು ಕೇವಲ ದುರ್ಲಭವು. ಸ್ವಾಮಿಯನ್ನು ಸನ್ಮಾರ್ಗಾವಲಂಬಿಯಾಗುವಂತೆ ಭಕ್ತನಾದ ಸೇವಕನು ಉಪದೇಶಿಸಬೇಕು. ಹಾಗೆ ಮಾಡದವನು ಪ್ರಭುವಿನ ಹಿತಚಿಂತಕನೆನಿಸಲಾರನು. ಆಪ್ತರ ಉಪದೇಶವನ್ನು ಕೇಳದವನು ಪ್ರಭುವೆನಿಸಲೂ ಯೋಗ್ಯನಲ್ಲ. ಸ್ವಾಮಿಯೂ ಸ್ವಾಮಿನಿಷ್ಠರೂ ತಮ್ಮೊಳಗೆ ಪರಸ್ಪರ ಪ್ರೀತಿವಿಶ್ವಾಸಗಳಿಂದಲೇ ನಡಕೊಳ್ಳಬೇಕು. ಹಾಗಿದ್ದರೆ ಮಾತ್ರ ಅಲ್ಲಿ ಸಕಲಸಂಪತ್ತುಗಳೂ ಬಂದು ನೆಲಸುವುವು. ಬೇರೆಯವರಿಗೆ ತಿಳಕೊಳ್ಳಲು ಸಾಧ್ಯವಿಲ್ಲದೆ ಗಹನವಾಗಿರುವ ರಾಜಕಾರ್ಯಗಳೆಲ್ಲಿ? ಅಜ್ಞಾನಾಂಧಕಾರದ ಪ್ರಾಬಲ್ಯದಿಂದ ಚಡಪಡಿಸುವ ನನ್ನ ಹಾಗಿರುವ ಅಲ್ಪರೆಲ್ಲಿ? ಆದರೂ "ಬಡವನ ಕಾರ್ಯವು ಆಳಿಲಸೇವೆಯಂತೆ" ಎಂಬ ವಿಶ್ವಾಸವಿರುವವನಾಗಿ ಷಡ್ಗುಣ ಪರಿಪೂರ್ಣವಾದ ನೀತಿಮಾರ್ಗವನ್ನು ಪರಿಚಯ ಮಾಡಿಕೊಂಡು ಅಪಾಯವೇನೂ ಇಲ್ಲದೆ ಬಂದು ಸನ್ನಿಧಿಯನ್ನು ಸೇರಿರುವೆನು. ಇದಕ್ಕೆ ಸ್ವಾಮಿಯ ಮಹಿಮೆಯ ಪ್ರಭಾವವೇ ಕಾರಣವು.

ದೇವ! ಅಹಂಕಾರದಿಂದ ಉಬ್ಬಿಹೋಗಿದ್ದ ದುರ್ಯೋಧನನು ಬರಬರುತ್ತ ಲೇಶವಾದರೂ ದುರಹಂಕಾರವನ್ನು ತೋರಿಸಿಕೊಳ್ಳುವುದಿಲ್ಲ. ಅವನು ನಿರಂತರವೂ ಆಶ್ರಿತರನ್ನು ಸ್ನೇಹಿತರಂತೆಯೂ, ಸ್ನೇಹಿತರನ್ನು, ಬಂಧುವರ್ಗದಂತೆಯೂ, ಬಂಧುವರ್ಗವನ್ನು ತನ್ನಂತೆಯೂ ನೋಡಿಕೊಳ್ಳುತ್ತಿರುವ ಹಾಗೆ ಲೋಕದ ಕಣ್ಣಿಗೆ ಮಾಯಾಂಜನವನ್ನು ತೊಡೆಯುತ್ತಿರುವನು. ಧರ್ಮಾರ್ಥಕಾಮಗಳೆಂಬ ತ್ರಿವರ್ಗವನ್ನು ಕಾಲದೇಶಸ್ಥಿತಿಗನುಸಾರವಾಗಿ ಸಮಾನತೆಯಿಂದ ಸೇವಿಸುತ್ತಿರುವನು. ಆತನಲ್ಲಿರುವ ವಿಶ್ವಾಸದಿಂದ ಅವು ತಮ್ಮೊಳಗೆ ಅವ್ಯಾಹತಗಳಾಗಿ ನಡೆಯುತ್ತಿರುವುವು. ಅಷ್ಟು ಮಾತ್ರವಲ್ಲದೆ ಅವನು ದಾನದೊಂದಿಗೆ ಸಾಮವನ್ನೂ ಪ್ರಯೋಗಿಸುವನು.

ಆದುದರಿಂದ ಅವನ ಕಾರ್ಯಗಳೆಲ್ಲವೂ ಸದ್ಗುಣವಿಲಸಿತಗಳಾಗಿ ಫಲಿಸುವುವು. ದ್ರವ್ಯದ ಆಶೆಗೊಳಗಾಗದೆ, ಕೋಪಕ್ಕೆ ಅಧೀನನಾಗದೆ ಮನಸ್ಸನ್ನು ಜಯಿಸಿದ ದುರ್ಯೋಧನನು ಕರ್ತವ್ಯದಲ್ಲಿ ತತ್ಪರನಾಗಿರುವನು. ಧರ್ಮದ್ರೋಹಿಗಳನ್ನು ಶತ್ರುಮಿತ್ರರೆಂಬ ಭಿನ್ನಭಾವವಿಲ್ಲದೆ ಒಂದೇ ವಿಧವಾಗಿ ಶಿಕ್ಷಿಸುತ್ತಿರುವನು.

ಅವನು ಸ್ವರಾಜ್ಯದ ಸಮೃದ್ಧಿಗಾಗಿ ಹಗಲೂ ರಾತ್ರಿಯೂ ಜಾಗರೂಕನಾಗಿರುವನು. ಮಂಡಲಗಳಲ್ಲೆಲ್ಲಾ ಸತ್ಯಸಂಧರನ್ನೇ ಅಧಿಕಾರಿಗಳನ್ನಾಗಿ ನೇಮಿಸಿರುವನು; ಸ್ವಾಭಾವಿಕವಾಗಿ ವಿಶ್ವಾಸವಿಲ್ಲದವನಾದರೂ ತಾನು ಬಹಳ ನಂಬಿಕೆಯುಳ್ಳವನಂತೆ ನಟಿಸಿಕೊಳ್ಳುವನು; ಕಾರಣಾಂತರಗಳಿಂದ ತನಗಾಗದವರನ್ನು ಪರರ ಮೂಲಕವೇ ನಾಶಗೊಳಿಸುವನು; ಇಂತಹ ಉಪಾಯಗಳಿಂದಲೇ ಅವನು ಸೇವಕರ ವಿಶ್ವಾಸವನ್ನೂ ಸಂಪೂರ್ಣವಾಗಿ ಗಳಿಸಿಕೊಂಡಿರುವನು. ಅಧಿಕಾರದಿಂದ ನಿವೃತ್ತರಾದವರೂ ಕೂಡ, ಅಧಿಕಾರದ ಬಲದಿಂದ ಗಳಿಸಿಕೊಂಡ ತಮ್ಮ ದ್ರವ್ಯರಾಶಿಗಳನ್ನು ಸ್ಮರಿಸಿಕೊಂಡು “ಇದು ನಮ್ಮ ದೊರೆಯ ಅನುಗ್ರಹವು” ಎಂಬುದಾಗಿ ಆತನ ವಿಷಯದಲ್ಲಿ ಪ್ರೀತಿವಿಶ್ವಾಸಗಳನ್ನು ಪ್ರಕಟಿಸಿಕೊಳ್ಳುವರು.

ಸಾಮಂತರೆಲ್ಲರೂ ತಪ್ಪದೆ ಸಂಭ್ರಮದೊಡನೆ ಕಪ್ಪಕಾಣಿಕೆಗಳನ್ನು ಸಾಲುಸಾಲಾಗಿ ಹೊರಿಸಿಕೊಂಡು ಬಂದು ಅರಸನಿಗೊಪ್ಪಿಸುವರು. ಆಗ ಅರಸನು ಅವರೆಲ್ಲರನ್ನೂ ಅವರವರ ಸ್ಥಾನಮಾನಗಳಿಗೆ ತಕ್ಕ ಹಾಗೆ ಸಂಭಾವಿಸುವನು. ಆದುದರಿಂದ ಸಾಮಂತರಿಗೆ ಅವನಲ್ಲಿ ಭಕ್ತಿವಿಶ್ವಾಸಗಳು ಹೆಚ್ಚುತ್ತಿರುವುವಲ್ಲದೆ; ಹಸ್ತಿನಾವತಿಯ ಕೋಶಾಗಾರಗಳೂ ಹೆಚ್ಚುತ್ತಿರುವುವು. ಕಾಣಿಕೆಯಾಗಿ ಬಂದ ಆನೆಗಳ ಮದಜಲದಿಂದ ಆತನ ಸಭಾಭವನದ ಅಂಗಳವು ಕೆಸರಾಗುವುದು; ಅಲ್ಲದೆ ಬರುತ್ತಿರುವ ಅರಸರ ರಥಾಶ್ವಗಳಿಂದ ಅದು ತುಂಬುತ್ತಿರುವುದು.

ಪ್ರಜೆಗಳೆಲ್ಲರ ಕ್ಷೇಮವನ್ನೂ ಬಯಸುತ್ತ ದುರ್ಯೋಧನನು ರಾಜ್ಯಭಾರವನ್ನು ಹೀಗೆ ನಿರ್ವಹಿಸುತ್ತಿರುವ ವೇಳೆಗೆ, ಹೊಲಗಳು ಉತ್ತುಬಿತ್ತದೇನೇ ಪುಷ್ಕಲವಾಗಿ ಬೆಳೆಯುತ್ತಿರುವುವು. ಶೌರ್ಯ, ಔದಾರ್ಯ ಮೊದಲಾದ ಗುಣಗಳಿಂದ ಕೀರ್ತಿಶಾಲಿಯೂ, ಪರಮದಯಾಳುವೂ ಆಗಿ

ರುವ ದುರ್ಯೋಧನನು ಪ್ರಜೆಗಳಿಗೆ ಯಾವ ತರದ ಕುಂದುಕೊರತೆಗಳೂ ಬಾರದಂತೆ, ಪ್ರತಿಯೊಬ್ಬರ ಅಭ್ಯುದಯವನ್ನೂ ಬಯಸುತ್ತ, ಪಕ್ಷಪಾತವಿಲ್ಲದೆ ಕಾಪಾಡುತ್ತಿರುವನು. ಅವನ ದಯಾದಾಕ್ಷಿಣ್ಯಾದಿ ಗುಣಗಳಿಗಾಗಿ ಮನಗರಗಿ ಭೂದೇವಿಯು ತಾನೇ ಸಂಪತ್ತನ್ನು ಕರೆಯುತ್ತಿರುವಳು. ಅವನ ಪ್ರಜೆಗಳ ಸಂಪನ್ನತೆಗೂ ರಾಜಭಕ್ತಿಗೂ ಮಿತಿಯಿಲ್ಲ.

ಅವನ ಸೈನ್ಯದಲ್ಲಿರುವ ದಂಡಾಳುಗಳು—ಮಹಾಬಲಶಾಲಿಗಳೂ, ಶೂರರೂ, ಮಾನಧನರೂ, ಯುದ್ಧಗಳಲ್ಲಿ ಕೀರ್ತಿಸಂಪಾದಿಸಿದವರೂ, ಸಂಪನ್ನವೃದ್ಧರೂ ಆಗಿರುವರು. ಅಲ್ಲದೆ ಸ್ವಾರ್ಥಪರತೆ, ಭಿನ್ನಾಭಿಪ್ರಾಯ, ಸ್ವಾಮಿದ್ರೋಹಗಳೆಂದರೆ ಏನೆಂದೂ ಅರಿಯದವರಾಗಿ ತಮ್ಮ ಪ್ರಾಣಸಮರ್ಪಣೆಯಿಂದಲೂ ಸ್ವಾಮಿಕಾರ್ಯವನ್ನು ಸಾಧಿಸುವುದರಲ್ಲೇ ಸದಾ ತತ್ಪರರು.

ಆ ದೊರೆಯು ಆರಂಭಿಸಿದ ಕೆಲಸವನ್ನು ಫಲಾಂತದ ವರೆಗೂ ಬಿಡದವನೆಂದರೆ ಆತನ ಹಟಮಾರಿತನವನ್ನು ಹೇಳಿ ತೀರದು. ನಿಷ್ಕಾಮಕರ್ಮಿಗಳಾದ ನಿಯೋಗಿಗಳ ಮೂಲಕ ಪರನೃಪರ ಸಂಗತಿಗಳೆಲ್ಲವನ್ನೂ ತಿಳಕೊಳ್ಳುವನು. ಆದರೆ ತನ್ನ ಕೆಲಸದ ಹೊಲಬೇನೂ ಪರರಿಗೆ ತಿಳಿಯದಂತಿದ್ದು ಫಲಪ್ರಾಪ್ತ್ಯನಂತರವೇ ಅದು ಪ್ರಕಟವಾಗುವುದು. ಆತನ ಗುಣಗಳಲ್ಲಿರುವ ಅನುರಾಗದಿಂದ ಅವನ ಆಜ್ಞೆಯನ್ನು ಪುಷ್ಪಮಾಲಿಕೆಯಂತೆ ದೊರೆಗಳೆಲ್ಲರೂ ತಂತಮ್ಮ ಉತ್ತಮಾಂಗಗಳಿಂದ ಧರಿಸಿಕೊಳ್ಳುವರು. ಆದುದರಿಂದಲೇ ದುರ್ಯೋಧನನು ಹೆದೆಯೇರಿಸಿದ ಬಿಲ್ಲನ್ನು ಎಂದಾದರೂ ಕೈಗೆ ತಂದುದನ್ನು ಕಂಡವರಿಲ್ಲ; ಕೋಪದಿಂದ ಹುಬ್ಬುಗಂಟಿಕ್ಕಿದ ಆತನ ಮುಖಮಂಡಲವನ್ನೂ ಕಂಡವರಿಲ್ಲ. ನವಯೌವನಪ್ರಗಲ್ಭನಾದ ದುಶ್ಯಾಸನನನ್ನು ಯುವರಾಜಪಟ್ಟದಲ್ಲಿ ನಿಯಮಿಸಿಕೊಂಡು ಅಪ್ರತಿಹತಾಜ್ಞನಾಗಿ ಮೆರೆಯುತ್ತಿರುವನು. ಆದರೂ ಪುರೋಹಿತನ ಆಜ್ಞೆಗೆ ಭಂಗವಿಲ್ಲದಂತೆ ಬಹು ಶ್ರದ್ಧೆಯಿಂದ ಅಗ್ನಿನಾರಾಯಣನನ್ನು ಹವಿರ್ಭಾಗಗಳಿಂದ ತುಷ್ಟಿಪಡಿಸುತ್ತಿರುವನು. ವಿರೋಧಿಗಳ ತೊಂದರೆಯಿಲ್ಲದೆ ಸಾಗರಾಂಬರೆಯಾದ ಮೇದಿನಿಯನ್ನು ಹೀಗೆ ಸುಖವಾಗಿ ಪರಿಪಾಲಿಸುತ್ತಿರುವನು ಎಂದರೆ ಅವನು ನಮಗೆ ಕೇವಲ ದುಸ್ಸಾಧ್ಯನೆಂದು ಹೇಳುವ

ಅಗತ್ಯವಿಲ್ಲ. ಹಾಗಿದ್ದರೂ ಕೂಡ ತೊಂದರೆಯೆಂದಾದರೂ ನಿಮ್ಮ ದೆಸೆಯಿಂದಲೇ ಸಂಭವಿಸಬಹುದೆಂದು ಯೋಚಿಸುತ್ತಿರುವನು. ಆದುದರಿಂದ ಮಹಾತ್ಮರ ವಿರೋಧವು ದುರಂತವಾದ ಪರ್ಯವಸಾನವುಳ್ಳದ್ದೆಂಬುದರಲ್ಲಿ ಸಂಶಯವಿಲ್ಲ. ದೇವ! ಸಂದರ್ಭಾನುಸಾರವಾಗಿ ಯಾರಾದರೂ ನಿಮ್ಮ, ಹಾಗೂ ಗಾಂಡೀವಿಯ ಹೆಸರೆತ್ತಿದರೆ ಗರುಡಮಂತ್ರೋಚ್ಚಾರಣೆಗೆ ಗುರಿಯಾದ ಸರ್ಪದ ಹಾಗೆ ತಲೆಬಗ್ಗಿಸಿಕೊಂಡು ಒಳಗೊಳಗೇ ದುಃಖಿಸುತ್ತಿರುವನು. ಪ್ರಬಲವಾದ ಕಪಟದಿಂದ ನಿಮ್ಮನ್ನು ಹೀಗೆ ಮೋಸಗೊಳಿಸಲು ಉದ್ಯುಕ್ತನಾದ ಆ ಕೌರವೇಶ್ವರನಿಗೆ ತಕ್ಕ ಪ್ರತಿಕ್ರಿಯೆಯನ್ನು ಮಾಡಲೇಬೇಕೆಂದು ನಾನು ಬೇರೆ ಹೇಳಬೇಕಾಗಿಲ್ಲವಷ್ಟೆ!

ಅಲ್ಲಲ್ಲಿ ಇಷ್ಟಿಷ್ಟು ದೊರೆಯತಕ್ಕ ವರ್ತಮಾನಗಳನ್ನು ತುಂಬಿಕೊಳ್ಳುವ ನಮ್ಮಂತಹ ವಾರ್ತಾಸಂಗ್ರಾಹಕರ ವಚನವೆಂದಿಗೂ ಕಾರ್ಯಕಾರಿಯಾಗದು. ಆದರೂ, ಗಹನವಾದ ವಿಚಾರಾಂಬುಧಿಯನ್ನು ಪಾರಾಗಿಸುವ ನಾವೆಗೆ ಹುಟ್ಟಿನಂತಾದರೂ ಆಗದಿರದು. "ಸ್ವಾಮಿಕಾರ್ಯವೇ ಮುಖ್ಯವಾದ ಕರ್ತವ್ಯವು" ಎಂದೆಣಿಸಿ ಮರೆಮೋಸಕ್ಕೂ ಹೇಸದೆ ರಾಜಾಜ್ಞೆಯಿಂದಲೂ ಕಟ್ಟುವಡೆಯಲಾರದ ವಿಪ್ರವೇಷವನ್ನು ತಳೆದಿರುವ ಮಹಾಪರಾಧವನ್ನು ಮನ್ನಿಸಬೇಕು.

ಈ ರೀತಿಯಾಗಿ ಹಸ್ತಿನಾವತಿಯ ಪಟ್ಟವರ್ಧನನಾದ ಸುಯೋಧನನ ಸುಕರವಲ್ಲದ ರಾಜ್ಯಭಾರ ಕ್ರಮಗಳನ್ನು ಸಂಗ್ರಹಿಸಿ ಹೇಳುತ್ತ ದೊರೆಯ ಪಾದಪದ್ಮಗಳಲ್ಲಿ ಸಾಷ್ಟಾಂಗವೆರಗಿದನು. ಧರ್ಮನಂದನನು ಆ ನಿಯೋಗಿಯನ್ನು ಬೇಕಾದ ಉಪಚಾರದ ಮಾತುಗಳಿಂದ ಮನ್ನಿಸಿ ಕಳುಹಿದ ಮೇಲೆ, ದಾಯವಾದಿಯ ಕುತಂತ್ರದ ಮರ್ಮಗಳನ್ನು ಮನಸ್ಸಿನಲ್ಲೇ ಮಥಿಸುತ್ತಿದ್ದನು.

೪. ಯುಧಿಷ್ಠಿರನ ಸಂತಾಪನಿರಸನ

ಪರೀಕ್ಷೆಯ ಹೆಸರೆತ್ತಿದರೆ ಮೈ ಜುಮ್ಮೆನ್ನುವುದು. ಆದರೂ "ಪರೀಕ್ಷೆ" ಎಂದರೇನೆಂದು ತಿಳಿಯದವರಿಲ್ಲ. ಅದೂ ಈಗಿನ ಕಾಲದಲ್ಲಿ! ಕೆಲವರ ಪಾಲಿಗದು ಪಾಲನೀಯಕುಲದೈವವಾದರೂ, ಹಲವರು ಇದರ ನೋಟದ ಕಾಟದಿಂದ ಓಟಹಿಡಿಯಲು ಹವಣಿಸುವವರೆ? ಅಂತೂ ತರತರದ ಪರೀಕ್ಷೆಯ ನಿರಾಕಾರದ ಶೂನ್ಯತೆಗೆ ನಕಾರವೇ ಸರಿ. ಆದರೆ ಅದನ್ನು ಕೇವಲ ಹೊಸತೆಂದು ಕಡೆಗಣಿಸಲಾಗದು. ಗಿಡುಗವು ಕಪೋತದ ನೆವದಿಂದ ಶಿಬಿಚಕ್ರವರ್ತಿಯನ್ನು ಪರೀಕ್ಷಿಸಿ, "ಶುಭ ಚರಿತ್ರನೆ"ಂದು ಕೊಂಡು ಕೊನೆದಾಡಲಿಲ್ಲವೆ? ವೈದ್ಯರ ಪರೀಕ್ಷೆ—ಎಂದಿನಂತೆಯೇ ಇಂದೂ ಸಾಗುವುದಾದರೂ ರೋಗಗಳಲ್ಲಿ ಮಾತ್ರ ಅಭ್ಯಂತರವು. ಸೀತೆಯ ಅಗ್ನಿಪರೀಕ್ಷೆ, ಸತಿಯ ಯೋಗಾಗ್ನಿಪರೀಕ್ಷೆ, ಸಾವಿತ್ರಿಯ ಸತೀತ್ವಪರೀಕ್ಷೆ.........ಎಂದೆಂದಿಗೂ ಒಂದೇ ತೆರ. ವರನ ವಧೂಪರೀಕ್ಷೆ!——ಕಾಲಕ್ಕೆ ತಕ್ಕಂತೆ ಅದರ ಕೋಲ. ಶಾಲೆಯ ಸಕಾಲದ ಪರೀಕ್ಷೆ! ಗುಣದಂತೆ, ಕಾಲದಂತೆ, ತ್ರಯಿಯಂತೆ-ಒಂದು-ಎರಡು-ಮೂರು- ಭದ್ರಂ! ಶುಭಂ! ಮಂಗಳಂ!

ವಿಶ್ವಶಾಲೆಯ ದೈವ ಪರೀಕ್ಷೆ ಸಾವಿರಾರು! ಹೀಗೆ ಸಾಗುವ ಬಗೆಬಗೆಯ ಈ ಪರೀಕ್ಷೆಗೆ ಭಾಗಿಯಾಗದ ಭಾಗ್ಯವಂತನಾರು! ಯೋಗಿಯೆ? ಮತ್ತವಂಗೆ ಯೋಗಪರೀಕ್ಷೆ. ಅದು ಪೊಡವಿಯೊಡೆಯನನ್ನೂ ಬಿಡಲಿಲ್ಲ. ಯುಧಿಷ್ಠಿರನು ಸಕಲ ಪರೀಕ್ಷೆಗೆಳಗೂ ಭಾಗಿಯಾದನೆಂಬುದು ನಿಜವಾದರೂ, ಇನ್ನೊಮ್ಮೆ ದೈವಪರೀಕ್ಷೆಗೊಳಗಾಗಿ ಹೀಗೆ ಯೋಚನಾಮಗ್ನನಾಗಿರುವನು—"ಪ್ರಜೆಗಳೆಲ್ಲರೂ ದುರ್ಯೋಧನನ ಆಳಿಕೆಯಲ್ಲಿ ಸಹಕಾರವನ್ನು ತೋರಿಸದೆ ಹೃತ್ಪೂರ್ವಕವಾಗಿ ಪ್ರತಿಯೊಂದಂಶವನ್ನೂ ನಿಷೇಧಿಸುತ್ತಿದ್ದರಲ್ಲವೆ? 'ಪ್ರಜಾನುರಾಗವಿಲ್ಲದ ರಾಜ್ಯವು ಸ್ಥಿರವೆನಿಸದು' ಎಂಬುದನ್ನರಿತು ಅತನೀಗ ನಿಜಕ್ಕೂ ಯೋಗ್ಯರೀತಿಯಿಂದ ರಾಜ್ಯಭಾರವನ್ನು ನಿರ್ವಹಿಸಬಹುದೆ? ಎಲ್ಲವನ್ನೂ ತೊರೆದು ಕಾಡಿಗೆ ಬಂದ ನಮ್ಮನ್ನೀಗ ಪ್ರಜೆಗಳು ಮರೆತಿರಬಹುದೆ? ನಾವು ವಂಚಿತರಾದೆವೆ? ಹಾ! ಹಾ! ಅವರನ್ನು

ಕೇಳುವ ಯೋಗ್ಯತೆಯಾದರೂ ನಮ್ಮಲ್ಲಿರುವುದೆ? ಕಷ್ಟಕ್ಕೀಡಾಗುವಂತೆ ದುಷ್ಟನಾದ ದೊರೆಯ ಕೈಯಲ್ಲಿ ಅವರನ್ನು ಒಪ್ಪಿಸಿ ಬಂದುದು ನಮ್ಮದೇ ತಪ್ಪಾಗಿರುವಾಗ ಪಾಪ! ಅವರಾದರೂ ಮಾಡುವುದೇನು? 'ರಾಜರಂತೆಯೇ ಪ್ರಜೆಗಳು' ಎಂದಲ್ಲವೆ ಲೋಕಮರ್ಯಾದೆಯು. ಕಾಡಿನಲ್ಲಿ ಹುಟ್ಟಿ ಕಾಡಿನಲ್ಲೇ ಬಳೆದು ಕಾಡಾಡಿಗಳಾದ ನಮಗೆ ಕಾಡಿನಲ್ಲೇ ಕಡೆಯೆ! ಹಾ! ದೈವಚಿಂತನೆಯನ್ನು ತಿಳಿದವರಾರು?"

ಈ ರೀತಿಯಾಗಿ ಚಿಂತಿಸುತ್ತ ಬೇಸರಗೊಂಡ ಧರ್ಮಜನ ಹೃದಯವು ನೆಲೆಯಿಲ್ಲದೆ ತಲ್ಲಣಿಸತೊಡಗಿತು. ಏಕಾಂತದಲ್ಲಿ ನೆಮ್ಮದಿಯಿಲ್ಲದೆ ಹೋದರೆ ಸಮಾಧಾನಪಡಿಸುವವರಾರು? ಆಗ ಜನಪನೊಂದಿಗೆ ದಿನಪನೂ ಸಹಾನುಭೂತಿತೋರಿಸುತ್ತಿದ್ದನೆಂಬಂತೆ ಇಳಿಮುಖದಿಂದ ಜಡಜಬಂಧುವು ಪಡುಗಡಲೆಡೆಗಾಗಿ ನಡೆಯುತ್ತಿದ್ದನು. ಅದನ್ನು ನೋಡಿ—"ಮೇಲೇರಿದವನು ಕೆಳಗಿಳಿಯುವನೆಂಬ ಲೋಕೋಕ್ತಿಯು ಲೋಕಬಂಧುವನ್ನೂ ಬಿಡಲಾರದೆ? ಪ್ರಖರಕರಗಳ ತೀಕ್ಷ್ಣತೆಯು ಕುಂದುತ್ತಿರುವುದರಿಂದ ವೃದ್ಧನಾಗಿ ಬಾಲರ ನಗೆಗೆ ಗುರಿಯಾಗಬಾರದೆಂದು ಭಗವಾನ್ ಭಾಸ್ಕರನು ತನ್ನ ಗತವೈಭವವನ್ನು ಸ್ಮರಿಸಿಕೊಳ್ಳುತ್ತ ತೆರಳುತ್ತಿರಬಹುದೆ? ಭಗವಂತನು ಜಡರ ನಗೆಯನ್ನು ಬಗೆಯಲಾರನು. ಪಶ್ಚಿಮ ದಿಗಂಗನೆಯ ಸುಸ್ವಾಗತವನ್ನು ಪುರಸ್ಕರಿಸಲೆಂದೇ ಆತನು ಅವಸರವಸರವಾಗಿ ಹೋಗುತ್ತಿರಬೇಕು. ಇದು ಸರ್ವಾದರಣೀಯವಾದ ಶಿಷ್ಟಸಂಪ್ರದಾಯವು" ಎಂದು ತಿಳಕೊಂಡು ಯುಧಿಷ್ಠಿರನು ತಾನೂ ಮೆಲ್ಲನೆ ಅಲ್ಲಿಂದೆದ್ದು ಪರ್ಣಶಾಲೆಗೆ ಹೋದನು. ಅರಸನು ಬರುತ್ತಿರುವುದನ್ನು ನೋಡಿ ದ್ರೌಪದಿಯೂ ಭೀಮಸೇನನೂ ಬೇಗನೆ ಇದಿರೆದ್ದು ಬಂದು ಆದರೋಪಚಾರಗಳಿಂದ ಆತನನ್ನು ಸತ್ಕರಿಸತೊಡಗಿದರು. ಈ ಸುಸಂದರ್ಭದಲ್ಲೇ ತಾನು ತನ್ನ ಮನಸ್ಸಂಕಷ್ಟವನ್ನು ಕಡಿಮೆಮಾಡಿಕೊಳ್ಳಬೇಕೆಂಬ ಬಯಕೆಯಿಂದ ಧರ್ಮಜನು ದುರ್ಯೋಧನನ ಆಳಿಕೆಯ ವಿಚಾರವೆಲ್ಲವನ್ನೂ ಅವರೊಡನೆ ವಿವರಿಸಿ ಹೇಳಿದನು.

ನೀಚರಾದ ದುರ್ಯೋಧನಾದಿಗಳ ವರ್ತನೆಯಿಂದ ಪಾಂಚಾಲೆಯು ಮೊದಲೇ ನೊಂದು ಬಸವಳಿದಿದ್ದಳು. ಆದರೂ ವನವಾಸದಲ್ಲಿ ಹೇಗೂ

ಕಷ್ಟದಿಂದ ಮನಸ್ಸಿಗೆ ನೆಮ್ಮದಿಯನ್ನು ತಂದುಕೊಂಡಿದ್ದಳು. ಈಗ ಶ್ರೀ ಕಡುವೈರಿಗಳ ಅಭಿವೃದ್ಧಿಯ ಸಂಗತಿಗಳನ್ನು ಕೇಳಿ, ಬಾಲವನ್ನು ತುಳಿದು ಕೆಣಕಿದ ಸರ್ಪಿಣಿಯು ಬುಸುಗುಟ್ಟುತ್ತ ತನ್ನ ಪ್ರಾಬಲ್ಯವನ್ನು ತೋರಿಸಿಕೊಳ್ಳುವಂತೆ ಬಹಳವಾಗಿ ಕೆರಳಿಕೊಂಡಳು. ಇಂದು ರಾಯನು ಹೇಳಿದ ಮಾತುಗಳನ್ನು ಕೇಳಿದೊಡನೆ, ಅವಳಿಗೆ ಕೌರವರೊಡನಿದ್ದ ವೈರವೆಲ್ಲವೂ ಒಟ್ಟು ಸೇರಿ ಉರಿದುಕೊಂಡಿತು. ಕಂದರದಲ್ಲಿ ನಿದ್ರಿಸುತ್ತಿದ್ದ ಸಿಂಹಿಣಿಯನ್ನು ಕೆಣಕಿದಂತಾಯಿತು. ಆಕೆಯ ಕೋಪವೀಗ ಮರ್ಯಾದೆಯ ಮೇರೆಯನ್ನು ತೀರ ಮೀರಿಕೊಂಡಿತು. ಆದರೂ ಮೇಧಾವಿನಿಯಾದ ಯಾಜ್ಞಸೇನಿಯು ತನ್ನವರ ಏಳಿಗೆಯ ಸಿಂಹಾವಲೋಕನವನ್ನು ಮಾಡುತ್ತ, ತನ್ನಿಂದ ಸಾಧ್ಯವಾಗುವ ತನಕ ಯುಧಿಷ್ಠಿರನ ಮನೋರಾಜ್ಯದ ಮೇಲೆ ಕವಿದಿರುವ ಸಂತಾಪವನ್ನು ಸಂಪೂರ್ಣ ನಿವಾರಿಸಿ ಆತನ ಹೃದಯದಲ್ಲಿ ಅರಾತಿವಿಷಯಕವಾದ ವೈರವು ನೆಲಸುವಂತೆ ಮಾಡಬೇಕೆಂದು ಸಂಕಲ್ಪಿಸಿಕೊಂಡಳು. ಅದಕ್ಕಾಗಿ ಭೀಮಸೇನನು ಕೇಳುವ ಹಾಗೆ ಮನಸ್ಸಿನಲ್ಲಿ ಖಚಿತವಾಗಿ ನಿಲ್ಲುವ ಕೆಲವು ಮಾತುಗಳನ್ನು ಧರ್ಮಜನೊಡನೆ ಹೀಗೆ ಹೇಳತೊಡಗಿದಳು—ಜನಪಾಲ! ನಿಮ್ಮಂತಹ ಪ್ರಾಜ್ಞರಲ್ಲಿ ಹೆಂಗುಸರು ಆಕ್ಷೇಪಕರಗಳಾದ ಮಾತುಗಳನ್ನು ಹೇಳಿಕೊಳ್ಳುವುದೆಂದರೆ, ಅದು ಕೇವಲ ಧಾರ್ಷ್ಟ್ಯವೆಂಬುದೇನೋ ನಿಜವೆ. ಹಾಗಿದ್ದರೂ ಕೂಡ ಸ್ತ್ರೀಸಹಜವಾದ ಲಜ್ಜಾವಿನಯಾದಿಸೌಶೀಲ್ಯಗಳೆಲ್ಲವನ್ನೂ ತೊರೆದು ನನ್ನನ್ನೀ ಮನೋವ್ಯಥೆಯೇ ಮಾತಾಡುವಂತೆ ಪ್ರೇರೇಪಿಸುತ್ತಿರುವುದು. ಧಾತ್ರೀರಮಣ! ಚಂದ್ರವಂಶಸಂಭೂತರಾದ ಭರತಾದಿಚಕ್ರವರ್ತಿಗಳು ಅಖಂಡಸಾಮ್ರಾಜ್ಯವನ್ನು ಬಹುಕಾಲದ ವರೆಗೂ ಪರಿಪಾಲಿಸುತ್ತಿದ್ದು, ಯೋಗ್ಯತೆಯಲ್ಲಿ ದೇವೇಂದ್ರನನ್ನೂ ಮೀರಿಸಿದ್ದರಷ್ಟೆ! ಆ ಸಾಮ್ರಾಜ್ಯಪಟ್ಟವನ್ನು ತಾವೇ ತಮ್ಮ ಕೈಯಿಂದ ಕಳೆದು ಕೊಂಡುದನ್ನು ಸ್ಮರಿಸಿಕೊಳ್ಳುವಾಗ, ಮತ್ತಮತಂಗಜವು ತನ್ನ ಸೊಂಡಿಲಿಗೆ ದೊರೆತ ವರಪ್ರಸಾದಮಾಲಿಕೆಯನ್ನು ಕಿತ್ತೊಗೆದ ಸಂಗತಿಯು ನೆನಪಿಗೆ ಬಾರದಿರುವುದು ಹೇಗೆ? ಇತರರನ್ನು ಮೋಸಗೊಳಿಸುವುದೇ ಮುಖ್ಯಧ್ಯೇಯವಾಗಿರುವ ದುಷ್ಟರಲ್ಲಿ ಕುಟಿಲವನ್ನು ನೆನೆಯದವರು ವಿವೇಕವಿಕಳರೆನಿಸಿಕೊಳ್ಳುವರು. ಮಾತ್ರ

ವಲ್ಲ, ಅವರಿಗೆ ಅಪಜಯವು ಕಟ್ಟಿಟ್ಟ ಗಂಟಾಗಿರುವುದು. ಕಂಚುಕವೇ ಮೊದಲಾದ ಆವರಣಗಳಿಲ್ಲದ ದೇಹವನ್ನು ಕೂರಲಗು ಬಹು ಬೇಗನೆ ಭೇದಿಸುವಂತೆ, ಲೋಕದಲ್ಲಿ ಧೂರ್ತರು ಸೇರಿಕೊಂಡು ನಿಷ್ಕಪಟಿಗಳನ್ನು ಬಹು ಸುಲಭವಾಗಿ ಮೋಸಗೊಳಿಸುವರು.

ಉತ್ತಮವಾದ ಕ್ಷತ್ರಿಯವಂಶದಲ್ಲಿ ಜನಿಸಿ ಯೋಗ್ಯಸಹಾಯಸಂಪತ್ತಿನಿಂದ ಮೆರೆಯತಕ್ಕ ನೀವು ಪರಂಪರೆಯಿಂದ ದೊರೆತು ಷಡ್ಗುಣಪರಿಪೂರ್ಣವೆನಿಸಿದ ರಾಜ್ಯಲಕ್ಷ್ಮಿಯನ್ನು ಶತ್ರುಗಳ ಕೈಗೆ ಹೋಗಗೊಳಿಸಿದಂತೆ, ಲೋಕದಲ್ಲಿ ಬೇರೆ ಯಾವ ಕ್ಷತ್ರಿಯೋತ್ತಮರಾದರೂ ಕಳೆದುಕೊಳ್ಳಲಾಪರೆ? ರೂಪಸೌಶೀಲ್ಯಾದಿಗಳಿಂದ ಕೂಡಿದ್ದು ಗುಣವತಿಯೂ ಮನೋವಲ್ಲಭೆಯೂ ಎನಿಸಿದ ತಮ್ಮ ಧರ್ಮಪತ್ನಿಯ ಮೇಲೆ ಅನ್ಯರು ಕೈಮಾಡುತ್ತಿದ್ದಂತೆ ಸಹಾಯ ಸಮೃದ್ಧಿಯುಳ್ಳ ಯಾರಾದರೂ ಸುಮ್ಮನಿರಲು ಸಾಧ್ಯವೆ? ಸರಿಯಾಗಿ ಒಣಗಿದ ಶಮೀವೃಕ್ಷದಲ್ಲಿ ಬೆಂಕಿಯು ಸುಲಭವಾಗಿ ಪ್ರಜ್ವಲಿಸಿಕೊಳ್ಳುವುದು ಸಹಜವಾದರೂ, ವೈರಿಗಳ ಕುತಂತ್ರದಿಂದ ಅರಣ್ಯವಾಸಕ್ಕೆ ಗುರಿಯಾಗಿ ಶೂರಜನನಿಂದ್ಯವಾದ ಈ ಬಗೆಯ ಸಂಕಷ್ಟಗಳನ್ನು ಅನುಭವಿಸುತ್ತಿರುವ ನಿಮ್ಮಲ್ಲಿ ಇನ್ನೂ ಕೋಧಾಗ್ನಿಯು ಪ್ರಜ್ವಲಿಸಿಕೊಳ್ಳುವುದಿಲ್ಲವೆಂಬುದೀಗ ಆಶ್ಚರ್ಯಕರವು! ನಿಮ್ಮಂತಹ ಕ್ಷತ್ರಿಯೋತ್ತಮರು ಸಿಟ್ಟನ್ನು ತೊರೆಯುವುದೆಂದರೆ ಮನುಷ್ಯತ್ವವನ್ನೇ ಕಳಕೊಂಡ ಹಾಗೆ. ಲೋಕದಲ್ಲಿ ಸಿಟ್ಟಿನಿಂದ ಸಾಧ್ಯವಾಗುವ ಕೆಲಸಗಳೇ ಹೆಚ್ಚು. ನಿಗ್ರಹಾನುಗ್ರಹಸಮರ್ಥರಿಗೆ ಸರ್ವರೂ ಅಧೀನರಾಗುವರು. ಸಂಪೂರ್ಣವಾಗಿ ಸಿಟ್ಟನ್ನು ತೊರೆದವನು ಮನಃಪೂರ್ವಕವಾಗಿ ಜನರನ್ನು ಪ್ರೀತಿಸಿದರೂ, ಅವನಲ್ಲಿ ಆದರವನ್ನು ತೋರಿಸತಕ್ಕವರು ವಿರಳರೆನ್ನಬೇಕು. ಮಹಾಮಹಿಮನಾದ ಜಮದಗ್ನಿಮುನಿಯ ಕೊನೆಯ ಪರಿಣಾಮವಾದರೂ ಏನು? ಸಿಟ್ಟಿಲ್ಲದವನನ್ನು ವೈರಿಗಳು ಹೇಡಿಯೆಂದು ಕಡೆಗಣಿಸುವುದರಲ್ಲಿ ಸಂದೇಹವಿಲ್ಲ.

ಒಡೆಯ! ಕಡುನೊಂದು ನುಡಿವ ಬಿನ್ನಹವನ್ನು ಪರ್ಯಾಲೋಚಿಸಬೇಕು. ರಾಜವೈಭವಗಳಿಗೆ ತಕ್ಕ ಹಾಗೆ ರಕ್ತಚಂದನವೇ ಮೊದಲಾದ ರಾಗದ್ರವ್ಯಗಳನ್ನು ಪಾದಗಳಿಗೆ ಲೇಪಿಸಿಕೊಂಡು ರಥದಿಂದಲೇ ಪ್ರಯಾಣಮಾಡುತ್ತ, ಮಹಾರಥನೆನಿಸಿ ಮೆರೆಯುತ್ತಿದ್ದ ಈ ಭೀಮ

ಸೇನನು ಧೂಳೀಧೂಸರಿತನಾಗಿ ಕಾಡುಗುಡ್ಡಗಳಲ್ಲಿ ನಿರ್ಗತಿಕನಂತೆ ಅಲೆದಾಡುತ್ತಿರುವ ಸಂಗತಿಯು ನಿಮ್ಮ ಮನಸ್ಸನ್ನು ನೋಯಿಸುವುದಿಲ್ಲವೆ? ಸತ್ಯವೇ ಗತಿಯೆಂದಿರುವವರಿಗೆ ಇದರ ಅರಿವಾದರೂ ಹೇಗಾಗಬೇಕು? ಯೋಗ್ಯತೆಯಲ್ಲಿ ದೇವೇಂದ್ರನಿಗೆ ಸಮಾನನೆನಿಸಿ, ವಿಕ್ರಮಾತಿಶಯದಿಂದ ಉತ್ತರಕುರುದೇಶಗಳನ್ನಾಕ್ರಮಿಸಿ, ದ್ರವ್ಯರಾಶಿಗಳನ್ನೇ ಹೊರಿಸಿಕೊಂಡು ಬಂದು ನಿಮ್ಮ ಪಾದಮೂಲದಲ್ಲಿ ಸಮರ್ಪಿಸಿದ ಈ ಅರ್ಜುನನು ಧನಂಜಯನೆಂದು ಪ್ರಸಿದ್ಧಿಗೆ ಬಂದವನಲ್ಲವೆ? ಆತನೇ ನಿಮಗಿಲ್ಲಿ ನಾರುಡೆಗಳನ್ನು ತಂದುಕೊಡುತ್ತಿರುವ ವಿಷಯವನ್ನು ನೆನೆದಾದರೂ ನಿಮ್ಮ ಹೃದಯವು ಕೋಪತಾಪಗಳಿಗೆ ಗುರಿಯಾಗುವುದಿಲ್ಲವೆ? ಎಳವೆಯಂದೇ ತಾಯಿತಂದೆಗಳಿಂದ ವಂಚಿತರಾಗಿ ನಿಮ್ಮ ಪಾಲನೆಗೆ ಬಂದ ಈ ನಕುಲಸಹದೇವರೆಂಬ ಕಿರಿಯ ತಮ್ಮಂದಿರನ್ನು ನೋಡಿದಿರಾ? ಆರೈಕೆಯಿಲ್ಲದೆ ಬರಿಯ ನೆಲದಲ್ಲಿ ಮಲಗಿ ಅವರ ದೇಹಗಳು ಹೇಗೆ ಒರಟಾಗಿವೆ! ಸಿಕ್ಕುಗಟ್ಟಿ ಜಟಿಲಪ್ರಾಯವಾದ ಕೂದಲುಗಳ ರಾಶಿಯು ಕೆದರಿಕೊಂಡಿರುವುದು ಪ್ರೇಕ್ಷಣೀಯವೇನು? ರಾಜವೈಭವಗಳಿಂದ ಮೆರೆಯತಕ್ಕವರಿಂದು ನಿರ್ಗತಿಕರಾಗಿ ಕಾಡಾನೆಗಳಂತೆ ಕಾಡುಗುಡ್ಡಗಳಲ್ಲಿ ವಾಸಿಸುತ್ತಿರುವ ದುಸ್ಥಿತಿಯನ್ನು ನೋಡಿ ನಿಮ್ಮ ನಿಯಮವೂ ಮನಃಸ್ಥೈರ್ಯವೂ ಕದಲದೆ ನೆಲೆಗೊಂಡಿರುವುದೆ? ಇವರೆಲ್ಲರೂ ಹೀಗೆ ಅನುಭವಿಸುವ ಸಂಕಷ್ಟಗಳನ್ನು ನೋಡುತ್ತ, ಈ ಅರಣ್ಯವಾಸವನ್ನನುಭವಿಸುತ್ತಿರುವ ನಿಮ್ಮ ಮಾನಸಾಂಬುಧಿಯ ಅಗಾಧತೆಯನ್ನು ನಾನು ತಿಳಿದುಕೊಳ್ಳುವುದಾದರೂ ಹೇಗೆ? ಭೂವರೇಣ್ಯ! ನಿಮ್ಮ ಸಂಕಷ್ಟಗಳನ್ನು ತಿಳಕೊಳ್ಳಬೇಕೆಂದು ಮುಂದುವರಿಯುತ್ತಿರುವಾಗ, ನನ್ನ ಹೃದಯನಾವೆಯು ಊಹನೆಯ ಹುಟ್ಟೊಡಗಿ ಘೋರವ್ಯಸನವೆಂಬ ಕ್ರೂರ ತಿಮಿಂಗಿಲದ ಹೊಡೆತಕ್ಕೆ ಪಕ್ಕಾಗಿ ನಾಮಾವಶಿಷ್ಟವಾಗುತ್ತಿರುವುದು.

ರಾಜೋತ್ತಂಸ! ಹಂಸತೂಲಿಕಾತಲ್ಪದಲ್ಲಿ ಮಲಗಿ ನಿದ್ರಿಸುತ್ತ, ವೈತಾಲಿಕರು ಹೇಳುವ ಮಂಗಲಗೀತಗಳನ್ನು ಕೇಳಿ ಎಚ್ಚರಗೊಂಡು ಪ್ರಸನ್ನತೆಯಿಂದ ನಿತ್ಯನಿಯಮಗಳಲ್ಲಿ ನಿರತರಾಗುತ್ತಿದ್ದುದು ನಿಮ್ಮ ಅಂದಿನ ದಿನವು! ದರ್ಭೆಯ ಹುಲ್ಲುಗಳು ಮೊನೆತು ಮೈಯನ್ನು ಚುಚ್ಚುವ ಈ ಹಾಳು ನೆಲದಲ್ಲಿ ಮಲಗಿ ನಿದ್ರಿಸಿ, ಅಮಂಗಲಕರಗಳಾದ ನರಿಗಳ ಕೂಗನ್ನು ಕೇಳಿ

ಎಚ್ಚರಗೊಳ್ಳುವುದು ನಿಮ್ಮ ಇಂದಿನ ದಿನವು! ನಾಡಿನಲ್ಲಿ ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಪಡಿಸಿ ಶೇಷಾನ್ನವನ್ನುಂಡು ನಿಮ್ಮ ದೇಹವು ಬಹು ರಮಣೀಯವಾಗಿ ಒಪ್ಪುತ್ತಿದ್ದುದು ಅಂದಿನ ಸ್ಥಿತಿಯು! ಕಾಡಿನಲ್ಲಿ ದೊರೆಯುವ ಫಲಮೂಲಗಳನ್ನು ತಿಂದು ಈ ದೇಹವು ಕೀರ್ತಿಯೊಡನೆ ಸವೆದು ಕೃಶವಾಗುತ್ತಿರುವುದು ಇಂದಿನ ಸ್ಥಿತಿಯು! ಅಂದು ರತ್ನಮಯವಾದ ಪಾದಪೀಠಗಳಲ್ಲಿ ಸದಾಕಾಲವೊಪ್ಪುತ್ತಿದ್ದ ನಿಮ್ಮ ಪಾದಗಳು, ಬಂದೆರಗುತ್ತಿದ್ದ ಸಾಮಂತರ ತಲೆಯಲ್ಲಿ ಮುಡಿದಿದ್ದ ಪುಷ್ಪಮಾಲೆಗಳ ಪರಾಗಸ್ಪರ್ಶದಿಂದ ಬಹುಶೋಭಾಯಮಾನಗಳಾಗಿದ್ದುವು! ಆ ಕೋಮಲ ಪಾದಗಳಿಂದು ಬ್ರಾಹ್ಮಣರು ಕೊಯಿದು, ಮೃಗಗಳು ಮೆದ್ದು ಉಳಿದ ದರ್ಭಾಂಕುರಗಳಿಂದ ಕೂಡಿದ ಈ ವನಸ್ಥಲಗಳಲ್ಲಿ ಸಂಚರಿಸುತ್ತಿವೆಯಷ್ಟೆ! ಈ ಸಂಕಷ್ಟಗಳೆಲ್ಲವೂ ವಿರೋಧಿಗಳ ಮೂಲಕ ಸಂಭವಿಸಿರುವುದನ್ನು ನೆನೆದುಕೊಂಡಾಗ, ನನ್ನ ಹೃದಯವು ಬೇಗುದಿಗೊಳ್ಳುತ್ತಿರುವುದು. ವೈರಿಗಳ ಚಿತ್ತವನ್ನು ತಳಮಳಗೊಳಿಸುವ ಪೌರುಷಾಗ್ನಿಯುಳ್ಳ ಮಾನಧನರಿಗೆ ದೈವಿಕವಾದ ವಿಪತ್ಪರಂಪರೆಗಳು ಬಂದೊದಗಿದರೂ, ಅದಕ್ಕಾಗಿ ಸಂತೋಷಪಡಬಹುದು. ಆದರೆ ವೈರಿಗಳಿಂದಾದ ಮಾನಹಾನಿಯು ಸಹನಾತೀತವು.

ಧಾತ್ರೀಶ! ಪ್ರಸನ್ನತೆಯಿಂದ ಯೋಚಿಸಿ ನೋಡೋಣಾಗಲಿ! ಇನ್ನಾದರೂ ತಳೆದಿರುವ ಶಾಂತತೆಯನ್ನು ಬಿಡಿರಿ! ವಿರೋಧಿಗಳನ್ನು ಸದೆಬಡಿಯುವುದಕ್ಕಾಗಿ ಪ್ರಸಿದ್ಧವಾದ ಕ್ಷಾತ್ರತೇಜಸ್ಸನ್ನಂಗೀಕರಿಸಿರಿ! ಐಹಿಕದಲ್ಲಿ ಅಭಿಲಾಷೆಯನ್ನು ಸಂಪೂರ್ಣವಾಗಿ ತೊರೆದ ಮುನಿವರ್ಯರು ಷಡ್ವೈರಿಗಳನ್ನು ಜಯಿಸಿ, ಬಯಸಿದ ಮೋಕ್ಷಸಾಮ್ರಾಜ್ಯವನ್ನು ಶಾಂತಿಯಿಂದಲೇ ಸಾಧಿಸಿಕೊಳ್ಳುವರು. ಆದರೆ, ರಾಜರ ಸಾಮ್ರಾಜ್ಯಕಾರ್ಯವು ಶಾಂತಿಸಾಧ್ಯವಲ್ಲವೆಂಬುದನ್ನು ಸರಿಯಾಗಿ ಅರಿತಿರಬೇಡವೆ? "ಎಂದೆಂದಿಗೂ ಸಹನೆಯೇ ಸುಖಸಾಧನವು" ಎಂದು ತಿಳಕೊಳ್ಳುವುದಾದರೆ ಧರಣೀಶತ್ವಸೂಚಕವಾದ ಈ ಧನುಸ್ಸನ್ನು ಪೌರುಷದೊಂದಿಗೆ ಪರಿಹರಿಸಿ, ಅರಣ್ಯದಲ್ಲಿ ನೆಲಸಿ, ಜಡೆಗಳನ್ನು ಬೆಳೆಯಿಸಿ, ಸದಾಕಾಲವೂ ಹವಿರ್ಭಾಗಗಳ ಮೂಲಕ ಯಜ್ಞೇಶ್ವರನನ್ನಾರಾಧಿಸುತ್ತ ಇರೋಣಾಗಲಿ! "ತೇಜಸ್ವಿಗಳಲ್ಲಿ ಅಗ್ರೇಸರರೂ ಯಶೋಧನರೂ ಎನಿಸಿದ ನಿಮ್ಮಂತಹ ಕ್ಷತ್ರಿಯೋತ್ತಮರು ಅಸಹನೀಯವೆನಿಸಿದ

ಇಂತಹ ಅವಮಾನದಲ್ಲಿಯೂ ಸಂತೋಷಪಡದಿರುವುದಾದರೆ, ಲೋಕ ದಲ್ಲಿ ಅಭಿಮಾನವೆಂಬುದು ಆಶ್ರಯವಿಲ್ಲದೆ ನಾಶಹೊಂದಬೇಕೆ" ಎಂದೆಣಿಸುತ್ತ ನನ್ನ ಹೃದಯವು ತಲ್ಲಣಿಸುತ್ತಿರುವುದು.

ವಿರೋಧಿಗಳು ಮುಖ್ಯವಾಗಿ ಕುಹಕವನ್ನೇ ಅವಲಂಬಿಸುತ್ತಿರುವರು. ಅವರಿಗೆ ತಕ್ಕ ಶಾಸ್ತಿಯನ್ನು ಮಾಡಲು ಸಮರ್ಥರಾದ ನೀವು "ಕಾಡು ಹನ್ನೆರಡು, ಗೂಢ ಮತ್ತೊಂದು ಕೂಡಿ ಹದಿಮೂರು" ಎಂಬ ವನವಾಸದ ಅವಧಿಯನ್ನು ಪರಿಪಾಲಿಸುತ್ತ ಹೀಗೆ ಸುಮ್ಮನಿರುವುದು ಸರಿಯಲ್ಲ. ಮುಖ್ಯವಾಗಿ ಜಯವನ್ನೇ ಬಯಸತಕ್ಕ ಕ್ಷತ್ರಿಯ ವೀರರು, ಶತ್ರುಗಳೊಡನೆ ಮಾಡಿದ ಸಂಧಿಯನ್ನು ಕಾರಣಾಂತರದಿಂದ ಮುರಿಯುತ್ತಿರುವರು. ಗೊತ್ತುವಳಿಯಾದ ಕಟ್ಟುಪಾಡನ್ನೇ ಅಕ್ಷರಶಃ ಪಾಲಿಸುತ್ತಿರುವುದು ಅಶಕ್ತರ ಲಕ್ಷಣವಲ್ಲವೆ? ಕಾಲವನ್ನು "ಹಗಲು ಇರುಳೆ"ಂದು ದೈವವೇ ವಿಭಾಗಿಸುತ್ತಿರುವಲ್ಲಿ, ಪ್ರಭಾಪುಂಜವು ನಷ್ಟವಾದ ಉದ್ವೇಗದೊಡನೆ ದುಸ್ತರಾಂಬುಧಿಯಲ್ಲಿ ಮುಳುಗಿದರೂ ಕೂಡ, ಸುಪ್ರಭಾತದಲ್ಲಿ ತಿಮಿರಾರಾತಿಯನ್ನು ತೀರ ನಾಶಗೊಳಿಸುತ್ತ, ಉದಯಾಚಲವನ್ನಡರುವ ಭಗವಾನ್ ಭಾಸ್ಕರನನ್ನು ಗತವೈಭವಗಳೆನಿಸಿದ್ದ ಕಿರಣನಿಕರಗಳೆಲ್ಲವೂ ಬಂದು ಸೇರುವುದು ಸಹಜವು. ಅದರಂತೆಯೆ, ಜೀವಿತವನ್ನು "ಸುಖಕಾಲ ದುಃಖಕಾಲವೆ"ಂದು ವಿಧಿಯೇ ಪ್ರತ್ಯೇಕಿಸಿರುವಲ್ಲಿ, ಅತುಲೈಶ್ವರ್ಯಗಳೆಲ್ಲವೂ ದುಸ್ತರವಾದ ದುರಿತಾಂಬುಧಿಯಲ್ಲಿ ಮುಳುಗಿದರೂ ಕೂಡ, ಸುದಿನೋದಯದಲ್ಲಿ ಅರಾತಿಗಳನ್ನು ಸಂಪೂರ್ಣ ವಿನಾಶಗೊಳಿಸುತ್ತ, ಏಳಿಗೆಯ ಹಂತವನ್ನಡರುವ ನಿಮ್ಮನ್ನು ತೊರೆದುಹೋಗಿದ್ದ ಲಕ್ಷ್ಮಿಯು ತಾನೇ ಬಂದು ಸಮಾಶ್ರೈಸಿಕೊಳ್ಳುವುದರಲ್ಲಿ ಸಂದೇಹವಿಲ್ಲ" ಎಂದು ಹೇಳುತ್ತ ದ್ರೌಪದಿಯು ಕೋಡಿವರಿವ ಕಣ್ಣೀರ ಧಾರೆಯ ಅಭಿಷೇಕದೊಡನೆ ಶ್ರದ್ಧೆಯಿಂದ ಭಕ್ತಿಪೂರ್ವಕವಾಗಿ ಯುಧಿಷ್ಠಿರನ ಪಾದಪೂಜೆಯನ್ನು ಮಾಡುತ್ತ ಮನಸ್ಸಿನ ಬೇಗುದಿಯನ್ನು ಪರಿಹರಿಸಿದೆನೆಂದು ತಿಳಿದುಕೊಂಡಳು.

೫. ಭೀಮಸೇನನ ಆಟೋಪ

"ಸನ್ಮಾರ್ಗಗಾಮಿಗೆ ಸತ್ಫಲವೂ ದುರ್ಮಾರ್ಗಗಾಮಿಗೆ ಕೇಡೂ ತಪ್ಪಲಾರದು. ಐಹಿಕವೆಂಬ ಸಂತೆಯಲ್ಲಿ ಲೇಸು ಹೊಲಸೆಂಬ ಭೇದ ವಿಲ್ಲದೆ ಎಲ್ಲವೂ ಸೇರಿಕೊಂಡು ಒಂದನ್ನೊಂದು ಮೀರಿಸಬೇಕೆಂದು ಸ್ಪರ್ಧಿ ಸುತ್ತಿರುವುವು. ಕೊಂಡುಕೊಳ್ಳುವವರು ಮಾತ್ರ ವಿವೇಕವನ್ನವಲಂಬಿಸ ಬೇಕು. ಇಲ್ಲವಾದರೆ, ಹುಚ್ಚಾಟಿಕೆಯಿಂದ ತೊಳಲುತ್ತಿರಬೇಕು" ಎಂದು ನೀತಿಶಾಸ್ತ್ರವು ಜನರನ್ನು ಬೋಧಿಸುತ್ತಿರುವ ರೀತಿಯಿಂದ ದ್ರೌಪದಿಯು ಯುಧಿಷ್ಠಿರನ ಹೃದಯಕಂದರದಲ್ಲಿ ನಿದ್ರಿಸುತ್ತಿದ್ದ ಮತಿಸಿಂಹವನ್ನು ಕೆಣಕಿ, ಅದು ಕಾರ್ಯದಲ್ಲಿ ಪ್ರವರ್ತಿಸುವಂತೆ ಮಾಡಲು ಯುಕ್ತಿಯಿಂದಲೇ ಪ್ರಯತ್ನಿಸಿದಳು.

ಆ ವೇಳೆಗೆ, ಜಡಿಮಳೆಯಂತೆ ಸುರಿಯುತ್ತಿದ್ದ ಆವಳ ವೀರವಾಣಿ ಗಳೆಂಬ ಅಮೃತಾಸಾರದ ಮೂಲಕ ಭೀಮಸೇನನು ಹದಗೆಟ್ಟನು. ಅವನ ಕಣ್ಣುಗಳು ಕೆಂಪೇರಿದುವು, ಹುಬ್ಬುಗಳು ಗಂಟಿಕ್ಕಿದುವು, ತುಟಿಯು ನಡುಗತೊಡಗಿತು. ಮನಸ್ಸು ನೆಮ್ಮದಿಯನ್ನು ಬಿಟ್ಟು ಉದ್ವೇಗದಿಂದ ತಳಮಳಿಸಿತು. ತನ್ನಲ್ಲಿ ಉಂಟಾದ ಈ ರೀತಿಯ ವಿಕಾರಗಳನ್ನು ಹೇಗಾ ದರೂ ತಡೆದುಕೊಳ್ಳಬೇಕೆಂದು ಮನಸ್ಸಿನ ಒತ್ತಟವನ್ನು ಹಟದಿಂದ ತಡೆದೂ ಗೆಲವಿಲ್ಲದೆ ಕಂಗೆಟ್ಟ ಆತನು ಹೀಗೆ ಯೋಚನೆಗೊಳಗಾದನು—

"ವಿಧಿಯೇ! ನಿನ್ನ ಸೃಷ್ಟಿಯು ಭಿನ್ನಭಿನ್ನವೆನಿಸಿರುವ ರೂಪರಚನೆಯಿಂದ ಸಾಗುತ್ತಿರುವಂತೆ ವ್ಯಕ್ತಿತ್ವದಲ್ಲಿಯೂ ವೈವಿಧ್ಯವನ್ನು ಕಲ್ಪಿಸಲು ನೀನು ಮರೆತಿಲ್ಲವೆಂಬುದರಿಂದಲೇ ನಿನ್ನ ಜಾಣ್ಮೆಯು ವ್ಯಕ್ತವಾಗುವುದು. ಅದ ಕ್ಕನುಸಾರವಾಗಿ ಈ ಸೋದರಪಂಚಕದ ವಿಚಾರದಲ್ಲಿಯೂ ತಾರತಮ್ಯ ವಿರಬೇಕು. ಆದರೂ, ಮಾನಿನಿಯಾದ ಪಾಂಚಲೆಯಲ್ಲಿ ಮಾತ್ರ ನೀನು ತೀವ್ರತರವಾದ ವಿಚಾರಶಕ್ತಿಯನ್ನು ನ್ಯಾಸವಾಗಿರಿಸಿದೆಯಾ? ಅದಕ್ಕೆ ತೀರ ವಿಪರೀತವಾದ ಶಾಂತತೆಯೇಕೆ ನಮ್ಮಣ್ಣನಲ್ಲಿರಬೇಕು? ಇದೆಲ್ಲವೂ ನಿನಗೊಂದು ಆಟವಾದರೂ ನಮಗೆ ಕಾಟವೆನಿಸದೆ ಇರಲಾರದು. "ವಿಧಿಯ ವೈಚಿತ್ರ್ಯವಂತೂ ಅಚಿಂತ್ಯವು" ಎಂದು ಲೋಕದಲ್ಲಿ ಜನರು ಸುಮ್ಮನೆ ಆಡಿಕೊಳ್ಳುವರೆ?"

ಕುಲಾಭಿಮಾನದಿಂದ ತುಂಬಿದ ಪಾಂಚಾಲೆಯು ಸ್ನೇಹಾರ್ದ್ರ ನಯನಗಳಿಂದ ಸುತ್ತಲೂ ನೋಡಿಕೊಳ್ಳುತ್ತ, ಅರ್ಥಗರ್ಭಿತವೂ ಯುಕ್ತಿ ಯುಕ್ತವೂ ಎನಿಸಿದ ಮಾತುಗಳನ್ನಾಡಿದ ಆ ಸನ್ನಿವೇಶವನ್ನೇ ಭೀಮ ಸೇನನು ತಿರುತಿರುಗಿ ಮನಸ್ಸಿಗೆ ತಂದುಕೊಂಡು ಮತ್ತೂ ವಿಚಾರಕ್ಕೊಳ ಗಾದನು—"ಲೋಕದಲ್ಲಿ ಶಾಸ್ತ್ರೀಯವಿಷಯಗಳನ್ನು ಬಲ್ಲ ವಿದ್ವಾಂಸರು ಬಹುಮಂದಿ ಇರಬಹುದಾದರೂ, ಅವರೆಲ್ಲರೂ ಬೋಧಕರೆನಿಸಿಕೊಳ್ಳ ಲಾರರು. ಬೋಧನಾಸಾಮರ್ಥ್ಯವಿರತಕ್ಕವರ ಸಂಖ್ಯೆಯು ವಿರಳವಷ್ಟೆ! ಗಹನವಿಷಯಗಳನ್ನೊಳಗೊಂಡಿರುವುದರಿಂದ ನೀತಿಶಾಸ್ತ್ರವು ಗ್ರಹಿಸಿಕೊ ಳ್ಳಲು ಕಷ್ಟವೆಂಬುದು ಸರ್ವರಿಗೂ ತಿಳಿದಿರುವುದು. ಆದರೂ, ಅದನ್ನು ಚತುರನಾದ ವಾಗ್ಮಿಯು ಸುಲಭರೀತಿಯಿಂದ ಬೋಧಿಸುತ್ತಿರುವಾಗ, ಶ್ರೋತೃಗಳು ಪ್ರಸನ್ನರಾಗಿ ಕೇಳುತ್ತಿರುವರು. ಸಮುದ್ರವು ಮಡು ಗಳಿಂದಲೂ, ಬಂಡೆಗಳಿಂದಲೂ, ಬಗೆಬಗೆಯ ಕ್ರೂರಜಂತುಗಳಿಂದಲೂ ರಭಸದಿಂದ ಹೊಡೆದಪ್ಪಳಿಸುವ ತರಂಗಮಾಲೆಗಳ ಪರಂಪರೆಗಳಿಂದಲೂ ಸೇರಿ ದುಸ್ತರವೆನಿಸಿರುವುದಾದರೂ, ಸಮರ್ಥರು ಶ್ರದ್ಧಾಮೂಲವೆನಿಸುವ ಭಕ್ತಿಯ ಮಹಿಮೆಯಿಂದ ಅಪಾಯಕ್ಕೆ ಗುರಿಯಾಗದೆ ಅಲ್ಲಿ ತೀರ್ಥ ಸ್ನಾನಮಾಡಿ ಬರುವರು. ಹಾಗೆಯೇ ನೀನೂ ಕೂಡ ಗಂಭೀರವಾದ ರಾಜನೀತಿಯೆಂಬ ಸಮುದ್ರದ ಪಾರವನ್ನು ಕಂಡು ಹಿಡಿದು, ಅದರ ತತ್ವ ವನ್ನು ಸುಲಭಗ್ರಾಹ್ಯವೆನಿಸುವಂತೆ ಬೋಧಿಸುತ್ತಿರುವುದರಿಂದ ನಿನ್ನ ಸಾಮ ರ್ಥ್ಯವು ಅಸಾಮಾನ್ಯವು. ಅದರ ರೀತಿಯು ಸ್ವಲ್ಪ ಕಟುವಾಗಿರುವುದ ರಿಂದ ಕೇಳುವವರಿಗೆ ಮೊಟ್ಟಮೊದಲು ಅಹಿತವೆನಿಸಿಕೊಳ್ಳಬಹುದು. ರೋಗದಿಂದ ನರಳುವವರಿಗೆ ಪರಿಣಾಮದಲ್ಲಿ ಬಲಸಂಪತ್ತನ್ನೊದಗಿಸುವ ಔಷಧವು ಕಹಿಯೆನಿಸಿದರೂ ಸೇವ್ಯವಲ್ಲವೆ? ಯಾಸಿನೀಕುಲರತ್ನವೆ! ಬೃಹಸ್ಪತಿಯನ್ನಾದರೂ ತಲೆದೂಗಿಸುವ ನಿನ್ನ ವಾಕ್ಸರಣಿಯ ಪ್ರೌಢಿಮೆ ಯೇನು! ಆಧಾರದೊಡನೆ ವಿಷಯವನ್ನು ಸಮರ್ಥಿಸುವ ನಿನ್ನ ಸಾಮ ರ್ಥ್ಯದ ಚಮತ್ಕಾರವೇನು! ರನ್ನೆ, ನಿನ್ನ ಮಾತುಗಳಿಗಿರುವ ಪ್ರಚಂಡ ಶಕ್ತಿಯು ಕೊಂಡಾಡಲು ಯೋಗ್ಯವಲ್ಲವೆ? ಸಕಾಲದಲ್ಲಿ ನೀನು ಹೇಳಿದ ಆ ಮಾತುಗಳೆಂದರೆ, ಕಾರ್ಯಸಾಧನೆಗೆ ಹೇತುಗಳು. ಕಾರ್ಯದಲ್ಲಿ ಪ್ರವರ್ತಿಸುವಂತೆ ಪ್ರೇರೇಪಿಸತಕ್ಕ ನಿನ್ನ ಜಾಣ್ಮೆಗೆ ಜಗತ್ತಿನಲ್ಲಿ ಎಣೆಯಿಲ್ಲ."

ದ್ರೌಪದಿಯು ಹೇಳಿದ ಅಭಿಪ್ರಾಯವನ್ನು ಹೀಗೆ ಮನಸ್ಸಿನಲ್ಲೇ ಕೊಂಡಾಡುತ್ತ ಭೀಮಸೇನನು ತಡೆಯಲಾರದ ಆಟೋಪದಿಂದ ಯುಧಿಷ್ಠಿರನೊಡನೆ ಹೀಗೆ ಹೇಳತೊಡಗಿದನು. “ಅಗ್ರಜನೆ! ದ್ರೌಪದಿಯ ಅಭಿಪ್ರಾಯವನ್ನು ಗಮನಿಸಿದೆಯ! ಅರ್ಥಗರ್ಭಿತವೂ ಕಾಲಾನುಗುಣವೂ ಸತ್ಪರಿಣಾಮಕಾರಿಯೂ ಆಗಿರುವುದನ್ನು ಗುಣಗ್ರಾಹಿಗಳು ಗಮನಿಸದಿರುವುದು ಸಮಂಜಸವಲ್ಲ. ವಿದ್ವಾಂಸರ ದೃಷ್ಟಿಯು ಅರ್ಥದ ಕಡೆಗೆ ಮಾತ್ರ ಹರಿಯುವುದಲ್ಲದೆ ವ್ಯಕ್ತಿಗಳ ಕಡೆಗೆ ಪಸರಿಸದೆಂಬುದು ಲೋಕಸಮ್ಮತವು. ಆದುದರಿಂದ ನೀನಿದನ್ನು ಸ್ತ್ರೀ ಜಲ್ಪಿತವೆಂದು ಕಡೆಗಣಿಸಬಾರದು. ಲೋಕಸಂಸ್ಥಿತಿಗೆ ಹೇತುಗಳಾದ ಚತುರ್ವಿದ್ಯೆಗಳಲ್ಲಿಯೂ ನೀನು ಪಾರಂಗತನು. ನೈಪುಣ್ಯವನ್ನು ಪಡೆದಿರುವ ನಿನ್ನ ಬುದ್ಧಿಯು ಕರ್ತವ್ಯದ ಕಡೆಗೆ ತಿರುಗದೆ ಸುಮ್ಮನಿರುವುದೆಂದರೆ, ನಿರ್ಮಲವಾಗಿ ಸ್ನಾನ ಮಾಡಿದ ಆನೆಯು ಮೈಗೆ ಕೆಸರುಬಳಿದುಕೊಳ್ಳುವಂತೆಯೇ ಸರಿ. ವೈರಿಗಳು ನಮ್ಮನ್ನು ಈ ರೀತಿಯ ಬನ್ನಕ್ಕೆ ಗುರಿಪಡಿಸಿದುದು ವಂಚನೆಯ ಸಂಚಿನಿಂದಲೇ ಎಂಬುದು ನಿರ್ವಿವಾದವು. ಆದರೂ ನಾವಿಂದು ಒಂದೇ ವಿಧವಾದ ಸಹನೆಯನ್ನೇ ಅವಲಂಬಿಸಿರಬೇಕೆ? ದೇವತೆಗಳೂ ಶ್ಲಾಘಿಸತಕ್ಕ ಪೌರುಷವಿಂದು ನಿರಾಲಂಬನವೆನಿಸಿ ನಶಿಸಬೇಕೆ? ಹಾ ಹಾ! ಇದರಿಂದಲೂ ಕಷ್ಟಸ್ಥಿತಿಯಿನ್ನಾವುದು? ಲೋಕಸಂಗ್ರಹಕಾರಿಯಾದ ಪೌರುಷವನ್ನು ತೊರೆಯಬೇಕೆ? ಅರಾತಿಗಳ ರುಂಡಗಳನ್ನು ತುಂಡರಿದು ಚೆಂಡಾಡುವ ವೀರರಿಂದು ಶಾಂತಿಯನ್ನವಲಂಬಿಸಿರಬೇಕೆ? ಆಹಾ! ನಮ್ಮ ಅಪದಶೆಯೆ?

ತಮ್ಮ ಏಳಿಗೆಯನ್ನು ಬಯಸುವ ಮೇಧಾವಿಗಳು ಪರಿಣಾಮದಲ್ಲಿ ನಶಿಸತಕ್ಕ ವಿರೋಧಿಗಳ ಅಭಿವೃದ್ಧಿಯನ್ನಾದರೂ ಸಹಿಸಿಕೊಳ್ಳುವರು. ಕೊನೆಗೆ ಏಳಿಗೆಯನ್ನೇ ಪಡೆಯಬಹುದಾದ ವೈರಿಗಳ ಉನ್ನತಿಯನ್ನು ನೋಡುತ್ತ ಸುಮ್ಮನಿರುವುದು ಸರ್ವಥಾ ಸರಿಯಲ್ಲವೆಂದು ನಾನು ಬೇರೆ ಹೇಳುವ ಅಗತ್ಯವಿಲ್ಲ. ಕಾಲಾನುಭಾಗದಲ್ಲಿ ಶತ್ರುಗಳಿಗೆ ಬರತಕ್ಕ ಸ್ವಲ್ಪವಾದ ಹಾನಿಯನ್ನೂ, ತನಗೆ ಬೇಗನೆ ಬರುವ ಘೋರವಾದ ವಿಪತ್ತನ್ನೂ ನೋಡುತ್ತ ಸಾಮರ್ಥ್ಯಶಾಲಿಯು ತಟಸ್ಥನಾಗಿರುವುದಾದರೆ, ಅದಕ್ಕೇನೆನ್ನಬಹುದೋ ನನಗರಿಯದು. ದುರ್ಜನರ ಸಹವಾಸದಿಂದ ಸತ್ಪುರುಷ

ನಲ್ಲಿರುವ ಗುಣಗಳು ನಷ್ಟವಾಗುವಂತೆ ಪರಾಕ್ರಮದೊಡನೆ ವಿರೋಧಿಗಳ ಕೋಶಾಗಾರವು ವರ್ಧಿಸುತ್ತಿರುವುದನ್ನು ನೋಡಿಯೂ ಅದರ ನಿವಾರಣೆಗೆ ಬೇಕಾದ ಪ್ರತೀಕಾರವನ್ನು ಮಾಡಲು ಮನಸ್ಸಿಲ್ಲದೆ, ಉದಾಸೀನನಾಗಿರುವ ಅರಸನ ಸಂಪತ್ತುಗಳೆಲ್ಲವೂ ತೊಲಗುವುವು. ಧರ್ಮತತ್ಪರನಾಗಿ ಧರ್ಮರಾಯನೆಂಬ ಅನ್ವರ್ಥನಾಮದಿಂದ ಮೆರೆದ ನೀನಿಂದು ಅನುಭವಿಸುತ್ತಿರುವ ಈ ಸಂಕಷ್ಟದಿಂದ ಪಾರಾಗಲು ಸಾಧ್ಯವಿಲ್ಲವೆಂದು ನಿರಾಶನಾಗುತ್ತಿರುವುದು ಸರ್ವಥಾ ಸರಿಯಲ್ಲ. ಸರಿಯಾಗಿ ಬೆಳದಿಂಗಳನ್ನು ಪಸರಿಸುತ್ತಿದ್ದ ಚಂದ್ರನು ಕ್ಷೀಣಿಸಿದರೂ, ಅವನೇ ಮುಂದೆ ಪರಿಪೂರ್ಣನಾಗಬಹುದೆಂಬ ನಿರೀಕ್ಷಣೆಯಿಂದ ಜನರು ಆತನನ್ನು ನೋಡಿ ನಮಸ್ಕರಿಸುವರು. ಅದೇ ರೀತಿಯಲ್ಲಿ ಪ್ರಜಾರಂಜಕನಾಗಿದ್ದ ಅರಸನಿಗೆ ಕ್ಷೀಣದಶೆಯು ಬಂದೊದಗಿದರೂ, ಇನ್ನು ಮುಂದೆ ನಮಗೆ ಅವನಿಂದಲೇ ಕ್ಷೇಮವುಂಟಾಗಬಹುದೆಂಬ ದೂರದೃಷ್ಟಿಯಿಂದ ಪ್ರಜೆಗಳು ವಿಪನ್ನನಾದ ಅರಸನನ್ನು ಸಂಭಾವಿಸುವರು. ಹೀಗಿರುವಾಗ ರಾಜನಾದ ನೀನು ಹತಾಶನಂತೆ ಕರ್ತವ್ಯವಿಮುಖನಾಗಿ ಕಾಲಕಳೆಯುತ್ತಿರುವುದು ಸರಿಯಲ್ಲ.

"ವಿಚಾರಪೂರ್ವಕವಾಗಿ ಉತ್ಸಾಹದಿಂದ ಮಾಡುವ ಕಾರ್ಯಾರಂಭವೇ ಪ್ರಭುಶಕ್ತಿಗೆ ಮೂಲ"ವೆಂಬ ಈ ಮಂತ್ರದ ಮೂಲವನ್ನೂ ಮನ್ನಿಸದಿರುವುದೆ? ಲೋಕದಲ್ಲಿ ಜನರು ಕೃಷಿ, ಕೈಗಾರಿಕೆ, ವಾಣಿಜ್ಯ ಮೊದಲಾದ ಕೆಲಸಗಳಲ್ಲಿ ಬಿಡದೆ ಉತ್ಸಾಹವನ್ನು ತೋರಿಸುತ್ತಿದ್ದರೆ, ಅವು ಗಳು ಭಾಗ್ಯರೂಪವಾಗಿ ಅವರಿಗೆ ತಪ್ಪದೆ ಫಲಿಸುತ್ತಿರುವುವು. ಹೀಗಿರಲು ರಾಜರಿಗೆ ರಾಜನೀತಿಯೂ ಫಲಿಸದಿರುವುದೆ? ಅಭಿಮಾನಧನನಾದ ವೀರನಿಗೆ ಆತ್ಮಪೌರುಷವೇ ಮುಖ್ಯಾವಲಂಬನವು. ಆತನು ಅದರಿಂದಲೇ ಮನಸ್ಸಿಗೆ ಹಿತಕರವೂ, ಉಚ್ಚತರವೂ, ಐಶ್ವರ್ಯದ ಸ್ಥಿರಮಂದಿರವೂ, ಯಶೋವಿತಾನರಂಜಿತವೂ ಎನಿಸಿಪ ರಾಜ್ಯಪದವಿಯನ್ನು ಗಳಿಸಿಕೊಳ್ಳುವನು. ಅದರಿಂದಲೇ ಅನರ್ಥಪರಂಪರೆಗಳನ್ನೂ ಪರಿಹರಿಸಿಕೊಳ್ಳುವನು. ವೀರನಿಗೆ ಸಕಲವೂ ಸ್ವಾಯತ್ತವು. ಪೌರುಷವಿಲ್ಲದ ಹೇಡಿಗಲ್ಲವೆ ಕಷ್ಟಪರಂಪರೆಗಳು ಸಂಕಷ್ಟದಿಂದ ತೊಳಲುವಾತನಿಗೆ ಏಳಿಗೆಯು ಸಂಭವಿಸುವುದಂತೂ ಸಲ್ಲದ ಮಾತು. ಆತನು ಲೋಕದಲ್ಲಿ ಲಘುವೆನಿಸುವನು. ಗೌರವವಿಲ್ಲದವನ

ಬಳಿಗೆ ಜನರಾರೂ ಬರಲಾರರೆಂಬ ಲೋಕಪದ್ಧತಿಯಂತೆ ಘನತೆಯಿಲ್ಲ ದವನನ್ನು ರಾಜ್ಯಲಕ್ಷ್ಮಿಯು ತ್ಯಜಿಸದಿರುವುದಂತೂ ಅಸಂಭವವು. ಲೋಕ ದಲ್ಲಿ ಪ್ರತಿಯೊಬ್ಬನೂ ಉದ್ಯೋಗಶೀಲನಾಗಿರಬೇಕು. ಉದ್ಯೋಗಶೂನ್ಯ ತೆಯೆಂಬುದು ಏಳಿಗೆಗೆ ತೊಡಕು. ಅಗ್ರಜನ್ಮ! ಅಭ್ಯುದಯಕ್ಕೆ ಪ್ರತಿ ಬಂಧಕವಾದ ಉದಾಸೀನವನ್ನು ಪರಿಹರಿಸಿ ಕರ್ತವ್ಯಶೀಲನಾಗು. ವಿಷಾದ ವನ್ನು ಕಂಡೊಡನೆ ಓಡಿಹೋಗುವ ಸಮೃದ್ಧಿಯು ವಿಕ್ರಮದೊಂದಿಗೆ ಸೇರಿ ಕಾಲೂರುವುದು. ಅಣ್ಣಾ! ನೀನು ಈ ಪರಿಸ್ಥಿತಿಯಲ್ಲಿಯೂ ಹೀಗೆ ನಿರ್ವಿ ಣ್ಣನಾಗಿರುವುದೇ ನಮ್ಮೆಲ್ಲರ ದಿಗ್ಭ್ರಮೆಗೂ ಕಾರಣವು.

ಅಂದು ಮಾಡಿಕೊಂಡ ಒಪ್ಪಂದದ ಮೇರೆಗೆ ಹದಿಮೂರು ವರುಷದ ಅವಧಿಯನ್ನು ನಿರೀಕ್ಷಿಸುತ್ತಿರುವುದು ಸರಿಯಲ್ಲ. ಸಂಪತ್ತಿನ ಸುಖವುಂಡ ವರು ಅದನ್ನೆಂದಿಗೂ ಬಿಡಲಾರರು. ಕುಟಿಲಮತಿಗಳಾದ ಧಾರ್ತರಾಷ್ಟ್ರರು ಎಂದೆಂದಿಗೂ ರಾಜ್ಯವನ್ನು ಬಿಟ್ಟುಕೊಡತಕ್ಕವರಲ್ಲ. ಒಂದು ವೇಳೆ ಕಟ್ಟು ಪಾಡಿನ ಮೇರೆಗೆ ನಿನಗವರು ರಾಜ್ಯವನ್ನು ಬಿಟ್ಟುಕೊಡುವರು, ಅವರಿಂದ ನೀನದನ್ನು ಪಡಕೊಳ್ಳುವೆ ಎಂಬ ಈ ಅಸಂಭಾವ್ಯವು ಸಂಭವಿಸಬಹು ದಾದರೂ, ಅದು ಸಂತೋಷಿಸತಕ್ಕ ವಿಷಯವಲ್ಲ. ಏಕೆಂದರೆ ಸಾಹಸ ಶೀಲರೂ, ಅಸಹಾಯಶೂರರೂ, ವೈರಿವ್ರಾತದ ಕುರಿತು ಕೃತಪ್ರತಿಜ್ಞರೂ ಆಗಿರುವ ನಿನ್ನ ತಮ್ಮಂದಿರ ಭುಜಮಂದಿರಗಳಲ್ಲಿ ಉತ್ಸುಕತೆಯಿಂದ ನೆಲಸಿ ವಿರಾಜಿಸುತ್ತಿರುವ ವೀರಶ್ರೀಯು ಉಪಯೋಗವೇನು? ಮೃಗರಾಜನಾಗಿ ಮೆರೆಯುವ ಸಿಂಹವು ಸ್ವಪರಾಕ್ರಮದಿಂದಲೇ ಮದ್ದಾನೆಗಳ ಕುಂಭಸ್ಥಲ ಗಳನ್ನು ಭೇದಿಸಿ ತನ್ನ ಆಹಾರವನ್ನು ಪೂರೈಸಿಕೊಳ್ಳುವಂತೆಯೇ ಪ್ರಭಾವ ಶಾಲಿಯು ಭುಜಪರಾಕ್ರಮದಿಂದ ಲೋಕವನ್ನು ಜಯಿಸಿ ತನ್ನ ಸ್ವಾಧೀನ ಪಡಿಸಿಕೊಳ್ಳುವನಲ್ಲದೆ, ಅನ್ಯರ ನೆರವನ್ನೆಂದಿಗೂ ಬಯಸಲಾರನು. ನಶ್ವರ ವಾದ ದೇಹವನ್ನು ತೊರೆದು ಹೋಗತಕ್ಕ ಪ್ರಾಣವನ್ನು ರಕ್ಷಿಸಿಕೊಳ್ಳುವುದ ಕ್ಕಿಂತಲೂ ಮೇಲಾಗಿ ಅಭಿಮಾನಶಾಲಿಯು ಶಾಶ್ವತವಾದ ಕೀರ್ತಿಯನ್ನು ಗಳಿಸಿಕೊಳ್ಳಬೇಕೆಂದು ಹೆಣಗಾಡುವನು. ಪ್ರಾಣರಕ್ಷಣೆಗೆ ಮುಖ್ಯಾವ ಲಂಬನವಾದ ಸಂಪತ್ತು ಮಿಂಚಿನ ಮರ್ಯಾದೆಯುಳ್ಳದ್ದಾಗಿ ಸ್ವಲ್ಪ ಕಾಲ ಮಾತ್ರ ಫಲವನ್ನು ಕೊಡುತ್ತಿರುವುದರಿಂದ ಅಭಿಮಾನಿಗಳು ಮಾನಕ್ಕಿಂತ

ಪ್ರಾಣವೇ ಪ್ರಾಮುಖ್ಯವೆಂದು ತಿಳಿದುಕೊಳ್ಳುವುದಿಲ್ಲ. ಬೆಂಕಿಯಿಲ್ಲದ ಭಸ್ಮದ ರಾಶಿಯನ್ನು ಬಹು ಸುಲಭವಾಗಿ ತುಳಿಯುವಂತೆಯೇ, ಮಾನಗೆಟ್ಟು ಬಾಳುವವನನ್ನು ತಿರಸ್ಕರಿಸಲು ಯಾರೂ ಹಿಂದುಮುಂದು ನೋಡಲಾರರು. ಪ್ರಜ್ವಲಿಸುವ ಬೆಂಕಿಯನ್ನು ತುಳಿಯಲು ಯಾರಿಗೆ ಧೈರ್ಯವಿದೆ? ಅಭಿಮಾನಶಾಲಿಗಳನ್ನು ತಿರಸ್ಕರಿಸಲು ಯಾರು ತಾನೇ ಮುಂದಾಗುವರು? ಆದುದರಿಂದಲೇ ಸ್ವಾಭಿಮಾನಿಗಳು ಮಾನಹಾನಿಕರವಾದ ಜೀವನಕ್ಕಿಂತಲೂ, ಶ್ರೇಯೋವರ್ಧಕವೆನಿಸುವ ಮರಣವೇ ಲೇಸೆಂದು ತಿಳಿದುಕೊಳ್ಳುವರು. ಮೃಗರಾಜಕಂಠೀರವವು ಕರ್ಣಕಠೋರವಾಗುವಂತೆ ಕೇಳಿಸುವ ಮೋಡದ ಮೊಳಗನ್ನಾದರೂ ಸಹಿಸಲಾರದೆ ಕೆರಳುತ್ತ ಅದನ್ನು ಪ್ರತಿಭಟಿಸುವಂತೆ ಗರ್ಜಿಸುವುದು. ಹಾಗೆಯೇ ಪ್ರಭಾವಶಾಲಿಗಳು ಪರರ ಏಳಿಗೆಯನ್ನು ನೋಡುತ್ತ ಸುಮ್ಮನೆ ಕುಳಿತುಕೊಳ್ಳಲಾರರು. ಇದೇ ಬಲಶಾಲಿಗಳ ಮುಖ್ಯ ಲಕ್ಷಣವು.

ಧರಣೀಶ, ಮನಸ್ಸಿಗೆ ಕವಿದಿರುವ ಆಲಸ್ಯವನ್ನು ಪರಿಹರಿಸಿ, ಪೌರುಷವೇ ಮುಖ್ಯಾವಲಂಬನವೆಂಬ ವಿಚಾರವನ್ನು ನೀನು ಮನಸ್ಸಿಗೆ ತಂದುಕೊಂಡರೆ ಸಾಕು; ಒಂದರ ಮೇಲೊಂದರಂತೆ ಮುತ್ತಿ ಕವಿಯುವ ಸಂಕಷ್ಟಗಳು ದುಷ್ಟವೈರಿಗಳನ್ನು ಕೋಟಲೆಗೊಳಿಸುವುವೆಂಬುದರಲ್ಲಿ ಸಂದೇಹವಿಲ್ಲ. ನಾಲ್ಕು ದಿಕ್ಕುಗಳಲ್ಲಿಯೂ ಪ್ರಸಿದ್ಧಿಪಡೆದಿರುವ ನಾಲ್ಕು ದಿಗ್ಗಜಗಳಂತೆ, ಅಗಾಧವಾಗಿದ್ದು ಗಂಭೀರವಾಗಿ ಘೋರ್ಗರೆಯುತ್ತಿರುವ ನಾಲ್ಕು ಸಮುದ್ರಗಳಂತೆ, ನಾಲ್ಕು ದಿಕ್ಕುಗಳಲ್ಲಿಯೂ ಮಹೇಂದ್ರ ಸಮಾನವಿಕ್ರಮರೆಂದು ಪ್ರಸಿದ್ಧಿಯನ್ನು ಮೆರೆಯಿಸಿಕೊಂಡಿರುವ ನಿನ್ನ ನಾಲ್ವರು ಸಹೋದರರೊಡನೆ ಮಾರ್ಮಲೆತು ಹೋರಾಡುವ ಶಕ್ತಿಯುಳ್ಳ ವೀರರು ವೈರಿವರ್ಗದಲ್ಲಿ ಇಂದಿನ ತನಕ ಜನ್ಮಕ್ಕೆ ಬಂದಿರುವರೆ? ಅಗ್ರಜ, ವಿರೋಧಿಗಳ ವಿಷಯವಾಗಿ ನಿನ್ನ ಕ್ರೋಧಾನಲವು ಪ್ರಜ್ವಲಿಸಿಕೊಳ್ಳಲಿ! ಧಗಧಗಿಸುವ ಆ ದಳ್ಳುರಿಯು ಬಿಡದೆ ಅರಾತಿಗಳೆಲ್ಲರನ್ನೂ ಕೊನೆಗೊಳಿಸಿ, ವೈರಿವನಿತಾಬಾಷ್ಪ ಪ್ರವಾಹದ ಮೂಲಕ ಶಾಂತವಾಗಲಿ! ಲೋಕದಲ್ಲಿ ಧರ್ಮವು ನಿರಾತಂಕವಾಗಿ ನೆಲೆಗೊಂಡಿರಲಿ!"

ಈ ರೀತಿಯಾಗಿ ಮರುನ್ನಂದನನು ಕ್ರೋಧಾವೇಶದಿಂದ ವೈಮರೆತು ನುಡಿಯುತ್ತಿದ್ದ ಮಾತುಗಳನ್ನು ಧರ್ಮರಾಯನು ಸಹನೆಯಿಂದಲೇ ಕೇಳುತ್ತಿದ್ದನು.

೬. ಯುಧಿಷ್ಠಿರನ ಉಪಸಾಂತ್ವನ

ಲೋಕದಲ್ಲಿ ಶಕ್ತಿಯ ಮಹತ್ವವೇನೂ ಸಾಮಾನ್ಯವಲ್ಲ; ಅದರ ಪ್ರಭಾವದಿಂದಲೇ ವಿರೋಧಿಗಳನ್ನು ಬಗ್ಗುಬಡಿದು ರಾಜ್ಯವನ್ನು ಸಂಪಾದಿಸಿ ಕೊಳ್ಳುವರು. ಶಕ್ತ್ಯಾರಾಧಕರು ಒಮ್ಮೆಗೇ ಹೆಸರಿಗೆ ಬರುತ್ತಿರುವರಾದರೂ ಮೇಧಾವಿಗಳು ಬಲಾಢ್ಯರನ್ನು ತಮ್ಮ ಯುಕ್ತಿಜಾಲದಲ್ಲಿ ಕೆಡಹಿ ತಾವು ನೆಮ್ಮದಿಯಿಂದ ಬಾಳುತ್ತಿರುವರು. ಹೀಗಿರಲು ಯುಕ್ತಿಯೇ, ನಿನ್ನ ಮಹತ್ವದ ಮುಂದೆ ಶಕ್ತಿಯು ತಲೆಯೆತ್ತಬಲ್ಲುದೆ? ಕೆರಳಿದ ಮದಗಜವು ತನ್ನ ಬಲದಿಂದ ಕಾಡಿನ ಮರಗಳನ್ನೆಲ್ಲ ಮುರಿಯುತ್ತ ಸ್ವೇಚ್ಛೆಯಿಂದ ತಿರುಗುತ್ತಿರಬಹುದು; ಆದರೆ ಚುರುಕು ಬುದ್ಧಿಯ ಮನುಷ್ಯನು ಬಲಿಷ್ಠವಾದ ಮತ್ತೇಭವನ್ನೂ ಪಳಗಿಸುವನೆಂದ ಮೇಲೆ ಯುಕ್ತಿಯು ಬಲವಿಂಪ ಶಕ್ತಿಯನ್ನು ಗೆಲಬಹುದಲ್ಲವೆ!

ವಿವೇಕವಿಲ್ಲದ ಮದ್ದಾನೆಯಂತೆ ಕೋಪದ ಭರದಿಂದ ಹದಗೆಟ್ಟು, "ಪೌರುಷವೇ ಪ್ರಧಾನ"ವೆಂದು ಸಮರ್ಥಿಸಿದ ಭೀಮಸೇನನನ್ನು ಹೇಗಾದರೂ ಉಪಾಯದಿಂದಲೇ ಸಮಾಧಾನಪಡಿಸಬೇಕೆಂದು ಯುಧಿಷ್ಠಿರನು ತನ್ನ ಮನಸ್ಸಿನಲ್ಲಿ ಯೋಚಿಸುತ್ತ ಮೆಲ್ಲಮೆಲ್ಲಗೆ ಹೀಗೆ ಭೀಮನೊಡನೆ ಮಾತಾಡಲುಪಕ್ರಮಿಸಿದನು—

ಸಹಜ, ನಿನ್ನ ಯೋಚನೆಯು ಸಹಜವಾದುದು. ಯೋಗ್ಯವಾದ ಶಬ್ದಸಂಪತ್ತೂ ಹಿತಾರ್ಥವನ್ನು ಪ್ರತಿಪಾದಿಸುವ ಆಧಾರಗಳ ಮಹತ್ತಿಕೆಯೂ ಸೇರಿಕೊಂಡಿರುವ ನಿನ್ನ ಮಾತುಗಳು ತುಲನಾತೀತಗಳು; ಮಾತ್ರವಲ್ಲ, ಕೇಳಿದೊಡನೆ ಒಡಮೂಡುವ ಹೃದಯಾನಂದಕ್ಕೆ ಹೇತುಗಳು. ಸ್ವಚ್ಛವಾದ ಮಣಿದರ್ಪಣದಲ್ಲಿ ಪ್ರತಿಬಿಂಬದ ಸ್ಪಷ್ಟತೆಯು ಕಂಡುಬರು

ವಂತೆ ಆ ವಾಗ್ಜಾಲದ ಮೂಲಕ ನಿನ್ನ ಬುದ್ಧಿಯು ನೆಲೆಯೂ ವ್ಯಕ್ತವಾಗು ತ್ತಿರುವುದು. ಅರ್ಥಗಾಂಭೀರ್ಯವು ತೋರುವಂತೆ, ಪುನರುಕ್ತಿದೋಷವು ತಲೆದೋರದಂತೆ, ಒಂದಕ್ಕೊಂದು ಹೊಂದಿಕೆಯಾಗಿರುವ ಪದಗಳ ಜೋಡಣೆಗಳಲ್ಲವೆ ನಿನ್ನ ವಾಕ್ಯಗಳು! ಯೋಗ್ಯಪದವಿನ್ಯಾಸದ ಚಾತುರ್ಯ ದಿಂದ ಪಾಕಗೊಂಡು, ಸುಶ್ರಾವ್ಯಗಳಾಗಿರುವುದರಿಂದ ಸುಲಭಗ್ರಾಹ್ಯಗಳು.

ತಮ್ಮ! ನೀನೊಮ್ಮೆಗೇ ಮುಂದುವರಿದು "ಬಲವೇ ಮೇಲೆ"ಂಬುದನ್ನು ಶಾಸ್ತ್ರಸಮ್ಮತವೆನಿಸುವಂತೆ ಯುಕ್ತಿಪೂರ್ವಕವಾಗಿ ಸಮರ್ಥಿಸಿದ ರೀತಿಯು ಬಲು ಚೆನ್ನಾಗಿರುವುದು. ಕ್ಷಾತ್ರತೇಜದಿಂದ ಮೆರೆಯುವ ನೀನು, ನಿನ್ನ ಮನಸ್ಸಿನ ವಿಚಾರವನ್ನು ಸ್ಪಷ್ಟಪಡಿಸಿಕೊಂಡುದರಲ್ಲಿ ಆಶ್ಚರ್ಯವೇನೂ ತೋರುವುದಿಲ್ಲ. ವಿಷಯವನ್ನು ನೀನು ಸರಿಯಾಗಿ ಸಮರ್ಥಿಸಿಕೊಂಡಿ ರುವೆಯಾದರೂ, ಅದರಿಂದ ನನ್ನ ಬಗೆಯು ತೃಪ್ತಿಹೊಂದದೆ, ಸಂದೇಹ ಪಡುತ್ತ ನಿರ್ಣಯವನ್ನು ಯೋಚಿಸುತ್ತಿರುವುದು. ರಾಜನೀತಿಗೊಪ್ಪುವ ಷಡ್ಗುಣಗಳಲ್ಲಿ ಭಿನ್ನರೀತಿಗಳನ್ನು ನೋಡುತ್ತಿರುವವರು ರಾಜಕಾರ್ಯದಲ್ಲಿ ದೀರ್ಘವಿಚಾರಮಾಡದೆ ನಿರ್ಣಯಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಯಾವ ಕೆಲಸದಲ್ಲಾದರೂ ಸರಿಯಾಗಿ ವಿಚಾರಮಾಡದೆ ದುಡುಕಬಾರದು, ವಿವೇಕಶೂನ್ಯತೆಯೆಂಬುದು ವಿಪತ್ತಿಗೆ ಕಾರಣ. ಯೋಚಿಸುತ್ತ ಕೆಲಸ ಮಾಡುವವನಿಗೆ ಸಂಪತ್ತು ತಾನಾಗಿ ಬರುವುದು. ಐಶ್ವರ್ಯವು ಗುಣ ಪಕ್ಷಪಾತಿಯೆಂಬುದನ್ನು ಮರೆಯಬಾರದು. ಮುಂಗಾರಿನ ಸಮಯ ನೋಡಿ ಬೀಜ ಬಿತ್ತುವವನು ಸರಿಯಾದ ಮಳೆಯ ಪರಿಣಾಮದಿಂದ ಶರ ತ್ಕಾಲದಲ್ಲಿ ಫಲಸಮೃದ್ಧಿಯನ್ನು ಪಡೆಯುವನಷ್ಟೆ! ಬೀಜಗಳಂತಿರುವ ಕೆಲಸಗಳಿಗೆ ವಿವೇಕವೆಂಬ ನೀರನ್ನು ಜಾಗರೂಕತೆಯಿಂದ ಸಿಂಪಿಸುತ್ತಿರು ವವನು ಕರ್ಮದ ಫಲವನ್ನು ತಪ್ಪದೆ ಅನುಭವಿಸುವನು.

ಸರಿಯಾದ ಶಾಸ್ತ್ರಜ್ಞಾನವೇ ಶರೀರಕ್ಕೆ ಭೂಷಣವು; ಶಾಸ್ತ್ರದ ಅರಿ ವಿಗೂ ಸಹನೆಯು ತೊಡವು; ಅಂತಹ ತಾಳ್ಮೆಯನ್ನೂ ಅಲಂಕರಿಸುವುದು ಪರಾಕ್ರಮವು; ಜಗತ್ಪ್ರಸಿದ್ಧವಾದ ಶೌರ್ಯವನ್ನೂ ವಿವೇಕಸಾಧ್ಯವಾದ ಕಾರ್ಯಸಿದ್ಧಿಯು ಭೂಷಿಸುವುದೆಂದರೆ, ವಿವೇಕದ ಮಹಿಮೆಯನ್ನು ವಿವರಿಸಲು ಸಾಧ್ಯವಿಲ್ಲ. ಒಬ್ಬೊಬ್ಬರ ವಿಚಾರಸರಣಿಯೂ ವಿಭಿನ್ನವಾಗಿ

ಮುಂದುವರಿಯುತ್ತಿರುವುದರಿಂದ, ಸರ್ವವಿಷಯಗಳ ಜ್ಞಾನವೂ ಒಬ್ಬನಲ್ಲಿರಲು ಸಾಧ್ಯವಿಲ್ಲ. ಆದಕಾರಣ ಆತನು ಪರರ ಸಹಾಯದಿಂದ ಕಾರ್ಯವನ್ನು ಸಾಧಿಸಬೇಕು. ಅಭ್ಯಾಸವುಳ್ಳವನು ಜನರ ಕಣ್ಣಿಗೆ ಕಾಣಿಸಿಕೊಳ್ಳದಂತೆ ಭೂಮಿಯಲ್ಲಿ ಹುದುಗಿಕೊಂಡಿರುವ ನಿಕ್ಷೇಪವನ್ನು, ಗಾಳಿಯ ತೊಂದರೆಯಿಲ್ಲದೆ ಒಂದೇ ಸವನೆ ಉರಿಯುತ್ತಿರುವ ದೀಪದ ಸಹಾಯದಿಂದ ಅಂಜನದ ಮೂಲಕ ಕಂಡುಕೊಳ್ಳುವನಷ್ಟೆ! ಹಾಗೆಯೇ ಕಾರ್ಯವನ್ನು ಸಾಧಿಸಿಕೊಳ್ಳುವುದಕ್ಕಾಗಿ ತಾನೇನು ಮಾಡಬೇಕೆಂದರಿಯದೆ, ಮನಸ್ಸಿಗೆ ಕವಿದಿರುವ ಅಜ್ಞಾನವನ್ನು ಮೊದಲು ಸರಿಯಾಗಿ ಅಭ್ಯಾಸ ಮಾಡಿಕೊಂಡ ಶಾಸ್ತ್ರಜ್ಞಾನದ ಮೂಲಕ ಪರಿಹರಿಸಿಕೊಂಡು, ತಕ್ಕ ಹಾಗೆ ಕಾರ್ಯಲಾಭವನ್ನು ಪಡೆದುಕೊಳ್ಳುವುದೇ ಲೋಕದ ವಾಡಿಕೆ. ಆದರೆ ಮಹಾತ್ಮರ ವರ್ತನೆಯನ್ನೇ ಅನುಸರಿಸುತ್ತಿರುವ ಸಜ್ಜನರಿಗೂ ಕೆಲವು ವೇಳೆ ಸಂಕಷ್ಟವು ಬಂದೊದಗುವುದುಂಟು. ಆಗ 'ಅವನ ಕರ್ಮಕ್ಕೆ ತಕ್ಕ ಪ್ರತಿಫಲ'ವೆಂಬುದಾಗಿ ಮಾತ್ರ ನಾವದನ್ನು ತಿಳಿದುಕೊಳ್ಳಬಾರದು. ದೈವದತ್ತವಾಗಿ ಬರುತ್ತಿರುವ ಆ ವಿಪತ್ತನ್ನು ಕೆಡುಕೆಂದು ಭಾವಿಸದೆ, ಒಳ್ಳೆಯದನ್ನಾಗಿ ಗ್ರಹಿಸಿಕೊಳ್ಳಬೇಕು. ಅತ್ಯಂತ ಜಾಗ್ರತೆಯಿಂದ ಸರಿಯಾಗಿ ಪುರುಷಪ್ರಯತ್ನವನ್ನು ಮಾಡುತ್ತಿದ್ದರೂ, ದೈವವು ಅಗೋಚರವಾಗಿ ತನ್ನ ಮೇಲ್ಮೆಯನ್ನೇ ತೋರಿಸುವುದೆಂದರೆ, ಲೋಕದಲ್ಲಿ ಪೌರುಷಕ್ಕಿಂತ ದೈವವೇ ಮೇಲಲ್ಲವೆ?

ಜಯವನ್ನೊಲಿಸಿಕೊಳ್ಳಬೇಕೆಂದು ಬಯಸುವ ಕ್ಷತ್ರಿಯೋತ್ತಮನು ಸಿಟ್ಟನ್ನು ಸಂಪೂರ್ಣವಾಗಿ ಪರಿಹರಿಸಿಕೊಂಡು, ಕೇವಲ ಶಾಂತತೆಯಿಂದಲೇ ಉತ್ತರೋತ್ತರಾಭಿವೃದ್ಧಿಯ ಕಾರ್ಯಸಿದ್ಧಿಯನ್ನು ನಿಶ್ಚೈಸಿದ ಮೇಲೆ, ತನ್ನ ಪೌರುಷವನ್ನು ಕಾರ್ಯರೂಪದಲ್ಲಿ ತೋರಿಸಿಕೊಳ್ಳುವನು. ಸಂಕಷ್ಟದಿಂದ ಪಾರಾಗಿ ಏಳಿಗೆಯ ಹಂತವನ್ನೇರಬೇಕಾದರೆ ಮೊದಲು ಕೋಪವನ್ನು ತೀರಾಬಿಡಬೇಕು. ಹಾಗಾದರೆ ತಾನೇ ಮನಸ್ಸಿಗೆ ಕವಿದಿರುವ ಅಜ್ಞಾನವನ್ನು ವಿವೇಕದಿಂದ ಪರಿಹರಿಸಿಕೊಳ್ಳಲು ಸಾಧ್ಯವಾಗುವುದು. ಭಗವಾನ್ ಭಾಸ್ಕರನಾದರೂ, ನಿಶೀಥಿನಿಯು ಲೋಕದಲ್ಲಿ ಪಸರಿಸಿಕೊಂಡಿರುವ ಕತ್ತಲೆಯನ್ನು ಮೊದಲಾಗಿ ತನ್ನ ಕಿರಣಗಳ ಮೂಲಕ ಪರಿ

ಹರಿಸಿಕೊಂಡ ಮೇಲಲ್ಲವೆ ಉದಯಕ್ಕೆ ಬಂದು ತೊಳಗಿ ಬೆಳಗುತ್ತಿರುವುದು? ಬಹು ಬಲಶಾಲಿಯೆನಿಸಿದರೂ ಕೂಡ ಅರಸನು, ಸಿಟ್ಟಿನ ಮೂಲಕ ಮನಸ್ಸನ್ನಾವರಿಸಿದ ಅಜ್ಞಾನವನ್ನು ನಿವಾರಿಸಲಾರದೆ ಹೋದರೆ; ಅವನ ಬಲದಿಂದ ಉಪಯೋಗವಿಲ್ಲ. ಅಂತಹ ಕ್ಷತ್ರಿಯವೀರನು ತನ್ನಲ್ಲಿರುವ ಶಕ್ತಿತ್ರಯವನ್ನು ಅಜ್ಞಾನದಿಂದಲೇ ಕಳೆದುಕೊಳ್ಳುವನು. ಕೃಷ್ಣಪಕ್ಷದ ತಾಮಸಿಯು ಚಂದ್ರನ ಕಲೆಗಳನ್ನು ನಷ್ಟಪಡಿಸದೆ ಬಿಡುವುದುಂಟೆ?

ಸಹನೆಯ ಬಲದಿಂದ ಹೆಚ್ಚುಕುಂದಿಲ್ಲದೆ ಸಮಾನ ರೀತಿಯಿಂದ ಸುಮ್ಮನಿದ್ದು, ಸಮಯ ಬಂದಾಗ ಮಾತ್ರ ಸಹನೆಯನ್ನು ತೊರೆದು ಪರಾಕ್ರಮವನ್ನವಲಂಬಿಸುವವನು ತನ್ನ ಪ್ರಭಾವದಿಂದ ಲೋಕವನ್ನಾಕ್ರಮಿಸಿಕೊಳ್ಳುವನು. ಸೂರ್ಯನಾದರೂ, ಅಯನಗಳ ಮಧ್ಯಕಾಲದಲ್ಲಿ ಭೂಮಧ್ಯರೇಖೆಯನ್ನನುಸರಿಸಿ, ಶೈತ್ಯೋಷ್ಣಗಳ ವಿಷಯದಲ್ಲಿ ಸಮವರ್ತಿಯಾಗಿರುತ್ತ, ಉತ್ತರಾಯಣಕಾಲದಲ್ಲಿ ಶೈತ್ಯವನ್ನು ತ್ಯಜಿಸಿ ಪ್ರಾಬಲ್ಯದಿಂದ ಲೋಕವನ್ನೇ ತನ್ನ ಕಡೆಗೆ ಸೆಳೆದುಕೊಳ್ಳುವುದಿಲ್ಲವೆ? ಎಂದೆಂದಿಗೂ ಸ್ಥಿರನಾಗಿ ತನ್ನಲ್ಲಿರಬೇಕೆಂದು ಸಂಪತ್ತನ್ನು ತಡೆದಿರಿಸಲು ಸಾಧ್ಯವಿಲ್ಲ. ದುರ್ಮಾರ್ಗಗಳಲ್ಲಿ ಹರಿಯುವ ಇಂದ್ರಿಯಾಶ್ವಗಳನ್ನು ತಡೆದು ಹತೋಟಿಯಲ್ಲಿರಿಸುವುದು ಸುಲಭವಲ್ಲ. ಐಶ್ವರ್ಯಗಳು ಶರತ್ಕಾಲದ ಮೋಡಗಳಂತೆ, ಮಿಂಚಿನ ಗೊಂಚಲಂತೆ ಚಂಚಲಗಳು; ಮಾತ್ರವಲ್ಲ ಸ್ಖಲನಶೀಲಗಳು ಧೈರ್ಯದಲ್ಲಿ ಮಂದರಾಚಲವನ್ನೂ ತಿರಸ್ಕರಿಸುತ್ತಿದ್ದ ಸಹೋದರನೆ, ನೀನು ಇಂದೇಕೆ ಹೀಗೆ ಚಂಚಲಮನಸ್ಕನಾಗಿರುವೆಯೆಂಬುದನ್ನಾದರೂ ಯೋಚಿಸಿರುವೆಯಾ! ನಿನ್ನ ಮನಸ್ಸು ಬಹಳ ಆತುರಗೊಂಡಿದೆ. ನಿನ್ನಲ್ಲಿ ನೆಲಸಿದ್ದ ಧೈರ್ಯಗುಣವೇ ಇಂತಹ ಅಕಾಲದಲ್ಲಿ ತ್ವರೆಗೊಂಡಿರುವ ನಿನ್ನ ಮಾನಸಾಂಬುಧಿಯನ್ನು ಮೇರೆ ಮೀರಿ ಹರಿಯುವಂತೆ ಉಕ್ಕಿಸುತ್ತಿರುವುದು. "ಕಾಲವಿಪರ್ಯಯವು ಅನರ್ಥಪರಂಪರೆಗೆ ನಿದಾನ"ವೆಂಬುದನ್ನು ಮರೆಯಬಾರದು. ಸರಿಯಾಗಿ ಶಾಸ್ತ್ರಪರಿಚಯಮಾಡಿಕೊಂಡವನಾದರೂ, ತನ್ನ ಶರೀರದಲ್ಲೇ ಹುಟ್ಟಿ ಬಳೆದು ತಲೆದೋರುವ ಷಡ್ವೈರಿಗಳನ್ನು ತಡೆಯಲಾರದೆ ಹೋದರೆ, ಅವನ ಸಿರಿಯು ಸಂಚಯವೂ ಬರಿದಾಗುವುದಲ್ಲದೆ, ಕೀರ್ತಿಯೂ ಅವನನ್ನು ವಂಚಿಸುವುದು. ಅನುಕೂಲ

ಸಹಾಯಸಮೃದ್ಧಿಯಿಲ್ಲದ ಕಾಲದಲ್ಲಿ ತೋರಿಕೊಡ ಕೋಪವು, ತನ್ನ ಶರೀರವನ್ನೂ ಇಂದ್ರಿಯವರ್ಗವನ್ನೂ ಸಂತಾಪಗೊಳಿಸುವುದು; ನೀತಿಯಿಂದ ದೊರೆಯಬಹುದಾಗಿದ್ದ ಫಲವೂ ದೊರಕದೆ, ತನ್ನ ನಾಶವನ್ನು ತಾನೇ ಮಾಡಿಕೊಂಡಂತಾಗುವುದು. ಆದುದರಿಂದ ಕ್ಷಮೆಯೇ ಮುಂದಿನ ಏಳಿಗೆಗೆ ಕಾರಣವು; ಕ್ಷಮೆಯಿಂದಲೇ ಮಾಡಿದ ಕರ್ಮಕ್ಕೆ ತಕ್ಕ ಫಲವೂ ದೊರಕುವುದು; ತನಗೇನೂ ಹಾನಿಯಿಲ್ಲದಂತೆ ಶತ್ರುವಿನಾಶವೂ ಕ್ಷಮೆಯಿಂದಲೇ ಸಾಧ್ಯವಾಗುವುದೆಂದರೆ, ಸಹನೆಗೆ ಸರಿ ಹೋಲುವುದು ಬೇರೊಂದಿಲ್ಲ.

ತಮ್ಮ ಭೀಮಸೇನ! 'ತಗ್ಗಿದ ಗದ್ದೆಗೆ ಮೂರು ಬೆಳೆ' ಎಂಬ ನಾಡಗಾದೆಯೆಂದಿಗೂ ಸುಳ್ಳಾಗದು. ನಾವು ಸದಾಕಾಲವೂ ವಿನಯದಿಂದಲೇ ಯಾದವರನ್ನು ಮನ್ನಿಸುತ್ತಿರುವೆವು. ದುರಹಂಕಾರಿಯಾದ ಸುಯೋಧನನನ್ನು ಅವರೆಂದಿಗೂ ಅನುಸರಿಸಲಾರರು. ಆದುದರಿಂದ ನಾವೀಗ ನಿರಾಶರಾಗಬೇಕಾಗಿಲ್ಲ. ಕೌರವನ ಆಶ್ರಯದಲ್ಲಿರತಕ್ಕ ಕೆಲವು ಮಂದಿ ಯಾದವಬಂಧುಗಳಾದರೂ ಉಪಜೀವನದ ದೃಷ್ಟಿಯಿಂದ ಮಾತ್ರ ಅವನನ್ನಾಶ್ರಯಿಸಿಕೊಂಡು ಕಾಲಯಾಪನೆಯನ್ನು ಮಾಡುತ್ತಿರಬಹುದಲ್ಲದೆ,ಸಮಯಾನುಸಾರವಾಗಿ ಅವರೆಲ್ಲರೂ ನಮ್ಮನ್ನು ಬಿಡಲಾರರು. ನಾವೀಗ ಧರ್ಮಕ್ಕನುಸಾರವಾಗಿ ದುರ್ಯೋಧನನ ನಿಬಂಧನೆಯನ್ನನುಸರಿಸುತ್ತ ಕಾಲಯಾಪನೆಮಾಡಬೇಕು. ಅವಧಿಯು ಮುಗಿದ ಕೂಡಲೆ, ಉದಯಾಚಲವನ್ನಡರುವ ಸೂರ್ಯನ ದೆಸೆಯಿಂದ ತಿಮಿರಸಂಕುಲದ ಹುಟ್ಟಡಗುವಂತೆ, ದರ್ಪೋದ್ಧತನಾದ ನಿನ್ನ ಆಕ್ರಮಣದಿಂದ ದುಷ್ಟರಾಜರೆಲ್ಲರೂ ಭೇದಿಸಲ್ಪಡುವುದರಲ್ಲಿ ಸಂದೇಹವಿಲ್ಲ.

ದುರಹಂಕಾರಿಗಳಾದ ಕೌರವರು, ತಮಗೆ ಸಹಾಯಕರಾಗಿ ಬರತಕ್ಕ ಕ್ಷತ್ರಿಯೋತ್ತಮರನ್ನು ತಮ್ಮ ಉದ್ದುರುಟುತನದಿಂದ ಅವಮಾನಪಡಿಸದೆ ಬಿಡಲಾರರು. ಪಾಮರರೂ ಕೂಡ ಅವಮಾನವನ್ನು ಸಹಿಸಲಾರರು. ಆದುದರಿಂದ ಕ್ಷತ್ರಿಯೋತ್ತಮರು ಧಾರ್ತರಾಷ್ಟ್ರರ ದುರಹಂಕಾರದ ಫಲವಾಗಿ ದೊರಕಬಹುದಾದ ಮಾನಹಾನಿಯನ್ನು ಸಹಿಸಿಕೊಂಡು, ಅವರಿಗೆ ನೆರವಾಗುವುದು ತೋರಿಕೆಗೆ ಮಾತ್ರವಲ್ಲದೆ, ಹೃತ್ಪೂರ್ವಕವಾಗಿ ಸಹಾಯ

ಕರಾಗುವುದಂತೂ ಸಲ್ಲದ ಮಾತು. ದುರಹಂಕಾರಿಗಳು ಯಾವ ಕೆಲಸದ ಲ್ಲಾದರೂ ಸಂಪತ್ತಿನ ಪ್ರಯೋಜನವನ್ನು ಹೊಂದಲಾರರು. ಒಂದು ವೇಳೆ ಅವರಿಗೆ ಸಂಪತ್ತು ಸಹಾಯವನ್ನೊದಗಿಸುವುದಾಗಿದ್ದರೂ, ಆ ಮದೋದ್ಧತರು ಕೋಪದ ಭರದಿಂದ ಅದನ್ನು ಕಳೆದುಕೊಳ್ಳುವರು. ದುಷ್ಟರ ಸಂಪತ್ತು ಅನರ್ಥಪರಂಪರೆಗೆ ಹೇತುವೆಂಬುದು ಲೋಕಸಮ್ಮತವು. ಅಹಂಕಾರದರ್ಪಗಳಿಂದಲೇ ಅರಸನು ಮೂಢನಾಗುವನು; ಆ ಮೌಢ್ಯವೇ ಅವನನ್ನು ಕರ್ತವ್ಯದಿಂದ ತಳ್ಳಿಬಿಡುವುದು; ಕರ್ತವ್ಯಪರಾಙ್ಮುಖನು ನೀತಿಯನ್ನು ತುಚ್ಛೀಕರಿಸುವನು. ನೀತಿಗೆಟ್ಟವನನ್ನು ಲೋಕವೇ ಬಿಟ್ಟುಬಿಡುವುದು. ಆದುದರಿಂದ ಅಹಂಕಾರವೇ ವಿನಾಶಕಾರಿಯಾದ ಕಡು ವೈರಿಯು.

ಬಹಳ ದೊಡ್ಡದಾಗಿ ಬೆಳೆದ ಮರವಾದರೂ ತನ್ನ ಬೇರುಗಳನ್ನು ಕಳೆದುಕೊಂಡು, ಭೂಮಿಯ ಮೇಲೆ ನಿತ್ತುಕೊಳ್ಳಲಾಪುದೆ? ಇದಿರಾಗಿ ಗಾಳಿ ಬೀಸಿತೆಂದರೆ ಹೇಳುವುದೇನು! ಚಕ್ರವರ್ತಿಯೆನಿಸಿದವನಾದರೂ ಸ್ವಜನರ ಸಹಾಯವನ್ನು ಕಳೆದುಕೊಂಡರೆ, ವೈರಿಗಳ ದೆಸೆಯಿಂದ ರಾಜ್ಯಕೋಶ ಪರಿವಾರ ಮೊದಲಾದ ತನ್ನ ಸರ್ವಸ್ವವನ್ನೂ ಕಳೆದುಕೊಳ್ಳುವನು. ಬೇರು ಕೊಂಬೆ ಎಲೆ ಮೊದಲಾದ ಸಕಲಾವಯವಗಳಿಂದಲೂ ಕೂಡಿರುವ ಮರವು ಭೂಮಿಯಲ್ಲಿ ಸ್ಥಿರವಾಗಿದ್ದು ಬೆಳೆಯುವಂತೆ, ರಾಜನು ಸಪ್ತಾಂಗಬಲ ಸಮನ್ವಿತನಾಗಿ ಪ್ರಬಲನೆನಿಸಬೇಕು. ಹಾಗಿರಲು ಮಂತ್ರಿಮೊದಲಾದವರಲ್ಲಿ ವೈರವು ಲೇಶವಾದರೂ ತೋರಿತೆಂದರೆ, ಅದೇ ವೈರವೇ ಕ್ರಮವಾಗಿ ಬೆಳೆದು ಸ್ವಾಮಿಯನ್ನು ಸಂಪೂರ್ಣವಾಗಿ ಕೆಡಿಸಿ ಬಿಡುವುದು. ಮರದ ಕೊಂಬೆಗಳು ಒಂದನ್ನೊಂದು ತೀಡುತ್ತಿರುವಾಗ ಉಂಟಾದ ಬೆಂಕಿಯ ಕಿಡಿಯು ಪರ್ವತವನ್ನೇ ದಹಿಸದೆ ಬಿಡುವುದಿಲ್ಲ.

ವೈರಿಯು ಕಡು ದುಷ್ಟನಾಗಿದ್ದರೂ ಪ್ರಬಲನಾಗಿದ್ದರೆ, ವಿವೇಕಶಾಲಿಯಾದವನು ಅವನ ಕಷ್ಟಕಾಲವನ್ನು ಸಹನೆಯಿಂದಲೇ ಹಾರೈಸುತ್ತಿದ್ದು, ತಕ್ಕ ಸಮಯವು ದೊರೆತಾಗಲೇ ಅವನನ್ನು ಜಯಿಸಿಕೊಳ್ಳುವನು. ಮದೋದ್ಧತರ ಸಮೃದ್ಧಿಯು ಅನರ್ಥದ ಕೊನೆಯನ್ನೇ ಕಾಣುತ್ತಿರುವುದು. ಸೇವಕವರ್ಗದ ಹಾಗೂ ಪ್ರಜಾವರ್ಗದ ದೃಷ್ಟಿಯಿಂದ ಅಯೋಗ್ಯನೆನಿಸಿ

ದವನ ಪ್ರಭುತ್ವವು ನೆಲೆನಿಲ್ಲಲಾರದು. ಪ್ರವಾಹವು ಜೀರ್ಣವಿದೀರ್ಣವಾದ ದಂಡೆಯನ್ನು ಕೊಚ್ಚಿಕೊಂಡು ಹೋಗುವ ಹಾಗೆ ಸಮಯವನ್ನು ಹಾರೈಸುತ್ತಿರುವ ಶತ್ರುವು ಫಕ್ಕನೆ ಮೇಲೆ ಬಿದ್ದು, ಅವನ ರಾಜ್ಯವನ್ನು ಸುಲಭವಾಗಿ ಅಪಹರಿಸಿಕೊಳ್ಳುವನು. "ಸಕಾಲವೇ ಸಕಲಕ್ಕೂ ಮೂಲ" ವೆಂಬುದನ್ನು ಮರೆಯಲಾಗದು."

ಈ ರೀತಿಯಾಗಿ ಧರ್ಮಜನು ವಿರೋಧಿಗಳ ವಿಷಯದಲ್ಲಿ ಕ್ಷೋಭಗೊಂಡಿರುವ ಭೀಮಸೇನನನ್ನು ಲೋಕಸಮ್ಮತವಾದ ಉಪದೇಶಮಾರ್ಗದಿಂದ ಸಮಾಧಾನಪಡಿಸುತ್ತಿದ್ದನು.

---

೭. ವ್ಯಾಸನ ಉಪದೇಶ

ಪ್ರಪಂಚರಂಗದಲ್ಲಿ ಒಬ್ಬರನ್ನೊಬ್ಬರು ವಿರೋಧಿಸುವ ದಾಯವಾದಿಗಳಂತೆ, ಸಮಾನ ಶಕ್ತಿಯ ಸುಖದುಃಖಗಳು ನಿರಾತಂಕವಾಗಿ ತಮ್ಮ ಹೋರಾಟವನ್ನು ನಡೆಸುತ್ತಿರುವುವು. ಲೋಕವು ಸುಖೈಕದೃಷ್ಟಿಯಿಂದ ಸುಖವನ್ನು ಮಾತ್ರ ಸ್ವಾಗತಿಸುವುದು; ದುಃಖಲೇಶವನ್ನಾದರೂ ಸಹಿಸಲಾರದೆ ಮರುಗುತ್ತಿರುವುದು. ಜಗನ್ನಿಯಾಮಕನೇ, ನಿನಗೆ ಜನರ ಈ ತೆರದ ಗೋಳು ಕೇಳಿಸದಿರುವುದೆ? ಅಥವಾ ದುಃಖದಿಂದಲೇ ಸುಖದ ಸವಿಯೆಂದು ತಟಸ್ಥನಾಗುವೆಯಾ! ದೇವದೇವಾ, ನಿನ್ನ ಮಹಿಮೆಯು ಅಚಿಂತ್ಯವೂ ಅಗಾಧವೂ ಎನಿಸಿರುವುದರಿಂದಲೇ ಪ್ರಪಂಚದಲ್ಲಿ ತೊಳಲುವವರು ನಾನಾ ಬಗೆಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿದೆ.

ಅಂಧಕಾರದ ಪ್ರಾಬಲ್ಯದಿಂದ ಲೋಕವೇ ಮೈಮರೆತು ನಿದ್ರಿಸುತ್ತಿತ್ತು. ಧರ್ಮಜನು ತಮ್ಮನಾದ ಭೀಮಸೇನನನ್ನು ಬಗೆಬಗೆಯಿಂದ ಬೋಧಿಸುತ್ತಿದ್ದನೇನೋ ನಿಜವು. ಆದರೂ ಬೋಧಕನ ಹೃದಯವು ಬಿಡಿಸಲಾರದ ಒಗಟಿನಿಂದ ಪಾಡುಪಡುತ್ತಿತ್ತು. "ರಾಜ್ಯಕೋಶಗಳನ್ನೂ ಪ್ರಜಾಪರಿವಾರಗಳನ್ನೂ ಕಳೆದುಕೊಂಡು ಪತ್ನೀಸಹೋದರರನ್ನು ಕಷ್ಟಪಡಿಸಿದೆನು. ಅವರಿಂದು ಮನೋವ್ಯಥೆಯನ್ನು ತಡೆಯಲಾರದೆ, ತಮ್ಮ ಮನೋರಥವನ್ನು

ಹೊರಗೆಡಹಿದರೆ, ಅದನ್ನು ನಾನಿಂದು ಧರ್ಮೋಪದೇಶದಿಂದ ತಡೆಯುತ್ತಿರುವುದು ಸರಿಯೆ? ಗಂಟೆಗೊಂದೇ ಸ್ವರವಾದರೆ ಕೇಳುವವರಿಗೆ ಬೇಸರವಲ್ಲವೆ? ಧರ್ಮದ ಸೋಗಿನಿಂದ ಶ್ರೋತೃಗಳನ್ನು ವಂಚಿಸುವ ಗೋಮುಖವ್ಯಾಘ್ರನಂತೆ ನಮ್ಮವರ ಮನೋವ್ಯಥೆಗೆ ಕಾರಣವಾದ ನನ್ನ ಜನ್ಮವು ನಿರರ್ಥಕವಲ್ಲವೆ? ದೇವದೇವಾ! ಈ ಸಿಲುಕಿನಿಂದ ಪಾರಾಗಲು ದಾರಿ ತೋರಿಸಲಾರೆಯಾ" ಎಂದು ತಳಮಳಿಸುತ್ತ ಧರ್ಮಜನ ಅಂತರ್ಯವು ಅಜ್ಞಾನದ ಪ್ರಾಬಲ್ಯದಿಂದ ಪೀಡಿತವಾಗಿದ್ದುದರಿಂದ, ಆತನು ನಿದ್ರೆಯನ್ನು ಕಾಣದಾದನು.

"ವಿಶ್ವವನ್ನಾವರಿಸಿ ತನ್ನ ಮೇಲ್ಮೆಯನ್ನು ಮೆರೆಯಿಸಿಕೊಳ್ಳುವ ನಿಶೀಥಿನಿ, ನಿನ್ನ ಪ್ರಾಬಲ್ಯವು ಜಾರಚೋರನಿಕರಕ್ಕೆ ಸುಖಕರವು. ಸಜ್ಜನರನ್ನೊರಗಿಸಿ ದುರ್ಜನರನ್ನು ಪೋಷಿಸುವ ತಾಮಸಿ, ನಿನ್ನಲ್ಲಿ ಈ ಬಲ್ಮೆಯೇ ನೆಲಸಿರಲಾರದು. ಸದ್ವರ್ತನೆಯನ್ನು ನಿರೋಧಿಸುತ್ತಿರುವ ನೀನು ಬೇಗನೆ ರೋದಿಸಲಿರುವೆ! ಹಾಳಾದ ನಿನ್ನ ಆಳಿಕೆಯ ವಿಷಯವಾಗಿ ದಿನಾಧಿಪನೊಡನೆ ಈಗಲೇ ಮೊರೆಯಿಡುವೆನು" ಎಂಬ ಹಾಗೆ ಕೂಗಿಕರೆಯುತ್ತಿರುವಂತೆ ಕೋಳಿಯ ಕೂಗು ಪರಿವಿಡಿಯಿಂದ ಕೇಳಿಸುತ್ತಿತ್ತು. ಯೋಚನಾಮಗ್ನನಾಗಿದ್ದ ಧರ್ಮಜನು ಅದನ್ನು ಕೇಳಿ ಬೇಗನೆ ಎದ್ದು ನಿತ್ಯದ ಆಹ್ನಿಕಕ್ರಿಯೆಗಳನ್ನು ತೀರಿಸಿಕೊಂಡು ಬಂದನು. ವಿಶ್ವಶಾಂತಿಯನ್ನು ಬಯಸುತ್ತಿದ್ದನಾದರೂ ಶಾಂತಿಯಿಲ್ಲದವನಾಗಿ, ಪ್ರಶಾಂತ ರೀತಿಯನ್ನನುಸರಿಸಿ ಪ್ರಕೃತಿಯೊಡನೆ ಶಾಂತಿ ಪಾಠವನ್ನು ಮನನಮಾಡತೊಡಗಿದನು.

ಆ ವೇಳೆಗೆ ಸರಿಯಾಗಿ ಯುಧಿಷ್ಠಿರನ ಮನೋರಥವೇ ಮೂರ್ತೀಭವಿಸಿ ಬಂದಂತೆ, ಕೃಷ್ಣದ್ವೈಪಾಯನಮಹರ್ಷಿಯು ಅಲ್ಲಿಗೆ ಬಂದನು. ಆ ಮಹಾತ್ಮನು ಪ್ರಶಾಂತವಾದ ತನ್ನ ನೋಟದಿಂದ ಜೀವಜಾಲಗಳ ಅಂತರಾಳವನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತ ಶಾಂತಿಯನ್ನು ತುಂಬಿಸುತ್ತಿದ್ದನು. ಅವರನ್ನಾವರಿಸಿಕೊಂಡಿದ್ದ ಪಾಪಸಂಚಯವನ್ನು ಸುಟ್ಟುರುಹುವ ತೇಜೋವಿಶೇಷದಿಂದ ದೇದೀಪ್ಯಮಾನನಾಗಿದ್ದೂ, ನೋಡಲು ಪ್ರಶಾಂತನಾಗಿದ್ದನು. ತಪೋವಿಶೇಷಗಳ ಆಗರವೆನಿಸುವ ಆ ಪುಣ್ಯಮೂರ್ತಿಯು ತನ್ನ ವಿಪತ್ತುಗಳನ್ನು ಪರಿಹರಿಸುವ ಸಲುವಾಗಿ ಫಕ್ಕನೆ ಬರುತ್ತಿರುವುದನ್ನು

ನೋಡಿ ಧರ್ಮರಾಜನು ಬೆರಗಾಗಿ– "ಭಾಗ್ಯವೇ ಶರೀರವನ್ನು ಪಡೆದು ಬೆಳ
ಗುತ್ತಿರುವುದು" ಎಂದು ತಿಳಿದುಕೊಳ್ಳುತ್ತ, ಬೇಗನೆ ಪೀಠದಿಂದೆದ್ದು ಬಂದು
ಮುನಿಯನ್ನಿದಿರುಗೊಂಡನು. ಧರ್ಮರಾಜನಾಗ ಮಹಾಮಹಿಮನ ತೇಜಃ
ಪ್ರಸರಣೆಯಿಂದ ಕಂಪಿತಾರುಣವಲ್ಕಲನಾಗಿ, ಮೇರುಶಿಖರದ ದೆಸೆಯಿಂದ
ಉದಯಿಸಿ ಬರುವ ಸೂರ್ಯನಂತೆ ಬೆಳಗುತ್ತ, ಶ್ರದ್ಧಾಭಕ್ತಿಗಳೊಡನೆ
ಶಾಸ್ತ್ರೋಕ್ತವಿಧಿಯಿಂದ ಮಹರ್ಷಿಯನ್ನು ಸತ್ಕರಿಸಿ ಶಾಸ್ತ್ರಶ್ರವಣದಲ್ಲಿ ಅಂತ
ರಾತ್ಮನನ್ನು ನೆಲೆನಿಲ್ಲಿಸುವಂತೆ, ಅತಿಥಿಯನ್ನು ಉಚಿತಾಸನದಲ್ಲಿ ಕುಳ್ಳಿರಿಸಿ
ದನು. ತೇಜಸ್ವಿಯಾದ ಮುನಿಯ ಮುಂದೆ ನಿತ್ತುಕೊಂಡು ಮಂದಹಾಸ
ವನ್ನು ಹೊರಸೂಸುವ ತುಟಿಗಳಿಂದ ಶೋಭಿಸುತ್ತಿದ್ದ ಧರ್ಮರಾಜನು,
ತೇಜೋವಿಶೇಷದಿಂದ ರಾರಾಜಿಸುವ ಬೃಹಸ್ಪತಿಯ ಮುಂದೆ ನಿಂತ ಪೂರ್ಣ
ಚಂದ್ರನಂತೆ, ಶೋಭಾತಿಶಯದಿಂದ ಕಂಗೊಳಿಸುತ್ತಿದ್ದನು. ಪೀಠವನ್ನ
ಲಂಕರಿಸಿದ ತಪಸ್ವಿಯ ಉನ್ನತವಾದ ಆ ಶ್ಯಾಮಲಕೋಮಲಮೂರ್ತಿಯು,
ಶರಚ್ಚಂದ್ರನ ಕಿರಣಗಳೆಂಬ ಪಿಂಗಲವರ್ಣದ ಜಡೆಗಳಿಂದೊಪ್ಪುತ್ತ, ಕಮ
ನೀಯಕಾಂತಿಯನ್ನು ಪಸರಿಸುವ ಮಿಂಚುಗಳ ಗೊಂಚಲಿಂದ ಶೋಭಿ
ಸುವ ಮೋಡದಂತೆ, ನೋಡಲು ಬಹಳ ಅದ್ಭುತಕರವಾಗಿತ್ತು. ಅಸಾ
ಮಾನ್ಯವಾದ ಆ ಆಕೃತಿವಿಶೇಷವು ದರ್ಶನಮಾತ್ರದಿಂದಲೇ ಪ್ರೇಕ್ಷಕರ
ಮನಸ್ಸಿಗೆ ಸಮಗ್ರವಾಗಿ ಶಾಂತಿಯನ್ನೂ ಕರುಣಿಸುವಂತೆ ಭಾಸವಾಗುತ್ತಿತ್ತು.
ಲೋಕಪೂಜ್ಯನೆನಿಸಿದ ಈ ಮಹಾತ್ಮನನ್ನು ನೋಡಿದವರೆಲ್ಲ ಪ್ರಶಾಂತಚಿತ್ತ
ರಾಗಿಯೂ ತೃಪ್ತರಾಗದೆ ಮಾತಾಡಿ ಧನ್ಯರಾಗಬೇಕೆಂದು ಬಯಸುತ್ತಿದ್ದರು.
ನೋಡಿದೊಡನೆ ಈ ಶಾಂತಮೂರ್ತಿಯು ನಿಷ್ಕರುಣಿಗಳ ಕಠಿನಚಿತ್ತವನ್ನೂ
ಕರಗಿಸುತ್ತಿತ್ತೆಂದರೆ ಕಾರುಣ್ಯಶಾಲಿಗಳ ಪ್ರಭಾವವು ವರ್ಣನಾತೀತವು.

ಅನುಷ್ಠಾನವೇ ಮೊದಲಾದ ಧರ್ಮಾಚರಣೆಗಳಿಂದ ಪಾಪವನ್ನು
ಪರಿಹರಿಸಿ ವೇದಾಂಗನೆಯರ ಜನಕನಂತೆ ಉತ್ತಮೋತ್ತಮನೆನಿಸಿದ ಮುನಿ
ಪುಂಗವನು ದಯಮಾಡಿಸಿದ ಕಾರಣವನ್ನು ತಿಳಿಯುವ ಕುತೂಹಲವು
ಧರ್ಮರಾಜನಿಗುಂಟಾಯಿತು. "ಘನಮಹಿಮ! ಆತಪಸಂತಪ್ತವೆನಿಸಿ ಮೇಲೇಳು
ತ್ತಿರುವ ಧೂಳೀಜಾಲವನ್ನು ಪರಿಹರಿಸುವುದಾಗಿಯೂ, ಸಸ್ಯಾದಿಗಳನ್ನು
ಬೆಳೆಯಿಸುವುದರ ಮೂಲಕ ಲಾಭದಾಯಕವಾಗಿಯೂ ಇದ್ದು, ನೋಡದ

ಚಿಪ್ನೆಯೇನೂ ಇಲ್ಲದೆ ಪುಣ್ಯವಂತರಿಂದ ಮಾತ್ರವೇ ಪಡೆಯಲರ್ಹವಾದ ಮಳೆಯಂತೆ ಸಂಪಾದಿಸಿದ ಪುಣ್ಯಕ್ಕೆ ಶ್ರೇಯಸ್ಸನ್ನೊದಗಿಸುವ, ರಜೋಗುಣ ವನ್ನು ಪರಿಹರಿಸುವ ತಮ್ಮ ದರ್ಶನಲಾಭವು ಪುಣ್ಯವಂತರಿಗೆ ಮಾತ್ರವೇ ದೊರಕಬಹುದು. ಪೂಜ್ಯರಿಲ್ಲಿಗೆ ದಯಮಾಡಿಸಿದುದರಿಂದ ನಾನು ಮಾಡಿದ ಯಾಗಗಳೂ, ಬ್ರಾಹ್ಮಣರ ಆಶೀರ್ವಚನಗಳೂ ಫಲಿಸಿದುವಲ್ಲದೆ, ಪ್ರಾಪಂಚಿಕಜೀವನದಲ್ಲಿ ನಾನಿಂದು ಸಮಸ್ತರ ಬಹುಮಾನಕ್ಕೂ ಪಾತ್ರನಾದೆನೆಂದರೆ, ಮಹಾತ್ಮರ ಆಗಮನದಿಂದ ಸಾಧ್ಯವಾಗದ ಕಾರ್ಯಸಿದ್ಧಿಗಳಾವುವು? ಲೋಕಮಾನ್ಯರ ಸಂದರ್ಶನವು ಪರಬ್ರಹ್ಮದ ಸಾಕ್ಷಾತ್ಕಾರದಂತೆ ಎಲ್ಲವನ್ನೂ ಕೈಗೂಡಿಸುವುದು. ಐಶ್ವರ್ಯವನ್ನು ಸಂಚಿಸುವುದು, ಪಾಪಗಳನ್ನು ಪರಿಹರಿಸುವುದು, ಧರ್ಮಾರ್ಥಕಾಮಮೋಕ್ಷಗಳನ್ನುಂಟು ಮಾಡುವುದು, ಶ್ರೇಯಸ್ಸನ್ನು ಅಭಿವೃದ್ಧಿಗೊಳಿಸುವುದು. ಉದಯಿಸಿ ಬರುವ ಸುಧಾಸೂತಿಬಿಂಬದ ನೋಟದಿಂದಲೂ ತೃಪ್ತಿಹೊಂದದಿರುವ ಈ ಚಕ್ಷುಗಳು ತಮ್ಮ ದರ್ಶನದಿಂದ ಪೂರ್ಣವಾಗಿ ತೃಪ್ತಿಗೊಂಡುವು. ಬಂಧುಗಳ ವಿಯೋಗದಿಂದ ತಲ್ಲಣಿಸುತ್ತಿದ್ದ ಚಿತ್ತವು ತಮ್ಮ ಇದಿರಲ್ಲೇ ತಣಿಯುತ್ತಿದೆ. ನಿಸ್ಪೃಹಚಿತ್ತರಲ್ಲಿ ನನಗೇನೂ ಕೇಳಿಕೊಳ್ಳಲು ಎಡೆಯಿಲ್ಲವಾದರೂ, ಲೋಕಕಲ್ಯಾಣವೇ ಗುರಿಯಾಗಿರುವ ತಮ್ಮ ದೆಸೆಯಿಂದ ಹಿತೋಕ್ತಿಗಳನ್ನು ಕೇಳಬೇಕೆಂಬ ಲವಲವಿಕೆಯು ನನ್ನನ್ನು ಬಹಳವಾಗಿ ಪ್ರೋತ್ಸಾಹಿಸುತ್ತಿರುವುದು."

ಬಂದೊದಗಿದ ಸಂಕಷ್ಟದಿಂದ ತಾನು ಪಾರಾಗುವ ಬಗೆ ಹೇಗೆಂದು ತಿಳಿಯಲು ಕುತೂಹಲದಿಂದ ಹೀಗೆ ಬೇಡಿಕೊಳ್ಳುತ್ತಿದ್ದ ಧರ್ಮಜನೊಡನೆ ವೇದವ್ಯಾಸನು ಚಮತ್ಕಾರವಾಗಿ ಹೀಗೆನ್ನಲುಪಕ್ರಮಿಸಿದನು—"ಯುಧಿಷ್ಠಿರ, ಪ್ರಾಮುಖ್ಯವಾದ ಭೂಷಣವೂ, ಇಹಪರಗಳಲ್ಲಿ ಸಂಪದ್ರೂಪವೂ ಎನಿಸಿರುವ ಶ್ರೇಯಸ್ಸನ್ನು ಗಳಿಸಬೇಕೆಂದು ಬಯಸುವ ಜನರಿಗೆ, ಬಂಧುಗಳ ವಿಷಯದಲ್ಲಿ ಆತ್ಮೀಯತೆಯಿರುವುದು ಯುಕ್ತವೇ ಸರಿ. ನಮ್ಮಂತಹ ತಪಸ್ವಿಗಳಿಗೆ, ನಿಯಮಗಳ ಪರವಾಗಿ ಸಮಾನತೆಯಿರುವುದೊಳ್ಳೆಯದು. ಅರಸ, ನಿನ್ನ ಗುಣವಿಶೇಷಗಳ ಮೂಲಕ ನನ್ನ ಹೃದಯವು ಕರಗಿ ನಿನ್ನ ಅಧೀನವಾಗಿರುವುದು. ರಾಗದ್ವೇಷಾದಿಗಳನ್ನು ತೊರೆದ ಮುಕ್ತಿಮಾರ್ಗಾ

ವಲಂಬಿಗಳೂ ಕೂಡ ಸಜ್ಜನರನ್ನು ಪ್ರೀತಿಸುತ್ತಿರುವರೆಂಬುದು ಅಕ್ಷರಶಃ ನಿಜವು. ಚಂದ್ರವಂಶಲಲಾಮ, ಆ ಧೃತರಾಷ್ಟ್ರಮಹಾರಾಜನಿಗೆ ನೀನೂ ನಿನ್ನ ತಮ್ಮಂದಿರೂ ಮಕ್ಕಳಲ್ಲವೆ? ದಯಾದಾಕ್ಷಿಣ್ಯಾದಿ ಗುಣಗಳಿಂದ ನೀವು ದುರ್ಯೋಧನಾದಿಗಳನ್ನು ಮೀರಿದವರಾಗಿದ್ದರೂ, ಆ ಧೃತರಾಷ್ಟ್ರನು ನಿಮ್ಮನ್ನು ನಿಷ್ಕಾರಣವಾಗಿ ರಾಜ್ಯದಿಂದ ಹೊರಗಟ್ಟಿದನು. ವಿಷಯಾಭಿಲಾಷೆಯ ಮಹತ್ವವು ಅವಿವೇಕವನ್ನೇ ವೃದ್ಧಿಗೊಳಿಸುವುದು ಸಹಜವಲ್ಲವೆ? ಕಾರ್ಯವಿಚಾರದಲ್ಲಿ ಸಂದೇಹ ಬಂದರೆ ಶಕುನಿ ಮೊದಲಾದ ಕುಹಕಿಗಳೊಡನೆ ಯೋಚನೆಮಾಡುತ್ತಿರುವ ಧಾರ್ತರಾಷ್ಟ್ರರ ಅರ್ಥಸಿದ್ಧಿಯು ತೊಲಗದೆ ಸರ್ವಥಾ ನೆಲಸಿರಲಾರದು. ದುಷ್ಟರ ಸಹವಾಸವೇ ಗೆಲುವಿಗೆ ವಿಘ್ನಕಾರಿಯು, ಮಾತ್ರವಲ್ಲ, ಸಂಪೂರ್ಣ ಕೆಡಿಸುವ ಕಷ್ಟಪರಂಪರೆಗಳಿಗೆ ಆಸ್ಪದಕಾರಿಯು. ಆ ದುಷ್ಟರು ಅಂದು ತುಂಬಿದ ಸಭೆಯಲ್ಲಿ ನೀತಿಗೆಟ್ಟು ದ್ರೌಪದಿಯ ಮಾನಭಂಗಮಾಡಲುಪಕ್ರಮಿಸಿದರಷ್ಟೆ! ಆಗ ಧರ್ಮಚ್ಯುತನಾಗದಂತೆ ನೋಡಿಕೊಂಡ ನೀನು, ವಿರೋಧಿಗಳಲ್ಲಿಯೂ ಪ್ರೀತಿಯನ್ನು ಪ್ರಕಟಿಸಿಕೊಂಡು, ಶಾಂತಿದಾನದಯಾದಾಕ್ಷಿಣ್ಯಾದಿ ಗುಣಗಳಲ್ಲಿ ಸಹಜವಾದ ವಿಶ್ವಾಸವುಳ್ಳವನಾಗಿ ಅಜಾತಶತ್ರುವೆಂಬ ಅನ್ವರ್ಥನಾಮದಿಂದಲೇ ಮೆರೆದೆಯು! ಶಾಂತಿಯೇ ಪ್ರಧಾನವೆಂದು ಶತ್ರುಗಳ ವಿಷಯವಾಗಿ ಕೇಡಣಿಸದೆ ಉಪಕಾರವನ್ನೇ ಬಯಸಿ ತನಗಹಿತವನ್ನೇ ತಂದುಕೊಂಡೆಯು! ನಿನ್ನ ಮನೋವೃತ್ತಿಯನ್ನು ಸರಿಯಾಗಿ ತಿಳಿದುಕೊಂಡ ವಿರೋಧಿಗಳು, ನಿನ್ನಿಂದಲೇ ಉಪಕೃತರಾದರು. ನೀನಿನ್ನು ಪೌರುಷದ ಮೂಲಕವೇ ಶತ್ರುಗಳಲ್ಲಿರುವ ರಾಜ್ಯವನ್ನು ಸಂಪಾದಿಸಿಕೊಳ್ಳಬೇಕು. ಅವರಾದರೂ ಸಕಲ ಬಲಸಂಪೂರ್ಣರು. ಧರ್ಮಜನೇ, ನೀನು ಬಲಾಧಿಕ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಏನಾದರೊಂದುಪಾಯವನ್ನು ಕಂಡುಕೊಳ್ಳಬೇಕು.

ಯುದ್ಧದಲ್ಲಿ ಜಯಾಂಗನೆಯು ಶಕ್ತಿಯನ್ನನುಸರಿಸುತ್ತಿರುವುದು ಸಹಜವಷ್ಟೆ! ಶಸ್ತ್ರವಿದ್ಯಾಗುರುವೂ ಕ್ಷತ್ರಿಯಾಂತಕನೂ ಆದ ಭಾರ್ಗವರಾಮನನ್ನು ಅಂಬಿಕಾಸ್ವಯಂವರಕಾಲದಲ್ಲಿ ಸೋಲಿಸಿ ಆತನ ಬಾಯಿಯಿಂದ ತನ್ನ ಶೌರ್ಯಧೈರ್ಯಾದಿಗುಣಗಳನ್ನು ಮನವಾರೆ ಹೊಗಳಿಸಿಕೊಂಡ ಭೀಷ್ಮನ

ಘನತೆಯೂ ಕೀರ್ತಿಯೂ ದಿಗಂತವ್ಯಾಪಿಯಾಗಿರುವುದರಲ್ಲಿ ಸಂದೇಹವಿಲ್ಲ. ಆ ಗಾಂಗೇಯನಲ್ಲಿ ತನ್ನದೇನೂ ನಡೆಯಲಾರದೆಂದು ಹೆದರಿ ಯಮನು ತಾನೇ ಹಿಂಜರಿದಿರುವುದರಿಂದ, ಭೀಷ್ಮನು ಇಚ್ಛಾಮರಣಿಯೆಂದು ಪ್ರಸಿದ್ಧನಾಗಿರುವನು. ಛಲದಂಕಮಲ್ಲನೆನಿಸಿದ ಆ ವೀರಪುಂಗವನು ಕಲಿಯಾಗಿ ರಣಾಂಗಣದಲ್ಲಿ ಬಂದು ಧನುಷ್ಟಂಕಾರ ಮಾಡಿದನೆಂದರೆ, ಹೆದರಿ ನಡುಗದ ಎದೆಗಾರರು ನಿಮ್ಮವರಲ್ಲಿ ಯಾರಿರಬಹುದು? ಯುದ್ಧಾವಸರದಲ್ಲಿ ಬಾಣವರ್ಷವನ್ನೇ ಸುರಿಸುತ್ತ, ಕೋಪದಿಂದ ಕಿಡಿಕಿಡಿಯಾಗಿ ಪ್ರಕಾಶಿಸುತ್ತ, ಸಂಚಲಿಸುವ ಜ್ವಾಲೆಗಳೆಂಬ ನಾಲಗೆಗಳನ್ನು ಚಪ್ಪರಿಸುತ್ತ, ಲೋಕವನ್ನೇ ಭಕ್ಷಿಸಿಬಿಡುವೆನೆಂದು ಮುಂದೊತ್ತುವ ಕಾಲಾಗ್ನಿಯೆಂಬ ದ್ರೋಣಾಚಾರ್ಯನನ್ನು ತಡೆಯಲು ಸಮರ್ಥರಾದವರು ನಿಮ್ಮವರಲ್ಲಿ ಯಾರಾದರೂ ತೋರಬಹುದೆ? ಭಾರ್ಗವರಾಮನಿಂದ ಅಸ್ತ್ರೋಪದೇಶವನ್ನು ಪಡೆದು, ಶಸ್ತ್ರವಿದ್ಯೆಯಲ್ಲಿ ನಿಪುಣನೆನಿಸಿ, ಎಂತಹ ವೀರರ ಕೆಲ್ಲೆದೆಯನ್ನಾದರೂ ಕೋಪದಿಂದ ತಲ್ಲಣಗೊಳಿಸುವ ಕರ್ಣನನ್ನು ನೋಡಿ, ಮೃತ್ಯುದೇವತೆ ತಾನೇ ವಿಶೇಷವಾಗಿ ಭಯವನ್ನನುಭವಿಸುತ್ತಿರುವಲ್ಲಿ ಆತನ ಆಟೋಪವನ್ನು ತಡೆಯಲು ನಿಮ್ಮಲ್ಲಿ ಶಕ್ತಿಯುಳ್ಳವರಾರು?

ಧರ್ಮರಾಜನೇ, ನಿನ್ನ ಸಹೋದರನಾದ ಅರ್ಜುನನು ಅದ್ಭುತಪ್ರಭಾವವುಳ್ಳ ವಿದ್ಯೆಯ ಉಪದೇಶದಿಂದ ಪಶುಪತಿಯನ್ನು ಕುರಿತು ಕಷ್ಟಕರವಾದ ತಪಸ್ಸನ್ನಾಚರಿಸಲಿ. ಅನನ್ಯಸಾಧಾರಣವಾದ ಬಲಾತಿಶಯವುಳ್ಳ ಪಾಶುಪತಾಸ್ತ್ರವನ್ನು ಪಡೆದು, ಆ ಭೀಷ್ಮನೇ ಮೊದಲಾದ ಘನವಿಕ್ರಮಿಗಳನ್ನು ಇದಿರಿಸಿ ಜಯಶೀಲನಾಗಲಿ. ಅಂತಹ ದಿವ್ಯಶಕ್ತಿಯನ್ನು ಸಂಪಾದಿಸುವುದಕ್ಕಾಗಿ ಮಹಾನುಭಾವರನ್ನಾರಾಧಿಸಲು ತಕ್ಕ ಪ್ರಭಾವವುಳ್ಳ ದೇವೇಂದ್ರನನ್ನು ಸಂತುಷ್ಟಿಗೊಳಿಸುವ ಮಂತ್ರವನ್ನು ಆತನಿಗೆ ಉಪದೇಶಿಸುವುದಕ್ಕೆಂದೇ ನಾನಿಲ್ಲಿಗೆ ಬಂದಿರುವೆನು."

ಈ ರೀತಿಯಲ್ಲಿ ವೇದವ್ಯಾಸನು ಬಹಳ ಸಂತೋಷದಿಂದ ಕರ್ತವ್ಯವನ್ನು ವಿವರಿಸಿ ಹೇಳಿದ ಮಾತುಗಳನ್ನು ಕೇಳಿ ಧರ್ಮರಾಜನು ಹರ್ಷನಿರ್ಭರಚಿತ್ತನಾಗಿ, ಅರ್ಜುನನನ್ನು ಸಮೀಪಕ್ಕೆ ಕರೆದು, ವೇದವ್ಯಾಸಮಹರ್ಷಿಗಳಿಂದ ವಿದ್ಯೆಯ ಉಪದೇಶವನ್ನು ಪಡೆದುಕೊಳ್ಳುವ ಹಾಗೆ ತಿಳಿಸಿದನು.

ಹಿರಿಯಣ್ಣನ ಆಜ್ಞಾನುಸಾರ ನಡೆಕೊಳ್ಳುವ ಆ ಪ್ರಿಯಸಹೋದರನು, ವಿನೀತನಾದ ಪ್ರಿಯಶಿಷ್ಯನಂತೆ ಮಹರ್ಷಿಯ ಬಳಿಗೈದಿ, ಭಕ್ತಿಭಾವನೆಯಿಂದ ಸಾಷ್ಟಾಂಗವೆರಗಿ, ಉಪದೇಶಪಡೆದುಕೊಳ್ಳಲು ಸಿದ್ಧನಾದನು.

ಉದಯಕಾಲದಲ್ಲಿ ರಮಣೀಯವೆನಿಸುವ ಸೂರ್ಯಮಂಡಲದ ದೆಸೆಯಿಂದ ಹೊರಬಿದ್ದ ಕಿರಣವು ಅರಳುತ್ತಿರುವ ಕಮಲವನ್ನು ಪ್ರವೇಶಿಸುವಂತೆ, ವೇದವ್ಯಾಸಮಹರ್ಷಿಯ ಮುಖದಿಂದ ತೇಜಃಪುಂಜವೆನಿಸುವ ಮಹೇಂದ್ರಮಂತ್ರಾತ್ಮಕವಿದ್ಯೆಯು ಹೊರಟು ಬಂದು, ಅರ್ಜುನನ ಮುಖವನ್ನು ಪ್ರವೇಶಿಸಿತು. ಉಪದೇಶಪಡೆದುಕೊಳ್ಳುವುದರಲ್ಲಿ ನಿಪುಣನಾದ ವಿಜಯನಿಗೆ ಮುನಿಯು ಮಂತ್ರಧ್ಯಾನದ ಕ್ರಮವನ್ನೂ ಬಹು ಸುಲಭವಾಗಿ ಉಪದೇಶಿಸಿದನು. ಆಗ ಚತುರ್ವಿಂಶತಿತತ್ವಗಳ ಮೂಲಕ ಉಪದೇಶವನ್ನು ಸಾಕ್ಷಾತ್ಕರಿಸುವಂತೆ, ಆತನ ನೇತ್ರಕಮಲಗಳು ತೆರೆದುಕೊಂಡಿದ್ದುವು. ಮಹಾಭಾಗ್ಯಸೂಚಕವೂ, ಉತ್ಸಾಹಾನುಕೂಲವೂ ಆದ ಆಕೃತಿ ವಿಶೇಷವುಳ್ಳ ಪಾರ್ಥನನ್ನು ಜಯಪ್ರದವಾದ ತಪಸ್ಸಿನ ನಿಯಮದಲ್ಲಿ ಪ್ರೇರೇಪಿಸುವ ಮನಸ್ಸುಳ್ಳವನಾಗಿ ಮುನಿಯು ಹೀಗೆಂದನು—

ನಾನು ಉಪದೇಶಿಸಿದ ಈ ತಪಸ್ಸಿನ ಯೋಗದಿಂದ ನೀನು ಬಹಳ ತೇಜೋವಂತನಾಗಿ ತಪಸ್ಸಿನಲ್ಲಿ ನಿರತನಾಗಿದ್ದು, ಪರರಿಗೆ ಸ್ವಲ್ಪವಾದರೂ ಎಡೆಗೊಡದೆ, ಆಯುಧಸನ್ನದ್ಧನಾಗಿ, ಸ್ವಾಧ್ಯಾಯಸ್ನಾನನಿರಶನಾದಿಗಳಿಂದ ಮುನಿವರ್ಯರಂತೆ ಆಚಾರಗಳನ್ನು ಪರಿಪಾಲಿಸುತ್ತಿರು! ನೀನು ಪರ್ವತಶಿಖರದಲ್ಲಿದ್ದು ದೇವೇಂದ್ರನನ್ನು ತಪಸ್ಸಿನ ಮೂಲಕ ಒಲಿಸಿಕೊಳ್ಳಬೇಕು! ಅದಕ್ಕಾಗಿ ರಮ್ಯಶಿಖರಗಳಿಂದೊಪ್ಪುವ ಇಂದ್ರಕೀಲಕವೆಂಬ ಪರ್ವತಕ್ಕೆ ಹೊರಟುಹೋಗಲು ಸಿದ್ಧನಾಗಿರಬೇಕು! ಕೂಡಲೆ ಯಕ್ಷನೊಬ್ಬನು ಬಂದು ನಿನಗೆ ದಾರಿ ತೋರಿಸುವನು."

ಹೀಗೆಂದು ವೇದವ್ಯಾಸಮಹರ್ಷಿಯು ಅರ್ಜುನನಿಗೆ ಅಭಿವೃದ್ಧಿಯ ಮುನ್ನೋಟವನ್ನು ಕುರಿತು ಉಪದೇಶಿಸಿ, ತನ್ನ ಕರ್ತವ್ಯವನ್ನು ಮಾಡಿದವನಂತೆ, ಸಂತೋಷದಿಂದ ಹೊರಟು ಹೋದನು.

೮. ಅರ್ಜುನನ ತಪೋನಿರ್ಗಮನ

ಆಗಲಿಕೆಯೆಂಬುದು ಸಾಮಾನ್ಯವಲ್ಲ. ಅದರ ಮಹಿಮೆಯಿಂದಲೇ ಲೋಕದಲ್ಲಿ ನಡೆಯುವ ನಾನಾ ಬಗೆಯ ಆಟಗಳನ್ನು ನಾವು ಕಾಣುವೆವು. ವಿಶ್ವಾಸಯೋಗ್ಯನು ಆಗಲುವ ಸಂಗತಿ ತಿಳಿಯಿತೆಂದರೆ ಸಾಕು, ಹೃದಯವು ಹಿಂಡಿದಂತಾಗಿ ದುಃಖವುಕ್ಕುವುದು. ಸೂರ್ಯನು ಅಸ್ತಮಿಸಿದರೆ ಕಮಲಿನಿಗೆ ದುಃಖವಂತೆ! ಚಂದ್ರಮನು ತೆರಳಿದರೆ ನೈದಿಲೆಗೆ ಚಿಂತೆಯಂತೆ! ವಿಯೋಗದ ಪ್ರಭಾವದಿಂದ ಅಗಸ್ತ್ಯನು ನೆಲೆದಪ್ಪಿದನು, ಶ್ರೀ ರಾಮಚಂದ್ರನು ಕಂಗೆಟ್ಟನು, ದುಷ್ಯಂತನು ಕೊರಗಿದನು, ಪುರುವಿಕ್ರಮನು ಉನ್ಮತ್ತನಾದನು; ಹೆಚ್ಚೇಕೆ, ಮುಕ್ಕಣ್ಣನು ಹದಗೆಟ್ಟು ಕರ್ತವ್ಯವಿಮುಖನಾಗಿ ತಪೋನಿರತನಾದುದಾದರೂ ಸತೀವಿಯೋಗದ ಮೂಲಕವೆಂದರೆ, ಪ್ರಪಂಚದಲ್ಲಿ ಅದರ ಪ್ರಭಾವದ ಮುದ್ರೆಗೆ ಒಳಗಾಗದವರಾರು?

ತೇಜಸ್ವಿಯಾದ ಸೂರ್ಯನಾರಾಯಣನು ಆತ್ಮೋದಯದ ಸಲುವಾಗಿ ಹೊಂಬಣ್ಣದಿಂದ ಶೋಭಾಯಮಾನವಾದ ಮಹಾಮೇರುಪರ್ವತದ ಪೊದರುಗಳನ್ನು ಬಿಟ್ಟು ಮೆಲ್ಲಮೆಲ್ಲನೆ ಮುಂದುವರಿಯುತ್ತ ಕತ್ತಲೆಗೊಳಗಾಗುವನು. ಅಂತೆಯೇ, ವಿಕ್ರಮಿಯಾದ ಪಾರ್ಥನು ತನ್ನ ಏಳಿಗೆಯ ಮುನ್ನೋಟದಿಂದ ಸಜ್ಜನಶಿರೋಮಣಿಗಳೂ, ಅಸಮಾನಬುದ್ಧಿಶಾಲಿಗಳೂ ಎನಿಸಿರುವ ತನ್ನ ಸಹೋದರರನ್ನು ಬೀಳ್ಕೊಂಡು ಮುಂದುವರಿಯುತ್ತ, ವ್ಯಸನಾಕ್ರಾಂತನಾದನು. ಆದರೆ ಈ ವ್ಯಸನವನ್ನು ಸಹೋದರರೆಲ್ಲರೂ ಸಮಭಾಗವಾಗಿ ತಮ್ಮೊಳಗೆ ಹಂಚಿಕೊಂಡುದರಿಂದ ಆತನ ದುಃಖದ ಭಾರವು ಒಂದಿಷ್ಟು ಕಡಿಮೆಯಾಯಿತು. ಸೋದರರಾದರೋ, ಕರ್ತವ್ಯನಿವೇದಕನಾದ ವ್ಯಾಸಮಹರ್ಷಿಯ ಮಾತಿನಲ್ಲಿ ತಮಗಿರುವ ವಿಶ್ವಾಸದಿಂದಲೂ, ವಿರೋಧಿಗಳು ಮಾಡಿದ ಅವಮಾನದ ದೆಸೆಯಿಂದ ಉಂಟಾಗುವ ಕೋಪದಿಂದಲೂ, ಇಂದ್ರಸುಕುಮಾರನಾದ ಅರ್ಜುನನ ಪೌರುಷದಲ್ಲಿ ತಮಗಿರುವ ವಿಶ್ವಾಸದಿಂದಲೂ, ಮಿತಿಮೀರುತ್ತಿದ್ದ ವ್ಯಸನವನ್ನು ತಡೆದುಕೊಂಡರು. ಚತುರನಾದ ಅರ್ಜುನನು ದಿನದ ನಾಲ್ಕು ಯಾಮಗಳಂತೆ ತೇಜಸ್ವಿಗಳಾದ ಸಹೋದರರನ್ನಗಲಿ, ಕೃಷ್ಣಪಕ್ಷದ ಕರಾಳರಾತ್ರಿ

ಯೆಂಬಂತೆ ವ್ಯಸನಾಕ್ರಾಂತಳಾಗಿದ್ದ ಕೃಷ್ಣೆಯು ಕುಟೀರಕ್ಕೆ ನಡೆದನು. ಹಾಗೆ ಹೊರಟು ತನ್ನ ಮನೆಗೆ ಬರುವ ಪಾರ್ಥನನ್ನು ದ್ರೌಪದಿಯು ಕಣ್ತಣಿಯೆ ನೋಡಬೇಕೆಂಬಾಶೆಯುಳ್ಳವಳಾಗಿ, ಪ್ರಯಾಣದ ಶುಭಮುಹೂರ್ತದಲ್ಲಿ ಕಣ್ಣೀರು ಸುರಿದು ಅಮಂಗಲವಾಗಬಾರದೆಂಬ ಹಾಗೆ, ಕಂಬನಿದುಂಬಿದ ತನ್ನ ಕಣ್ಣುಗಳನ್ನು ಮುಚ್ಚಲಾರದಾದಳು, ಪ್ರಯಾಣಿಕನ ದಾರಿಯ ಊಟಕ್ಕಾಗಿ ಹೆಂಡತಿ ಕೊಡತಕ್ಕ ಬುತ್ತಿಯನ್ನು ಸಂತೋಷದಿಂದ ಸ್ವೀಕರಿಸಿಕೊಳ್ಳುವಂತೆ, ಅರ್ಜುನನು ಕಾಂತೆಯ ಸ್ನಿಗ್ಧಾಲೋಕನವನ್ನು ಸಾದರದಿಂದ ಸ್ವೀಕರಿಸಿಕೊಂಡನು.

ಬಳಿಕ ವೀರರಮಣಿಯಾದ ದ್ರೌಪದಿಯು ಕಾಡಾನೆಯಂತೆ ಹಿಡಿತಡೆಗಳಿಗೊಳಗಾಗದೆ, ಗ್ರೀಷ್ಮಕಾಲದ ನದಿಯಂತೆ ಕದಡಿದ ಮನಸ್ಸುಳ್ಳವಳಾಗಿ ಉಕ್ಕುವ ಕಂಬನಿಗಳನ್ನು ಹಠಾತ್ತಾಗಿ ತಡೆದುಕೊಂಡು, ಬಹು ಸಂಕಷ್ಟದೊಡನೆ ಹೀಗೆಂದಳು— 'ಪ್ರಾಣಕಾಂತ, ವಿರೋಧಿಗಳ ಕಪಟವೆಂಬ ಕೆಸರಿನಲ್ಲಿ ಹೂತುಹೋಗಿರುವ ನಮ್ಮ ಗೌರವವನ್ನು ಸಂಪತ್ತಿನಂತೆ ಉದ್ಧರಿಸುತ್ತ, ನಮ್ಮೆಲ್ಲರ ಸಂಕಷ್ಟಗಳನ್ನೂ ನಿವಾರಿಸುವ ತಪಸ್ಸಿಗಾಗಿ ನಮ್ಮನ್ನಗಲಿ ದೂರಸ್ಥನಾಗಬೇಕಾದರೂ, ಮನಸ್ಸಿಗೆ ತಲ್ಲಣವನ್ನು ತಂದುಕೊಳ್ಳದೆ ಉದ್ದೇಶವನ್ನು ಧೈರ್ಯದಿಂದಲೇ ಸಾಧಿಸಿಕೊಳ್ಳಬೇಕು. ನಲ್ಲ, ಶಾಶ್ವತವಾದ ಯಶಸ್ಸನ್ನು ಗಳಿಸಿಕೊಳ್ಳುವ ಸಲುವಾಗಿಯಾಗಲಿ, ಅಖಂಡವಾದ ಸುಖವನ್ನು ಪಡೆಯಬೇಕೆಂಬ ಬಯಕೆಯಿಂದಾಗಲಿ, ಅಮಾನುಷಕೃತ್ಯಗಳನ್ನು ನೆರವೇರಿಸಿ ಮಾನುಷತ್ವವನ್ನತಿಕ್ರಮಿಸಬೇಕೆಂಬ ಸದಿಚ್ಛೆಯಿಂದಾಗಲಿ, ವಿರೋಧಿಗಳೊಡನೆ ಕಾದಾಡಬೇಕೆಂದು ಆತುರಪಡುವ ವೀರರಮಣಿಲನ್ನು ನಿಜಾಂಗನೆಯಂತೆ ಜಯಾಂಗನೆಯು ಸಾದರದಿಂದ ಬಂದು ಏರುವಳೆಂಬುದರಲ್ಲಿ ಸಂದೇಹವಿಲ್ಲ. ಸೃಷ್ಟಿಕರ್ತನು ಲೋಕರಕ್ಷಣೆಗಾಗಿ ಕ್ಷತ್ರಿಯರನ್ನು ಸೃಷ್ಟಿಸಿರುವನು. ಅವರೆಂದಿಗೂ ಅವಮರ್ಯಾದೆಯನ್ನು ಸಹಿಸಲಾರರು. ಲೋಕವನ್ನೇ ಜಯಿಸಿ ಅಂಕೆಯಲ್ಲಿರಿಸತಕ್ಕ ಕ್ಷತ್ರಿಯೋತ್ತಮರಿಗೆ ಮಾನಹಾನಿಯು ಸಂಭವಿಸಿತೆಂದರೆ, ಕ್ಷಾತ್ರತೇಜಸ್ಸು ತಲೆಯೆತ್ತುವ ಹಾಗಿಲ್ಲವೆಂದು ತಿಳಿದು, ವೀರರು ಪ್ರಾಣಕ್ಕಿಂತಲೂ ಮಾನವೇ ಮೇಲೆನ್ನುವರು. ಅಂದು ತುಂಬಿದ ಸಭೆಯಲ್ಲಿ ನಮಗೆ ಜ್ಞಾತಿಗಳಿಂದುಂ

ಟಾದ ಅನ್ಯಾಯದ ವಿಷಯದಲ್ಲಿ ಸಭಿಕರಾಗಿದ್ದ ಕ್ಷತ್ರಿಯೋತ್ತಮರು ಗೋತ್ರಕಲಹದಲ್ಲಿ ಪ್ರವೇಶಿಸಬಾರದೆಂಬ ಸುವಿಚಾರದ ಫಲವಾಗಿ ಉಂಟಾದ ಅವಮರ್ಯಾದೆಯಿಂದ ತಲೆಯೆತ್ತಲಾರದೆ ತಟಸ್ಥರಾಗಿದ್ದ ರಲ್ಲದೆ, ಸಹನೆಯಿಂದಲ್ಲ. ವೀರಪುಂಗವನೇ, ಲೋಕದಲ್ಲಿ ಪಸರಿಸಿ ಕೊಂಡಿದ್ದ ಕ್ಷಾತ್ರಯಶೋವಿತಾನವನ್ನು, ನಡೆದುಹೋದ ಆ ಘಟನೆಯ ಮೂಲಕ ಒಂದೇ ಕಡೆಗೆ ಸರಿಯುವಂತೆ ಸೆಳೆದುದರಿಂದ, ನಿರಾತಂಕವಾಗಿ ಮಾನಹಾನಿಯು ನಮ್ಮನ್ನು ಸೇರಿಕೊಂಡಿತೆಂದು ಮತ್ತೆ ಬೇರೆ ಹೇಳಬೇಕೆ? ಮೊದಲು ನಾವೆಷ್ಟೋ ವಿಧದ ಸಾಹಸಕೃತ್ಯಗಳಿಂದ ಮೆರೆದಿದ್ದರೂ ಕೂಡ, ಆ ಭಂಡರು ಮೋಸದ ಮೂಲಕ ನಮ್ಮನ್ನು ನಮ್ಮ ಏಳಿಗೆಯೊಂದಿಗೆ ಕೊನೆಗಾಣಿಸಬೇಕೆಂದು ಬಂದುದರಿಂದ, ನಾವಿಂದು ಬಹಳವಾದ ಬನ್ನಕ್ಕೊಳ ಗಾದೆವು. ಸೂರ್ಯನು ಉದಯದಿಂದಲೇ ಏಳಿಗೆಯನ್ನು ಪಡೆದವ ನಾದರೂ, ಸಂಜೆಯಲ್ಲಿ ಪ್ರತಿಷ್ಠೆಯನ್ನು ಕಳಕೊಂಡು ಘೋರತರವಾದ ತಾಮಸಿಯ ಮರೆಮೋಸಕ್ಕೊಳಗಾಗುವಂತೆ, ಆ ತಾಮಸರ ಮರೆಮೋಸಕ್ಕೆ ಬಲಿಯಾದ ನಮಗೂ ನಿರ್ಗತಿಯೆ? ಆ ಮೂರ್ಖರಿಂದ ನಮಗೊದಗಿದ ಕೇಶಾಕರ್ಷಣರೂಪವಾದ ಮಾನಹಾನಿಯನ್ನು ಸ್ಮರಿಸಿಕೊಳ್ಳಲು ಸಾಧ್ಯ ವಿಲ್ಲ. ಹೀಗಿರುವಾಗ ನಾವು ಆ ನೋವನ್ನು ಸದಾ ಅನುಭವಿಸುತ್ತಿರುವುದು ಹೇಗೆ? ದಂತಭಂಗದಿಂದ ಅಸಹ್ಯವಾದ ವಿಕಾರವುಂಟಾದರೂ ಮದಗಜವು ಅದನ್ನು ಲಕ್ಷಿಸದಿರುವಂತೆ, ಶರತ್ಕಾಲದಲ್ಲಿ ಮೋಡಮುಸುಕಿರುವ ಪ್ರಾತಃ ಕಾಲವು ಜನರ ಲಕ್ಷ್ಯಕ್ಕೆ ಬಾರದಿರುವಂತೆ, ಶತ್ರುಗಳ ಮರೆಮೋಸ ದಿಂದುಂಟಾದ ಆ ಮಾನಹಾನಿಯನ್ನು ನಾವೂ ಲಕ್ಷಿಸದಿರಲು ಸಾಧ್ಯವೆ?

ಆ ಮದಾಂಧರು ಮಾನುಷತ್ವವನ್ನತಿಕ್ರಮಿಸಿ ಪಶುಗಳಂತೆ ವರ್ತಿಸು ತ್ತಿದ್ದರೂ ಕೂಡ, ಅವರಿಗೆ ಯಾವ ಪ್ರತಿಕ್ರಿಯೆಯನ್ನೂ ಮಾಡದೆ, ಲಜ್ಜಾ ವಿಷ್ಟರಾಗಿ ಜಡರಂತೆ ನಿತ್ತುಕೊಂಡು ಬಲಶಾಲಿಗಳೆಲ್ಲರೂ ನೋಡುತಿದ್ದ ರಷ್ಟೆ! ಪಾರ್ಥನೇ ನೀನಾದರೂ, ಆಗ ಬಿಲ್ಲಾಳುತನವನ್ನರಿಯದವನಂತೆ, ನೀರು ಬತ್ತಿದ ಸಮುದ್ರದಂತೆ, ಕುಂದಿದ ಕೀರ್ತಿಯೊಡನೆ ಅವರ್ಣನೀಯ ವಾದ ಯಾವುದೋ ಒಂದು ವಿಕಾರವಾದ ಆಕೃತಿಯನ್ನು ತಾಳಿಕೊಂಡಿ ದ್ದೆಯಷ್ಟೆ? ಕೆಡುಕನಾದ ದುಶ್ಶಾಸನನು ಈ ಸಿರಿಮುಡಿಯನ್ನು ಹಿಡಿದೆಳೆ

ದಾಗ ಅವಮಾನವೆಂಬ ಧೂಳಿಯೊಡನೆ ಕೆದರಿಕೊಂಡು ಮಲಿನವಾಗಿದ್ದ ಕೂದಲುಗಳು, ರಕ್ಷಣಾಸಾಮರ್ಥ್ಯವನ್ನು ಕಳಕೊಂಡಿದ್ದ ನಿಮ್ಮ ದೆಸೆಯಿಂದ ಗತಿಯಿಲ್ಲದೆಯೂ, ಭಾಗ್ಯದ ದೆಸೆಯಿಂದಲೇ ರಕ್ಷಿಸಲ್ಪಟ್ಟುವು. ಮೂರು ಲೋಕದ ಗಂಡನೆಂದು ಹೊಗಳಿಸಿಕೊಂಡ ಪಾರ್ಥನೇ, ನೀನಾಗ ಶೌರ್ಯೋತ್ಸಾಹ ಮೊದಲಾದ ಗುಣಗಳನ್ನೆಲ್ಲ ಕಳಕೊಂಡು, ಪಾಶವೀ ಕರ್ಮವನ್ನು ಸರಿಯಾಗಿ ಕಣ್ಣುಬಿಟ್ಟು ಮಿಳಮಿಳನೆ ನೋಡುತ್ತಿದ್ದೆಯಾ! ಸಜ್ಜನರನ್ನು ಪರಿಪಾಲಿಸುವ ಸಾಮರ್ಥ್ಯವಿರುವಾತನನ್ನು ಕ್ಷತ್ರಿಯನೆಂದೂ, ಯುದ್ಧೋದ್ಯಮಗಳಲ್ಲಿ ತಕ್ಕ ಹಾಗೆ ಶಕ್ತಿಯಿರುವುದನ್ನು ಕಾರ್ಮುಕವೆಂದೂ ಕರೆಯುತ್ತಿರುವರು. ಕ್ಷತ್ರಿಯಕಾರ್ಮುಕಗಳೆಂಬ ಶಬ್ದಾರ್ಥಗಳು ಹೀಗಿರುವಾಗ, ಹಾಸ್ಯಾಸ್ಪದನಾಗುವಂತೆ ಅವೆರಡನ್ನೂ ನೀನು ಧರಿಸಿಕೊಂಡಿದ್ದೆಯೆಂಬುದೇ ನನ್ನ ಸಂತಾಪಕ್ಕೆ ಕಾರಣವು. ಹೀಗೆ ಗಾಂಭೀರ್ಯವನ್ನು ಕಳೆದುಕೊಂಡು ನಾಮಮಾತ್ರಾವಶಿಷ್ಟಗಳಾದ ನಿನ್ನ ಶೌರ್ಯ, ಔದಾರ್ಯ ಮೊದಲಾದ ಗುಣಗಳು ಇನ್ನು ಮುಂದಾದರೂ ಮುಂದುವರಿದು ಪ್ರಖ್ಯಾತಿಯನ್ನು ಪಡೆಯಲಿರುವುವೆಂಬ ಕಾರಣದಿಂದಲೇ ನಾವೆಲ್ಲರೂ ನಿನ್ನೊಡನೆ ವ್ಯಸನದಲ್ಲಿ ಸಮಾನಭಾಗಿಗಳು. ಪ್ರಾಣವಲ್ಲಭ, ನೀನೀಗ ನಮ್ಮನ್ನಗಲಿ ಹೋಗುವುದೆಂದರೆ, ವಿರೋಧಿಗಳಿಂದ ಉಂಟಾದ ದುಃಖಾನುಭವವೆಂಬ ಮೊದಲಿನ ಗಾಯವನ್ನೇ ಇರಿದಂತಾಗುವುದು. ಆದರೂ ನಾವಿಲ್ಲಿ ಮುಂದಿನ ಫಲಾನುಭವದ ಸಲುವಾಗಿ ಆಶೆಯ ಕುಡಿಯನ್ನೇ ನೋಡುತ್ತ ಸಮಯವನ್ನು ಕಳೆಯಬೇಕು. ಕೇಸರಗಳನ್ನು ಕೆದರಿಕೊಂಡಿರುವ ಕಂಠೀರವಗಳನ್ನು ಮತಿಗೆಟ್ಟ ಮದಗಜಗಳು ಕೆಣಕುವ ಹಾಗೆ, ದುರಹಂಕಾರದಿಂದ ಕಂಗೆಟ್ಟ ಕೌರವರು ನಮ್ಮನ್ನು ಕೆಣಕುತ್ತಿರಬಹುದು! ದಿನಶ್ರೀಯು ಪ್ರಭಾಕರನನ್ನು ಹೊಂದಿಕೊಂಡಿರುವಂತೆ, ಕಾರ್ಯನಿರ್ವಹಣಶಕ್ತಿಯು ನಿನ್ನನ್ನವಲಂಬಿಸಿಕೊಂಡಿರುವಾಗ, ನಮ್ಮ ಹೃದಯವನ್ನಾವರಿಸಿದ ತಮೋರೂಪವಾದ ವ್ಯಸನವನ್ನು ಪರಿಹರಿಸುವುದರಲ್ಲಿ ಇನ್ನಾದರೂ ಕಾಲವಿಳಂಬವೇಕೆ?

ಸತ್ಕಾರ್ಯಗಳಲ್ಲಿ ಸಫಲನಾಗಿ ವಿಶೇಷವಾದ ಯೋಗ್ಯತೆಯನ್ನು ಪಡೆವಾತನೇ ಪುರುಷಪುಂಗವನು. ದೊಡ್ಡದೊಡ್ಡ ವಿದ್ವಾಂಸರ ಸಭೆ

ಗಳಲ್ಲಿ ಮಹಾತ್ಮರನ್ನು ಪರಿಗಣಿಸುವಾಗ, ಆತನೇ ಅಗ್ರಗಣ್ಯನೆನಿಸುವನು. ಅಸಾಧಾರಣ ಲಾಭಕ್ಕಾಗಿ ಪ್ರಯತ್ನಿಸುವುದು ಉತ್ತಮರ ಸ್ವಭಾವವು. ನಮ್ಮೆಲ್ಲರ ವಿಷಯವಾಗಿ ಯೋಚಿಸುತ್ತ ವ್ಯಸನಪಡುತ್ತಿರುವೆಯಾ? ವಿಜಯನೇ, ವಿಜಯದ ಲಾಭಕ್ಕಾಗಿ ಹೊರಡುತ್ತಿರುವ ನಿನ್ನ ಮನಸ್ಸಿಗೆ ಕವಿದಿರುವ ದುಃಖವನ್ನು ನಮ್ಮ ಉಪಾಸ್ಯದೇವತೆಯಾದ ದೇವೇಂದ್ರನೇ ಪರಿಹರಿಸಲಿ! ನೀನು ಹೋಗಿ ವಾಸಿಸುವ ನಿರ್ಜನಪ್ರದೇಶವು ಪರರ ಬಾಧೆಯಿಲ್ಲದೆ ಸುಖಕರವಾಗಿರಬಹುದಾದರೂ, ಅಲ್ಲಿ ಬಹುಕಾಲದ ವರೆಗೂ ಒಬ್ಬಂಟಿಗನಾಗಿರಬೇಕಾದುದರಿಂದ, ದೌರ್ಬಲ್ಯಕ್ಕೆಡೆಯಾಗದ ಹಾಗೆ ಜಾಗ್ರತನಾಗಿರಬೇಕು. ರಾಗದ್ವೇಷಾದಿಗಳಿಂದ ದೂಷಿತರಾದವರು ಸಜ್ಜನರ ಮೇಲೆ ನೆಗೆದು ಬೀಳುತ್ತಿರುವುದರಿಂದ, ಅಂತಹ ಪ್ರಮಾದಗಳೇನೂ ಸಂಭವಿಸದಂತೆ ನೋಡಿಕೊಳ್ಳಬೇಕೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ! ಮಹಾನುಭಾವನಾದ ವೇದವ್ಯಾಸನ ವಚನವನ್ನು ಮನ್ನಿಸುತ್ತ ನೀನು ತಪಸ್ಸನ್ನಾಚರಿಸಿ ಬೇಗನೆ ನಮ್ಮೆಲ್ಲರ ಮನೋರಥವನ್ನೂ ನೆರವೇರಿಸುತ್ತ ಜಯಸಿದ್ಧಿಯೊಡನೆ ಮರಳಿಬಂದು, ನಮ್ಮನ್ನು ಸಂತೋಷಪಡಿಸುವೆಯೆಂಬ ಮುಂದಿನ ಸುಖದ ಆಶೆಯಿಂದಲೇ ನಾವಿಲ್ಲಿ ದಿನಗಳನ್ನು ಕಳೆಯುತ್ತಿರುವೆವು."

ಈ ಪ್ರಕಾರವಾಗಿ ಹೃತ್ಕಂದರದಲ್ಲಿ ಕವಿದುಕೊಂಡಿದ್ದ ವೈರಿಕೃತವಾದ ಅವಮಾನವನ್ನು ಹೊಡೆದೋಡಿಸುವಂತೆ ಹೇಳಿದ ಯಾಜ್ಞಸೇನಿಯ ವಚನಗಳಿಂದ ಉದ್ದೀಪಿತನಾಗಿ, ಪ್ರಭಾಕರಕಿರಣಗಳಿಂದ ಮೂಡುದೆಸೆಯಂತೆ ಪಾರ್ಥನು ಕೆಂಪೇರಿದನು. ಸ್ವಭಾವಸುಂದರನಾದರೂ ನರನು ವಿರೋಧಿಗಳನ್ನು ಕಡೆಗಣಿಸುತ್ತ, ಪುರೋಹಿತನಾದ ಧೌಮ್ಯಮಹರ್ಷಿಯು ಕೊಟ್ಟ ಆಯುಧವೆಲ್ಲವನ್ನೂ ಸ್ವೀಕರಿಸಿಕೊಳ್ಳುತ್ತ, ಪರಹಿಂಸಾಪ್ರಧಾನವಾದ ಆಭಿಚಾರಕ್ರಿಯೆಯನ್ನ ಪಡೆದ ಮಂತ್ರದ ಹಾಗೆ, ಬಹುಭೀಷಣನಾದನು. ವೈರಿಗಳಿಗೆ ಅತಿಕ್ರಮಿಸಲು ಸಾಧ್ಯವಿಲ್ಲದ ಆಕರ್ಷಣಶಕ್ತಿಯುಳ್ಳ ಪ್ರಸಿದ್ಧವಾದ ಶಿಂಜಿನೀರವದೊಡನೆ ಬಾಣಪ್ರಯೋಗವುಳ್ಳ ಕಾರ್ಮುಕವನ್ನೂ, ಅರಾತಿಗಳ ದೃಷ್ಟಿಗಳಿಗೆ ಅಗೋಚರವೆನಿಸಿ ತೀಕ್ಷ್ಣಧಾರೆಯ ಖಡ್ಗಗಳನ್ನೊಳಗೊಂಡು ವಿರಾಜಿಸುವ ಎರಡು ಬತ್ತಳಿಕೆಗಳನ್ನೂ, ಖಾಂಡವದಹನಾವ

ಸರದಲ್ಲಿ ದೇವೇಂದ್ರನ ವಜ್ರಾಯುಧದ ಹೊಡೆತದಿಂದುಂಟಾದ ಬಿರುಕನ್ನು ತನ್ನ ಮೂರ್ತಿಮತ್ತಾದ ಕೀರ್ತಿಯಂತಿರುವ ದೇಹದ ಕಾಂತಿಯಿಂದ ಮುಚ್ಚಿಕೊಳ್ಳುತ್ತ, ನಕ್ಷತ್ರಗಳಿಂದ ಬೆಳಗುವ ಆಕಾಶದಂತೆ ಬಗೆಬಗೆಯ ರತ್ನಗಳಿಂದ ಶೋಭಿಸುವ ಕಂಚುಕವನ್ನೂ ಧರಿಸಿಕೊಳ್ಳುತ್ತ ವಿಜಯನು ಜಯಸಿದ್ಧಿಗಾಗಿ ಹೊರಡಲನುವಾದನು.

ವೇದವ್ಯಾಸನು ತಿಳಿಸಿದಂತೆ ಆಗಲೇ ಕುಬೇರನ ಸೇವಕನಾದ ಯಕ್ಷನು ಅಲ್ಲಿಗೆ ಬಂದು ಪಾರ್ಥನಿಗೆ ನಮಸ್ಕರಿಸಿದನು. ಪರೋಪಕಾರ ಬುದ್ಧಿಯಿಂದ ಬಂದವನನ್ನು ನರನು ಕುಶಲಪ್ರಶ್ನೆಗಳಿಂದ ಗೌರವಿಸಿದನು. “ದರ್ಶನಮಾತ್ರದಿಂದಲೇ ಸಜ್ಜನಸಂಗತಿಯು ವಿಶ್ವಾಸದಾಯಕ”ವೆಂಬ ಹಾಗೆ ಬಹು ಬೇಗನೆ ಅವರೊಳಗೆ ಸ್ನೇಹವುಂಟಾಯಿತು. ಅದೇ ಶುಭ ಮುಹೂರ್ತವೆಂದು ತಿಳಿದು ಪಾರ್ಥನು ಯಕ್ಷನನ್ನನುಸರಿಸಿ ಮಂಗಳ ಮಯವಾದ ಹಿಮವತ್ಪರ್ವತದ ದಾರಿಹಿಡಿದು ಹೊರಟನು. ಆಗಲೇ ದ್ವೈತವನನಿವಾಸಿಗಳಾದ ಮಹರ್ಷಿಗಳೆಲ್ಲರೂ ವಿಜಯನ ಅಗಲಿಕೆಗಾಗಿ ಕಂಬನಿದುಂಬುತ್ತ, ಮನದಣಿವಂತೆ ಆತನ ಸದ್ಗುಣಗಳನ್ನು ಕೊಂಡಾಡುತ್ತ” ಆತನ ಮೇಲ್ಮೆಯನ್ನೇ ಬಯಸಿದನು. ಆಗ ದೇವಲೋಕದಲ್ಲಿ ಮೊಳಗು ತ್ತಿದ್ದ ದಿವ್ಯದುಂದುಭಿಧ್ವನಿಗಳಿಂದ ದಶದಿಕ್ಕುಗಳೂ ಪ್ರತಿಧ್ವನಿಸಿದುವು. ಕಲ್ಪವೃಕ್ಷಗಳಿಂದ ಪುಷ್ಪವೃಷ್ಟಿಯಾಗಿ ಆಕಾಶವು ಶ್ರೀಕರವೆನಿಸಿತು. “ದೇವಿ ಹೆದರಬೇಡ! ದುಷ್ಟಸಂಹಾರದಿಂದ ನಿನ್ನ ಭಾರವು ತಗ್ಗುವುದು, ಎಂದು ಸಮಾಧಾನಪಡಿಸುತ್ತ ಸಮುದ್ರರಾಜನು ಚಲಿಸುತ್ತಿರುವ ತೆರೆ ಮಾಲೆಗಳೆಂಬ ತನ್ನ ನೀಳ್ದೋಳುಗಳಿಂದ ಭೂಮಿಯನ್ನಾಲಿಂಗಿಸಿದನು.

---

೯. ಶರತ್ಕಾಲದ ವೈಭವ

ಅರ್ಜುನನು ಯಕ್ಷನನ್ನನುಸರಿಸಿ ಸೃಷ್ಟಿಯ ಸೌಂದರ್ಯವನ್ನು ದೃಷ್ಟಿಸಿ ನೋಡುತ್ತಾ ನಡೆಯುತ್ತಿದ್ದನು. ಆಗ, ಶಬ್ದಿಸುವ ಹಂಸಮಾಲಾ ಮೇಖಲೆಯಿಂದೊಪ್ಪುತ್ತ, ಪಕ್ವಫಲಭಾರದಿಂದ ಬಾಗಿರುವ ಸಸ್ಯಸಮೃದ್ಧಿ

ಯಲ್ಲಿ ವೃದ್ಧಿಗೊಂಡಿರುವ ಗೌರವರ್ಣದಿಂದ ಮೆರೆಯುವ ಭೂರಮೆಯಂತೆ ಯೌವನದ ಭರದಿಂದ ಮೆರೆಯುವ ಮನೋರಮೆ ಕಣ್ಮನಗಳನ್ನು ಸೆಳೆಯುತ್ತಿದ್ದಳು. ಇದಿರಾಗಿ ಬರುವ ಅರಸನನ್ನಾದರಿಸಲು ಮಿರುಗುವ ತರತರದ ಹಣ್ಣುಕಾಯಿಗಳೊಡನೆ ಸುಮಮಾಲಾಕರಶರತ್ಕಾಲವು ಕಾಲವನ್ನವಲೋಕಿಸುತ್ತ ಸ್ವಾಗತಿಸಲು ನಿಂತಿರುವ ವಿನೀತನಂತೆ ತೋರುತ್ತಿತ್ತು. ಎಲ್ಲಿ ನೋಡಿದರಲ್ಲಿ ಹಳ್ಳಿಗಳು; ಉದ್ದಕ್ಕೂ ಹರಡಿರುವ ಗದ್ದೆಗಳಲ್ಲಿ ಎದ್ದು ತೋರುವ ಹಸನಾದ ಹಸುರುಪೈರುಗಳು; ಗದ್ದೆಗಳ ತಿಳಿನೀರಲ್ಲಿ ನೀರ್ವೂಗಳು ಅರಳಿರುವುದನ್ನು ಎವೆಯಿಕ್ಕದೆ ನಿಲುಕಿಸಿ ನೋಡುವಂತೆ ಹಾಲು ತುಂಬಿದ ತೆನೆಗಳು ಬಾಗಿದ್ದುವು; ಅಂತಹ ಹಳ್ಳಿಗಳನ್ನಾವರಿಸಿವೆ ಮುಳ್ಳುಬೇಲಿಗಳು; ಹಳ್ಳಿಯೊಂದಕ್ಕೊಂದರಂತೆ ಹರಿವ ಹಳ್ಳಗಳು. ಅಂತೂ ಎಲ್ಲೆಲ್ಲಿಯೂ ಶಾಂತಿಯ ಸಂತೆ.

ಬತ್ತದ ತೆನೆಗಳಿಗೆರಗುತ್ತಿದ್ದ ಪಕ್ಷಿಗಳನ್ನೋಡಿಸಲು ಹೊಲಗಳ ಸುತ್ತಲೂ ನಿತ್ತಿದ್ದ ನಾರಿಯರು, ದಾಸವಾಳ ಹೂಗಳ ಧೂಳಿಗಳಿಂದ ಅಂದವಾಗಿ ತಿಲಕಗಳನ್ನಿಟ್ಟು, ಕೆಂದಾವರೆಗಳ ಪರಾಗಗಳನ್ನು ಪೀವರಸ್ತನಗಳ ಸುತ್ತಲೂ ಮೆತ್ತಿಕೊಂಡು, ಕರ್ಣೋತ್ಪಲಗಳನ್ನು ಕಡೆಗಣ್ಣೋಟಗಳಿಂದ ಅಲಂಕರಿಸುತ್ತಿದ್ದರು. ಶರೀರವು ಬೆವರಿಕೊಂಡರೆ ಅದನ್ನಾರಿಸುವುದಕ್ಕಾಗಿ ಮೈಗೆ ಬಳಿದುಕೊಳ್ಳಲು ಬೇಕಾಗಬಹುದೆಂಬ ತವಕದಿಂದ ಪದ್ಮಪರಾಗಗಳನ್ನು ಸಂಗ್ರಹಿಸುತ್ತ, ಗ್ರಾಮಗಳಲ್ಲಿದ್ದರೂ ನಾಗರಿಕಸ್ತ್ರೀಯರನ್ನು ಮೀರಿಸುವವರೋ ಎಂಬಂತೆ ತೋರುತ್ತಿದ್ದರು. "ಅಲ್ಲಿ ಸಮೀಪದಲ್ಲಿ ಬೆಳ್ಳಗೆ ಗುಂಪಾಗಿ ಚಲಿಸುವಂತೆ ತೋರುವುದೇನು? ಪಟ್ಟವಾಗಿ ಅರಳಿದ ಬೆಟ್ಟದಾವರೆಗಳೇ; ಆದರೆ ಕೇಸರಗಳಿಲ್ಲವೇಕೆ?" ಎಂದು ಕತೂಹಲದೊಡನೆ ಮುಗ್ಧೆಯೊಬ್ಬಳು ನೋಡುತ್ತಿದ್ದಳು—ಚಲಿಸುವ ಮೀನುಗಳ ರಭಸದಿಂದ ಮೇಲಕ್ಕೆದ್ದು, ಅತ್ತಿತ್ತ ಕುಣಿದಾಡುತ್ತಿದ್ದ ನೊರೆವಿಂಡುಗಳು ಅವಳ ಆ ಭ್ರಮೆಯನ್ನು ನಿವಾರಿಸಿದುವು. ಈ ಸುಸಂದರ್ಭವನ್ನು ಕಳೆಕೊಳ್ಳಬಾರದೆಂದು, ಕಾಂತೆಯರ ಕಟಾಕ್ಷವೀಕ್ಷಣಗಳನ್ನು ಧಿಕ್ಕರಿಸುವ ಹಾಗೆ ಜಲದೇವತೆಯು ಕಮಲನೇತ್ರಗಳಿಂದ ಮರಿಮೀನುಗಳ ತೊನೆದಾಟವನ್ನು ನೋಡುತ್ತಿದ್ದಳು. ಆಗ ಧ್ಯಾನಪರನಂತೆ ತೋರುತ್ತಿದ್ದ

ಧೂರ್ತಬಕನೊಂದು ಮೀನುಗಳಿಗೆರಗಿ ದೊರೆತ ಅಲ್ಪಲಾಭದಿಂದಲೇ ತೃಪ್ತಿಪಡುತ್ತಿತ್ತು.

ದಿನದಿಂದ ದಿನಕ್ಕೆ ಕಶ್ಮಲವಡಗಿ ಅಂತರಂಗಪರಿಶುದ್ಧಿಗೊಂಡು ನಿದಾನವಾಗಿ ಹರಿಯುತ್ತಿದ್ದ ನದಿಯಲ್ಲಿ ಮಾಲಾಕಾರವಾಗಿ ಹೊರಳಿಬರುತ್ತಿದ್ದ ತೆರೆಗಳ ಮೂಲಕ ಮರಳುದಿಣ್ಣೆಗಳ ಸುತ್ತಲೂ ಉಂಟಾದ ಗೆರೆಗಳು, ಈಗ ತಾನೇ ನೀಗಿದ ವಸ್ತ್ರಗ್ರಂಥಿಯಂತೆ ಭಾಸವಾಗುತ್ತಿದ್ದುವು. ಅಲ್ಲಿ ಮೋಡಗಳ ಸಂದಣಿಯಂತೆ ತೋರುವ ದನಗಳ ಮಂದೆಯು, ಮೆಲ್ಲಮೆಲ್ಲನೆ ನದೀತೀರವನ್ನು ಬಿಟ್ಟು ಮುಂದುವರಿಯುತ್ತಿದ್ದಾಗ, ಎಳೆಯ ಹುಲ್ಲುಗಳನ್ನು ಮೆದ್ದು ಕೊಬ್ಬಿದ ನಂದಿಯು ಎತ್ತುಗಳೊಡನೆ ತಲೆಗೊಟ್ಟು ಹೋರಾಡಿ ದೊರೆತ ಜಯದಿಂದ ಆರ್ಭಟಿಸುವಂತೆ ಮುಕ್ಕರಿಡುತ್ತ, ಶರತ್ಸಮಯವು ತಾನೇ ಮೂರ್ತೀಭವಿಸಿದಂತೆ ನದೀತೀರದಲ್ಲಿ ನಿತ್ತು ಮಣ್ಣುಕೆದರುತ್ತಿದ್ದ ದೃಶ್ಯವು ಬಹಳ ಮನೋಹರವಾಗಿತ್ತು. ಸಮೀಪದ ಹುಲ್ಲುಗಾವಲುಗಳಲ್ಲಿ ಮೇಯುತ್ತ ದನಗಳು ತಮ್ಮ ಕರುಗಳನ್ನು ನೆನೆದುಕೊಂಡು ಕೆಚ್ಚಲುಗಳಿಂದ ಹಾಲುಸುರಿಸುವುದೂ, ಅನವರತವೂ ಗೋವುಗಳನ್ನು ಸೋದರಪ್ರೇಮದಿಂದ ನೋಡುತ್ತ ಕಾಡುಗುಡ್ಡಗಳೇ ತಮ್ಮ ವಸತಿಗಳೆಂದು ಮಂದೆಯನ್ನೇ ಅನುಸರಿಸುತ್ತಿದ್ದ ಗೋಪಾಲಕವೃಂದವೂ, ಪಶುಪಾಲನೆಯೇ ತಮ್ಮ ಐಹಿಕದ ಸರ್ವಸ್ವವೆಂಬ ಭಾವನೆಯುಳ್ಳ ಅವರ ತ್ರಿಕರಣಶುದ್ಧತೆಯೂ ಮನಸ್ಸನ್ನು ಮೆಚ್ಚಿಸದಿರಲಿಲ್ಲ.

ಇನ್ನೂ ಮುಂದುವರಿದಂತೆ ಗೊಲ್ಲರ ಕೇರಿಯ ನಡುಮನೆಯಲ್ಲಿ ಗೋಪಿಯೊಬ್ಬಳು ಮಂದ್ರಸ್ವರದಿಂದ ಹಾಡುತ್ತ ಮೊಸರುಕಡೆಯುತ್ತಿರಲು, ಗುಡುಗುತ್ತಿರುವುದೆಂದು ಭ್ರಮಿಸಿ ಅಂಗಳದಲ್ಲಿ ಸಂಚರಿಸುತ್ತಿದ್ದ ನವಿಲುಗಳು ಮಿತಿಮೀರಿದ ಸಂತೋಷದಿಂದ ಕುಣಿದಾಡುತ್ತಿದ್ದುವು. ಮತ್ತೊಂದೆಡೆಯಲ್ಲಿ ಗೋಪಿಯರೊಂದಾಗಿ ಸೇರಿ ಕುಣಿಯುತ್ತಿದ್ದುದಂತೂ ನಯನಾನಂದಕರವಾಗಿತ್ತು. ಚೆಲುವಿನ ನಿಲವುಗಳಾಗಿ ಶೋಭಿಸುತ್ತಿದ್ದ ಆ ನರ್ತಕಿಯರ ಮುಖಕಮಲಗಳು, ಅವರ ಚಲಿಸುವ ಕುಂಡಲಗಳ ಕಾಂತಿಯೆಂಬ ಎಳವಿಸಿಲಿಗೆ ಅರಳಿದ್ದುವು; ಆದರೂ ಒಡಮೂಡಿ ಬರುವ ಮಂದಹಾಸದಿಂದ ಅವರ ದಂತಗಳೆಂಬ ಕೇಸರಗಳು ಕಾಣಿಸದಿದ್ದುವು. ಅವರ ಮುಂದಲೆಯಲ್ಲಿ ಕೆದರಿ ಹಾರಾ

ಡುತ್ತಿದ್ದ ಮುಂಗುರುಳುಗಳು ಮಕರಂದವನ್ನು ಹೀರಲೆಂದು ಹಾರಾಡುವ ಮಧುಕರಗಳಾಗಿದ್ದುವು; ಕುಣಿತದಿಂದ ಬಳಲಿ ಬೇಗಬೇಗನೆ ಬರುತ್ತಿದ್ದ ನಿಶ್ವಾಸದ ಒತ್ತಟದಿಂದ ಅವರ ಅಧರ ಸಂಪುಟಗಳು ವಿಶೇಷವಾಗಿ ಚಲಿಸುತ್ತಿದ್ದುವು; ಆದುದರಿಂದ ಅವರು ಗಾಳಿಗೆ ಚಲಿಸುವ ಎಲೆಗಳಿಂದೊಪ್ಪುತ್ತಿದ್ದ ಲತೆಗಳನ್ನೇ ಅನುಕರಿಸುತ್ತಿದ್ದರು. ಅತ್ತಿತ್ತ ಪಾರ್ಶ್ವಗಳನ್ನೋಸರಿಸುತ್ತ ಕೈ ಕೈ ಹಿಡಿದು ತಿಗರಿಗಳಂತೆ ತಿರುಗುತ್ತಿದ್ದಾಗ ಚಲಿಸುತ್ತಿದ್ದ ಅವರ ನಿತಂಬಗಳೂ, ಪೀವರಸ್ತನಗಳೂ, ಕಳೆಗುಂದಿದ ನೇತ್ರಕಮಲಗಳೂ ಪಥಿಕರ ಕಣ್ಮನಗಳಿಗೆ ಅತಿಥಿಗಳಾಗಿದ್ದುವು.

ದಾರಿಯ ಇಕ್ಕಡೆಗಳಲ್ಲಿಯೂ ತೋರುವ ಮನೆಗಳ ಚಂದವನ್ನೂ ಬೆಳೆದ ಹೂದೋಟಗಳ ಸೊಬಗನ್ನೂ, ಬಾಳೆ, ಕಿತ್ತಳೆ, ಪೇರಳೆ, ದಾಳಿಂಬ ಮೊದಲಾದ ಫಲವಸ್ತುಗಳ ಸಮೃದ್ಧಿಯನ್ನೂ, ಕೆರೆ, ಬಾವಿ, ಸರೋವರ, ಕಾಲುವೆ ಮೊದಲಾದ ಜಲಾಶಯಗಳ ರಮಣೀಯತೆಯನ್ನೂ ನೋಡುತ್ತಿದ್ದಾಗ, ಜನರೆಲ್ಲರೂ ವರ್ಣಾಶ್ರಮಪದ್ಧತಿಗನುಸಾರವಾಗಿ ಸದಾಚಾರ ಸಂಪನ್ನರಾಗಿದ್ದರೆಂದು ತಿಳಿದುಬರುತ್ತಿತ್ತು. ಆ ಗ್ರಾಮಗಳು ಇತರ ದೇಶಗಳ ಸಹಾಯಾಪೇಕ್ಷೆಯಿಲ್ಲದೆ ಸ್ವಾತಂತ್ರ್ಯದಿಂದ ಮೆರೆಯುತ್ತಿದ್ದುದನ್ನು ನೋಡಿ ಪಾರ್ಥನ ಅಂತರಂಗವು ಆನಂದದಿಂದ ಪರಿಪೂರ್ಣವಾಯಿತು. ಎರಡು ಪಕ್ಕಗಳಲ್ಲಿ ಬೆಳೆದ ಹುಲ್ಲನ್ನು ದನಕರುಗಳೇ ಮೇಯುತ್ತಿದ್ದುದರಿಂದ ಸುಗಮವೂ ಮಳೆಗಾಲದಲ್ಲಿ ಹೊಂಡಬಿದ್ದು ಕೆಸರೆದ್ದುದನ್ನು ಸರಿಪಡಿಸುತ್ತಿದ್ದುದರಿಂದ ವಾಹನಸಂಚಾರಕ್ಕೆ ಯೋಗ್ಯವೂ, ವಕ್ರತೆಯನ್ನು ಬಿಟ್ಟಿರುವುದರಿಂದ ಸಜ್ಜನಸಮಾಶ್ರಯವೂ ಆಗಿದ್ದ ದಾರಿಯ ಯೋಗ್ಯತೆಯನ್ನು ನೋಡಿ ಅರ್ಜುನನು ತಲೆದೂಗುತ್ತ ನಡೆಯುತ್ತಿದ್ದನು.

ಶರತ್ಕಾಲದ ಸಮೃದ್ಧಿಯನ್ನು ನೋಡುತ್ತ ಸಂತೋಷದಿಂದ ನಡೆದು ಬರುತ್ತಿದ್ದ ಪಾರ್ಥನಿಗೆ ಯಕ್ಷನು ಶರತ್ಕಾಲದ ವೈಭವವನ್ನು ತೋರಿಸುತ್ತ, ಹೀಗೆಂದನು—"ವಿಜಯನೇ, ಇಲ್ಲಿಯ ನಿಜವನ್ನು ನೋಡು. ಈ ಜಗತ್ತಿನಲ್ಲಿ ಕಷ್ಟಪಟ್ಟು ಸಂಪಾದಿಸಬೇಕೆಂಬ ಜನರಿಗೆ ಶುಭಕಾರಿಯಾದ ಭಾಗ್ಯವು ಫಲರೂಪದಿಂದ ಲಭಿಸುವ ಕಾಲವೇ ಶರತ್ಕಾಲವು. ಅಗಣ್ಯ ಪುಣ್ಯವಂತರಿಗೆ ಸೇವಿಸಲು ಯೋಗ್ಯವೆನಿಸುವ ಪುಣ್ಯೋದಕದಿಂದಲೂ,

ನೋಡುತ್ತಿದ್ದಂತೆಯೇ ಒಟ್ಟುಗೂಡುತ್ತಿರುವ ಬಿಳಿಯ ಮೋಡಗಳ ಗುಂಪುಗಳಿಂದಲೂ, ಭೂವ್ಯಾಕಾಶಗಳನ್ನು ಬೆಳಗಿಸುವ ಈ ಪುಣ್ಯಕಾಲವು ನಿಜವಾಗಿ ನಿನಗೆ ಜಯಸಿದ್ಧಿಯನ್ನುಂಟುಮಾಡುವುದು. ಅಸಮಾನವಾದ ಕಾಲದ ಮಹತ್ವದಿಂದ ಸಸ್ಯಗಳಲ್ಲಿ ಫಲಸಮೃದ್ಧಿಯು ತುಂಬಿ ಮೆರೆಯುತ್ತಿರುವುದು. ತೊರೆಯು ವರ್ಷಾಕಾಲದ ರಭಸವನ್ನು ತೊರೆದಿರುವುದು. ಧರೆಯು ಕೆಸರನ್ನು ಕಳೆದುಕೊಂಡು ಪರಿಶುದ್ಧವಾಗಿರುವುದು. ಪ್ರಕೃತಿಯು ಮಳೆಗಾಲದೊಡನೆ ಗಳಿಸಿದ್ದ ಪ್ರೇಮವನ್ನು ತೀರಾ ಮರೆತು ಬಿಟ್ಟು, ನೂತನಗುಣಗಳಿಂದೊಪ್ಪುವ ಶರತ್ಸಮಯವನ್ನು ಪ್ರೀತಿಸುತ್ತಿರುವುದು. ಆದುದರಿಂದ ಪಾರ್ಥನೇ, ಪ್ರೇಮವೆಂಬುದು ಗುಣಾಧೀನವಲ್ಲದೆ, ಪರಿಚಯವನ್ನವಲಂಬಿಸಿರುವುದಿಲ್ಲ. ಕಾರ್ಮೋಡಗಳ ಹಾಗೂ ಗುಡುಗು ಮಿಂಚುಗಳ ಸುಳಿವಿಲ್ಲವಾದರೂ, ಆಕಾಶವು ಬಲು ರಮಣೀಯವಾಗಿರುವುದರಿಂದ ಸಹಜಸೌಂದರ್ಯಶಾಲಿಗಳು ಭೂಷಣವನ್ನು ಬಯಸುವುದಿಲ್ಲ. ನಲ್ಲನು ಬಿಟ್ಟು ದೂರ ಹೋದರೆ ಉತ್ಸಾಹವಳಿದು ಬಲಗುಂದಿ ದೇಹದಲ್ಲಿ ಬಿಳುಪೇರುವುದೂ, ವಕ್ಷಸ್ಥಳದಲ್ಲಿ ವಿರಾಜಿಸುವ ಸ್ವರ್ಣಮಾಲಿಕೆಗಳನ್ನು ತೆಗೆದು ಹಾಕಿ ಕೃಶಾಂಗಿಯರಾಗುವುದೂ, ನಲ್ಲೆಯರ ಸ್ವಭಾವವು! ಆದರೆ, ವರ್ಷ ಋತು ತಮ್ಮನ್ನಗಲಿ ಹೋದುದರಿಂದ ನೀರಿಲ್ಲದ ಬಿಳಿಯ ಮೋಡಗಳಿಂದ ಕೂಡಿ, ಬಳ್ಳಿ ಮಿಂಚುಗಳಿಲ್ಲದೆ ಕೃಶಾಂಗಿಯರಂತೆ ಕಾಣುತ್ತಿದ್ದರೂ, ಈ ದಿಗಂಗನೆಯರ ರಮಣೀಯತೆಗೆ ಕೊರತೆಯೇನೂ ಬಂದಿಲ್ಲವೆಂಬುದೀಗ ವಿಶೇಷವು. ಸ್ವಚ್ಛವಾದ ಗಗನತಲದಲ್ಲಿ ಮಾನಸಸರೋವರದಿಂದ ಹಿಂತಿರುಗಿ ಗುಂಪುಗುಂಪಾಗಿ ಬರುವ ಹಂಸಗಳ ಕೂಗುಗಳು ದಿಗಂತಗಳಲ್ಲಿ ಪ್ರತಿಧ್ವನಿಸಿ ಕೇಳುತ್ತಿರುವುದನ್ನು ಗಮನಿಸಿದರೆ, ದಿಕ್ಕಾಂತೆಯರು ತಮ್ಮೊಳಗೆ ಅನ್ಯೋನ್ಯ ಸಂಭಾಷಣೆಮಾಡುತ್ತಿರುವಂತೆ ಭಾಸವಾಗುವುದು.

ಕೌಂತೇಯನೇ, ಈಗ ಅಂತರಿಕ್ಷದಲ್ಲಿ ಸಿಡಿಲಿನ ಹೊಡೆತವಿಲ್ಲ; ಬೆಳಕಿನ ಜಳದ ಸುಳಿವಿಲ್ಲ; ಪದರುಪದರಾಗಿರುವ ಬಿಳಿಯ ಮೋಡಗಳು ಓಡುತ್ತ ಬಿಸಿಲನ್ನು ತಡೆಯುತ್ತಿರುವುವು; ಕಮಲಾಕರಗಳ ಮೂಲಕ ಬರುವ ಗಾಳಿಯು ಶೈತ್ಯಸೌರಭ್ಯಮಾಂದ್ಯಗಳೊಡನೆ ಬೀಸುವುದರಿಂದ

ಅಂಬರವಂತೂ ಮನೋಹರವು. ಕಮಲದ ಪರಾಗಗಳನ್ನೂ ನೀರಿನ ತುಂತುರುಗಳನ್ನೂ ಕೊಂಡೊಯ್ಯುವ ಗಾಳಿಯು ದಾರಿಯನ್ನನುಸರಿಸಿ ಓಡುವ ತುಂಬಿಗಳ ಗತಿಯು ಬಹಳ ಮಂದವಾದುದರಿಂದ ಗಾಳಿಯ ದಾರಿಯನ್ನು ಕಂಡುಕೊಳ್ಳಲಾರದೆ ತುಂಬಿಗಳು ಗೊತ್ತುಗುರಿಯಿಲ್ಲದವರನ್ನನುಸರಿಸುವುದು ಕಷ್ಟಕರವೆಂದು ತಮ್ಮಲ್ಲೇ ಗೊಣಗುತ್ತಾ ಅತ್ತಿತ್ತ ಚಲಿಸುತ್ತಿರುವುವು. ಪಾರ್ಥನೇ, ಮುಂದೊತ್ತಿ ಬಂದಿರುವ ಶರತ್ಕಾಲದ ದೆಸೆಯಿಂದ ಸಂತೋಷಕ್ಕೆ ಭಂಗವುಂಟಾದರೂ, ಗಟ್ಟಿಯಾಗಿ ಕೇಗುತ್ತಿರುವ ನವಿಲುಗಳ ವಿಕಾರಧ್ವನಿಯನ್ನು ಕೇಳುವ ಇಷ್ಟವಿಲ್ಲದೆ ಕಿವಿಗಳು ಸಂತೋಷದಿಂದ ಕೂಗುವ ಹಂಸಧ್ವನಿಗಾಗಿ ತವಕಿಸುವುವು.

ಪಾರ್ಥನೇ, ಇಲ್ಲಿಯ ನೆಲ್ಲಿನ ಹೊಲವನ್ನು ನೋಡು! ತೆನೆ ಬಿಟ್ಟು ಹಾಲು ತುಂಬಿ ಬಲಿತು ಉಂಟಾದ ಫಲಪರಿಪಾಕದ ಮೂಲಕ ಪಿಂಗಲ ವರ್ಣದಿಂದ ಶೋಭಿಸುವ ಸಸಿಗಳು ಗದ್ದೆಗಳ ನೀರಲ್ಲಿ ಅರಳಿರುವ ನೀರ್ವೂಗಳ ಸೌರಭ್ಯವನ್ನು ಆಸ್ವಾದಿಸಬೇಕೆಂಬ ಹಾಗೆ ತಲೆವಾಗುತ್ತಿರುವುವು. ಹೀಗೆ ಯಾಚಿಸಿಕೊಂಡರೂ, ನೀರು ಒತ್ತಿ ಜಲಪುಷ್ಪಗಳು ಮರೆಯಾದುದರಿಂದ ತಿರಸ್ಕಾರವಾಯಿತೆಂದು ಕೊರಗುವಂತೆ ಬಿದ್ದ ಸಸಿಗಳು ಬೆಳ್ಳಗೆ ಕಾಣುತ್ತ ಕಾಮಲೀಲೆಯನ್ನಭಿನಯಿಸುತ್ತಿರುವುದು. ಕಮಲದೆಲೆಗಳ ಹಸುರು, ಕೆಂದಾವರೆಯೆಸಳಿನ ಕೆಂಪು, ಬತ್ತದ ತೆನೆಗಳ ಹಳದಿಯೆಂಬ ತ್ರಿವರ್ಣಗಳ ಭಂಗಿಯು, ಗದ್ದೆಯಲ್ಲಿ ತುಂಡಾಗಿ ಬಿದ್ದಿರುವ ಇಂದ್ರಧನುಸ್ಸಿನಂತೆ ಪ್ರೇಕ್ಷಕರಿಗೆ ವಿಸ್ಮಯವನ್ನುಂಟುಮಾಡುವುದು. ಹವಳದ ತುಂಡುಗಳಂತೆ ಕೆಂಪಾಗಿರುವ ಕೊಕ್ಕುಗಳಲ್ಲಿ ಹೊಂಬಣ್ಣದ ಬತ್ತದ ತೆನೆಗಳನ್ನು ಕಚ್ಚಿಕೊಂಡು ಹಾರುತ್ತಿರುವ ಕನ್ನಡವಕ್ಕಿಗಳು ಕಾಮನಬಿಲ್ಲನ್ನು ಕನ್ನಡಿಸುತ್ತಿರುವ ಚಾತುರ್ಯವೇನು ಸಾಮಾನ್ಯವೆ?

ನರನೇ, ಇಲ್ಲಿ ನಿರೀಕ್ಷಿಸು! ಮನೆಯಲ್ಲಿ ಮಕ್ಕಳನ್ನು ಬಿಟ್ಟುಹೋದ ತಾಯಂದಿರು ಮರಳಿ ಬರುವಾಗ ಮಮತೆಯಿಂದ ತಿಂಡಿಯನ್ನು ತರುವಂತೆ ಮೇಯಲು ಹುಲ್ಲುಗಾವಲಿಗೆ ಹೋಗಿದ್ದ ದನಗಳು ಕರುಗಳನ್ನು ನೆನೆದು ಕೆಚ್ಚಲುಗಳಲ್ಲಿ ತುಂಬ ಹಾಲನ್ನಿಳಿಸಿಕೊಂಡು ಮಂದೆಯನ್ನು ಬಿಟ್ಟು ಗೋವಳರ ಕೇರಿಗೆ ಓಡಿಬರುತ್ತಿವೆ! ಮಂತ್ರದಿಂದ ಪರಿಶುದ್ಧವಾದ ಆ

ಹುತಿಯು ಸಮಗ್ರಕಾಂತಿಯಿಂದೊಡಗೂಡಿರುವಂತೆ, ಜಗತ್ತಿಗೆ ಮೂಲವೂ ಪರಿಶುದ್ಧಿಗೆ ನಿದಾನವೂ ಆಗಿರುವ ಪಶುಗಳ ಮಂದೆಯು ಕರುಗಳೊಂದಿಗೆ ಹಟ್ಟಿಯ ಮುಂದೆ ನಿತ್ತುಕೊಂಡಿರುವುದನ್ನು ನೋಡಬೇಕಾದರೆ ಅಗಣ್ಯ ಪುಣ್ಯವಿರಬೇಡವೆ? ಇಲ್ಲಿ, ನವಿಲಿನ ಕೇಕೆಯಂತೆ ಗೋಪಿಕೆಯು ಷಡ್ಜಸ್ವರ ದಿಂದ ಹಾಡುತ್ತಿರುವುದನ್ನು ಕೇಳಿ, ಹುಲ್ಲುಮೇಯುತ್ತಿದ್ದ ಹುಲ್ಲೆಗಳು ಕಿವಿಗೊಂಡೆ ಮಾಡಿ ಮೇವನ್ನು ತೊರೆದುಬರುತ್ತ, ಗಾನವು ಹಸಿವೆಯ ಗೊಡವೆಯನ್ನೇ ಮರೆಯಿಸಿ ಬಿಡುವುದೆಂಬ ಜ್ಞಾನವನ್ನೊಡಮೂಡಿಸುವುವು.

ಅರಸನೇ, ಇಲ್ಲಿಯ ಕಾಡಿನ ಸಿರಿಯನ್ನು ನೋಡು! ಗಾಳಿಬೀಸು ವಾಗ ಹಾರಿಬರುವ ಸಪ್ತಚ್ಛದಪುಷ್ಪಧೂಳಿಗಳೆಂಬ ಸೀರೆಯ ಸೆರಗನ್ನು ಸೆಳೆದು ಸರಿಪಡಿಸಿಕೊಳ್ಳುತ್ತ, ನೀಲವರ್ಣದ ಗೋರಟೆಯ ಪುಷ್ಪಗಳೆಂಬ ಕಣ್ಣುಗಳಿಂದ ಓರೆಯಾಗಿ ನೋಡುತ್ತ, ಪುಷ್ಪವಿಕಾಸವೆಂಬ ಮಂದಹಾಸ ದೊಡನೆ ಮೆರೆಯುತ್ತ ಇರುವ ವನದೇವಿಯ ಘನತೆಯು ಪ್ರೇಕ್ಷಣೀಯ ವಲ್ಲವೆ?

ಹೀಗೆಂದು ಯಕ್ಷನು ಅರ್ಜುನನೊಡನೆ ಶರತ್ಕಾಲದ ವೈಭವವನ್ನು ವಿಧವಿಧವಾಗಿ ವಿವರಿಸಿ ಹೇಳುತ್ತ ಮುಂದುವರಿಯುತ್ತಿದ್ದನು. ಅಷ್ಟರಲ್ಲಿ ಎತ್ತರವಾಗಿ ತಲೆಯೆತ್ತಿ ಸೂರ್ಯಮಂಡಲವನ್ನು ಮರೆಯಿಸುತ್ತ, ನೀರಿಲ್ಲ ಸೋರಿ ಬಿಳಿಯಾದ ಮೋಡಗಳ ಸಮೂಹದಂತೆ ಶೋಭಿಸುವ ಹಿಮುಪ ದ್ವಿರೀಂದ್ರವು ಹತ್ತಿರದಲ್ಲೇ ಕಾಣತೊಡಗಿತು. ಆ ಪರ್ವತದ ಪಾರ್ಶ್ವ ಗಳಲ್ಲಿ ಬೆಳೆದ ಗೊಂಡಾರಣ್ಯಗಳ ನೀಲವನ್ನೂ, ಶಿಖರಗಳಲ್ಲಿರುವ ಹಿಮ ಸಮೂಹಗಳ ಬಿಳುಪನ್ನೂ ನೋಡುತ್ತಿದ್ದ ಅರ್ಜುನನಿಗೆ, ಮದವಿಲ್ಲದೆ ಪ್ರಶಾಂತನಾಗಿ ನೀಲವರ್ಣದ ಉತ್ತರಿಗೆಯನ್ನು ಧರಿಸಿಕೊಂಡ ಬಲರಾಮನ ಜ್ಞಾಪಕವುಂಟಾಯಿತು.

---

೧೧ ಹಿಮಗಿರಿಯ ದೃಶ್ಯ

ಉನ್ನತಿಯಲ್ಲಿ ತಾನೇ ಮೊದಲನೆಯವನೆನಿಸಬೇಕೆಂದು ಮಹಾ ಮೇರುವನ್ನು ಜಯಿಸಲು ಹೊರಟಿರುವ ಮಹತ್ವಾಕಾಂಕ್ಷಿಯಂತೆ, ಸವಿೂ

ಪದವರು ದೂರದವರೆಂಬ ಭಿನ್ನಭಾವವಿಲ್ಲದೆ ಸಮಸ್ತರಲ್ಲಿಯೂ ಸಮಾನ ದೃಷ್ಟಿಯಿರಬೇಕೆಂಬ ಕಾಂಕ್ಷೆಯಿಂದ ದಿಗಂತಗಳನ್ನವಲೋಕಿಸಲು ತಲೆ ಯೆತ್ತಿ ನಿಂತುಕೊಂಡಿರುವ ಸಮತಾವಾದಿಯಂತೆ. ಪ್ರತಿಸ್ಪರ್ಧಿಯನ್ನು ಕೆಡ ಹಾಕಿ ತಾನೇ ಹೆಸರುವಾಸಿಯಾಗಬೇಕೆಂದು ಆಕಾಶವನ್ನು ಮೀರಿಹೋ ಗಲು ಹೊರಟಿರುವ ಅಸಹಾಯಶೂರನಂತೆ ಮಹಾದ್ಭುತಕರವೆನಿಸುವ ಹಿಮವತ್ಪರ್ವತವು ಅರ್ಜುನನಿಗೆ ಮುಂದೆಸೆಯಲ್ಲಿ ಕಾಣಿಸಿತು. ಅದರ ಒಂದು ಭಾಗವು ಭಾಸ್ಕರಕಿರಣಗಳಿಂದ ದೇದೀಪ್ಯಮಾನವಾಗಿಯೂ, ಮತ್ತೊಂದು ಪಾರ್ಶ್ವವು ಕಣ್ಣುಗುತ್ತಿದರೂ ಕಾಣಿಸದಂತೆ ಗಾಢಾಂಧಕಾ ರಾವೃತವಾಗಿಯೂ ತೋರುವುದು, ಗಜಚರ್ಮಾಂಬರಧಾರಿಯಾದ ಗಿರೀ ಶನು ತಾನೇ ಮಹಾಟ್ಟಹಾಸದೊಡನೆ ರುದ್ರನಾಟ್ಯವಾಡುತ್ತಿರಲು, ಪ್ರತಿ ಬಿಂಬಿಸುವ ಛಾಯೆಗಳೇ ಹೀಗೆ ಬೆಳಕುಕತ್ತಲೆಗಳಾಗಿ ಕಾಣುತ್ತಿರಬಹುದೆ? ಆದರೆ ಕೈಯಲ್ಲಿ ತ್ರಿಶೂಲವಿಲ್ಲ; ಕಂಗೊಳಿಸುವ ಸರ್ವಮಂಗಳೆಯ ಮಂಗ ಳಾಂಗವು ತೋರುವುದಿಲ್ಲ; ಮಂಗಳಮಯನಾದ ಶಿವನಿವನಲ್ಲ. ಗಿರೀಶ ನಿಗೆ ಆಶ್ರಯವನ್ನು ಕೊಡುತ್ತ, ಸೂರ್ಯಚಂದ್ರರ ಗತಿಯನ್ನತಿಕ್ರಮಿಸಿ ರುವ ಗಿರೀಂದ್ರವಿದು. ಮನುಷ್ಯರೂ, ಗಂಧರ್ವರೂ ದೇವತೆಗಳೂ ತಮ್ಮೊಳಗೆ ಪರಸ್ಪರ ನೋಡಿಕೊಳ್ಳಲು ಸಾಧ್ಯವಾಗದಂತೆ ತಡೆಯುತ್ತ, ತ್ರಿಲೋಕವಾಸಿಗಳಿಗೂ ಆಶ್ರಯಕೊಡುತ್ತ, ಸಂಪಾದಿಸಿದ ಮಹತ್ವಿಕೆ ಯಿಂದ ಪರ್ವತರಾಜನೆನಿಸಿ ಮೆರೆಯುತ್ತಿರುವುದು. ಜಗದೊಡೆಯನಾದ ಮಹೇಶ್ವರನು ಮಾವನಾದ ತನ್ನ ಯೋಗ್ಯತೆಯನ್ನು ಮನಸಾ ಹೊಗಳು ತ್ತಿರುವನೆಂದೇ ಈ ಪರ್ವತವು ಹಿರಿಹಿಗ್ಗುತ್ತಿರಬಹುದು. ವಿಕಸಿತ ಕಮಲ ಗಳಿಂದ ಶೋಭಿಸುವ ಜಲಾಶಯಗಳನ್ನೂ, ಹಂಸನಿವಹಗಳನ್ನೊಳಗೊಂಡ ಮಾನಸಸರೋವರವನ್ನೂ, ಪಾರ್ವತಿಯೊಡನೆ ಪ್ರಣಯಕಲಹವೆಸಗುತ್ತ ಪ್ರಮಥರೊಡನೆ ಮೆರೆಯುವ ಶಂಕರನನ್ನೂ ಪಡೆದುಕೊಂಡಿರುವೆನೆಂಬ ಗರ್ವದಿಂದ ಉಬ್ಬಿದ ಹಾಗೆ ಬಹಳ ಎತ್ತರವಾಗಿ ತೋರುತ್ತಿರುವುದು.

ಫಳಫಳಿಸುವ ಬಂಗಾರದ ಗನಿಗಳುಳ್ಳ ಶಿಖರಗಳ ನಡುವೆ ತಲೆಯೆತ್ತಿ ನಿತ್ತಿರುವ ಈ ಹಿಮಗಿರಿಯು ಮಹಾಶೇಷನ ದೇಹದ ಹಾಗೆ, ಬಳ್ಳಿ ಮಿಂಚು ಗಳಿಂದ ಕೂಡಿದ ಶರತ್ಕಾಲದ ಮೋಡದ ಹಾಗೆ ನೋಡುವ ಜನರ ಕಣ್ಣು

ಗಳಿಗೆ ಸೊಗಸಿನ ಕಣಿಯಾಗಿರುವುದು. ಎಲ್ಲಿ ನೋಡಿದರೂ ರತ್ನರಾಶಿಗಳಿಲ್ಲದ ಶಿಖರಗಳಿಲ್ಲ! ಲತಾಮಂದಿರಗಳಿಲ್ಲದ ಕಂದರಗಳಿಲ್ಲ! ವಿಕಸಿತ ಕಮಲಗಳಿಂದ ವಿಲಸಿತವೆನಿಸದ ಜಲಾಶಯಗಳಿಲ್ಲ! ಹೂಗಳಿಂದ ಶೋಭಿಸದ ಮರಗಿಡಬಳ್ಳಿಗಳಿಲ್ಲ! ಶಿಖರಗಳಲ್ಲಿರುವ ದೊಡ್ಡ ದೊಡ್ಡ ಬಂಡೆಗಳ ನಡುವೆ ಬೆಳೆದ ಲತಾಭವನಗಳಲ್ಲಿ ಸ್ವೇಚ್ಛೆಯಿಂದ ದೇವನಾರಿಯರು ವಿಹರಿಸುತ್ತಿರುವುದರಿಂದ ಈ ಗಿರಿಯು ಉಪವನಗಳ ನಡುವೆ ಶೋಭಿಸುವ ಪಟ್ಟಣದಂತೆ ತೋರುವುದು. ದೇವಾಂಗನೆಯರು ವಿಹರಿಸುವ ಜಲಾಶಯಗಳಿಂದಲೂ, ರಮಣೀಯವಾದ ಲತಾಭವನಗಳಿಂದಲೂ, ಮಂದಾರ, ಅಶೋಕ, ಪಾರಿಜಾತ ಮೊದಲಾದ ದಿವ್ಯ ವೃಕ್ಷಗಳ ಸಂದಣಿಯಿಂದಲೂ, ಖಗ, ಮೃಗ, ಉರಗಗಳ ಸಂಕುಲಗಳಿಂದಲೂ ನಿಬಿಡವೆನಿಸಿ, ಪರ್ವತರಾಜನೆಂಬ ಅನ್ವರ್ಥನಾಮವನ್ನು ಪಡೆದು ವೈಭವದಿಂದ ಮೆರೆಯುತ್ತಿರುವುದು ಬಹುರಮಣೀಯವಾದ ದೃಶ್ಯವಲ್ಲವೆ?

ಇದರ ಪಕ್ಕಗಳಲ್ಲಿ ಬಿಳಿಯ ಮೋಡಗಳು ಗುಂಪಾಗಿ ಸೇರಿಕೊಂಡು ಮಿಂಚಿನ ಸುಳಿವಿಲ್ಲದೆ ಶಾಂತವಾಗಿರುವುದನ್ನು ಗಮನಿಸಿದರೆ. ಈಗ ತಾನೇ ರೆಕ್ಕೆಗಳೊಡಮೂಡಿ ಬಂದುದರಿಂದ ದೇವೇಂದ್ರನಿಗೆ ತಿಳಿಯದ ಹಾಗೆ ಗಿರಿಯು ಮೆಲ್ಲಗೆ ಹಾರಿ ಹೋಗಲು ಹವಣಿಸುವಂತೆ ಭಾಸವಾಗುವುದು. ದಿವ್ಯರತ್ನಪ್ರಭಾಪುಂಜದಿಂದ ಇಂದ್ರಧನುಸ್ಸಿನ ವೈಭವವನ್ನೂ, ಹಿಮದ ಗುಂಪುಗಳಿಂದ ಶರತ್ಕಾಲದ ಮೋಡಗಳ ತಾದಾತ್ಮ್ಯವನ್ನೂ ಪಡೆದಿರುವುದರಿಂದ ಈ ಪರ್ವತವು ಆಕಾಶದೊಡನೆ ಅಭಿನ್ನವೆನಿಸಿರುವುದು. ಬಹುಶಿಖರಗಳೇ ಪರ್ವತಜ್ಞಾನಸೂಚಕಗಳೆಂದೂ, ಮೇಘನಿರ್ಘೋಷವೇ ಗಗನಜ್ಞಾನಕ್ಕೆ ಮೂಲವೆಂದೂ ತಮ್ಮ ಜಾಣ್ಮೆಯನ್ನು ಉಪಯೋಗಿಸಿಕೊಂಡೇ ಪ್ರೇಕ್ಷಕರು ಆಕಾಶ ಪರ್ವತಗಳನ್ನು ನಿರ್ಧರಿಸಿಕೊಳ್ಳಬೇಕು. ಸ್ವರ್ಣದ ಗನಿಗಳುಳ್ಳ ಪರ್ವತದ ಪಾದಗಳಲ್ಲಿ ಕೆಂಪುದಾಸವಾಳದ ಪುಷ್ಪಗಳಂತೆ ರಂಜಿಸುವ ಪದ್ಮರಾಗಮಣಿಗಳು ಪ್ರತಿಬಿಂಬಿಸುವುದರಿಂದ ಸಂಧ್ಯಾರಾಗವನ್ನು ಕಲ್ಪಿಸುತ್ತ ಪರ್ವತವು ಸೌಂದರ್ಯದ ಗನಿಯಾಗಿರುವುದು. ಇದರ ಸಾನು ಪ್ರದೇಶಗಳಲ್ಲಿರುವ ಕಾಡುಗಳು ನೋಡಲು ಸಾಮಾನ್ಯವಲ್ಲ; ಸಾಲುಸಾಲಾಗಿರುವ ಕದಂಬಗಳ ಮತ್ತು ಮಾಲಾಕಾರದ ತಮಾಲಗಳ

ನಡುವೆ ಸ್ವೇಚ್ಛೆಯಿಂದ ಸಂಚರಿಸುತ್ತ, ವಿನೋದದಿಂದ ವಿಹರಿಸುವ ಕರಿಘಟೆಗಳು, ಜಲಧರಗಳಂತೆ ಸೊಂಡಿಲುಗಳಿಂದ ಶೀಕರಗಳನ್ನು ಸುರಿಸುತ್ತಿರುವುದು ಬಹುವಿನೋದಪ್ರದವು. ಈ ಪರ್ವತವು ನಿತ್ಯವೂ ರಾತ್ರಿ ವೇಳೆ ಗ್ರಹಗಳೂ, ಖೇಚರರೂ, ದೇವವಿಮಾನಗಳೂ ಸಂಚರಿಸಲು ಅನುಕೂಲವಾಗುವಂತೆ, ತನ್ನಲ್ಲಿರುವ ಔಷಧಿಗಳ ಮೂಲಕ ಜಾಜ್ವಲ್ಯಮಾನವಾದ ಪ್ರಭಾಪುಂಜವನ್ನು ಬೀರುತ್ತ, ನೋಡುವ ಪ್ರಮಥಗಣಗಳಿಗೆ ತ್ರಿಪುರದಾಹವು ನಡೆಯುವುದೆಂಬ ಭ್ರಮೆಯನ್ನು ಕಲ್ಪಿಸುತ್ತಿರಬಹುದು. ತಡೆಯುವ ಬಂಡೆಗಳ ಬಳಿಯಲ್ಲಿ ಮೆಲ್ಲಮೆಲ್ಲನೆ ಸುಳಿಯುತ್ತ, ಬಿರುಕುಗಳಲ್ಲಿ ನುಸುಳುತ್ತ, ಬೀಳುತ್ತ, ಮುಂದೊತ್ತಿ ಪ್ರವಹಿಸುತ್ತಿರುವಾಗ, ತುಂತುರುಗಳನ್ನು ಮೇಲಕ್ಕೆ ಹಾರಿಸುತ್ತ, ಅದ್ರಿರಾಜನೆನಿಸಿದ ತನಗೆ ಚಾಮರವನ್ನು ಬೀಸುತ್ತಿರುವಂತೆ ಹರಿಯುವ ಹರಿಪಾದಸಂಭೂತೆಗೆ, ಹರಶಿರೋನಿವಾಸಿನಿಗೆ, ಪರಬ್ರಹ್ಮಕಮಂಡಲುತೀರ್ಥರೂಪಿಣಿಗೆ, ತ್ರಿಭುವನಸಂಚಾರಿಣಿಗೆ, ಗಂಗಾಮಾತೆಗೆ ತಾನು ಆಶ್ರಯದಾತನೆನಿಸಿ ಮೆರೆಯುವ ಹಿಮಾದ್ರಿಯ ವೈಭವಾತಿಶಯವನ್ನು ಕಣ್ದಣಿಯೆ ನೋಡುತ್ತಿದ್ದ ಅರ್ಜುನನೊಡನೆ ಯಕ್ಷನು ಹೀಗೆಂದನು.

ಅರ್ಜುನನೇ, ನೋಡು. ಮಂಜುಗಡ್ಡೆಗಳಿಂದ ಬೆಳಗುವ ಶಿಖರಗಳಿಂದ ಮೋಡದ ದಾರಿಯನ್ನು ಭೇದಿಸಿಕೊಂಡು ನೆಗೆಯುತ್ತಿರುವಂತೆ, ಮಹೋನ್ನತವೆನಿಸಿ ಹಿಮವಂತನೆಂಬ ಅನ್ವರ್ಥನಾಮದಿಂದ ಮೆರೆಯುತ್ತಿರುವ ಈ ಹಿಮಗಿರಿಯು, ದರ್ಶನ ಮಾತ್ರದಿಂದಲೇ ಪ್ರೇಕ್ಷಕರ ಪಾಪಸಂಚಯವನ್ನು ಪರಿಹರಿಸುವುದು. ವಿಶ್ವವ್ಯಾಪಿಯಾದ ಪುರಾಣಪುರುಷನನ್ನು ಪುರಾಣಗಳೇ ವರ್ಣಿಸುವಂತೆ, ದುರ್ಗಮಾರಣ್ಯಗಳಿಂದ ದುಸ್ತರವೆನಿಸಿ ದಿಗಂತ ವ್ಯಾಪಿಯಾದ ಪರ್ವತದ ಮಧ್ಯಭಾಗವನ್ನು ನೋಡಿದವರೊಬ್ಬರೂ ಇಲ್ಲದ ಕಾರಣ, ಇದರ ನಿಜತ್ವವನ್ನು ಸ್ವಯಂಭು ತಾನೆ ವರ್ಣಿಸಬೇಕಲ್ಲದೆ, ಇತರರಿಂದ ಸಾಧ್ಯವಿಲ್ಲ. ಇಲ್ಲಿ ಋತುಭೇದಗಳ ವಿಚಾರವಿಲ್ಲ; ಯಾವಾಗಲೂ ಒಂದೇ ವಿಧವಾಗಿ ಪಲ್ಲವಪುಷ್ಪಗಳಿಂದ ಶೋಭಿಸುವ ಲತಾಭವನಗಳಿಂದಲೂ, ಜಲಜಗಳಿಂದೊಪ್ಪುವ ಜಲಾಶಯದಿಂದಲೂ, ಇದು ಮನೋಜ್ಞವೆನಿಸುವ ವಿಹಾರಸ್ಥಾನವಾಗಿ ಉತ್ಸಾಹವನ್ನು ಹೆಚ್ಚಿ

ಸುತ್ತ, ಸ್ತ್ರೀಪುರುಷರಿಗೆ ಅತುಲಾನಂದದಾಯಕವು. ನೀತಿವಂತರಿಗೂ ಭಾಗ್ಯಶಾಲಿಗಳಿಗೂ ಮಾತ್ರವೇ ದೊರೆಯತಕ್ಕ ನವನಿಧಿಗಳಿಗೆ ಆಕರವೆನಿಸುವ ಈ ಗಿರಿಯ ಹೆಸರೆತ್ತಿದೊಡನೆ, ಧನಾಧಿಪನೆನಿಸಿದ ಕುಬೇರನಾದರೂ ಆಶಾಭರಿತನಾಗುವನು. ಇದರ ದೆಸೆಯಿಂದಲೇ ಭೂಮಿಯು ವಸುಮತಿಯೆನಿಸಿ ಸ್ವರ್ಗಪಾತಾಲಗಳನ್ನು ಮೀರಿಸುತ್ತಿರುವುದು. ಗೌರೀಗುರುವೆನಿಸಿ ಭಾಗ್ಯಶಾಲಿಯಾದ ಹಿಮವಂತನ ಯೋಗ್ಯತೆಯೊಡನೆ ತ್ರಿಭುವನದ ಗೌರವವು ಕಡಮೆಯಾದುದರಿಂದಲೇ ಗಿರಿಜಾರಮಣನು ಇದನ್ನೇ ತನ್ನ ವಸತಿಯನ್ನಾಗಿ ಕಲ್ಪಿಸಿಕೊಂಡು ಗಿರಿಶನೋ ಗಿರೀಶನೋ ಎನಿಸಿರಬೇಕು. ಜನ್ಮಜರಾದಿಗಳ ಸಂಪರ್ಕವಿಲ್ಲದೆ ಪರಮಾತ್ಮನ ಸಂಬಂಧವುಳ್ಳ ಉತ್ತಮೋತ್ತಮ ಸ್ಥಾನವೆನಿಸುವ ಮೋಕ್ಷವನ್ನು ಪಡೆಯಬೇಕೆಂಬವರಿಗೆ ಶಾಸ್ತ್ರದ ದೆಸೆಯಿಂದ ಅಜ್ಞಾನವು ಪರಿಹಾರವಾಗುವಂತೆ, ಸಂಸಾರಭ್ರಮಣೆಯಿಂದ ಬೇಸತ್ತವರಿಗೆ ಬಿಡುಗಡೆಹೊಂದತಕ್ಕ ಸುವಿಚಾರಗಳು ಇಲ್ಲಿಯೇ ಉಂಟಾಗುವುವೆಂದರೆ, ಈ ಪರ್ವತವು ಭೋಗಭೂಮಿಯು ಮಾತ್ರವಲ್ಲ; ಮುಕ್ತಿಕ್ಷೇತ್ರವೂ ಎನಿಸಿರುವುದು. ನೀತಿಸಂಪನ್ನನಾದ ಅರಸನಲ್ಲಿ ನೆಲಸಿದ ಸಂಪತ್ತುಗಳು ತಮ್ಮ ಗುಣಗಳನ್ನು ತೋರ್ಪಡಿಸುವ ಹಾಗೆ, ತ್ರಿಭುವನಸೇವ್ಯವಾದ ಈ ಪರ್ವತದಲ್ಲಿ ಹುಟ್ಟಿ ಬೆಳೆದಿರುವ ಓಷಧಿ ವಿಶೇಷಗಳು ಕ್ಷೇತ್ರಗುಣಪ್ರಭಾವದಿಂದಲೇ ಸದಾ ಜ್ವಲಿಸುತ್ತಿರುವುವು. ಆದುದರಿಂದಲೇ ಹಿಮವಂತನು ಓಷಧಿಪ್ರಸ್ಥಪುರಾಧಿಪನೆನಿಸಿದನು; ಮಾತ್ರವಲ್ಲ, ನಗಾಧಿಪನೂ ಎನಿಸಿದನು.

ಅರ್ಜುನನೇ ಇಲ್ಲಿಯ ಸಮೃದ್ಧಿಯನ್ನು ಇನ್ನೇನೆಂದು ಹೇಳಲಿ! ಚಿಲಿಪಿಲಿಗುಟ್ಟುವ ಪಕ್ಷಿಸಂಕುಲದ ಕೋಲಾಹಲವೇನು! ಅರಳಿದ ಹೂಗಳು ತುಂಬಿ ಕುಂಬಿಡುವಂತೆ ತೋರುವ ರೆಂಬೆಗಳುಳ್ಳ ತರುನಿಕರಗಳ ರಮಣೀಯತೆಯೇನು! ಮೆರೆವ ತಾಮರೆಗಳಿಂದ ಮರೆಯೆನಿಸಿದ ಸರೋವರಗಳ ಪೂರ್ಣತೆಯೇನು! ಎಡೆಯೆಡೆಯಲ್ಲಿ ಬೆಳೆದು ಪೊಡವಿಯ ಸರ್ವಸಹಿಷ್ಣುತೆಯ ಬಳಲಿಕೆಯನ್ನು ಪರಿಹರಿಸುವ ಮುಡಿವಾಳಗಳೇನು! ಓರಣದಿಂದ ತೋರಿ ಬರುವ ಮರಗಳ ಆವರಣವೇನು! ಮದಭರದಿಂದ ಮೆರೆವ ಗಜಘಟೆಗಳ ವಿಹಾರಕ್ಕಾಗಿ ಹರಿವ ತೊರೆಗಳ ಭರವೇನು! ಹೀಗೆ

ರಮಣೀಯವಾದ ಇಲ್ಲಿನ ವನಪ್ರದೇಶಗಳಲ್ಲಿ ಸುರಲೋಕದ ಗಜೇಂದ್ರಗಳು ಬಂದು ಸ್ವೇಚ್ಛೆಯಿಂದ ವಿಹರಿಸುತ್ತ, ಮದವೆದ್ದ ಆತುರದಿಂದ ಕಪೋಲಗಳನ್ನು ಮರಗಳಿಗೆ ತೀಡುತ್ತಿರಲು, ಸುರಿಯುವ ಮದಜಲದ ಸೊಗಡಿಗೆ ತುಂಬಿಗಳು ತುಂಬಿ ಝೇಂಕರಿಸುತ್ತಿರುವುವು. ಆ ಗಂಧಸಾಮ್ಯದಿಂದ "ಓಹೋ ರಸಾಲಯುಗಳು ಅರಳಿದುವು; ನಾವಿನ್ನು ಸುಮ್ಮನಿರಬಾರದು" ಎಂದು ಭ್ರಮಿಸಿ ಕೋಗಿಲೆಗಳು ಅಕಾಲದಲ್ಲಿಯೂ ಪಂಚಮಸ್ವರದಿಂದ ಹಾಡುತ್ತಿರುವುವು. ಮಂದಗಮನದಿಂದ ಮುಂದುವರಿಯುವ ದೇವಾಂಗನೆಯರ ಒಡ್ಯಾಣಗಳ ಕಿರುಗೆಜ್ಜೆಗಳ ಮಂಜುಲನಿನಾದದಂತೆ, ನದಿಗಳು ಕಲಕಲರವದೊಡನೆ ಮೆಲ್ಲಮೆಲ್ಲನೆ ಪ್ರವಹಿಸುತ್ತಿವೆ. ಎಲ್ಲೆಲ್ಲಿಯೂ ದೊರೆಯದಿರುವ ಅಮೃತವು ಇಲ್ಲಿ ಪ್ರವಾಹರೂಪದಿಂದ ಉಗಮಿಸಿ, ಮಹಾಶೇಷನ ಬೇಡಿಕೆಯನ್ನು ಮನ್ನಿಸುವುದಕ್ಕಾಗಿ, ಈ ಅಮೃತವಾಹಿನಿಗಳು ಪಾತಾಳದಲ್ಲಿ ಸಂಗಮಹೊಂದುವುವು.

ಪಾಂಡವನೇ, ಎತ್ತೆತ್ತಲೂ ತೋರುವ ವೈಭವದ ಪ್ರಭಾವವನ್ನು ನೋಡು—ದೇವಲೋಕದ ಭವ್ಯವಿಲಾಸಮಂದಿರಗಳನ್ನು ಮೀರಿಸುವ ಲತಾಮಂದಿರಗಳೂ, ಅಲ್ಲಿ ಬೆಳಗುವ ದೀಪಗಳನ್ನು ತಿರಸ್ಕರಿಸುವ ಓಷಧಿಗಳೆಂಬ ಪ್ರದೀಪಗಳೂ, ಅಲ್ಲಿಯ ಮೆಲ್ವಾಸುಗಳನ್ನು ತಾತ್ಸಾರಗೊಳಿಸುವ ಹರಿಚಂದನಪಲ್ಲವಶಯ್ಯೆಗಳೂ, ಅಲ್ಲಿಯ ನಂದನದ ಮೂಲಕ ಬೀಸುವ ಮಂದಮಾರುತವನ್ನು ನಿಂದಿಸುತ್ತ ಶೈತ್ಯಸೌರಭ್ಯಮಾಂದ್ಯಗಳೆಂಬ ತ್ರಿಗುಣಾತ್ಮಕವೂ ರತಿಶ್ರಮಾಪಹಾರಕವೂ ಎನಿಸಿ ಬೀಸುವ ಸರೋಜಾನಿಲವೂ, ಇಲ್ಲಿಗೆ ವಿಹಾರಕ್ಕಾಗಿ ಬಂದ ಸುರಸುಂದರಿಯರಿಗೆ ಸ್ವರ್ಲೋಕದ ನೆನಪನ್ನೇ ಮರೆಯಿಸುವುವು.

ನರನೇ ನೋಡು! ಈ ಸರೋವರದಲ್ಲಿ ಮೊದಲು ಗಿರಿಜಾತೆಯು ಪರಮೇಶ್ವರನನ್ನೊಲಿಸಬೇಕೆಂದು, ಕಡುಚಳಿಗಾಲದಲ್ಲಿ ನೀರಲ್ಲಿ ನಿತ್ತುಕೊಂಡು ತಪಸ್ಸುಮಾಡುತ್ತಿದ್ದಳು. ನೀರೊಳಗೆ ಜಲಜಂತುಗಳು ಫಕ್ಕನೆ ಚಲಿಸಿದುದರಿಂದ ಉಂಟಾದ ಗಾಬರಿಯಿಂದ ಆಕೆಯ ನೇತ್ರಕಮಲಗಳು ಚಲಿಸಿದುದನ್ನು ನೋಡಿ ಸೈರಿಸಲಾರದೆ, ಪರಮಕಾರುಣಿಕನಾದ ಶಿವನು ಬಂದು, ತನ್ನ ಸ್ನಿಗ್ಧಾಗ್ರಹಸ್ತದಿಂದ ದೇವಿಯ ಕರಪಲ್ಲವವನ್ನವಲಂಬಿ

ಸಿದನು. ಇಲ್ಲಿರುವ ಪಂಕಜವನವು ಮಂದಮಾರುತನ ಅಲೆದಾಟದಿಂದ ಆಂದೋಲಿತವಾಗಿ, ವಿಲಾಸಿನಿಯರ ಭ್ರೂಭಂಗದಂತೆ ಅಲೆಗೊಂಡ ಸರೋವರದಲ್ಲಿ ವಿಲಾಸದಿಂದ ನಾಟ್ಯವಾಡುತ್ತಿರುವುದು. ಇಲ್ಲಿ ನೋಡು! ಸರ್ವಮಂಗಳೆಯ ಮಂಗಳಮಯವಾದ ವಿವಾಹಗೇಹವು ಕಂಗೊಳಿಸುವುದು! ಪಿನಾಕಪಾಣಿಯು ಮದುವಣಿಗನಾಗಿ ಇಲ್ಲಿಗೆ ಬಂದು ಪಾಣಿಗ್ರಹಣಕ್ಕಾಗಿ ಮಂಟಪದಲ್ಲಿ ಕುಳಿತಾಗ, ಹಸ್ತಕಂಕಣವಾಗಿದ್ದ ಸರ್ಪವನ್ನು ನೋಡಿ ಹೆದರಿದ ದೇವಿಯ ಕಣ್ಣುಗಳು ಥಕ್ಕನೆ ಮುಚ್ಚಿಕೊಂಡುವು. ಕೂಡಲೆ ಮಹೇಶ್ವರನು ಮಂದಹಾಸದೊಡನೆ ಈಶ್ವರೀಕರಗ್ರಹಣವನ್ನು ನೆರವೇರಿಸಿದನು.

ಅದೋ! ಮುಂದೆಸೆಯಲ್ಲಿ ಮಂದರಪರ್ವತವು! ವೃಂದಾರಕಲೋಕವನ್ನು ಮೀರುವೆನೆಂದು ಘುಂದುವರಿಯುವಂತೆ ಅತ್ಯುನ್ನತವಾಗಿ ವಿರಾಜಿಸುತ್ತಿರುವುದು. ಹಿಂದೆ ಅಮೃತಲಾಭಕ್ಕಾಗಿ ಸಮುದ್ರವನ್ನು ಕಡೆಯಬೇಕೆಂದು ದೇವಾಸುರರೊಂದಾಗಿ ಬಂದು ಬಹಳ ಪ್ರಯಾಸದಿಂದ ಇದನ್ನೆತ್ತಿಕೊಂಡು ಹೋಗಿ ಕ್ಷೀರಸಾಗರದಲ್ಲಿ ಇಳಿಸಿದರು. ಆಗ ಇದರ ಭಾರದಿಂದ ಕ್ಷೀರವೆಲ್ಲ ತೊಲಗಲು ತಳಕ್ಕಿಳಿದು ಪಾತಾಳವನ್ನು ಸೇರಿ, ಆದಿಕೂರ್ಮನಿಂದ ಉದ್ಧೃತವಾಗಿ ಕಡೆಗೆ ಕಡಗೋಲಾಗಿ ಪ್ರಸಿದ್ಧಿಗೆ ಬಂತು. ಆಗ ವಾಸುಕಿಯನ್ನು ಬಿಗಿದು ತಿರುಗಿಸಿದುದರಿಂದ ಉಂಟಾದ ಗೆರೆಯು ಸ್ಪಷ್ಟವಾಗಿ ಇಂದಿಗೂ ಕಾಣುತ್ತಿರುವುದು. ಇಲ್ಲಿರುವ ಇಂದ್ರನೀಲರತ್ನಗಳು ಸೂರ್ಯಕಿರಣಗಳ ಸ್ಫುರಣೆಯಿಂದ ರಾಜಹಂಸಗಳಂತೆ ತೋರುತ್ತ, ಸ್ಫಟಿಕರಜತವಿರಚಿತಗಳಾದ ಭಿತ್ತಿಗಳ ಕಾಂತಿಯನ್ನು ಬೀರುತ್ತ ಮಟ್ಟಮಧ್ಯಾಹ್ನದಲ್ಲಿಯೂ ಮನಸ್ಸಿಗೆ ಬೆಳದಿಂಗಳೆಂಬ ಭ್ರಾಂತಿಯನ್ನು ಕಲ್ಪಿಸುತ್ತಿರುವುವು.

ಅರ್ಜುನನೇ, ಕಾಣುತ್ತಿರುವುದಿದು ಕೈಲಾಸವು. ಪೂರ್ವದಲ್ಲಿ ಕುಬೇರನಿಲ್ಲಿಗೆ ಬಂದು ತ್ರಿಪುರಾರಾತಿಯನ್ನು ಮೆಚ್ಚಿಸಬೇಕೆಂಬ ಬಯಕೆಯಿಂದ, ಅತ್ಯುನ್ನತವಾದ ಗೋಪುರದಿಂದ ಮೆರೆಯುವ ಅಲಕಾನಗರವನ್ನು ನಿರ್ಮಿಸಿ, ಶಿವಾರಾಧನೆಗಾಗಿ ನೆಲಸಿದನು. ಇಲ್ಲಿಯ ಉತ್ತುಂಗಶೃಂಗಗಳಲ್ಲಿರುವ ಅನಂತಸ್ಫಟಿಕರತ್ನಪ್ರಭೆಗಳು, ಅನಂತವಾದ ಅಂತರಿಕ್ಷವನ್ನು

ವ್ಯಾಪಿಸಿಕೊಂಡು, ದಿನಕರಕಿರಣಗಳೊಡನೆ ಅಭಿನ್ನತೆಯಿಂದ ಬೆರೆತು ಕೊಳ್ಳುವುದನ್ನು ಗಮನಿಸಿದರೆ, ಅವು ಭಗವಂತನಾದ ಸಹಸ್ರಕಿರಣನಿಗೆ ಸಹಸ್ರಾಧಿಕಕಿರಣನೆಂಬ ನಾಮಧೇಯವನ್ನು ರೂಢಿಗೆ ತರಲು ಹವಣಿಸುತ್ತಿರುವಂತೆ ತೋರುವುವು. ಸ್ವಪ್ರಭೆಯಿಂದ ದೇದೀಪ್ಯಮಾನವಾದ ಈ ಗಿರಿಯು, ಸಮೀಪದಲ್ಲಿ ಸಂಚರಿಸುವ ಸೂರ್ಯನಿಗೆ ಭ್ರಮೆಯನ್ನುಂಟು ಮಾಡುತ್ತ, ಆತನ ಕಾಲಗತಿಗೆ ವ್ಯತ್ಯಾಸವನ್ನು ತಂದೊಡ್ಡುವುದು. ಈ ಗಿರಿಶಿಖರಗಳಲ್ಲಿರುವ ಬಗೆಬಗೆಯ ರತ್ನಪ್ರಭೆಗಳು, ಶರತ್ಕಾಲದ ಮೋಡಗಳ ಎಡೆಯಲ್ಲಿ ತುಂಡಾದಂತೆ ಕಂಡುಬರುವ ಕಾಮನಬಿಲ್ಲನ್ನು ಪೂರ್ತಿಗೊಳಿಸುವ ಅಂದವೇನೂ ಸಾಮಾನ್ಯವಲ್ಲ. ಈ ರಜತಾದ್ರಿಯ ತುಟ್ಟತುದಿಯಲ್ಲಿ ನಿತ್ತ ಬೆಳ್ಳಗೆ ಶೋಭಿಸುತ್ತ ನಂದೀಶ್ವರನು ಮದಿಸಿ ಕಾಲಿನಿಂದ ಮಣ್ಣುಕೆದರುತ್ತಿರುವುದನ್ನು ನೋಡಿ ಮುಗ್ಧೆಯರು, ಚಂದ್ರನು ಮೂಡಿ ಬರುವನೆಂದು ಭ್ರಮಿಸಿಕೊಳ್ಳುವರು. ಮಹೇಶ್ವರನ ಶಿರೋಭೂಷಣವಾದ ಚಂದ್ರಲೇಖೆಯು ಅಮೃತದ ತುಂತುರುಗಳನ್ನು ಸುರಿಸುತ್ತ, ಈ ಗಿರಿಯ ಮಹಾರಣ್ಯವನ್ನು ಪಕ್ಷಭೇದವಿಲ್ಲದಂತೆ ಯಾವಾಗಲೂ ಒಂದೇ ರೀತಿಯಿಂದ ಬೆಳಗಿಸುತ್ತಿರುವುದು. ಚಲಿಸುವ ತರುಲತಾಪತ್ರಗಳ ಎಡೆಗಳ ಮೂಲಕ ನುಸುಳಿ ಬರುವ ಬಿಸಿಲು ಇಲ್ಲಿ ಥಳಥಳಿಸುವ ಬೆಳ್ಳಿವೆಟ್ಟಗಳ ಮೇಲೆ ಬಿದ್ದು ಅಡಿಗಡಿಗೆ ಜಗಜಗಿಸುವ ದೃಶ್ಯವು ಪ್ರೇಕ್ಷಣೀಯವು. ಈ ಪರ್ವತದ ಮಗ್ಗಲುಗಳಲ್ಲಿ ಹರಿಣಗಣಗಳು, ಬಾಲತೃಣಗಳೆಂಬ ಭ್ರಾಂತಿಯಿಂದ ತಿಂದು ಜಗಿಯಲಾರದೆ ಉಗುಳಿದ ಮರಕತಮಣಿಜಾಲಗಳು, ಸೂರ್ಯಕಿರಣಗಳೊಡನೆ ತೇಜೋವಿನಿಮಯವೆಸಗುತ್ತ, ಶುಕೋದರಗಳ ಹಾಗೆ ಶೋಭಿಸುತ್ತಿವೆ.

ಕೌಂತೇಯನೇ, ಈ ಗಂಗಾತೀರದ ಎಳೆಯ ಹುಲ್ಲಿನ ಹಸುರು ಎಂದಿಗೂ ಕುಂದಲಾರದು. ಕಮಲವನಗಳ ಕೋಮಲವಾದ ಶ್ಯಾಮಲತೆಯು ಯಾವಾಗಲೂ ನೀಗಲಾರದು. ಬಗೆಬಗೆಯ ಹೂಗೊಂಚಲುಗಳಿಂದ ಶೋಭಿಸುವ ತರುಲತಾಕಿಸಲಯಗಳ ಅರುಣತೆಯು ಅನವರತವೂ ನೂತನವಾಗಿರುವುದು. ಈ ಕಡೆಯ ಬೆಟ್ಟಗಳಲ್ಲಿ ಅರಳಿರುವ ಬೆಟ್ಟದಾವರೆಗಳ ಪರಾಗಗಳನ್ನು ಗಾಳಿಯು ಗಂಗಾನದಿಯ ನೀರಲ್ಲಿ ತಂದು ಹಾಕಿರುವುದು.

ಅವೆಲ್ಲ ತೆರೆಗಳ ಮೂಲಕ ಒಟ್ಟಾಗಿ ಸೇರಿ ದಂಡಾಕಾರವಾಗುವುವು; ಸರಸಿಜಗಳಿಗೆ ಎರಗುವ ತುಂಬಿಗಳು ರೇಗಿ ಪರಾಗಗಳನ್ನು ಕೆದರಲು ಅವು ನೀರಲ್ಲಿ ಬಿದ್ದು ಪೀತಾಂಬರದಂತೆ ಪಸರಿಸುವುವು; ಆಗ ದಂಡವೂ ಪೀತಾಂಬರವೂ ಒಟ್ಟು ಸೇರಿ ಗಂಗಾದೇವಿಗೆ ಹಿಡಿದ ಕನಕಾತಪತ್ರದಂತೆ ನೋಡಲು ರಮಣೀಯವಾಗಿರುವುದು. ಗಂಗಾನದಿಯ ಸೈಕತವೇದಿಕೆಯನ್ನು ನೋಡು. ಇಲ್ಲಿ ಜೊತೆಜೊತೆಯಾಗಿ ಕಾಣುವ ಎರಡು ಹೆಜ್ಜೆಗಳಲ್ಲಿ ಒಂದು ಮಾತ್ರ ಕಿರಿದಾಗಿರುವುದಲ್ಲದೆ, ಲಾಕ್ಷಾರಸದಿಂದ ಅಂಕಿತವಾಗಿರುವುದು. ಈ ರೀತಿಯ ಪಾದವಿನ್ಯಾಸಗಳು "ಅರ್ಧನಾರೀಶ್ವರನು ಉಷಃಕಾಲದಲ್ಲಿ ಬಂದು ಪುಣ್ಯೋದಕದಲ್ಲಿ ಮಿಂದು ನಿತ್ಯನಿಯಮದಂತೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿಹೋಗಿರುವನು" ಎಂಬ ಸಂಗತಿಯನ್ನು ಸೂಚಿಸುತ್ತಿವೆ.

ಅರ್ಜುನನೇ ಇತ್ತ ನೋಡು. ಪೀತಾಂಬರದ ಉತ್ತರಿಗೆಯನ್ನು ಧರಿಸಿಕೊಂಡಿರುವಂತೆ ವನಾಂತದಲ್ಲಿ ಉದ್ವಕ್ಕೂ ಸ್ವರ್ಣಕಾಂತಿಯನ್ನು ಪಸರಿಸುತ್ತ, ಸ್ವರ್ಣಮಯ ಕಂದರಗಳಿಂದೊಪ್ಪುವ ಈ ಪರ್ವತವು, ನಿನ್ನ ತಂದೆಯಾದ ದೇವೇಂದ್ರನಿಗೆ ಪ್ರಿಯವೆನಿಸಿ "ಇಂದ್ರಕೀಲ"ವೆಂಬ ಹೆಸರಿನಿಂದ ಜಗತ್ಪ್ರಸಿದ್ಧವಾಗಿರುವುದು. ಮರಗಿಡಬಳ್ಳಿಗಳಿಂದ ಕಿಕ್ಕಿರಿದ ಇಲ್ಲಿಯ ಕಾಡುಗಳಲ್ಲಿ, ಒಂದನ್ನೊಂದು ಸೇರಿಕೊಂಡಿರುವ ಲತೆಗಳು ಗಾಳಿಯ ಅಲೆದಾಟಕ್ಕೆ ಸಿಲುಕಿ ಭಂಗಪಡೆದಂತೆ ಒಂದನ್ನೊಂದು ಬಿಟ್ಟು ತೊಲಗುವಾಗ, ನದೀತೀರದಲ್ಲಿರುವ ಬಂಗಾರದ ಹೊಳಪು ಸೂರ್ಯರಶ್ಮಿಗಳಿಂದ ಉತ್ತೇಜನಗೊಂಡು ಮಿಂಚಿನ ಗೊಂಚಲನ್ನು ಅನುಕರಿಸುತ್ತಿರುವುವು. ಈ ಪರ್ವತದಲ್ಲಿ ದಟ್ಟವಾಗಿ ವ್ಯಾಪಿಸಿರುವ ಇಂದ್ರನೀಲಮಣಿಗಳ ಪ್ರಭಾಪುಂಜವು ಗಹನಗಹ್ವರಗಳೆಲ್ಲವನ್ನೂ ಕತ್ತಲಿಸುತ್ತ, ಕಾರ್ಮೋಡದಂತೆ ಸೂರ್ಯನ ಬಿಸಿಲನ್ನು ತಡೆಯುತ್ತಿರುವುದು. ಇದೋ—ಸಿಗುರೆದ್ದ ಹರಿಚಂದನವೃಕ್ಷಗಳೂ, ಇವುಗಳ ಕೆಳಗೆ ಕಳೆಗೆಟ್ಟು ಬಿದ್ದಿರುವ ಸರ್ಪಸಂಕುಲಗಳೂ, ಮದಿಸಿಯೂ ಸ್ವೇಚ್ಛೆಯಿಂದ ಓಡಾಡದಿರುವ ಆನೆಗಳ ಹಿಂಡುಗಳೂ ಕೂಡ "ಐರಾವತವಿಲ್ಲಿಗೆ ಬಂದು ಈ ಮರಗಳ ಮೂಲಕ ತನ್ನ ಕಪೋಲಕಂಡೂತಿಯನ್ನು ಪರಿ

ಹರಿಸಿಕೊಂಡು ಈಗ ತಾನೇ ಹೋಗಿರುವುದು" ಎಂಬ ಸಂಗತಿಯನ್ನು ಸಾರಿ ಹೇಳುವಂತೆ ತೋರುತ್ತಿರುವುವು.

ಅರ್ಜುನನೇ, ವೇದವ್ಯಾಸಮುನಿಯ ಉಪದೇಶದಿಂದ ನಿನ್ನ ಮನಸ್ಸು ಪ್ರಶಾಂತವಾಗಿರುವುದು. ಹಾಗೆಯೇ ನೀನಿಲ್ಲಿಗೆ ತಪಸ್ಸುಮಾಡುವುದಕ್ಕಾಗಿ ಬಂದಿರುವೆ. "ಲೋಕದಲ್ಲಿ ಜನರು ಸದ್ವ್ಯಾಪಾರಪ್ರವೃತ್ತರಾಗಿ ನಿರಂತರವೂ ಶ್ರಮವನ್ನು ವಹಿಸುವರಾದರೂ ತೊಂದರೆಗಳಿಲ್ಲದೆ ಸುಖವನ್ನು ಅನುಭವಿಸುವುದಿಲ್ಲ" ಎಂಬ ವಿಚಾರವನ್ನು ಮರೆಯದೆ, ನೀನು ಈ ನಿರ್ಜನವಾದ ವನಪ್ರದೇಶದಲ್ಲಿ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡು ಬಹುಜಾಗ್ರತೆಯಿಂದಲೇ ತಪಸ್ಸನ್ನಾಚರಿಸಬೇಕು. ಹಾಗೆ ತಪೋನಿಷ್ಠೆಯಿಂದಿರುವಾಗ ನಿನ್ನ ಇಂದ್ರಿಯಾಶ್ವಗಳು ಯೋಗ್ಯವಾದ ಮಾರ್ಗವನ್ನತಿಕ್ರಮಿಸಿ ಹೋಗದಿರಲಿ! ತಪಸ್ಸಿನಲ್ಲಿ ಮುಂದುವರಿದಂತೆ ಬಳಲಿಕೆಯುಂಟಾದಾಗ ನಿನಗೆ ಇಂದ್ರಾದಿಲೋಕಪಾಲಕರು ಉದ್ದೇಶವನ್ನು ಸಾಧಿಸತಕ್ಕ ಉತ್ಸಾಹವನ್ನು ಉಂಟುಮಾಡುತ್ತಿರಲಿ! ತಪಸ್ಸಿನ ವಿಷಯದಲ್ಲಿ ನಿನಗೆ ಸರ್ವಮಂಗಳಾತ್ಮಕನಾದ ಶಂಕರನು ಬಹುಶಕ್ತಿಪ್ರದಾಯಕನಾಗಿ ಸತ್ಫಲದ ಪರಿಣಾಮವನ್ನು ಉಂಟುಮಾಡುತ್ತಿರಲಿ!"

ಈ ಪ್ರಕಾರವಾಗಿ ಯಕ್ಷನು ಹಿತೋಕ್ತಿಗಳನ್ನಾಡಿ ಅರ್ಜುನನನ್ನು ಬೀಳ್ಕೊಂಡು ತನ್ನ ನಗರಿಗೆ ಹೊರಟು ಹೋದನು. ಸಜ್ಜನರ ಅಗಲುವಿಕೆಯು ವ್ಯಸನವನ್ನುಂಟುಮಾಡುವುದು ಸಹಜವಾಗಿರುವಂತೆಯೇ ಉಪಕಾರಿಯಾದವನು ಹೊರಟು ಹೋದುದರಿಂದ ನರನು ಬಹಳ ಬೇಸರಗೊಂಡನು. ಆದರೂ, ಮಹಾತ್ಮನ ಪ್ರೇರಣೆಯಾದುದರಿಂದ ಬಹುಪ್ರಾಮುಖ್ಯವೂ, ಸದ್ಯವೇ ಬಹುಫಲಪ್ರದವಾದುದರಿಂದ ಅನತಿಕ್ರಮಣೀಯವೂ ಆಗಿರುವ ವೇದವ್ಯಾಸನ ಉಪದೇಶವನ್ನು ಸ್ಮರಿಸಿಕೊಂಡನು, ಸತ್ಫಲಸಿದ್ಧಿದಾಯಕವೆನಿಸಿ ಮುಖ್ಯಾವಲಂಬನೀಯವೂ, ಅತ್ಯುನ್ನತಕೂಟಭಾಸುರವೆನಿಸಿ ಅನತಿಕ್ರಮಣೀಯವೂ ಆಗಿ ಮುಂದೆ ಮೆರೆಯುತ್ತಿರುವ ಇಂದ್ರಕೀಲ ಪರ್ವತವನ್ನು ನೋಡಿ ಅರ್ಜುನನು ತನ್ನ ಕರ್ತವ್ಯವನ್ನು ಅವಲಂಬಿಸುವ ತವಕದಿಂದ ಅದರ ಸಮೀಪಕ್ಕೆ ಹೋದನು.

೧೧ ಫಲುಗುಣನ ತಪಶ್ಚರಣೆ

ಸನ್ಮಾರ್ಗಾವಲಂಬಿಯಾದ ಅರ್ಜುನನು ಕನಕದ ಸಾಲುಗಳಿಂದೊಪ್ಪುವ ಭಾಗೀರಥೀತೀರದ ದಾರಿಯನ್ನು ನಿರೀಕ್ಷಿಸುತ್ತ, ಪರಮಪುರುಷನು ಗುರುತ್ಮಂತನನ್ನು ಅಡರಲು ಹೋಗುವಂತೆ ಇಂದ್ರಕೀಲಕಪರ್ವತವನ್ನೇರಲು ಕುತೂಹಲದಿಂದ ಮುಂದುವರಿದನು. ಜಯಸಿದ್ಧಿಗಾಗಿ ಬರುತ್ತಿರುವ ಆತನನ್ನು ವಂದಿಗಳಂತೆ ಮರಗಳು ಸ್ವಾಗತಿಸಿದುವು; ಮಂಜುಳಗುಂಜಾರವಗಳೆಂಬ ಜಯಜಯಕಾರಗಳೊಡನೆ ಗಾಳಿಯಿಂದ ಚಲಿಸಿ ಬಳುಕುತ್ತಿದ್ದ ರೆಂಬೆಗಳ ಮೂಲಕ ಪುಷ್ಪವೃಷ್ಟಿಗಳನ್ನು ಕರೆದು ಉಪಚರಿಸಿದುವು. ಬಿರಿಯುವ ಕಮಲಗಳನ್ನು ನಡುಗಿಸಿ, ಕೆದರಿದ ಪರಾಗಗಳನ್ನೊಳಗೊಂಡು ಬೀಸುತ್ತ, ದೇವಗಂಗೆಯಲ್ಲಿ ತರಂಗಪರಂಪರೆಗಳನ್ನೆಬ್ಬಿಸಿ ಶೀಕರಭಾರದಿಂದ ಮಂದಮಂದವಾದ ಗಾಳಿಯು ಗೆಳೆಯನನ್ನಾಲಿಂಗಿಸುವಂತೆ ಅರ್ಜುನನನ್ನು ಆಲಿಂಗಿಸಿತು. ಗಿರಿನದಿಗಳು ದೊಡ್ಡ ದೊಡ್ಡ ಬಂಡೆಗಳ ಹೊಡೆತಗಳಿಂದ "ಘುಂ ಘುಂ" ಎಂಬ ತೂರ್ಯಘೋಷಗಳಿಂದಲೂ, ಹಂಸಸಾರಸ ಮೊದಲಾದ ಜಲವಿಹಂಗಮಗಳ ಮಂದ್ರಧ್ವನಿಗಳೆಂಬ ಮಂಗಳವಾದ್ಯಗಳಿಂದಲೂ ಆತನ ಮನಸ್ಸನ್ನು ಸಂತೋಷಪಡಿಸಿದುವು.

ಹೋಗುತ್ತಿದ್ದಂತೆಯೇ ಸುತ್ತಲಿನ ನೋಟವು ಅರ್ಜುನನ ಮನಸ್ಸನ್ನು ಸೆಳೆಯಿತು. ನದೀತೀರದಲ್ಲಿ ತಲೆಮುರಿದ ಮರವೊಂದು ಬಹಳ ಎತ್ತರವಾಗಿ ನಿತ್ತುಕೊಂಡಿತ್ತು. ಅದರ ಪಕ್ಕದಲ್ಲಿ ಪ್ರವಾಹಕ್ಕೆ ಸಿಲುಕಿದ ಗಿಡಗಳು ಮುಳುಗುತ್ತ ಏಳುತ್ತ, ಮಹಾತ್ಮರೊಡನೆ ಹೇಗೆ ವಿನೀತರಾಗಿರಬೇಕೆಂಬುದನ್ನು ಚಮತ್ಕಾರವಾಗಿ ಸೂಚಿಸುತ್ತಿದ್ದುವು. ನೀರಲ್ಲಿ ಬಿದ್ದು ಪಸರಿಸಿಕೊಂಡಿದ್ದ ತಾಮರಸಪರಾಗವೆಂಬ ಪಾಟಲವರ್ಣದ ಸೆರಗಿನಿಂದಲೂ, ತರಂಗರಂಗಗಳೆಂಬ ಸೀರೆಯ ನಿರಿಯಿಂದಲೂ, ಕಲಹಂಸಕುಲಗಳೆಂಬ ಮೇಲುದುವಿಂದಲೂ, ಬಳಕುತ್ತ ಕುಲುಕುತ್ತ ಮುಂದುವರಿಯುತ್ತಿದ್ದ ನದೀನಾರಿಯ ಬೆಡಗನ್ನು ಅರ್ಜುನನು ಆಸಕ್ತಿಯಿಂದ ನೋಡಿದನು. ಮುಂದೆ, ನವೀತರಂಗನಾಲೆಗಳಲ್ಲಿ ಬಂಗಾರದ ಗನಿಗಳ ಕಾಂತಿಯು ಪ್ರತಿ

ಬಿಂಬಿಸಿ ತೋರುತ್ತಿತ್ತು; ಅಲ್ಲಿ ವಿಹರಿಸುತ್ತಿದ್ದ ಚಕ್ರವಾಕವು ಹೊಂಬಣ್ಣ ದಿಂದ ಪಲ್ಲಟಗೊಂಡುದನ್ನು ಕಂಡು ಚಕ್ರವಾಕೆಯು 'ಇವನೇ ತನ್ನ ಗಂಡ'ನೆಂದು ತಿಳಕೊಳ್ಳಲಾರದೆ "ವರ್ಣಾಂತರ ಪ್ರಾಪ್ತಿಯು ದುಃಖಕ್ಕೆ ಕಾರಣ"ವೆಂಬ ಸ್ವಾನುಭವವನ್ನು ಫಲುಗುಣನಿಗೆ ತಿಳಿಸುವಂತೆ ದೈನ್ಯದಿಂದ ಕೂಗುತ್ತಿತ್ತು. ತರಂಗಪರಂಪರೆಗಳು ಬಗೆಬಗೆಯ ಕಾಂತಿವಿಶೇಷಗಳೊ ಡನೆ ಅಡಿಗಡಿಗೂ ಹೊರಳುತ್ತಿದ್ದುವು. ವಿವೇಕಿಯು ರೂಪದರ್ಶನ ಮಾತ್ರದಿಂದಲೇ ಜನರ ಅಂತರ್ಯವನ್ನರಿತುಕೊಳ್ಳುವಂತೆ, ಆ ತರಂಗ ಮಾಲೆಗಳನ್ನು ನೋಡುತ್ತಿದ್ದ ಅರ್ಜುನನು ನದೀತಳದಲ್ಲಿ ರತ್ನರಾಶಿಗಳು ಸ್ಫುರಿಸುತ್ತಿರುವುದನ್ನು ತಿಳಕೊಂಡನು.

ಅಲ್ಲಲ್ಲಿರುವ ಮರಳುದಿಣ್ಣೆಗಳಲ್ಲಿ ಮುತ್ತಿನ ಚಿಪ್ಪುಗಳು ಬಾಯ್ದೆ ರೆದು ಬಿದ್ದುಕೊಂಡಿದ್ದುವು; ಈ ದೃಶ್ಯವು—ಉಸುಬಿನಲ್ಲಿ ಮಲಗಿ ನಿದ್ರಿಸು ತ್ತಿದ್ದ ನೀರೆಯರು ಬೆಚ್ಚಿಬಿದ್ದು ಫಕ್ಕನೆ ಎಚ್ಚರಗೊಂಡು ಆಕಳಿಸುತ್ತ ಕಂಬನಿಗರೆಯುವಂತೆ ತೋರುತ್ತಿತ್ತು. ಇನ್ನೊಂದೆಡೆಯಲ್ಲಿ, ಚಿಗುರೊಡೆದು ತೆರೆನೊರೆಗಳಿಂದ ಕೂಡಿದ ಹವಳದ ಬಳ್ಳಿಯು ಕಾಂತೆಯ ದಂತಕಾಂತಿ ಯಂತೆ ಅರ್ಜುನನ ಮನಸ್ಸನ್ನು ಸೆಳೆಯಿತು. ಇನ್ನೂ ಮುಂದುವರಿ ಯಲು, ತೆರೆಗಳು ಭೋರ್ಗರೆಯುತ್ತ ಬಾಯ್ದೆರೆದುಕೊಂಡು ತ್ವರೆಯಿಂದ ಬರುತ್ತಿದ್ದುವು. ಅವುಗಳನ್ನು ಕಂಡು ಬಂಡೆಗಳು ಪ್ರತಿಭಟಿಸುವಂತೆ ಹಠಾತ್ತಾಗಿ ತಾಗಲು ಉಂಟಾದ ನೊರೆವಿಂಡುಗಳು, ಜೋರಾಗಿ ಬೀಸುವ ಗಾಳಿಗೆ ಚದರಿ ಹೊರಳುತ್ತ ಭಾಗೀರಥಿಯ ಅಟ್ಟಹಾಸಗಳೆಂಬಂತೆ ಭಾಸವಾಗುತ್ತಿದ್ದುವು.

ಅಲ್ಲೇ ತೀರದಲ್ಲೊಂದು ಮದಗಜವು ಸಂತೋಷದಿಂದ ವಪ್ರಕ್ರೀಡೆ ಯಾಡುತ್ತಿತ್ತು. ಅದರ ಗಂಡಸ್ಥಳದಿಂದ ಸುರಿಯುತ್ತಿದ್ದ ಮದಜಲವನ್ನು ದಕ್ಕಿಸಿಕೊಳ್ಳಬೇಕೆಂಬ ಸ್ವಾರ್ಥದಿಂದ ಅದನ್ನು ತುಂಬಿಕೊಳ್ಳಲು ಅಲ್ಲಿಗೆ ತುಂಬಿಗಳು ಓಡಿಬರುತ್ತಿದ್ದುವು. ಅದನ್ನು ಕಂಡು ಅರ್ಜುನನು ಆನೆಯ ದಾನಾತಿಶಯವನ್ನೂ, ಅಲಿಮಾಲೆಗಳ ಕುತೂಹಲದ ಚಾಂಚಲ್ಯವನ್ನೂ ಮನದಣಿಯೆ ಕೊಂಡಾಡಿದನು. ಆ ದಾನಜಲಬಿಂದುಗಳು ನದೀಜಲ ದಲ್ಲಿ ಬಿದ್ದು ಮಯೂರಮೇಚಕಗಳಂತೆ ಪಸರಿಸಿಕೊಂಡುವು. ಆಗ

ಗಜೇಂದ್ರವು ಉನ್ಮಾದಾವಸ್ಥೆಯಿಂದ ನೀರಿನಲ್ಲಿ ಹಾರಿ ಮುಳುಗಿತೆಂಬ ಗಾಬರಿಯಿಂದ ತರಂಗಿಣಿಯು ಸಾವಿರಾರು ಕಣ್ಣುಗಳಿಂದಲೂ ನೋಡು ತ್ತಿದ್ದಂತೆ ಕಾಣುವ ನೋಟವು ಅರ್ಜುನನ ಕುತೂಹಲವನ್ನು ಹೆಚ್ಚಿಸಿತು. ಮದಜಲಯುಕ್ತವಾಗಿ ಉಬ್ಬಿ ಭೋರ್ಗರೆಯುತ್ತ ಓಡುತ್ತಿದ್ದ ತೆರೆಮಾಲೆ ಗಳನ್ನು ಆನೆಗಳೆಂಬ ಭ್ರಮೆಯಿಂದ ನೀರಾನೆಗಳು ಬೆನ್ನಟ್ಟುತ್ತಿದ್ದುವು. ತೆರೆ ಗಳೆಂಬ ನಾಗರಾಜನು ಬಾಯ್ದೆರೆದುಕೊಂಡು ಬುಸುಗುಟ್ಟುವ ಅಬ್ಬರಕ್ಕೆ ಶೀಕರಗಳಾಗಿ ಗಾಳಿಯ ಮೂಲಕ ಗಗನಕ್ಕೇರಿ ಶರತ್ಕಾಲದ ಮೋಡವೆನಿಸಿ ಬೆಳ್ಳಗೆ ಬೆಳಗಬೇಕೆಂಬ ಮುಂದಾಲೋಚನೆಯಿಂದ ಮುಂದುವರಿಯುತ್ತಿದ್ದ ಬೆಳ್ನೊರೆಗಳು ಬೆಳ್ಳಿಯ ಮಾಲೆಯಂತೆ ಕಂಗೊಳಿಸುತ್ತಿದ್ದುವು. ಮರಳು ದಿಣ್ಣೆಗಳೆಂಬ ಜಘನಗಳಿಂದಲೂ, ಶಫರಿಗಳೆಂಬ ಸುಂದರನೇತ್ರಗಳಿಂದಲೂ ಮೆರೆಯುತ್ತ ಗೆಳತಿಯರೊಡಗೂಡುವ ಮಂದಗಮನೆಯರಂತೆ ಗಂಗಾನದಿ ಯನ್ನು ಸೇರಬೇಕೆಂದು ಮೆಲ್ಲನೆ ಹರಿಯುವ ತೊರೆಗಳನ್ನು ದಾಟುತ್ತ ನರನು ಮುಂದುವರಿದನು.

ಹೀಗೆ ದಾರಿಯುದ್ದಕ್ಕೂ ಮೆರೆಯುತ್ತಿದ್ದ ಪ್ರಾಕೃತಿಕಸನ್ನಿವೇಶ ಗಳಿಂದ ಸಂತೋಷಭರಿತನಾಗಿ ಇಂದ್ರಕೀಲಾಚಲವನ್ನೈದಿದನು. ಅಲ್ಲಿಯ ಗಿರಿಶಿಖರವೊಂದರಲ್ಲಿ ತುಂಬಿದ ಹೂಗಳ ಭಾರಕ್ಕೆ ಬಾಗಿದ ರೆಂಬೆಗಳುಳ್ಳ ಮರಗಳಿಂದ ಚಂದವೂ, ಮಂದವಾಗಿ ಬೀಸುವ ಗಾಳಿಯಿಂದ ಪರಿಶುದ್ಧ ವೂ, ಸಹಜಸೌಂದರ್ಯದ ನೆಲೆವೀಡಾಗಿ ಮನುಜಸಂಚಾರವಿಲ್ಲದುದರಿಂದ ಮನಸ್ಸಿಗೆ ಶಾಂತಿಪ್ರದಾಯಕವೂ ಎನಿಸಿದ ವನಾಂತವೊಂದು ಗೋಚರಿ ಸಿತು. ಸುತ್ತಲೂ ಹೂಗೊಂಚಲುಗಳಿಂದ ಮೆರೆಯುವ ಬಳ್ಳಿಗಳೂ, ಎಡೆ ಯೆಡೆಯಲ್ಲಿ ಫಲಿಸಿದ ಗಿಡಗಳೂ, ವಿನಯದಿಂದ ತಲೆವಾಗಿ ಸ್ವಾಗತಿಸು ವಂತೆ ಫಲಭಾರದಿಂದ ಸಮೃದ್ಧವಾದ ತರುವೃಂದಗಳೂ ಕಂಗೊಳಿಸುತ್ತಿರು ವುದನ್ನು ನೋಡಿ, ಚೆಲುವಿನ ನೆಲೆಯಾಗಿ, ಸಮೃದ್ಧಿಯ ಗನಿಯಾಗಿ, ಶಾಂತಿಯ ಬೀಡಾಗಿ ತೋರುವ ಗಿರಿಯೇ ನಿಶ್ಚಲವಾದ ತಪಶ್ಚರ್ಯೆಗೆ ಯೋಗ್ಯವಾದ ಸ್ಥಳವೆಂದು ನಿಶ್ಚೈಸಿಕೊಂಡನು.

ಹಾಗೆಯೇ ಅರ್ಜುನನು ಆ ಗಿರಿಯಲ್ಲಿ ತನ್ನ ತಪಸ್ಸಿಗೆ ಯೋಗ್ಯ ವಾದ ಸ್ಥಳವನ್ನು ಕಂಡು ಹಿಡಿದು, ಅಲ್ಲಿ ವಿಧಿಪೂರ್ವಕವಾಗಿ ಚಿತ್ತವನ್ನು

ಸಂಯಮನಗೊಳಿಸಿ ತಪಸ್ಸುಮಾಡತೊಡಗಿದನು. ಯಾವ ತರದ ಕಠಿಣ ಪ್ರಸಂಗಗಳೂ ಮನಸ್ವಿಗಳನ್ನು ಸಂಕಷ್ಟಗಳಿಗೆ ಗುರಿಪಡಿಸಲಾರವು. ಅಸಾಧ್ಯವಾದ ಆ ಕಠಿಣತಪಸ್ಸಿನಿಂದುಂಟಾದ ಶ್ರಮವು ಆತನಿಗೆ ದುಸ್ಸಹ ವೆನಿಸಲಿಲ್ಲ. ಅಮೃತಕಿರಣಗಳಿಂದ ಸಂತಾಪಪರಿಹಾರಕನೂ, ಆಹ್ಲಾದ ಕಾರಿಯೂ, ತಮೋನಿವಾರಕನೂ ಎನಿಸಿ ದಿನದಿಂದ ದಿನಕ್ಕೂ ಅಭಿವೃದ್ಧಿ ಹೊಂದಿ ಬೆಳಗುವ ಶುಕ್ಲಪಕ್ಷದ ಚಂದ್ರನ ಹಾಗೆ ಅರ್ಜುನನು ಶುದ್ಧಾ ಚರಣೆಯ ತಪಸ್ಸುಗಳಿಂದ ಜಿತೇಂದ್ರಿಯನೂ ಆತ್ಮಾರಾಮನೂ ಅಜ್ಞಾನ ಪರಿಹಾರಕನೂ ಎನಿಸಿ ದಿನದಿನಕ್ಕೂ ಬೆಳೆಯುವ ಅಗಣ್ಯಪುಣ್ಯಗಳಿಂದ ಬೆಳಗುತ್ತ ಉತ್ತಮನಾದ ತಪಸ್ವಿಯೆನಿಸಿದನು.

ಅಷ್ಟು ಮಾತ್ರವಲ್ಲದೆ, ತತ್ವಜ್ಞಾನವನ್ನು ಸಂಪಾದಿಸಿ ಕಾಮಕ್ರೋಧ ಮೊದಲಾದ ಷಡ್ವೈರಿಗಳಿಗೆ ಗುರಿಯಾಗದಂತೆ ಚಿತ್ತವೃತ್ತಿಯನ್ನು ನಿಯಮನ ಗೊಳಿಸಿದನು. ಅಂತಹ ಮನಸ್ಸನ್ನು ನಿರ್ಬಾಧವಾಗಿ ಶಾಂತಿಸಾಮ್ರಾಜ್ಯ ದಲ್ಲಿ ಹರಿಯಿಸಿದುದರಿಂದಲೇ, ಆತನಿಗೆ ಸ್ರಕ್ಚಂದನವನಿತಾದಿವಿಷಯ ಸುಖಗಳೆಲ್ಲವೂ ಹೇಯವೆನಿಸಿದುವು. ಆಗ ಅವನಿಗೆ ಸಹಜವಾದ ಅಖಂಡ ಸುಖದ ಅನುಭವವುಂಟಾಯಿತು. ಅಹಿಂಸೆ ಮೊದಲಾದ ಧರ್ಮಗಳ ಪಾಲನೆಯಿಂದಲೂ, ತ್ರಿಕರಣಪೂರ್ವಕವಾದ ಧ್ಯಾನಮಂತ್ರಾಭ್ಯಾಸ ನಮಸ್ಕಾರಗಳಿಂದಲೂ ಸ್ವರ್ಗಾಧಿಪನಾದ ದೇವೇಂದ್ರನನ್ನು ತೃಪ್ತಿಗೊಳಿಸಿ, ಸಹಜವಾಗಿ ತಲೆದೋರಿದ ವೀರಶಾಂತಗಳೆಂಬ ರಸಗಳೆರಡನ್ನೂ ಜೊತೆ ಯಿಂದಲೇ ಪರಿಪೋಷಿಸುತ್ತ ಅದ್ಭುತಮಹಿಮನಾಗಿ ಮೆರೆದನು. ದೃಢ ಮನಸ್ಸಿನಿಂದ ನಿಶ್ಚಲನಾಗಿ ತಪಸ್ಸುಮಾಡುತ್ತಿದ್ದ ಆತನ ಶ್ಯಾಮಲಮೂ ರ್ತಿಯೂ, ಆಗಾಗ ಮಾಡುತ್ತಿದ್ದ ಸ್ನಾನದ ಮೂಲಕ ತಲೆಯಲ್ಲಿ ಕೆದರಿ ಕೊಂಡು ಶೋಭಿಸುತ್ತಿದ್ದ ಹೊಂಬಣ್ಣದ ಜಡೆಗಳೂ, ಬಹುಪಲ್ಲವಗ ಳಿಂದೊಪ್ಪುವ ತಮಾಲವೃಕ್ಷದ ರೀತಿಯನ್ನು ಅನುಕರಿಸುತ್ತಿದ್ದುವು. ವಿಜ ಯನು ಜಯಸಿದ್ಧಿಗಾಗಿ ವ್ಯಾಸನ ಉಪದೇಶದಿಂದ ಬಂದು ತಪಸ್ಸು ಮಾಡುತ್ತ ಸುಜನೋತ್ತಂಸರೆನಿಸಿದ ಪರಮಹಂಸರನ್ನೂ ಮೀರಿಸುವ ಮುನಿವೇಷಧಾರಿಯಾಗಿಯೂ ಆಯುಧಧಾರಿಯು; ರಜೋಗುಣರಹಿತ

ಸಾಗಿಯೂ ಮೃಗರಂಜಕನು. ಹಲವೇಕೆ? ಭೀಷಣನಲ್ಲದ ಫಲುಗುಣನು ದಯಾದಾಕ್ಷಿಣ್ಯಾದಿಗುಣಭೂಷಣನು.

ಹೀಗೆ ಶ್ರದ್ಧಾಭಕ್ತಿಗಳೊಡನೆ ನಿಯಮನಿಷ್ಠೆಗಳಲ್ಲಿ ಮುಂದುವರಿಯುತ್ತ ಬಹಳವಾಗಿ ಕ್ಷೀಣಿಸುತ್ತಿದ್ದ ಆ ರಾಜತಪಸ್ವಿಗೆ–ಮಂದಾನಿಲವು ಶೈತ್ಯಸೌರಭ್ಯಗಳೊಡನೆ ಬಂದು ಅನುಕೂಲವಾಗಿ ಸುತ್ತಲೂ ಬೀಸುತ್ತಿತ್ತು. ದಿನಕರನ ಪ್ರಖರಕಿರಣಗಳು ತಮ್ಮ ಪ್ರಚಂಡತೆಯನ್ನು ತೊರೆದು ಸುಖಕರಸ್ಪರ್ಶಗಳಾಗಿ ಪಸರಿಸುತ್ತಿದ್ದುವು. ತರುವೃಂದಗಳು ಬಾಗಿದ ರೆಂಬೆಗಳ ಮೂಲಕ ತುಂಬಿದ ಪುಷ್ಪಾಂಜಲಿಗಳನ್ನು ಅರ್ಪಿಸುತ್ತಿದ್ದುವು. ಇಳೆಯು ಬೆಳೆದ ಹುಲ್ಲುಗಳಿಂದ ತೃಣಾಚ್ಛಾದಿತಶಯ್ಯೆಯನ್ನು ಕಲ್ಪಿಸುತ್ತಿತ್ತು. ನೋಡಲು ಮೋಡವಿಲ್ಲದಿದ್ದರೂ ಅಂತರಿಕ್ಷವು ದಯೆಯೊಡನೆ ಜಲಬಿಂದುಗಳನ್ನು ಉದುರಿಸಿ ನೆಲದ ಧೂಳಿಗಳನ್ನು ಪರಿಹರಿಸುತ್ತಿತ್ತು. ಹೀಗೆ ಪ್ರಾಕೃತಿಕಸೃಷ್ಟಿಗಳೇ ಬಗೆಬಗೆಯ ರೀತಿಗಳಿಂದ ತಮ್ಮ ಸೇವೆಯನ್ನು ಸಲಿಸುತ್ತಿದ್ದುವು ಎಂದರೆ ತಪಸ್ವಿಗಳ ಧನ್ಯತೆಯು ಸಾಮಾನ್ಯವಲ್ಲ.

ಬರಬರುತ್ತ ಫಲುಗುಣನು, ಫಲಸಿದ್ಧಿಗೆ ಹೇತುವೂ ಮಂಗಳಮಯವೂ ಎನಿಸಿ ಕಂಗೊಳಿಸುತ್ತ ವಿಕಾಸಗೊಳ್ಳುವ ಕಾರ್ಯರೂಪದ ಕುಸುಮವನ್ನು ನಿರೀಕ್ಷಿಸಿಯೂ ವಿಸ್ಮಯದಿಂದ ಪರವಶನಾಗಲಿಲ್ಲ. ಧೈರ್ಯಾವಲಂಬಿಗಳಾದ ಸಮರ್ಥರು ಕಾರ್ಯಸಾಧಕರಲ್ಲವೆ?

---

೧೨. ಇಂದ್ರನ ಉಪಾಯ

ಹೀಗೆ ನಿರಂತರವೂ ಸಾಗುತ್ತಿದ್ದ ಘೋರತಪಸ್ಸಿನ ಮೂಲಕ ಉಂಟಾದ ಅನನ್ಯಸಾಧಾರಣತೇಜಸ್ಸಿನಿಂದ ಫಲುಗುಣನು ದೇದೀಪ್ಯಮಾನನಾಗಿ ಬೆಳಗುತ್ತಿದ್ದನು. ವನರಕ್ಷಣೆಗೆ ದೇವೇಂದ್ರನಿಂದ ನಿಯುಕ್ತರಾಗಿ ಇಂದ್ರಕೀಲಕದ ಸಮೀಪದಲ್ಲಿ ವಾಸಿಸುತ್ತಿದ್ದ ವನೇಚರರು ಆ ತಪಸ್ಸಿನ ಬೇಗೆಯನ್ನು ಸಹಿಸಲಾರದೆ ತಲ್ಲಣಿಸಿದರು. ಇತಿಕರ್ತವ್ಯತಾಮೂಢರಾದ ಅವರೆಲ್ಲರೂ ಒಟ್ಟು ಸೇರಿ ಇಂದ್ರಲೋಕವನ್ನೈದಿ ದೈನ್ಯದಿಂದ ದೇವೇಂದ್ರ

ನೊಡನೆ ಹೀಗೆ ವಿಜ್ಞಾಪಿಸಿಕೊಂಡರು—"ದೇವದೇವ, ತಮ್ಮ ಇಂದ್ರಕೀಲಕ ಪರ್ವತದಲ್ಲಿ ಭಾಸ್ಕರನಂತೆ ದಿವ್ಯತೇಜಸ್ವಿಯಾದ ಮಹಾಪುರುಷನೊಬ್ಬನು ವಲ್ಕಲಧಾರಿಯಾಗಿ ತಪಸ್ಸನ್ನೆಸಗುತ್ತಿರುವನು. ಆತನು ಜಯಸಿದ್ಧಿಯಿಂದಲ್ಲದೆ ವಿರಾಮವಿಲ್ಲವೆಂದು ಅತ್ಯುತ್ಕಟವಾದ ಹಟದಿಂದ ಲೋಕವನ್ನು ಸಂಕಟಗೊಳಿಸುತ್ತಿರುವನು.

"ಭೀಷಣಭುಜಂಗಗಳೆಂಬ ಮಹಾಬಾಹುಗಳಿಂದೊಪ್ಪುವ ಆ ತಪಸ್ವಿಯು, ವಿರೋಧಿ ಭಯಂಕರವೆನಿಸುವ ಮಹಾಧನುಸ್ಸನ್ನು ಧರಿಸಿಕೊಂಡು ಯಮನಿಯಮಾದ್ಯನುಷ್ಠಾನಗಳಿಂದ ಮಹಾಮುನಿಗಳನ್ನು ಮೀರಿಸುತ್ತ, ಲೋಕಾದ್ಭುತಕರನೆನಿಸಿರುವನು. ನಿಶ್ಚಲಬುದ್ಧಿಯಿಂದ ತಪಸ್ಸನ್ನುಮಾಡುತ್ತಿರುವಾತನಿಗೆ—ಅನುಕೂಲವಾಗಿ ಸುಳಿಯುತ್ತ ಗಾಳಿಯು ಸುಖವನ್ನೂ, ಎಳೆಯ ಹುಲ್ಲುಗಳಿಂದ ಧಾತ್ರಿಯು ಶಯ್ಯೆಯನ್ನೂ, ನಿರ್ಮಲವಾಗಿದ್ದ ಗಗನವು ಮಳೆಹನಿಗಳನ್ನುದುರಿಸಿ ತಪೋವನದ ಧೂಳೀನಿವಾರಣೆಯನ್ನೂ ಕಲ್ಪಿಸುತ್ತಿರುವುದಲ್ಲದೆ ಪಂಚಭೂತಗಳು ಬಗೆಬಗೆಯ ಸೇವೆಯನ್ನು ಭಕ್ತಿಭಾವನೆಯಿಂದ ಸಲಿಸುತ್ತಿರುವುವು. ಸಹಜವೈರಿಗಳಾದ ವನಮೃಗಗಳೂ ಕೂಡ ವೈರಭಾವಗಳನ್ನು ಮರೆತು, ಗುರುಸೇವಾನಿರತರಾಗಿರುವ ಶಿಷ್ಯರಂತೆ ನಿರಂತರವೂ ಅವನನ್ನು ಉಪಚರಿಸುತ್ತಿರುವುವು. ಪುಷ್ಪಾಪಚಯಕ್ಕಾಗಿ ಮರಗಿಡಗಳು ಅಹಮಹಮಿಕೆಯಿಂದ ಸ್ಪರ್ಧಿಸುತ್ತ ಮಣಿಯುತ್ತಿರುವುವೆಂದರೆ ಇಂದ್ರನೇ, ನಿನ್ನ ಪ್ರಭುತ್ವದಿಂದ ಮೆರೆಯುತಕ್ಕ ನಗೇಂದ್ರವದು ತಪಸ್ವಿಯ ಸ್ವಾಮಿತ್ವವನ್ನೂ ಶಿರಸಾವಹಿಸಿದಂತೆ ಭಾಸವಾಗುತ್ತಿರುವುದು.

"ಅವನು ಘೋರತಪಸ್ಸಿನಿಂದಲೂ ಬಳಲದವನಾದುದರಿಂದ ಅಂತಃಸತ್ವಸಂಪನ್ನನು! ಸರ್ವಲಕ್ಷಣಭರಿತನಾದುದರಿಂದ ಸರ್ವಕಾರ್ಯಸಂಸಿದ್ಧನು! ಶಾಂತಸ್ವಭಾವದವನಾದುದರಿಂದ ಜಿತೇಂದ್ರಿಯನು! ಸಕಲಗುಣಸಂಪನ್ನನಾದುದರಿಂದ ಮಹಾತ್ಮನು ಎಂಬ ಭಾವನೆಯಿಂದ ಲೋಕವೇ ಹೆದರಿ ಅವನಿಗೆ ತಲೆವಾಗುತ್ತಿರುವುದೆಂದರೆ, ಆ ಪುಣ್ಯಪುರುಷನ ಪ್ರಭಾವವು ಅಸಾಮಾನ್ಯವು. ಆ ವನಾಂತದಲ್ಲಿ ಮಹಾತಪಸ್ವಿಯೆಂದು ವಿಖ್ಯಾತನಾದ ಅವನು ಋಷಿಗೋತ್ರಸಂಜಾತನೋ, ದೈತ್ಯದಾನವಕುಲಸಂಭೂ

ತನೋ, ಮಹಾಕ್ಷತ್ರಿಯಸಂತತಿಯೋ ಎಂದು ನಿರ್ಧರಿಸಿಕೊಳ್ಳಲು ನಾವು ಅಸಮರ್ಥರು. ಅಮೋಘವೆನಿಸುವ ತಪಸ್ಸು ಬಹುವಿಧವಾಗಿ ಫಲಿಸುತ್ತಿರಬಹುದೆಂಬ ವಿಚಾರದಿಂದಾಗಲಿ, ವಿವೇಕಿಗಳ ಮುಂದೆ ವನೇಚರರ ಬುದ್ಧಿಯು ಮಂಕಾಗುವುದು ಸಹಜವಾದುದರಿಂದ ಬುದ್ಧಿಶೂನ್ಯತೆಯ ಗಲಿಬಿಲಿಯಿಂದ ಹೇಳಿರಬಹುದೆಂಬ ಯೋಚನೆಯಿಂದಾಗಲಿ, ನಮ್ಮ ಮಾತುಗಳಲ್ಲಿರಬಹುದಾದ ಕುಂದುಕೊರತೆಗಳನ್ನು ಮನ್ನಿಸಬೇಕೆಂದು ದೇವರ ಪಾದಮೂಲದಲ್ಲಿ ಕೆಡೆದು ಬೇಡಿಕೊಳ್ಳುವೆವು".

ತನ್ನ ಸುಕುಮಾರನಾದ ನರನು ಬಂದು ಇಂದ್ರಕೀಲಕದಲ್ಲಿ ಉಗ್ರತಪೋನಿರತನಾಗಿರುವನೆಂಬ ವರ್ತಮಾನವನ್ನು ಬೇಹಿನವರಾದ ಗುಹ್ಯಕರಿಂದ ಮೊದಲೇ ತಿಳಿದುಕೊಂಡಿದ್ದ ದೇವೇಂದ್ರನು, ವನೇಚರರು ವರ್ಣಿಸಿ ಹೇಳಿದ ತನ್ನ ಪುತ್ರನ ಉತ್ಕರ್ಷವನ್ನು ಕೇಳಿ ಸಂತುಷ್ಟಾಂತರಂಗನಾದನು. ಆದರೂ "ಪ್ರಭುಗಳ ಬುದ್ಧಿಯು ನೀತಿಸಂಬದ್ಧ"ವೆಂಬ ಮಾತಿನ ಮೇರೆಗೆ ಮಗನ ಗುಟ್ಟನ್ನು ಬಯಲಿಗೆಳೆದರೆ, ಆತನ ಕಾರ್ಯಕ್ಕೆ ಹಾನಿಸಂಭವಿಸಬಹು"ದೆಂಬ ವಿಚಾರದಿಂದ, ಸಂತೋಷದಿಂದ ಉಕ್ಕಿ ಬರುವ ಮನಸ್ಸನ್ನು ಒಳಗಿಂದೊಳಗೇ ತಡೆದುಕೊಂಡು, ತಾನೇನೂ ಅರಿಯದವನಂತೆ ನಟಿಸಿಕೊಂಡನು.

ಸಭೆಗೆ ಬಂದು ಸಂಗತಿಗಳೆಲ್ಲವನ್ನೂ ಹೀಗೆ ವಿವರಿಸಿ ಹೇಳಿದ ವನಪಾಲಕರನ್ನು ಕೂಡಲೆ ಮನ್ನಿಸಿ ಕಳುಹಿಸಿ, ಭಕ್ತವತ್ಸಲನಾದ ವಾಸವನು ಮಗನ ಚಿತ್ತದಾರ್ಢ್ಯವನ್ನು ಪರೀಕ್ಷಿಸಿ ನೋಡಬೇಕೆಂದು ಬಗೆದು, ಓಲಗದಲ್ಲಿ ನೆರೆದಿದ್ದ ಸುರಸುಂದರಿಯರನ್ನು ಕುರಿತು ಹೀಗೆ ಹೇಳಿದನು "ಭುವನತ್ರಯವನ್ನೂ ಸೌಂದರ್ಯವೊಂದರಿಂದಲೇ ಬೆರಗುಗೊಳಿಸತಕ್ಕ ನಾರೀಮಣಿಗಳಿರಾ, ಲೋಕದಲ್ಲಿ ಕಂದರ್ಪನಿಗೆ ಕುಸುಮಶರನೆಂದು ಖ್ಯಾತಿಯಿರುವುದು ನಿಜವು. ಆದರೂ, "ಸ್ಥೂಲವೂ, ಕಠಿಣವೂ, ಅನೇಕವೂ, ಸಮೀಪದ ಗುರಿಯನ್ನು ಮಾತ್ರ ಸಾಧಿಸತಕ್ಕವೂ, ಗುರಿತಪ್ಪಿ ಸೋತು ಪಕ್ಷಪಾತವುಳ್ಳವೂ ಎನಿಸಿದ ಪಂಚಬಾಣಗಳ ಮೂಲಕ ತನಗೆ ಮೇಲ್ಮೆಯಿಲ್ಲವೆಂದು ಅರಿತುಕೊಂಡಿರುವನು. ಆದುದರಿಂದಲೇ ಆತನು "ಸೂಕ್ಷ್ಮಕೋಮಲೈಕತ್ವಗುಣಭರಿತೆಯು"ರೆನಿಸಿ ಎಂತಹ ಲಕ್ಷ್ಯವನ್ನಾದರೂ ಪಕ್ಷ

ಪಾತವಿಲ್ಲದೆ ಸಾಧಿಸುತ್ತಿರುವ ನಿಮ್ಮನ್ನು ಶರಣೆಂದಿರುವನು! ಸಂಸಾರ ಸಾಗರದಿಂದ ಪಾರಾಗಬೇಕೆಂದು ಮೋಹಾದಿಗಳನ್ನು ಪರಿಹರಿಸಿದ ಯೋಗಿಗಳ ರಜೋನಿವರ್ತಕವೆನಿಸುವ ತತ್ವಜ್ಞಾನವೆಂಬ ತಿಳಿನೀರನ್ನು ಕ್ಷಣಮಾತ್ರದಿಂದಲೇ ಕಟಾಕ್ಷವೀಕ್ಷಣಗಳೆಂಬ ಜೊಗಸೆಗಳಿಂದ ಮೊಗೆಮೊಗೆದು ಮುಗಿಸತಕ್ಕ ಸುಂದರಿಯರಿರಾ, ನಿಮ್ಮನ್ನು ಮನಸಿಜನ ಕುಂದದ ವಿಜಯೈಕಮಂದಿರಗಳೆಂದು ರಸಿಕರಾದರಿಸುತ್ತಿರುವರು. ಸುಂದರಸೃಷ್ಟಿಗಳ ಸಾರಸಂಗ್ರಹದಿಂದ ಸ್ವರ್ಲೋಕವನ್ನಲಂಕರಿಸುವ ವಿಧಾತನ ಕೈವಾಡಗಳೆನಿಸಿರುವ ನಿಮಗಾಗಿ ಭ್ರಮೆಗೊಳ್ಳದ ಗಂಡೆದೆಯ ಗಂಡರಾರು.

ಆದುದರಿಂದ ನೀವೀಗ ಗೀತವಾದ್ಯ ಮೊದಲಾದ ಕಲೆಗಳಲ್ಲಿ ಬಲ್ಲಿದರೆನಿಸುವ ಗಂಧರ್ವರೊಡನೆ ಸಡಗರದಿಂದೈದಿ, ನಮ್ಮ ಪರ್ವತದ ವನಾಂತರದಲ್ಲಿರುವ ತಪಸ್ವಿಯ ನೂತನತಪಸ್ಸಿಗೆ ಭಂಗವನ್ನು ತಂದೊಡ್ಡಬೇಕು. ನಿಸ್ಪೃಹಚಿತ್ತರನ್ನಾದರೂ ವಶಪಡಿಸುತ್ತಿರುವ ಅಪ್ಸರೆಯರಿಗೆ ಸುಖಾಪೇಕ್ಷೆಯ ಸುಂದರನು ಬಂದಿಯೆನಿಸುವುದರಲ್ಲಿ ಸಂದೇಹವಿಲ್ಲ! ವಿರೋಧಿವರ್ಗವನ್ನು ಪರಿಹರಿಸಿ ಸುಖವನ್ನನುಭವಿಸಬೇಕೆಂಬ ಕಾಂಕ್ಷೆಯುಳ್ಳವನು ನಿಮಗೆ ಅಸಾಧ್ಯನೆನಿಸುವನೆ! ಅಲ್ಲದೆ, ಅವನು ಮುಕ್ತ್ಯಂಗನೆಯನ್ನು ಬಯಸುತ್ತಿರಬಹುದೆಂಬುದು ಬಗೆಹರಿಯದ ಬಗೆಯು. ಬಿಲ್ಲುಬಾಣಗಳೊಡನೆ ಸನ್ನದ್ಧನಾಗಿ ತಪಸ್ಸುಮಾಡುತ್ತಿರುವುದೆಂದರೇನು? ನಿಲುಕದ ಕೈವಲ್ಯದ ದಾರಿಯನ್ನು ನಿರೀಕ್ಷಿಸುತ್ತಿರುವುದೆಂದರೇನು? ಈ ವಿಷಯದಲ್ಲಿ ಸಲ್ಲದ ಸಂದೇಹಕ್ಕೆ ಎಡೆಯಿಲ್ಲ! ಅಷ್ಟು ಮಾತ್ರವಲ್ಲ; ಯಶೋಧನರೆನಿಸಿದ ವೀರಪುಂಗವರು ಸ್ತ್ರೀಹಿಂಸಾಪರಾಙ್ಮುಖರು. ಆದುದರಿಂದ, ಆ ಮಹಾತೇಜಸ್ವಿಯು ಮುನಿಗಳಂತೆ ನಿಮ್ಮೊಡನೆ ಮುನಿಯಲಾರನು. ನೀವು ಅಂಜದೆ ನಡೆಯಿರಿ. ಆತನ ತಪಸ್ಸನ್ನು ಬಿಡದೆ ಕೆಡಿಸಿರಿ.”

ಇಂದ್ರನ ಈ ರೀತಿಯ ಪ್ರೋತ್ಸಾಹವನ್ನು ಕೇಳಿದ ಬೆಡಗುಗಾರ್ತಿಯರು ಒಡೆಯನ ಆಜ್ಞೆಯನ್ನು ಶಿರಸಾವಹಿಸಿ, ಸಡಗರದಿಂದ ಮೆರೆಯುತ್ತ ಹೊರಡಲನುವಾದರು. ಬಿಡೌಜನ ಬಿಡುಗಣ್ಣುಗಳು ಅವರ ಸೌಂದರ್ಯಾತಿಶಯವನ್ನು ಬಿಡದೆ ನೋಡುತ್ತಿದ್ದುವೆಂದರೆ ಸುರನಾರಿಯರ ಸೌಂದರ್ಯವು ಸಾಮಾನ್ಯವಲ್ಲ!

೧೩. ಸುರಾಂಗನೆಯರ ಪರಾಭವ

ನಿರಂತರವೂ ಸುರಿಯುವ ಅಮೃತದ ಆಸಾರದಂತೆ, ರಾಕಾನಿಶಾಕರ ಬಿಂಬದಿಂದ ಹೊರಡುವ ಬೆಳದಿಂಗಳಂತೆ, ಎಡೆಬಿಡದೆ ಕೇಳಿಸಿದ ನಾಕಾಧಿಪನ ಉತ್ತೇಜಕ ವಾಕ್ಯಗಳಿಂದ ಸುರಸುಂದರಿಯರು ಉಬ್ಬೇರಿದರು, ನೂತನವಾದ ಉಡಿಗೆತೊಡಿಗೆಗಳಿಂದ ಅಲಂಕೃತರಾಗಿ, ಒನಪು ಒಯ್ಯಾರಗಳಿಂದ ಮೆರೆಯುತ್ತ, ಎಲ್ಲರೂ ಸೇರಿ ಹೀಗೆಂದರು—"ಆ ನೂತನ ತಪಸ್ವಿಯನ್ನು ಈಗಲೇ ಬಿರುನೋಟದಿಂದ ಮರುಳುಗೊಳಿಸುವೆವು; ಮೋಹನ ಶಕ್ತಿಯಿಂದ ಬಂಧಿಸುವೆವು; ತಪಸ್ಸಿನ ಗೊಡವೆಯಿಂದ ಮರಳಿಸುವೆವು. ಆ ಬಡಕಿತ್ತಡಯನ್ನಾಕರ್ಷಿಸಿ ಕೆಡಿಸುವೆವು. ನಿಮ್ಮ ಆಜ್ಞಾಪನೆಯನ್ನು ಅಕ್ಷರಶಃ ಪಾಲಿಸುವೆವು."

ಹೀಗೆ ನಿಶ್ಚೈಸಿದ ಸುರಸುಂದರಿಯರೆಲ್ಲರೂ ತಪೋವನದ ಕಡೆಗಾಗಿ ಬರುತ್ತ, ಗಗನಗಮನದಂತೆ ಗತಿಯು ಬೇಗ ಬೇಗನೆ ಸಾಗಲು ಸಡಗರದಿಂದ ನಡೆಯಬೇಕೆಂದು ಬಯಸಿದರು. ಆದರೂ, ಪೀವರಸ್ತನನಿತಂಬಗಳ ದೆಸೆಯಿಂದ ಬಸವಳಿದು ಬೆಂಡಾಗಿ, ಮಂದಗಮನದಿಂದ ಮುಂದುವರಿಯುತ್ತಿದ್ದರು. ಆ ವೇಳೆಗೆ ಗಿರಿಕಂದರಗಳಲ್ಲಿ ಪ್ರತಿಧ್ವನಿಸುತ್ತಿದ್ದ ಅವರ ನೂಪುರಶಿಂಜಿತಗಳನ್ನು ಕೇಳಿ, ಕೇಳಿಗಾಗಿ ಹಂಸಸಾರಸಗಳು ಉತ್ಸಾಹದಿಂದ ಕೂಗುತ್ತಿದ್ದುವು. ಘೋರಾರಣ್ಯದಲ್ಲಿ ಹಾಗೆಯೇ ಮುಂದುವರಿದು ಬರುತ್ತಿರಲು, ಶಿಷ್ಯಮಂಡಲವು ಹರಿಕಥಾಲಾಪದಿಂದ ಕಾಲಕ್ಷೇಪಮಾಡುವಂತೆ, ಮೃಗಗಳೆಲ್ಲವೂ ಮಂಡಲಾಕಾರವಾಗಿ ಸೇರಿ ಮೃಗರಾಜನಾದ ಹರಿಯನ್ನು ಭಕ್ತಿಭಾವದಿಂದ ಸೇವಿಸುತ್ತ, ತಮ್ಮ ಸಹಜ ವೈರವನ್ನು ಪರಿಹರಿಸಿಕೊಳ್ಳುತ್ತಿದ್ದುವು. ಇದೆಲ್ಲವನ್ನೂ ನೋಡುತ್ತ ನಡೆಯುತ್ತಿದ್ದ ಅವರಿಗೆ ಸಮೀಪದಲ್ಲೇ ತಪಸ್ವಿಯ ಆಶ್ರಮವಿರಬೇಕೆಂಬ ಅನುಮಾನವು ತಲೆದೋರಿತು. ಸುತ್ತಲೂ ಕೊಯ್ದು ಬರಿದಾದ ಫಲಪುಷ್ಪಪಲ್ಲವಗಳ ವೃಂತಗಳು ಈ ಅನುಮಾನವನ್ನು ದೃಢಪಡಿಸಿದುವು. ಪರಮಪ್ರಭಾವಶಾಲಿಗಳ ತಪಶ್ಶಕ್ತಿಯಿಂದ ಸೋಲದವರಿಲ್ಲವೆಂಬಂತೆ ತಪೋವನವು ಗಂಧರ್ವರ ಹಾಗೂ ದಿವ್ಯಾಂಗನೆಯರ ದಿವ್ಯತೇಜಸ್ಸನ್ನು

ಕಳೆಗೆಡಿಸಿತು. ತಪೋವನದ ಪಕ್ಕದ ಪುಲಿನಸ್ಥಳಗಳಲ್ಲಿ ಚಿತ್ರಿಸಿದಂತೆ ತೋರುತ್ತಿದ್ದ ರಾಜರ್ಷಿಯ ಪಾದರೇಖಾಂಕಿತಚಕ್ರಧ್ವಜಗಳನ್ನು ನೋಡುತ್ತಿದ್ದ ಬಿಡಾರೌಜನ ಪರಿವಾರವು ಭಯವಿಸ್ಮಯಗಳಿಂದ ತಲೆವಾಗಿತು. ತಪಸ್ವಿನ ಪ್ರಭಾವಕ್ಕೆ ಸೋತರೂ ಸತಿಯರು ಸೋಲದವರಂತೆ ಕುಸುಮಶರನ ಮುದ್ದಾನೆಗಳೆನಿಸಿ, ಪಾವನವಾದ ತಪೋವನದಲ್ಲಿ ಅತ್ತಿತ್ತ ಸುಳಿದಾಡಿದರು. ವನಮಾಲಾತಿಶಯವೆನಿಸುವ ಪತ್ರಪುಷ್ಪಫಲಗಳನ್ನು ಕೊಯ್ಯುತ್ತ, ತಳಿರ್ವಸೆಗಳನ್ನು ಸಿದ್ಧಪಡಿಸುತ್ತ, ಹಾಡುತ್ತ, ನೆಗೆಯುತ್ತ ಮನದಣಿಯುವಂತೆ ಸ್ವೇಚ್ಛೆಯಿಂದ ವಿಹರಿಸಿದರು. ಆದರೂ ತಪೋವನದ ಸಮೃದ್ಧಿಯು ಹೆಚ್ಚುತ್ತಿರಲು, ವಿಜಯನ ತಪಸ್ಸಿಗೆ ಅಧೀನವಾದ ಋತುಭೇದಗಳಂತೆ ಮುಗುದೆಯರು ಮುಗಿಯದ ಬಗೆಬಗೆಯ ಬಯಕೆಗಳಿಂದ ತಪೋವನದ ಶೋಭೆಗೆ ಮನಸೋತರು.

ಅಲ್ಲೇ ಸಮೀಪದಲ್ಲಿ ಚೆಂದಳಿರುಗಳಿಂದ ಶೋಭಿಸುವ ಚೆಲುವಿನ ಗುಡಿಯಂತೆ ರಕ್ತಾಶೋಕಪಾದಪವೊಂದು ಕಂಗೊಳಿಸುತ್ತಿತ್ತು. ಆರುವ ಸಲುವಾಗಿ ಬಾಗಿದ ಕೊಂಬೆಗಳಲ್ಲಿ ತೂಗಿದ ನಾರುಬಟ್ಟೆಗಳನ್ನು ಹಿಡಿದುಕೊಂಡ ವಿನೀತಸೇವಕನಂತೆ, ಮೂರು ಲೋಕವನ್ನೂ ತಳಮಳಗೊಳಿಸುವ ನೂತನತಪಶ್ಶಕ್ತಿಸೂಚಕವಾಗಿ ಮೇಲೆತ್ತಿ ಕಟ್ಟಿದ ಬಾವುಟದಂತೆಯೂ ಅದು ಶೋಭಿಸುತ್ತಿತ್ತು. ಅದರ ಕೆಳಗಣ ವೇದಿಕೆಯಲ್ಲಿ ಅರ್ಜುನನು ತಪಸ್ಸನ್ನಾಚರಿಸುತ್ತಿದ್ದನು. ಯಮನಿಯಮಗಳ ಪರಿಪಾಲನೆಯಿಂದ ಕೃಶವಾದರೂ ಆತನ ಅವಯವಗಳು ಗಟ್ಟಿಮುಟ್ಟಾಗಿದ್ದುವು. ತಪಶ್ಚರಣೆಯಲ್ಲಿಯೂ ಆತನು ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡಿದ್ದನು. ಅನನ್ಯಸಾಧಾರಣವಾದ ಶಮೆದಮೆಗಳ ಮೂಲಕ ಲೋಕಪೂಜ್ಯವೆನಿಸಿ ಮೂರ್ತಿಮತ್ತಾಗಿ ಬಂದು ಕುಳಿತ ಅಥರ್ವಣವೇದವೋ, ಅಥವಾ ಶಿಖರವೊಂದರಲ್ಲಿದ್ದರೂ ನಿಜಕಾಂತಿಗಳಿಂದ ಶಿಖರನಿಚಯಗಳೆಲ್ಲವನ್ನೂ ಬೆಳಗಿಸುತ್ತ ನಯನಾಹ್ಲಾದಕರನೂ ಅನಂತವ್ಯಾಪಿಯೂ ಎನಿಸಿ ತೊಳಗುವ ಪೂರ್ಣಚಂದ್ರನೋ, ಅಥವಾ ಪಿಂಗಲವರ್ಣದ ಜಟಾಕಲಾಪವನ್ನು ಧರಿಸಿಕೊಂಡು ಗಂಗಾತೀರದಲ್ಲಿ ಸತ್ಫಲಾಪೇಕ್ಷೆಯಿಂದ ಉತ್ತಮ ತಪಸ್ಸನ್ನೆಸಗುತ್ತ ವೇದಿಯಲ್ಲಿ ಜ್ವಾಲಾಮಾಲೆಗಳಿಂದ ಪ್ರಜ್ವಲಿಸುತ್ತ ಹವಿಸ್ಸನ್ನಪೇಕ್ಷಿಸುವ ಅಗ್ನಿ

ನಾರಾಯಣನೋ ಎಂಬಂತೆ ಅರ್ಜುನನು ದೇದೀಪ್ಯಮಾನನಾಗಿದ್ದನು. ಪ್ರಾರಬ್ಧಕರ್ಮವನ್ನು ಧೈರ್ಯದಿಂದಲೇ ಪೂರೈಸುವ ಉತ್ತಮರಂತೆ ಆತನು ದೇಹದಾರ್ಢ್ಯಕ್ಕೆ ಸದೃಶವಾದ ಕಷ್ಟಕರ್ಮವನ್ನೆಸಗುತ್ತ ಉತ್ತಮ ತಪಸ್ವಿಯೆನಿಸಿ ರಾರಾಜಿಸುತ್ತಿದ್ದನು.

ಮೂರು ಲೋಕವನ್ನೂ ಪರಿಪಾಲಿಸುವ ಸಾಮರ್ಥ್ಯವುಳ್ಳ ಅರ್ಜುನನ ಅದ್ಭುತಮೂರ್ತಿಯನ್ನು ಮನವಾರೆ ನೋಡುತ್ತ, ಸುರಸುಂದರಿಯರೆಲ್ಲರೂ ಸೇರಿ ಹೀಗೆ ಉದ್ಗಾರಗೆತೆದರು—"ಬಹು ಕಾಲದಿಂದಲೂ ಮಾಡುತ್ತಿದ್ದ ತಪಸ್ಸಿನ ಮೂಲಕ ಕೃಶಾಂಗನಾಗಿ ತೋರಿದರೂ ಇವನು, ಶೈಲದಂತೆ ಅಂತಃಸಾರನು, ಸರ್ವಸಾಧನವೆಂದು ಚಿರಕಾಲದಿಂದಲೂ ಶಾಂತಿಯಲ್ಲಿ ನಿರತನಾಗಿದ್ದರೂ, ಪ್ರಕೃತಿಯಿಂದಲೇ ದುರ್ಧರ್ಷನು. ಈ ನಿರ್ಜನಾರಣ್ಯದಲ್ಲಿ ಏಕಾಂಗಿಯಾಗಿದ್ದರೂ ಶೌರ್ಯಪರಿವಾರನು. ಮುನಿವೃತ್ತಿಯಲ್ಲಿದ್ದೂ, ತ್ರಿಲೋಕಾಧಿಪತಿಯಾದ ದೇವೇಂದ್ರನಿಗೆ ಸಮಾನವಾದ ತೇಜಸ್ಸುಳ್ಳವನು. ಶೌರ್ಯಸಂಪನ್ನನೆನಿಸಿದ ಈ ಸುಂದರನ ಸೃಷ್ಟಿಯ ವಿಷಯದಲ್ಲಿ ವಿಧಾತನ ಕೈವಾಡವು ಶ್ಲಾಘನೀಯವು. ಇಂತಹ ತಪೋನುಷ್ಠಾನದಲ್ಲಿ ಇವನಿಗಿರತಕ್ಕ ಆಸಕ್ತಿಯನ್ನು ಯೋಚಿಸಿದರೆ, ನಿಜವಾಗಿಯೂ ಇದು ಆಸ್ಥಾನಪ್ರಯತ್ನವೆನಿಸುವುದು. ಮತ್ತಮತಂಗಜದ ಮಾಂಸವನ್ನು ಭುಜಿಸತಕ್ಕ ಕಂಠೀರವನಿಗೆ' ಜೀರ್ಣತೃಣಚರ್ವಣದಲ್ಲಿ ಉತ್ಕಂಠೆಯೆ? ಆಹಾ! ಸುಂದರತರಸೃಷ್ಟಿಗಳಲ್ಲಿ ಇಂತಹ ಮುಖ್ಯಗುಣ ಹೀನತೆಯಿರುವುದರಿಂದಲೇ ಸೃಷ್ಟಿಕರ್ತನು ಜಡಜಕುಲಸಂಭೂತನೆನಿಸಿಕೊಳ್ಳಲು ತಕ್ಕವನೇ ಸರಿ."

ಹೀಗೆ ನಿರಾಶರಾದರೂ ಕೂಡ ಆ ಸುಂದರಿಯರು ತಮ್ಮ ಕರ್ತವ್ಯದ ಹೊರೆಯನ್ನು ಕುರಿತು ಯೋಚಿಸತೊಡಗಿದರು—"ಮೂವತ್ತಮೂರು ಕೋಟಿ ದೇವತೆಗಳಿಂದ ಕಿಕ್ಕಿರಿದ ಸಭೆಯಲ್ಲಿ ಸಭಾಪತಿಯು ನಮ್ಮನ್ನು ಹೊಗಳಿ ಮಾತಾಡುತ್ತ, ನಮ್ಮ ಮೇಲೆ ಹೊರಿಸಿದ ಕರ್ತವ್ಯದ ಹೊರೆಯೇನು ಸಾಮಾನ್ಯವೆ? ನಮ್ಮೊಡೆಯನ ಚತುರಗಂಭೀರಭಾಷಣಕ್ಕೆ ಸೋತುಹೋಗಿ ನಾವಿಂದು ವಂಚಿತರಾದೆವೆ? ತಪಸ್ಸುಮಾಡುತ್ತಿದ್ದ ಮುನಿಗಳನ್ನೋ ದಾನವರನ್ನೋ ವಂಚಿಸಿ, ಅವರ ತಪಸ್ಸುಗಳನ್ನು ಕೆಡಿಸಿದುದಕ್ಕಾಗಿ ಎಂದೆಂದೋ

ಪಾರಿತೋಷಿಕಗಳನ್ನು ಪಡೆದವರ ಹೆಸರುಗಳನ್ನು ಸಭೆಯಲ್ಲಿ ಓದಿ ಹೇಳುವುದೇನು! ಇಂದಿನ ಕರ್ತವ್ಯವನ್ನು ಪೂರೈಸತಕ್ಕವರಿಗೆ ಗೊತ್ತುಪಡಿಸಿದ ಸಂಭಾವನೆಯನ್ನು ಮತ್ತೂ ಮತ್ತೂ ಒತ್ತಿ ಹೇಳುವ ಚಾತುರ್ಯವೇನು! ನಾಕಾಧಿಪನ ಆ ಜಾಣ್ಮೆಗೆ ಸಿಲುಕಿ ತುಂಬಿದ ಸಭೆಯಲ್ಲಿ ಅಸಾಧ್ಯವಾದ ಕಾರ್ಯಭಾರವನ್ನು ಹೊತ್ತುಕೊಂಡು ಬಂದ ನಮ್ಮ ಗತಿಯೇನು! ಇದರಲ್ಲಿ ಸಫಲತೆಯುಂಟಾಗದೆ ಹೋದರೆ ದೇವಲೋಕದಲ್ಲಿ ತಲೆಯೆತ್ತಲು ನಮಗೆ ಸಾಧ್ಯವೆ? ಹೇಗಾದರೂ ಮಾಡಿ ಸ್ತ್ರೀಸಮಾಜದ ಗೌರವಕ್ಕೆ ನಾವಿಂದು ಕುಂದನ್ನು ತಂದುಕೊಳ್ಳಬಾರದುದರಿಂದ ನಮ್ಮ ಜಾಣ್ಮೆಯ ಸಾಮರ್ಥ್ಯವನ್ನು ತೋರಿಸಿಕೊಳ್ಳಲಿದೀಗ ಕಾಲವು."

ಈ ರೀತಿಯಾಗಿ ನಿರ್ಧರಿಸಿಕೊಂಡ ಚೆಲುವೆಯರು ಅರ್ಜುನನ ತಪಸ್ಸನ್ನು ಕೆಡಿಸುವ ಸಲುವಾಗಿ ತಮ್ಮ ತಮ್ಮ ಬೇಟದ ಆಟಗಳನ್ನಾಡತೊಡಗಿದರು. ದೈವತತ್ಪರರನ್ನು ವಂಚಿಸಲು ಬಯಸಿದವರನ್ನು ಮೋಹವಾವರಿಸುವುದು ಸಹಜವಲ್ಲವೆ ಎಂಬಂತೆ ಕುಡಿನೋಟಗಳಿಂದ ನೋಡುವ ಸುಕುಮಾರಿಯರೇ ತಪಸ್ವಿಯ ನೈಸರ್ಗಿಕಸೌಂದರ್ಯಕ್ಕೆ ಸೋತುಹೋಗಿ ಪುಷ್ಪಬಾಣಗಳಿಗೆ ಗುರಿಯಾದರು. ಅದನ್ನು ನೋಡಿ ಒಡನಾಡಿಗಳಾದ ಗಂಧರ್ವರು ವೀಣಾಮೃದಂಗಾದಿವಾದ್ಯವಿಶೇಷಗಳನ್ನು ಬಾಜಿಸಲು, ಉಂಟಾದ ನಾದವು ತಪೋವನವೆನ್ನದೆ, ಗಿರಿಯೆನ್ನದೆ, ದರಿಯೆನ್ನದೆ, ಅಂತರಿಕ್ಷವೆನ್ನದೆ ವ್ಯಾಪಿಸುತ್ತ ಎತ್ತೆತ್ತಲೂ ಸರಸಸಂಗೀತಮಯವಾಯಿತು.

ಆಗ, ಅರೆವಿರಿದು ಮಂದಹಾಸವನ್ನು ಬೀರುತ್ತಿದ್ದ ಗೋರಟೆಯೆಂಬ ಮುಗುದೆಯ ಕುಸುಮಾಧರವನ್ನು ಕಾಮನು ಕಾಮುಕನಂತೆ ಅರೆಗಣ್ಣಿನಿಂದ ನಿರೀಕ್ಷಿಸುತ್ತಿದ್ದನು. ಇದೇ ತಕ್ಕ ಸಮಯವೆಂದು ವಸಂತಲಕ್ಷ್ಮಿಯು ಅಲಿಗಳೆಂಬ ಲಂಬಾಲಕವನ್ನು ತಿದ್ದಿ, ಮುಖಕಮಲಕ್ಕೆ ತಿಲಕವನ್ನಿಕ್ಕಿ, ಚೆಂದಳಿರುಡೆಗೆ ಝೇಂಕರಿಸುವ ಅಲಿಮಾಲೆಯೆಂಬ ಕಾಂಚೀದಾಮವನ್ನು ಮರಿಸಿಕೊಂಡು ಚೆಲುವಾಗಿ ರಂಜಿಸಿದಳು. ಕುಸುಮೋತ್ಪತ್ತಿಗೆ ಮೂಲವೂ ಸುಮನೋಲ್ಲಾಸಕ್ಕೆ ನಿದಾನವೂ, ವಿಹಾರಕ್ಕೆ ಆಗರವೂ ಎನಿಸುವ ವನಸ್ಥಳವನ್ನು ಪ್ರವೇಶಿಸಬೇಕೆಂಬ ಹೆಬ್ಬಯಕೆಯಿಂದ ವನಶ್ರೀಯು ಅಂಕುರಿಸಿದ ಮಾವಿನಕೊಂಬೆಗಳನ್ನಾಶ್ರೈಸುತ್ತ, ಮೆಲ್ಲಮೆಲ್ಲನೆ ಕಮಲವನಗಳಲ್ಲಿ ಮೆಲ್ಲಡಿ

ಯಿಡತೊಡಗಿದಳು. ಈ ಸಂದರ್ಭವು ಸುರಾಂಗನೆಯರಿಗೆ ಆಶೆಯ ಮುಂಗುಡಿಯನ್ನು ತೋರಿದಂತಾಯಿತು. ಅದೇ ಸುಮುಹೂರ್ತವೆಂದು ಕಂದರ್ಪನು ದರ್ಪದಿಂದ ಅಶೋಕಪಲ್ಲವವೆಂಬ ಗದ್ದುಗೆಯಿಂದೆದ್ದನು. ಕಬ್ಬುವಿಲ್ಲಿಗೆ ತುಂಬಿದ ತುಂಬಿಗಳ ಹೆದೆಯೇರಿಸಿದನು. ಸಡಗರಿಸುವ ನಾರಿಯರ ಹೃದಯಗಳನ್ನು ಗುರಿಯಿಟ್ಟು ಸಕಾಮನಾಗಬೇಕೆಂದು ಪಂಚ ಬಾಣಗಳಿಂದಲೂ ಹೊಡೆದನು. ಆಗ ಕಲಕಂಠನೆಂಬ ಬಿರುದಿನ ಕೋಗಿಲೆಯು ಮಾವಿನ ಚಿಗುರುಗಳ ಒಗರಿನಿಂದ ಕಂಠವನ್ನು ತಿದ್ದಿ ಕೊಳ್ಳುತ್ತ, ಸಂತಾಪಗಳಿಂದ ಬೆಂದ ಹೃದಯಗಳನ್ನು ತಣಿಸುವೆನೆಂದು ಪಂಚಮಸ್ವರದೊಡನೆ ಅವ್ಯಕ್ತಮನೋಹರವಾಗಿ ಕೂಗಲಾರಂಭಿಸಿತು. ಆ ಮಧುರನಿನಾದಕ್ಕೆ ಮೆಚ್ಚಿ ಬಿರಿಯುವ ಕೆಂದಾವರೆಯನ್ನು ನೋಡಿ ಮಂದಮಾರುತನು ಅಲೆದಲೆದು ಬರುತ್ತಿರಲು, ಕಮಲಿನಿಯು ಚಂಚಲೆ ಯಾದಳು. ಅದನ್ನು ಕಂಡು ಮಲ್ಲಳಿಯು ಮೆಲ್ಲಗೆ ಇಂತು ತಲ್ಲಣಿಸು ವುದು ತರವಲ್ಲವೆಂದು ಉಸುರುತ್ತ, ಮಧುಪಾನಾಸಕ್ತಿಯಿಂದ ಬಂದೆರ ಗಿತು. ಅದನ್ನು ನೋಡಿ "ಲೋಕದಲ್ಲಿ ನಾಚಿಕೆಗೇಡಾದ ಇಂತಹ ಕೃತ್ಯವು ಸಲ್ಲದೆಂದು ಮಲ್ಲಿಗೆಯು ಮೆಲ್ಲಗೆ ಮಂದಹಾಸಮಾಡುತ್ತಿದ್ದಂತೆ ವಿಕಾಸ ಗೊಳ್ಳುತ್ತಿತ್ತು.

ಆಗ, ಆ ಗಂಧರ್ವರ ಶ್ರುತಿಮಧುರಗಾನವೂ ಆ ಸುಗ್ಗಿಯ ಸುಗ್ಗಾಟವೂ ಸರನ ಮನವನ್ನಪಹರಿಸುವುದರ ಬದಲಾಗಿ, ಆ ನಾರಿಯರನ್ನೇ ಸೂರೆಗೊಂಡುವು; ಪರರಿಗಿಟ್ಟ ಶೂಲವು ತನ್ನನ್ನು ಇರಿಯುವುದಿಲ್ಲವೆ? ಅವರ ದೃಷ್ಟಿಗಳು ತಪಸ್ವಿಯ ಅವಯವಗಳನ್ನು ನೋಡಿ ನೋಡಿ ವಿಕಾಸ ಗೊಂಡುವು. ಬಕುಲ, ಮಲ್ಲಿಕ, ಉತ್ಪಲ, ಅಶೋಕವೇ ಮೊದಲಾದ ಸುಮಸಮೂಹಗಳು ಅವರ ದೃಷ್ಟಿಗಳನ್ನು ಸೆಳೆಯದಾದುವು. ತಮ್ಮ ಸೌಂ ದರ್ಯವೊಂದರಿಂದಲೇ ಮುನಿಯನ್ನು ಬಂಧಿಸುವೆವೆಂದು ಬಂದ ಸುಂದ ರಿಯರನ್ನೇ ಮುನಿಯು ಮುನಿಯದೆ ಬಂಧಿಸಿದನೆಂದರೆ ಮುಂದಿನ ಪರಿ ಣಾಮವನ್ನು ತಿಳಿದವರಾರು?

ಆ ಬೆಡಗುಗಾತಿಯರು ನರ್ತನ ವಿಶೇಷದಿಂದಲಾದರೂ ಆತನ ಮನಸ್ಸನ್ನೊಲಿಸಬೇಕೆಂದು ಹವಣಿಸಿದರು. ಆತನಲ್ಲಿ ನೆಟ್ಟ ತಮ್ಮ ದೃಷ್ಟಿ

ಯನ್ನು ಸೆಳಕೊಳ್ಳಲಾರದೆ ಕಂಗೆಟ್ಟ ನರ್ತನದಲ್ಲಿ ಅವರ ಕರಪಲ್ಲವವೇ ಚಲಿಸಿತಲ್ಲದೆ, ಬಲ್ಲಕಿತ್ತಡಿಯ ಚಿತ್ತವು ಚಲಿಸದಾಯಿತು. ರಂಗಪ್ರಸಾಧನೆಗೆಂದು ಬಿಕ್ಕಿದ ಕದಂಬಕೇಸರಗಳು ಲಾಕ್ಷಾರಸಲೇಪನದಿಂದ ಕೆಂಪಾಗಿದ್ದ ಅವರ ಪಾದಗಳಲ್ಲಿ ಅಂಟಿಕೊಂಡುವು. ಆ ಪುಷ್ಪಗಳಿಗೆ ಮುತ್ತುತ್ತಿದ್ದ ಅಲಿಮಾಲೆಗಳ ರಸವ್ಯಂಜಕಚರಣಲಾಘವವು ಹದಗೆಟ್ಟು ಅಭಿನಯವಂತೂ ಗತಿಗೆಟ್ಟಿತು. ಹೇಗಾದರೂ ಮಾಡಿ ಕಾರ್ಯಸಾಧಿಸಿಕೊಳ್ಳಬೇಕೆಂಬವರಿಗೆ ಒಂದಲ್ಲವಾದರೆ ಇನ್ನೊಂದು, ಅದೂ ಹೋದರೆ ಬೇರೊಂದು ಎಂಬ ಬಗೆಬಗೆಯ ಹಂಚಿಕೆಗಳಿಂದಲೂ ಕಾರ್ಯಸಾಧನೆಯ ಹಾದಿಯು ತೋರದೆ ಹೋಯಿತು. ಕೊನೆಗೆ ದೂತೀಪ್ರೇಷಣವೆಂಬ ಉಪಾಯಾಂತರವೊಂದು ಹೊಳೆಯಲು, ಅದನ್ನೂ ಕೂಡ ಪರೀಕ್ಷಿಸದೆ ಬಿಡಬಾರದೆಂದು ಕೂಡಲೆ ಸಂಧಾನಚತುರಳನ್ನು ಕರೆದು ಆ ತಪಸ್ವಿಯ ಬಳಿಗಟ್ಟಿದರು. ಅವಳು ಕೂಡಲೆ ಹೋಗಿ ಕಿತ್ತಡಿಯೊಡನೆ ಮೆಲ್ಲಮೆಲ್ಲಗೆ ಹೀಗೆಂದಳು-"ತಾಪಸೋತ್ತಮನೇ! ಸೌಂದರ್ಯದ ವಿಷಯದಲ್ಲಿ ಮೂರು ಲೋಕದವರಿಂದಲೂ ಹೊಗಳಿಸಿಕೊಂಡು ಸ್ವರ್ಲೋಕದಲ್ಲಿ ತಿಲಕದಂತೆ ಮೆರೆಯುವ ತಿಲೋತ್ತಮೆಯೆಂಬ ಒಡತಿಯ ಬಡದೂತಿಯು, ಮಿಂಚಿದ ಕಾರ್ಯಕ್ಕಾಗಿ ಚಿಂತೆಯೊಡನೆ ನಿರ್ವಂಚನೆಯಿಂದ ಮಾಡಿಕೊಳ್ಳುವ ವಿಜ್ಞಾಪನೆಯನ್ನು ಲಾಲಿಸಬೇಕು. ಮೊದಲಿಂದಲೂ ಮನವು ನಿನ್ನಲ್ಲಿ ನೆಟ್ಟುದರಿಂದ, ಇಂದವಳು ಬಗೆಗೆಟ್ಟು ನನ್ನನ್ನು ನಿನ್ನ ಬಳಿಗಟ್ಟಿರುವಳು. ಇದನ್ನು ಮನ್ನಿಸಿ, ಅವಳ ಮಾನವನ್ನುಳಿಸಿ ಪ್ರಾಣವನ್ನು ರಕ್ಷಿಸಬೇಕು. ಕಿತ್ತಡಿಯೊಡೆಯ! ಬಿಡದೆ ಇಸುವ ಮಾರನ ಕೂರಲಗುಗಳಿಗೆ ಗುರಿಯಾಗಿ ತಲೆದೋರಿದ ಗಾಯಗಳಿಂದ ಅವಳು ನರಳುತ್ತಿರುವಳು! ಬಲ್ಲವರಾದ ತಮ್ಮ ಮೆಲ್ಲಡಿಗಳೇ ಶರಣೆಂಬ ತನ್ಮಯತೆಯಿಂದಿರುವಳು. ಸಂದೇಶದ ರೀತಿಯನ್ನು ಮನಸ್ಸಿನಲ್ಲೇ ಯೋಚಿಸುತ್ತ, ಉಂಟಾದ ಜಾಗರಣೆಯಿಂದ ಮುಖಮಂಡಲವು ಬತ್ತಿ ಬಡವಾಗಿರುವುದು. ಆದುದರಿಂದ ಯಾವ ಸಂದೇಶವನ್ನೂ ಹೇಳಲು ಸಮರ್ಥಳಾಗಲಿಲ್ಲ. ಅಂತಹ ವಿಷಮಾವಸ್ಥೆಯಲ್ಲಿರುವ ಅವಳನ್ನು ನೋಡುತ್ತಿದ್ದ ಗೆಳತಿಯರೆಲ್ಲರ ಹೃದಯಗಳೂ ದೃಷ್ಟಿಯೊಡನೆ ನನೆದು, ಕೇವಲ ನಿರಾಶೆಯನ್ನೇ ಸೂಚಿಸುತ್ತಿರುವುವು. ಅಂದಿ

ನಿಂದಲೂ ಉಂಟಾದ ಜಾಗರಣೆಯಿಂದ ಅವಳು ಕೃಶಳಾಗುತ್ತ ಬಂದು ಸೌರಭವಿಶಿಷ್ಟವಾದ ಕುಸುಮಶಯ್ಯೆಯನ್ನು ತೊರೆದು ಬರಿಯ ನೆಲದಲ್ಲಿ ಪಲ್ಲವಾಸ್ತರಣವನ್ನು ಬಯಸಿ ಪವಡಿಸಿದಳು. ಅಲ್ಲಿಯೂ ಸುಖವಿಲ್ಲದೆ ಒಂದೇ ರೀತಿಯ ಅರತಿಯಿಂದ ಕುದಿಯುತ್ತಿರುವಳು. ಆಕೆಗೆ ಸುಖ ಶೀತಲವೆನಿಸಬಹುದಾದ ತಮ್ಮ ಉತ್ಸಂಗವನ್ನು ಪಡೆಯಬೇಕೆಂಬುದೊಂದೇ ಬಯಕೆಯಾಗಿರುವುದು. ನಿರ್ದಯರಂತೆ ಇಲ್ಲಿ ತಾವಿನ್ನೂ ಕುಳಿತಿರುವುದೆ? ದಯಾಳುವೆನಿಸಿದ ಪುಣ್ಯಾತ್ಮ! ಸಂಕಷ್ಟದಿಂದ ನರಳುತ್ತಿರುವಾಕೆಯ ಬಯಕೆಯು ನೆರವೇರಲಿ! ಇಲ್ಲವಾದರೆ ತಮ್ಮ ದೆಸೆಯಿಂದ ಅವಳ ಪ್ರಾಣೋತ್ಕ್ರಮಣವಾಗುವುದರಲ್ಲಿ ಸಂದೇಹವಿಲ್ಲ. ಈ ತಪಸ್ಸನ್ನು ಅನಂತರವೂ ಮಾಡಿಕೊಳ್ಳಬಹುದು. ಅನುರಕ್ತಳಾದ ಸುಂದರಿಯು ಮೃತಿಹೊಂದಿದರೆ ಮತ್ತೆ ದೊರಕುವುದುಂಟೆ? ಮೂಕರಂತಿರುವುದೇಕೆ? ಕಾಠಿನ್ಯವನ್ನು ಬಿಡುವುದು! ತಮ್ಮ ಆಂತರ್ಯವೇನೆಂದು ಮನಬಿಚ್ಚಿ ಮಾತಾಡುವುದು. ಮುನಿಗಳು ಕರುಣಾಶಾಲಿಗಳು, ಅವರ ಚಿತ್ತವು ನವನೀತ ಕೋಮಲವು ಎಂದು ಪ್ರತೀತಿಯಿರುವುದು. ಭಾಗ್ಯವಂತರು ದೊರಕಿದ ಸಂದರ್ಭವನ್ನೆಂದಿಗಾದರೂ ಬಿಡುವರೆ?

ಹೀಗೆ ನಾನಾವಿಧವಾದ ಯುಕ್ತಿಪ್ರಯುಕ್ತಿಗಳಿಂದ ದೂತಿಯು ಸ್ವಸಾಮರ್ಥ್ಯವನ್ನು ತೋರಿಸಿಕೊಂಡೂ ಮುನಿಯ ಮೌನವನ್ನು ಪರಿಹರಿಸಲಾರದೆ ಸೋತು ಹಿಂದಿರುಗಿದಳು. ದೂತಿಯು ಸೋತು ಬರುವುದನ್ನು ನೋಡಿ, ಒತ್ತಟದ ಪಟದಿಂದ ಸುರಾಂಗನೆಯರು ಮಾಯಾಂಗನೆಯರಂತೆ ಬಗೆಬಗೆಯ ವಶೀಕರಣತಂತ್ರಮಂತ್ರಗಳನ್ನು ಹೂಡಿ ಕಾಡಿದರು. ಆದರೂ ಮುನಿಯು ಮುನಿಯದೆ ರಾಗಿಸದೆ ಭೋಗಿಸದೆ ಚಿತ್ತಸ್ಥೈರ್ಯದಿಂದ ತಪದಲ್ಲೇ ಮುಂದುವರಿಯುತ್ತಿದ್ದನು. ಅದನ್ನು ದೃಷ್ಟಿಸಿ ನೋಡಿ ಸ್ವೈರಿಣಿಯಾದ ಹರಿಣಿಯೆಂಬವಳು ಬಂದು—"ತಪಸ್ವಿಯೆ! ಕರ್ಮದ ಮರ್ಮವಿದೇನು? ಯೋಗಿಯ ಸೋಗಿನಲ್ಲಿರುವುದಿದು ಧರ್ಮವೆ? ಸಾಕು ಸಾಕು! ಮೂಕನಾಗಿರುವುದು ನಿನಗೆ ಕ್ಷೇಮವೆ? ಜೋಡಿಯಿಲ್ಲದ ನಿನ್ನ ಪಾಡನ್ನು ಬಿಡು! ಬಲ್ಲಿದನೇ, ನಿನಗಿಲ್ಲಿ ಸಾಗದ ಯೋಗದ ಗೊಡವೆಯಿದೇಕೆ? ನಿಜಕ್ಕೂ ನೀನು ಶಾಂತ್ಯಾರಾಧಕನೋ ವಿಷಯಾರಾಧಕನೊ? ವಂಚಕನೇ,

ಶಸ್ತ್ರಸನ್ಯಾಸವಿಲ್ಲದ ಶಾಂತಿಯು ಧರ್ಮನೀತಿಗಳ ಕ್ರಾಂತಿಯು! ಹಾಗೂ ಪ್ರಾಣಗಳ ಉತ್ಕ್ರಾಂತಿಯು—ಮತಿಗೇಡಿ! ನಿನಗೆ ಮುಕ್ತಿಯು ಗೊಡವೆಯೆಂದರೆ ಅದು ದುರುಕ್ತಿಯೇ ಸರಿ. ನೀನಾರಾಧಿಸುವ ಹೃದಯೇಶ್ವರಿಯು ಭಯದಿಂದ ಕಾಮಿನಿಯರ ಕೋರಿಕೆಯನ್ನು ನೆರವೇರಿಸಲರಿಯದೆ ಮೂಕನಂತಿರುವೆಯೊ? ಸರಿ ಸರಿ! ದಾರಿದೋರದ ವೈರಾಗ್ಯವಿದು" ಎಂದು ನಡುಗುವ ಅಧರೋಷ್ಠಗಳಿಂದ ಕ್ರೋಧಾಸೂಯೆಗಳೂ, ಬಳಕಿದ ದೃಷ್ಟಿಕೋನಗಳಿಂದ ಮಾನಾವಮಾನಗಳೂ ತೋರಿ ಬರುವಂತೆ ನುಡಿಯುತ್ತ, "ಇವನೊಬ್ಬ ಮುನಿಯು" ಎಂದು ನಿಂದಿಸುತ್ತ ಕರ್ಣೋತ್ಪಲಗಳನ್ನು ತೆಗೆದು ಎದೆಗೆ ಬಡಿದುಕೊಳ್ಳುತ್ತ, ಬಂದ ದಾರಿಗೆ ಸುಂಕವಿಲ್ಲವೆಂದು ನಿತ್ತಲ್ಲಿ ನಿಲ್ಲದೆ ತೆರಳಿದಳು. ಅದೇ ವೇಳೆಗೆ ತುಂಬಿದ ಯೌವನದ ರಂಭೆಯೆಂಬವಳು ಹಿಂದಿನಿಂದ ಬಂದು ವಿನೀತಳಂತೆ ಮಂದಹಾಸದೊಡನೆ ಕಡೆಗಣ್ಣುಗಳಿಂದಲೇ ಮುನಿಯನ್ನು ಪಾನಮಾಡುವಂತೆ ಎಡೆಬಿಡದೆ ನೋಡುತ್ತಿದ್ದೂ, ಉಪಯೋಗವಿಲ್ಲವೆಂದು ಚಿಂತಿಸಿ ಮಿಂಚಿನಂತೆ ಚಲಿಸಿದಳು.

ಹೀಗೆ ಚಿತ್ತಚಲನೆಗೆ ವಿಧವಿಧದ ಅನಂತಹೇತುಗಳು ತೋರಿದರೂ, ನರನು ಸ್ಥಿರಸಮಾಧಿಯಿಂದ ಕದಲದೆ ಇದ್ದನೆಂದರೆ, ಉತ್ತಮಧ್ಯೇಯವುಳ್ಳ ಮಹಾತ್ಮರಲ್ಲಿ ವಿಷಯಾಭಿಲಾಷೆಗೆ ಅವಕಾಶವಿಲ್ಲ. ಅಖಂಡವಾದ ತಪಸ್ಸಿನ ಮೂಲಕ ಶತಮುಖನನ್ನು ಮೆಚ್ಚಿಸಿ, ಸ್ವದೇಶದ್ರೋಹಿಗಳನ್ನು ಸದೆಬಡಿದು, ಉತ್ತಮೋತ್ತಮವೆನಿಸುವ ಸ್ವರಾಜ್ಯವನ್ನು ಸ್ಥಾಪಿಸಿ, ಭರತಮಾತೆಯ ಸೇವೆಯಲ್ಲಿ ನಿರತನಾಗಿರಬೇಕೆಂಬ ಹೆಬ್ಬಯಕೆಯಿಂದ ಮನಸ್ಸು ತಪಸ್ಸಿನಲ್ಲೇ ಸಂದಿರಲು, ಆತನಿಗೆ ಬಾಹ್ಯವಿಷಯಜ್ಞಾನವುಂಟಾಗುವ ಬಗೆ ಹೇಗೆ?

ಬಗೆಬಗೆಯ ಸೋಗುಗಳಿಂದಲೂ ಕಾರ್ಯವು ಸಾಗದೆ ಹೋಗಲು ಆ ಸೋಗೆಗಣ್ಣಿನ ರಮಣಿಯರೆಲ್ಲರೂ ಒಂದೆಡೆ ಸೇರಿ—"ಮೈಗಣ್ಣನ ಬಣ್ಣನೆಯ ನುಡಿಗೆ ಮರುಳಾಗಿ ನಾವಿಂದಿಲ್ಲಿಗೆ ಬಂದು ಕಂದಿ ಕುಂದಿದೆವು. ಮುಂದಿನ ಬಟ್ಟೆದೋರದೆ ಕಂಗೆಟ್ಟೆವು. ಈ ತಾಪಸನ ಮುಂದೆ ಕಣ್ಣೀರ ಕಾಲುವೆಯನ್ನೇ ಹರಿಯಿಸುತ್ತ ಕರುಣೆಯನ್ನು ತೋರಿಸಿಕೊಂಡೆವು. ಸ್ತ್ರೀಯರಿಗೆ ಸಹಜವಾಗಿರುವ ಲಜ್ಜೆಯನ್ನು ವರ್ಜಿಸಿದೆವು. ಕೋರಿಕೆಯನ್ನು

ಮನ್ನಿಸೆಂದು ದೈನ್ಯದಿಂದ ಬಿನ್ನೈಸಿದೆವು. ಯೋಗವು ಸಾಗದೆಂದು ಮಂದಹಾಸಪೂರ್ವಕವಾಗಿ ನಿಂದಿಸಿದೆವು. ಅಭಿವಂದಿಸುತ್ತ ಮೇಲ್ಮೆಯನ್ನು ತೋರುವೆವೆಂದು ಸಾರಿದೆವು. ಕಪಟಕೋಪತಾಪಗಳಿಂದ ಅನುರಾಗವನ್ನು ಉದ್ದೀಪಿಸುವ ಉಪಾಯಪ್ರಪಂಚವೆಲ್ಲವನ್ನೂ ಸಂಚಿಸಿದೆವು. ಹೀಗೆ ನಲ್ಮೆಯ ಹೇತುಗಳೆಲ್ಲವೂ ಸುಮ್ಮನಾಗಲು ನಮ್ಮಲ್ಲಿ ಉಳಿದಿರುವುದೇನು? ಮಾನವು ಇಳಿಯಿತು! ಕೀರ್ತಿಯು ತಾನೇ ಅಳಿಯಿತು! ಇನ್ನಿವನ ಗೊಡವೆಯನ್ನು ಬಿಡುವುದೇ ಲೇಸು."

ಹೀಗೆಂದು ಯೋಚಿಸುತ್ತ ಸುರಸುಂದರಿಯರೆಲ್ಲರೂ ಗಂಧರ್ವರೊಡನೆ ನಿಜಲೋಕವನ್ನೈದಿದರು.

---

೧೪. ವೃದ್ಧನ ಉಪೋದ್ಘಾತ

ತ್ರಿಲೋಕಾಧಿಪತಿಯಾದ ದೇವೇಂದ್ರನು, ಅಪಜಯವುಂಟಾದುದರಿಂದ ಕಂದಿ ಜೋಲುಮೋರೆಯಿಂದ ಬಂದ ಅಪ್ಸರೆಯರ ಸೋಲಿನ ಹೊಲಬನ್ನರಿತು, ನಿಜನಂದನನ ಮನಃಸ್ಥೈರ್ಯವನ್ನು ತಿಳಕೊಂಡು, ಮನಸ್ಸಿನಲ್ಲಿ ಸಂತೋಷಗೊಂಡರೂ, ಅದನ್ನು ಬಾಹ್ಯದಲ್ಲಿ ತೋರ್ಪಡಿಸಿಕೊಳ್ಳದೆ ಕೋಪಗೊಂಡವನಂತೆ ನಟಿಸುತ್ತ—"ಆ ತಪಸ್ವಿಯು ನಿಮ್ಮನ್ನೂ ಅಲಕ್ಷಿಸಿದನೇ! ಅದಕ್ಕಾಗಿ ಸಂತಾಪವೆ? ಸಾಕು! ಸಾಕು! ಪಾಕಶಾಸನನನ್ನು ಕೆರಳಿಸಿದ ಆತನ ನಿಯಮವೆಲ್ಲಕ್ಕೂ ಅರ್ಧವಿರಾಮವೇ ಸರಿ! ನೀವಿನ್ನು ಸುಮ್ಮನಿರಿ!" ಎಂದು ಸುಂದರಿಯರನ್ನು ಸಮಾಧಾನಪಡಿಸುತ್ತ ತಾನೇ ಇಂದ್ರಕೀಲಪರ್ವತದ ಆಶ್ರಮದ ಕಡೆಗಾಗಿ ಹೊರಡಲು ಅನುವಾದನು.

"ನಿಜವೇಷದಿಂದಲೇ ತಪೋವನವನ್ನು ಪ್ರವೇಶಿಸಬಾರದು; ಪುತ್ರನ ಚಿತ್ತಸ್ಥೈರ್ಯವನ್ನು ಪರೀಕ್ಷಿಸಿ ನೋಡಬೇಕು." ಎಂದೆಣಿಸುತ್ತ ಜಿಷ್ಣುವು ಪೂಜಿಷ್ಣುವೆನಿಸಿದ ಪರಿಣತಬ್ರಾಹ್ಮಣನಾದನು. ಚಂದ್ರಕಲೆಗಳೊಡನೆ ಶೋಭಿಸುವ ಸಂಧ್ಯೆಯಂತೆ ನರೆತ ಕೂದಲುಗಳಿಂದ ಕಳೆಗೊಂಡೊಪ್ಪುವ ಜಟಾಕಲಾಪ; ಹಿಮಸಂಹತಿಯಿಂದ ಕಳೆಗೆಟ್ಟ ಸಹಸ್ರಪತ್ರಗಳಿಂದ

ಕೂಡಿದ ಮಡುವಿನಂತೆ ಜರೆಯಿಂದ ಬಿಳುಪಾದ ಹುಬ್ಬುಗಳುಳ್ಳ ನೇತ್ರಗಳು; ಸಿಕ್ಕಿದುದನ್ನು ಬಿಡದೆ ದಕ್ಕಿಸಿಕೊಂಡ ಗೌರವಹೀನನಂತೆ ನಿಸ್ತ್ರಿರಲಾರದೆ ಗೊತ್ತುಗುರಿಯಿಲ್ಲದೆ ಡಿಳ್ಳನೆ ಬೆಳೆದ ಡೊಳ್ಳುಹೊಟ್ಟೆ; ಹೊತ್ತುಕೊಂಡ ಭಾರದಿಂದ ಅತ್ತಿತ್ತ ಮಿಸುಕಲಾರದೆ ತಲ್ಲಣಿಸಿ ಗದಗದಿಸುವಂತೆ ಬಹಳವಾಗಿ ಕ್ಷೀಣಿಸಿ ಗಡಗಡನೆ ನಡುಗುವ ಕರಚರಣಗಳು; ಜೀವನಯಾತ್ರೆಯಲ್ಲಿ ತೊಳಲಿ ಬಸವಳಿದಾಗ ಸಹಾಯಕಳಾಗಿ ದೊರೆತ ಗೃಹಿಣಿಯಂತೆ ವೇಷಾಂತರದ ಯಾತ್ರೆಯಲ್ಲಿ ಹಸ್ತಾವಲಂಬನೆಗೆ ದೊರೆತ ವೇತ್ರಯಷ್ಟಿ; ಇವುಗಳಿಂದೊಪ್ಪುವ ಇಂದ್ರನ ವೇಷವು ಮನೋಹರವಾಗಿತ್ತು.

ಆ ವೃದ್ಧಬ್ರಾಹ್ಮಣನು ನಡೆನಡೆದು ಉಂಟಾದ ಆಯಾಸವನ್ನು ಸೂಚಿಸುವಂತೆ ನಿಟ್ಟುಸಿರುಬಿಡುತ್ತ ಮೆಲ್ಲಮೆಲ್ಲನೆ ತಪೋವನದ ಕಡೆಗಾಗಿ ಬರುತ್ತಿದ್ದನು, ದೂರದಿಂದಲೇ ಬರುತ್ತಿದ್ದ ಬ್ರಾಹ್ಮಣನನ್ನು ನೋಡಿ ಅರ್ಜುನನು ಸಂತೋಷಾಶ್ಚರ್ಯಭರಿತನಾದನು. ಅವನ ಚಿತ್ತವು ಬಂಧುಸ್ನೇಹದಿಂದ ಮಿದುವಾಗತೊಡಗಿತು. "ಭಾಸ್ಕರನು ಮೋಡಗಳಿಂದ ಮರೆಯಾದರೂ ವಿಶ್ವವ್ಯಾಪಕವಾದ ತೇಜಸ್ಸಿನಿಂದ ವಿರಾಜಿಸುವಂತೆ, ಈತನು ವಾರ್ಧಕ್ಯದಿಂದ ಕೂಡಿದವನಾದರೂ ಸ್ವಾಭಾವಿಕವಾಗಿ ದಿವ್ಯತೇಜಸ್ವಿಯು; ಹಾಗಲ್ಲದೆ ಈ ತಪೋವನವು ಹೀಗೆ ಬೆಳಗಲು ಕಾರಣವಿಲ್ಲ" ಎಂದು ಯೋಚಿಸುತ್ತ ಕೂಡಲೆ ಭಕ್ತಿವಿಶ್ವಾಸಗಳಿಂದ ವಿನೀತನಾಗಿ ಅಭ್ಯಾಗತನನ್ನಿದಿರುಗೊಂಡು "ಆಸನದಲ್ಲಿ ಕುಳಿತುಕೊಂಡು ಶ್ರಮವನ್ನು ಪರಿಹರಿಸಿಕೊಂಡು ಅನುಗ್ರಹಿಸಬೇಕು" ಎಂದು ಪ್ರಾರ್ಥಿಸಿಕೊಂಡು ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿದನು. ತಪಸ್ವಿಯ ಬೇಡಿಕೆಯನ್ನು ಮನ್ನಿಸಿ ಬ್ರಾಹ್ಮಣನು ಸ್ವಲ್ಪ ಕಾಲ ವಿಶ್ರಮಿಸಿ ದಣಿವಾರಿಸಿಕೊಂಡನು.

ಅನಂತರ ಸುಖದುಃಖಗಳ ವಿಚಾರಪೂರ್ವಕವಾಗಿ ಆಗಂತುಕನು ತಪಸ್ವಿಯೊಡನೆ ಹೀಗೆ ಮಾತಾಡಲುಪಕ್ರಮಿಸಿದನು — ಪುಣ್ಯಶಾಲೀ, ಯೌವನಪ್ರಾಯದಲ್ಲಿರುವ ನೀನು ಇಂತಹ ಕಷ್ಟಕರವಾದ ತಪಸ್ಸನ್ನಾಚರಿಸುತ್ತಿರುವುದು ಬಹಳ ವಿಶೇಷವು. ನನ್ನ ಹಾಗಿರುವ ಪರಿಣತವಯಸ್ಕನೂ ಕೂಡ ವಿಷಯಾಭಿಲಾಷೆಗಳಿಂದ ಬಂಧಿತನಾಗಿರುವನೆಂದರೆ, ನಿನ್ನ ಕಾರ್ಯವು ಬಹು ಮಟ್ಟಿಗೂ ಸ್ತೋತ್ರಾರ್ಹವು. ನಿನ್ನ ದೇಹವು ತಪೋ

ರೂಪವಾದ ಉತ್ತಮಗುಣಸಂಪತ್ತನ್ನು ಪಡೆದಿರುವುದು. ಲೋಕದಲ್ಲಿ ಸೌಂದರ್ಯೋಪಾಸಕರು ಬಹುಜನರಿರಬಹುದಾದರೂ, ಗುಣೋಪಾಸಕರು ದುರ್ಲಭರು. ಬಂಗಾರವು ಪರಿಮಳವನ್ನೊಳಗೊಂಡಂತೆ ನಿನ್ನಲ್ಲಿ ಅವೆರಡೂ ಹೊಂದಿಕೆಯಾಗಿರುವುದರಿಂದ ನನ್ನ ಮನಸ್ಸಿಗೆ ಸೋಜಿಗವೆನಿಸುವುದು.

ಯೌವನಸಂಪತ್ತು ಶರತ್ಕಾಲದ ಮೋಡದಂತೆ ಚಂಚಲವು. ವಿಷಯಸುಖವಾದರೂ, ತತ್ಕಾಲರಮಣೀಯವೆನಿಸಿ ಕೊನೆಗೆ ದುಃಖದಾಯಕವಾದ ಕಷ್ಟವಾಗಿ ಪರಿಣಮಿಸುವುದು. ಆ ಸಂಕಷ್ಟವೇ ಜನನಕಾಲದಲ್ಲಿ ಜೀವಿಯನ್ನು ಕೊಟಲೆಗೊಳಿಸುವುದು. ಬಳಿಕ ಜೀವನದ ಅನ್ನಸಂಪಾದನೆಯ ವಿಷಯದಲ್ಲಿ ವಿಷಪ್ರಾಯವೆನಿಸುವುದು. ಆದುದರಿಂದಲೇ ಉತ್ತಮನು ಸಂಸಾರವನ್ನು ಪರಿಹರಿಸಿ ಮುಕ್ತಿಮಾರ್ಗವನ್ನವಲಂಬಿಸುವನು. ಮಂಗಳಾಂಗನೇ, ಬುದ್ಧಿಸಂಪನ್ನನಾದ ನಿನ್ನಲ್ಲಿ ಇಂತಹ ವಿಚಾರವು ತಲೆದೋರಿರುವುದಾದರೂ, ವಿಪರೀತವಾದ ನಿನ್ನ ವೇಷವೇ ನನ್ನನ್ನು ಸಂದೇಹಕ್ಕೆ ಗುರಿಪಡಿಸುತ್ತಿರುವುದು. ತಪಸ್ವಿಗಳು ಅಜಿನವಲ್ಕಲಗಳನ್ನು ಮಾತ್ರ ಧರಿಸಿಕೊಳ್ಳುತ್ತಿರುವಾಗ ಯೋಧನಂತೆ ನೀನು ಈ ಕವಚವನ್ನು ಧರಿಸಿಕೊಂಡಿರಲು ಕಾರಣವೇನು? ತಪಸ್ವಿಗಳ ಧರ್ಮಕ್ಕಿದು ವಿರುದ್ಧವಲ್ಲವೆ? ಮೋಕ್ಷಪಡೆಯುವ ಬಯಕೆಯುಳ್ಳವರು ದೇಹದ ವಿಷಯದಲ್ಲಿ ನಿಸ್ಪೃಹರಾದುದರಿಂದ ಆತ್ಮರಕ್ಷಣೆಗಾಗಿ ಶಸ್ತ್ರಗ್ರಹಣವನ್ನು ಮಾಡಿಕೊಳ್ಳುವುದಿಲ್ಲವೆಂದೇ "ಪ್ರಶಾಂತನಿಗೆ ಶಸ್ತ್ರವೇಕೆ?" ಎಂಬ ಮಾತು ರೂಢಿಯಲ್ಲಿರುವುದು. ಈ ದೊಡ್ಡ ದೊಡ್ಡ ಬತ್ತಳಿಕೆಗಳೂ, ಭಯಂಕರವಾದ ಚಾಪವೂ, ಕಾಲನ ಅಪರಭುಜದಂತೆ ಜೀವಿಗಳಿಗೆ ಭಯೋತ್ಪಾದಕವೆನಿಸುವ ಈ ಖಡ್ಗವೂ ಕೂಡ ಅಹಿಂಸಾಧರ್ಮವನ್ನವಲಂಬಿಸಿ ತಪಸ್ಸುಮಾಡತಕ್ಕವನಿಗೆ ಶಾಂತಿಸೂಚಕಗಳಲ್ಲ. ಶಾಂತಚಿತ್ತರಾದ ತಪಸ್ವಿಗಳು ಕ್ರೋಧದ್ಯೋತಕವಾದ ಶಸ್ತ್ರವನ್ನೆಂದೆಂದಿಗೂ ಧರಿಸಿಕೊಳ್ಳಲಾರರು. ಉತ್ತಮನೆ ನಿನ್ನನ್ನು ನೋಡಿದ ಕೂಡಲೆ, ನೀನು ವಿರೋಧಿಗಳ ದೆಸೆಯಿಂದ ಜಯಾಭಿಲಾಷೆಯುಳ್ಳವನೆಂದು ಮನಸ್ಸಿಗೆ ಭಾಸವಾಗುವುದು. ಆದರೆ, ಹಿಂಸಾಪ್ರಚರಣನಾಗಿ ಕೈವಲ್ಯಹೇತುಗಳಾದ ತಪೋದಾನಾದಿ ಸತ್ಕ

ರ್ಮಗಳನ್ನಾಚರಿಸುತ್ತಿರುವುದು, ತಿಳಿಗೇಡಿಯು ದಾಹಶಾಂತಿಗಾಗಿರುವ ನೀರನ್ನು ಕಲಕಿಕೊಳ್ಳುವಂತೆಯೇ ಸರಿ.

ಹಿಂಸಾಸತ್ಯಸ್ತೇಯವೇ ಮೊದಲಾದ ದೋಷಗಳಿಗೆ ನಿದಾನಗಳೆನಿಸಿದ ಅರ್ಥಕಾಮಗಳು ಮೋಕ್ಷಸಾಧಕವಾದ ತತ್ವಜ್ಞಾನಕ್ಕೆ ಬಾಧಕಗಳು. ಅವುಗಳಲ್ಲೊಂದಾದ ಅರ್ಥವನ್ನು ಲೋಕದಲ್ಲಿ ಸಂಪತ್ತೆನ್ನುವರು. ವಿಪತ್ತುಗಳಿಗೆ ಬಿತ್ತೆನಿಸಿದ ಸಂಪತ್ತು ಪ್ರಾಣಿಹಿಂಸಾಸ್ಪದವೆನಿಸಿ, ನದಿಗಳಿಗೆ ಆಶ್ರಯಪ್ರದವಾದ ಸಮುದ್ರದಂತೆ ಅಸ್ಥಿರವು. ಅದು ಸತ್ಸಹಾಯವುಳ್ಳ ಪುರುಷನಿಗೆ ಮಾತ್ರವೇ ಸಿದ್ಧಿಸುವುದು. ಹಾಗೆ ದೊರೆತರೂ ಸಂರಕ್ಷಣಾದಿಗಳಿಂದ ಕ್ಲೇಶಕಾರಿಯಾಗಿರುವುದರಿಂದಲೇ ಅದನ್ನು ವಿಪತ್ತೆಂದು ಪರಿಗಣಿಸುವರು. "ಸಂಪತ್ತನ್ನು ಗಳಿಸುವಾಗ ದುಃಖವು; ಅದನ್ನು ಹಗಲು ರಾತ್ರಿಯೆನ್ನದೆ ಕಳ್ಳಕಾಕರ ದೆಸೆಯಿಂದ ರಕ್ಷಿಸುವಾಗ ಮತ್ತೂ ಹೆಚ್ಚಿನ ದುಃಖವು, ಕಾಣದೆಯಾದರೂ ದುಃಖವು; ಖರ್ಚಾದರೂ ದುಃಖವು; ಹೀಗೆ ದುಃಖ ಭಾಜನವಾದ ಸಂಪತ್ತಿಗೆ ಧಿಕ್ಕಾರವಿರಲಿ"ಯೆಂಬುದಾಗಿ ಅನುಭವಶಾಲಿಗಳು ಅದನ್ನು ಸದಾ ನಿಂದಿಸುವರು. ಕಷ್ಟದಿಂದಲೇ ಸಂಪಾದಿಸಲು ಸಾಧ್ಯವುಳ್ಳುದೂ, ವಿಶ್ವಾಸದಿಂದಲೇ ತಲೆದೋರುವ ಸಂತೋಷಕ್ಕೆ ಜನ್ಮವಿರೋಧಿಯೂ ಎನಿಸಿರುವ ಸಂಪತ್ತು ನಾಗನ ಹೆಡೆಯಂತೆ ತುಡುಕಿದವನಿಗೆ ವಿಪತ್ತನ್ನೊಡರಿಸುವುದರಲ್ಲಿ ಸಂದೇಹವಿಲ್ಲ. ಉತ್ತಮಾಧಮರೆಂಬ ವಿವೇಕವಿಲ್ಲದ, ಸ್ತುತಿ ನಿಂದೆಯೆಂಬ ಅರಿವಿಲ್ಲದ ಸಂಪತ್ತು; ನಿತ್ತಲ್ಲಿ ನಿಲ್ಲದೆ ಗೊತ್ತುಗುರಿಯಿಲ್ಲದೆ ತಿರುಗಾಡುತ್ತಿರುವುದರಿಂದ ಸ್ವೈರಿಣಿಯಾದ ನಾರಿಯಂತೆ ಕೇವಲ ವರ್ಜನೀಯವು, ಮೂಢರು ದುರ್ವಾರಸ್ವಭಾವದವರಾದುದರಿಂದಲೇ ದೋಷವಿಶಿಷ್ಟವಾದ ಸಂಪತ್ತನ್ನು ಭಾಗ್ಯಲಕ್ಷ್ಮಿಯೆಂದು ಕೊಂಡಾಡುವರು. ಮಾತ್ರವಲ್ಲ, ಅರ್ಥವೆಂಬ ಪುರುಷಾರ್ಥವೆಂದೂ ಪರಿಗಣಿಸುವರು.

ಅಹಿತಸಂಯೋಗದಿಂದ ತನ್ನ ಮನಸ್ಸಿಗೆ ದುಃಖವುಂಟಾಗುವಂತೆ ಹಿತವಿಯೋಗದಿಂದ ಅನ್ಯರ ಮನಸ್ಸಿಗೂ ವ್ಯಸನವಾಗುವುದು. ಆದುದರಿಂದ ನೀತಿವಂತನು ಹಿತಾಹಿತಗಳ ವಿಷಯದಲ್ಲಿ ವಿವೇಚನೆಯಿಂದ ವರ್ತಿಸುತ್ತ ಯಾರ ಹೃದಯವೂ ಯಾತನೆಗೊಳಗಾಗದಂತೆ ಜೀವಿಸುವನು.

ಇಷ್ಟಜನಸಂಯೋಗದಲ್ಲಿ—ಶೂನ್ಯಹೃದಯವೂ ಪರಿಪೂರ್ಣವಾಗುವುದು; ಅಂತೂ ಪ್ರಿಯಜನರ ಒಡನಾಟವು ಅಮೃತಸೇವನೆಯಂತೆ ಸರ್ವದಾ ಸುಖಕರವು. ಪ್ರಿಯಜನರ ಅಗಲಿಕೆಯಲ್ಲಿ—ಒಳ್ಳೆಯದು ಕೆಡುಕಾಗುವುದು; ಪ್ರಾಣಗಳು ಬಾಣತಗಲಿದಂತೆ ಸಹಿಸಲಾರದ ಯಾತನೆಯಿಂದ ಮರುಗುತ್ತಿರುವುವು; ಬಂಧುಗಳ ಮಧ್ಯದಲ್ಲಿದ್ದರೂ ಮನುಷ್ಯನು ಅಸಹಾಯನಂತೆ ದಿಙ್ಮೂಢನಾಗುವನು; ಈ ಕಾರಣದಿಂದಲೇ ಇಷ್ಟಜನವಿಯೋಗವು ವಿಷಪ್ರಾಶನದಂತೆ ಸದಾ ದುಃಖೋತ್ಪಾದಕವು. ಇಷ್ಟಲಾಭದಿಂದ ಹೃದಯವು ಸುಖಿಸುವುದು. ಅನಿಷ್ಟಪ್ರಾಪ್ತಿಯಿಂದ ಚಡಪಡಿಸುವುದು. ವ್ಯಸನವು ತನಗೆ ಅಹಿತವಾಗಿರುವಂತೆಯೇ ಅನ್ಯರಿಗೂ ಅಹಿತವಾಗಿರುವುದರಿಂದ 'ಸರ್ವರೂ ತನ್ನಂತೆಯೇ' ಎಂಬ ಸಮತಾವಾದಿಯು ಪರಪೀಡಕನಾಗಲಾರನು. "ಪ್ರಪಂಚದಲ್ಲಿ ಜನ್ಮಕ್ಕೆ ಬಂದವರೆಲ್ಲರ ಸ್ಥಿತಿಯೂ, ಚಂಚಲೆಯಾದ ಲಕ್ಷ್ಮಿಯ ಒಲವಿನಂತೆ ಅನಿತ್ಯ"ವೆಂಬ ಸಂಗತಿಯನ್ನು ತಿಳಿದಿರುವ ನೀನು ನೀತಿಗೆ ವಿರೋಧವಾಗಿ ವರ್ತಿಸಬಾರದು. "ಸಜ್ಜನರು ನ್ಯಾಯಾವಲಂಬಿಗಳೆಂಬ' ಹೇಳಿಕೆಯ ಹುರುಳನ್ನು ಕೆಡಿಸಬಾರದು.

ತಪೋಧನನೇ, ನೀನು ಯುದ್ಧಮಾಡಬೇಕೆಂಬ ಸ್ಥಿರಪ್ರಯತ್ನವನ್ನು ಬಿಟ್ಟುಬಿಡು. ಉತ್ತಮವಾದ ತಪಸ್ಸನ್ನು ಕೆಡಿಸಿಕೊಳ್ಳಬೇಡ. ಜನ್ಮವನ್ನು ಪರಿಹರಿಸುವ ಕೈವಲ್ಯವನ್ನು ಪಡೆಯಬೇಕೆಂದು ಶಾಂತಚಿತ್ತನಾಗಿ ತಪಸ್ಸುಮಾಡು. ಶತ್ರುಗಳನ್ನು ಜಯಿಸಲೇ ಬೇಕೆಂಬ ಹಟವು ನಿನ್ನಲ್ಲಿರುವುದಾದರೆ, ದುರ್ಜಯಗಳೆನಿಸಿ ಅಗೋಚರಗಳಾಗಿ ಪೀಡಿಸುವ ಇಂದ್ರಿಯಗಳೆಂಬ ಅಂತಃಶತ್ರುಗಳನ್ನು ಬಿಡದೆ ಜಯಿಸಬೇಕು. ಹಾಗೆ ಮಾಡಿದರೆ ವೈರಿಪ್ರಪಂಚವನ್ನು ಗೆದ್ದಂತೆಯೇ ಸರಿ. ದ್ರವ್ಯಾರ್ಜನೆಗಾಗಿ ಮನಸೋತು, ಸ್ವಾತಂತ್ರ್ಯವನ್ನು ಕಳಕೊಂಡು, ಕೃಷಿ ವಾಣಿಜ್ಯವೇ ಮೊದಲಾದ ನಿಕೃಷ್ಟಕರ್ಮಗಳನ್ನೆಸಗುವ ನೀಚನು, ಇಂದ್ರಿಯಗಳನ್ನು ಜಯಿಸಿಕೊಳ್ಳಲಾರದೆ ಗೂಳಿಯಂತೆ ಪರಾಧೀನನೆನಿಸುವನು. ಇಂದು ಅನುಭವಿಸುತ್ತಿರುವ ಸುಖವನ್ನು ನಾಳೆಗೆ ನೆನಸಿಕೊಳ್ಳಬೇಕಲ್ಲದೆ, ಎಂದೆಂದಿಗೂ ಅದು ದೊರಕಲಾರದು. ಆದುದರಿಂದಲೇ ವಿಷಯಾಭಿಲಾಷೆಗಳು ಸ್ವಪ್ನಸಮಾನಗಳೆಂದು ಬಲ್ಲವರ ಮತವು. ಯಾರಾದರೂ ಸರಿಯೆ; ಕಳವಳಕ್ಕೆಡೆ

ಯಾದ ಕಾಮುಕರ್ಕೆಳಗಾಗಿ ಕೆಡಬಾರದು. ಕಾಮದ ಪ್ರಭಾವವು ಸಾಮಾನ್ಯವಲ್ಲ—ಅದರ ಪ್ರಭಾವದಿಂದ ವಿಶ್ವಾಸಾರ್ಹರು ವಂಚಕರಾಗುವರು; ಅದರ ದೆಸೆಯಿಂದಲೇ ಹಿತವಂತರು ದುಃಖೋತ್ಪಾದಕರಾಗುವರು; ಅದಕ್ಕೆ ದಾಸರಾದವರನ್ನು ನಾವು ಬಿಟ್ಟುಬಿಡಬೇಕೆಂದು ಪ್ರಯತ್ನ ಮಾಡಿದರೂ ಅವರು ನಮ್ಮನ್ನು ಬಿಡಲಾರರು. ಆದುದರಿಂದಲೇ ಸಜ್ಜನರು ಕಾಮಕ್ಕಿಂತಲೂ ಕಷ್ಟಕರವಾದ ವಿರೋಧಿಯಿಲ್ಲವೆಂದು ಅದನ್ನು ದೂರದಿಂದಲೇ ಪರಿಹರಿಸುವರು. ಅಂತಹ ಕಾಮುವನ್ನು ಪುರುಷಾರ್ಥವೆಂದು ಪ್ರಾಜ್ಞರು ಪರಿಗಣಿಸುವುದಿಲ್ಲ. ಆದುದರಿಂದ ಮಂಗಳಾಂಗನೇ! ನೀನು, ಗಂಗಾಮಾತೆಯು ತನ್ನ ಕರತರಂಗಗಳಿಂದ ತೊಳೆದು ಸದಾಕಾಲವೂ ಪರಿಶುದ್ಧಿಗೊಳಿಸುತ್ತಿರುವ, ಮನುಷ್ಯ ಸಂಚಾರವಿಲ್ಲದೆ ಶಾಂತಿಗೆ ತವರೆನಿಸುತ್ತಿರುವ, ಈ ಇಂದ್ರಕೀಲವನಪ್ರದೇಶದಲ್ಲಿ ಅನನ್ಯಮನಸ್ಕನಾಗಿ ತಪಸ್ಸುಮಾಡುತ್ತಿರು! ನಿನಗೆ ಅಪವರ್ಗವು ಸಮೀಪದಲ್ಲಿರುವುದು! ಧರಿಸಿಕೊಂಡಿರುವ ಶಸ್ತ್ರಾಸ್ತ್ರಗಳನ್ನು ಪರಿತ್ಯಜಿಸು!

ಈ ರೀತಿಯಿಂದ ವೃದ್ಧಬ್ರಾಹ್ಮಣನು ಅರ್ಜುನನ ಅಂತರ್ಯವನ್ನು ಮಿಡಿದು ನೋಡುವ ಮುನ್ನುಡಿಯನ್ನು ಕೊನೆಗೊಳಿಸಿದನು.

---

೧೫ ಅರ್ಜುನನ ಆತ್ಮನಿವೇದನೆ

ಪರಿಣತಬ್ರಾಹ್ಮಣನ ಉಪೋದ್ಘಾತವನ್ನು ಕೇಳಿ ತಪಸ್ವಿಯು ಆತ್ಮಚರಿತ್ರೆಯ ನಾಂದಿಯನ್ನೋದಲು ಮೊದಲುಮಾಡಿದನು—

ವಿಪ್ರೋತ್ತಮನೇ! ಪ್ರಸಾದಯುಕ್ತವೂ, ಸಮಾಸಭೂಯಿಷ್ಠವೂ, ವಿಸ್ತರದೋಷವಿರಹಿತವೂ ಎನಿಸಿದ ತಮ್ಮ ವಾಕ್ಯವೆಂದರೆ, ಅನುಮಾನಾದಿಗಳಿಗೆ ಸಂದರ್ಭವಿಲ್ಲದೆ, ನ್ಯಾಯನಿರ್ಣೀತಸಾರವೆನಿಸಿ, ಶಾಸ್ತ್ರವಿಷಯಗಳಲ್ಲಿ ಸ್ವತಂತ್ರವಾದ ವೇದವಾಕ್ಯವೇ ಸರಿ. ಅರ್ಥಸಂಪತ್ತಿಗೆ ಅನುಗುಣವಾದ ಔದಾರ್ಯದಿಂದ ಬೆರೆತಿರುವ ಆ ವ್ಯವಹಾರವನ್ನು ಮೀರಿನಡೆಯಲು ಯಾರಿಂದಲೂ ಸಾಧ್ಯವಿಲ್ಲ. ಅದು ಕ್ಷುಬ್ಧಾಂಬುಧಿಯಂತೆ ಗಂಭೀರವು;

ಮುನಿಮನದಂತೆ ಪ್ರಶಾಂತವು, ಮೋಕ್ಷಧರ್ಮವನ್ನು ಮುನಿಗಳು ಪ್ರಾಮುಖ್ಯವಾಗಿ ಪರಿಗಣಿಸುವುದರಲ್ಲಿ ಸಂದೇಹವಿಲ್ಲ. ಇಂತಹ ಸಂದರ್ಭದಲ್ಲಿ ಹೀಗೆ ಗಂಭೀರವಾಗಿ ಅಭಿಪ್ರಾಯವನ್ನು ಯಾರು ತಿಳಿಸುವರು? ಅಮೋಘವಾದ ಈ ರೀತಿಯ ಭಾಷಣವೆಲ್ಲಿಯೂ ಲಭಿಸಲಾರದು. ಪೂಜ್ಯನೇ, ಇಲ್ಲಿ ತಪಸ್ಸುಮಾಡುತ್ತಿರುವ ನನ್ನ ಪೂರ್ವಾಪರಗಳೇನೂ ತಮಗೆ ತಿಳಿದಿರಲವಕಾಶವಿಲ್ಲ. ತಿಳಿದುಕೊಳ್ಳದೆ ಹೇಳಿದರೆ ವಾಚಸ್ಪತಿಯ ಮಾತುಗಳಾದರೂ ಕಾರ್ಯಹೇತುಗಳಾಗಲಾರವು. ಆದುದರಿಂದ ನಾನೀಗ ಆತ್ಮಚರಿತ್ರೆಯನ್ನು ಅಗತ್ಯವಾಗಿ ತಿಳಿಸಿಕೊಳ್ಳಬೇಕು. ಹೊಳೆಯುವ ನಕ್ಷತ್ರಗಳಿಂದ ತಳತಳಿಸುವ ಗಗನಕ್ಕೆ ಹಗಲಿನಂತೆ ನಾನು ಆ ಮೋಕ್ಷಧರ್ಮೋಪದೇಶಕ್ಕೆ ಪಾತ್ರನಲ್ಲ.

ಚಂದ್ರವಂಶದಲ್ಲಿ ಪ್ರಖ್ಯಾತನಾದ ಪಾಂಡುಚಕ್ರವರ್ತಿಗೆ ಪೃಥೆಯೆಂಬ ಧರ್ಮಪತ್ನಿಯಲ್ಲಿ ಜನಿಸಿದ ನನ್ನನ್ನು ಧನಂಜಯನೆಂದು ಕರೆಯುವರು. ನಮ್ಮ ದಾಯಭಾಗಿಗಳಾದ ದುರ್ಯೋಧನಾದಿಗಳು ದ್ವೇಷಾಸೂಯೆಗಳಿಗೆ ಪಾತ್ರರಾಗಿ ದ್ಯೂತದ ನೆವದಿಂದ ಸರ್ವಸ್ವವನ್ನೂ ಸೆಳೆಕೊಂಡು ನಮ್ಮನ್ನು ರಾಜ್ಯದಿಂದ ಹೊರಗಟ್ಟಲು, ಅಜಾತಶತ್ರುವೆಂದು ಪ್ರಸಿದ್ಧನಾದ ನಮ್ಮಣ್ಣನ ಆಜ್ಞೆಯ ಮೇರೆಗೆ, ಭಗವಾನ್ ವೇದವ್ಯಾಸನ ಉಪದೇಶದಿಂದ ದೇವದೇವನಾದ ಶತಮುಖನನ್ನಾರಾಧಿಸಬೇಕೆಂದು ನಾನಿಲ್ಲಿಗೆ ಬಂದು ತಪಸ್ಸಿನ ನಿಯಮವನ್ನು ಕೈಗೊಂಡಿರುವೆನು. ಮೋಸದ ಹಾಸಂಗಿಗಳಿಂದ ಜೂಜಾಡುತ್ತ ರಾಜ್ಯ, ನಾಲ್ವರು ತಮ್ಮಂದಿರು, ಪತ್ನಿಯಾದ ದ್ರೌಪದಿ, ತಾನು ಎಂಬೀ ಪಣದಿಂದ ಸೋಲುತ್ತ ಸರ್ವಸ್ವವನ್ನೂ ಕಳಕೊಳ್ಳುವುದೆಂದರೆ ಬುದ್ಧಿಯು ಭವಿತವ್ಯತೆಯನ್ನನುಸರಿಸುವುದು ಸಹಜವಲ್ಲವೆ? ಅಂದಿನ ಸಭೆಯಲ್ಲಿ ವಿರೋಧಿಗಳು ಬಲಾತ್ಕಾರದಿಂದ ದ್ರೌಪದಿಯ ಸೆರಗನ್ನು ಹಿಡಿದೆಳೆಯುತ್ತ, ಸ್ವಾತಂತ್ರ್ಯವಿಲ್ಲದ ಲಜ್ಜೆಯಿಂದ ತಲೆವಾಗಿ ನಿತ್ತುಕೊಂಡಿದ್ದ ನಮ್ಮನ್ನು ಧಾರ್ಷ್ಟ್ಯದ ಬಗೆಬಗೆಯ ನುಡಿಗಳಿಂದ ಹಂಗಿಸಿ ಭಂಗಿಸಿದರು. ಭೀಷ್ಮ ದ್ರೋಣರೇ ಮೊದಲಾದ ಗುರುಹಿರಿಯರ ಮುಂದೆ ಪತಿವ್ರತೆಯಾದ ದ್ರೌಪದಿಯ ಸಿರಿಮುಡಿಯನ್ನು ಹಿಡಿದೆಳೆಯುತ್ತಿದ್ದುದನ್ನು ನೋಡಿ ಕೃತಾಂತನು ತಾನೇ ಕಡುಮುಳಿದು, "ಇಂತಹ ಅಕೃತ್ಯಗಳನ್ನೆಸಗಿದ ನೀಚರನ್ನು

ಬಿಡದೆ ಹೊಡೆದಪ್ಪಳಿಸಿ ತನ್ನ ನಗರಿಗೆ ಕೊಂಡೊಯ್ಯುವುದೇ ಸಿದ್ಧ"ವೆಂದು ಪ್ರಮಾಣಪೂರ್ವಕವಾಗಿ ಪ್ರತಿಜ್ಞೆಮಾಡಿದನು. ಆದರೂ ವಿನಾಶ ಮುಖವನ್ನು ನೋಡುತ್ತಿದ್ದ ವೈರಿಗಳು ವಿಪರೀತಬುದ್ಧಿಯಿಂದಲೇ ವರ್ತಿಸಿದರು. ಆದರೆ, ಕೆಡುಕರನ್ನು ತಡೆವವರಾರು? ದಿನಾಂತದ ಸೂರ್ಯ ನಿಗಿದಿರಾದ ಮಹಾತರುಚ್ಛಾಯೆಯಂತೆ ದುಶ್ಶಾಸನನ ಕೈಯಲ್ಲಿ ಸಿಲುಕಿ ಗೋಳಾಡುತ್ತಿದ್ದ ಕೃಷ್ಣೆಯನ್ನು ನೋಡಿ ಸಭಿಕರೆಲ್ಲರೂ ಹಾಹಾಕಾರದಿಂದ ಮರುಗಿದರೂ ಅವನ ಅನ್ಯಾಯಕ್ಕೆ ಮಿತಿಯಿರಲಿಲ್ಲ. ನಾವು ಅದನ್ನೂ ಕೂಡ ಕಣ್ಣುಬಿಟ್ಟು ಮಿಳಮಿಳನೆ ನೋಡುತ್ತಿರಲು "ಪತಿಗಳೆನಿಸಿದ ನೀವೂ ಹೀಗೆ ನೋಡುತ್ತಿರಬಹುದೆ" ಎಂಬ ತಾತ್ಪರ್ಯಸೂಚಕದಂತೆ ಕೋಡಿಹರಿಯುತ್ತಿದ್ದ ಕಣ್ಣೀರ ತಡೆಯಿಂದ ಆಕೆಯ ನೋಟಗಳು ನಮ್ಮನ್ನು ನೋಡದಾದುವು.

ಆ ಕಡುವೈರಿಗಳನ್ನು ಸುಲಭವಾಗಿ ನಾಶಪಡಿಸಬಹುದಾಗಿದ್ದರೂ, ಗುಣಪ್ರಿಯರು ಲೋಕಾಪವಾದಕ್ಕೆ ಹೆದರಿ ನಡೆಯುತ್ತಿರುವಂತೆ ನಮ್ಮ ಅಣ್ಣನು ಆ ವಿಷಮಸ್ಥಿತಿಯನ್ನಾದರೂ ನೋಡುತ್ತ ಸಹಿಸಿಕೊಂಡನು. ಮನಸ್ವಿಗಳ ಚಿತ್ತವು ಬೇಗನೆ ಶಾಂತಿಯನ್ನು ತೊರೆಯಲಾರದುದರಿಂದ, ಸಮುದ್ರದಲ್ಲಿ ತುಂಬಿಕೊಂಡು ತಿಳಿಯಾಗಿ ಕಂಗೊಳಿಸುವ ನೀರು ತನ್ನ ಮೇರೆಯನ್ನು ಮೀರದಂತೆ ಅಗ್ರಜನು ಪ್ರಶಾಂತನಾಗಿದ್ದನು. ನಾವು ಮೊದಲಿಂದಲೂ ಅವರೊಡನೆ ಸೋದರಸ್ನೇಹದಿಂದಲೇ ನಡೆಯುತ್ತಿದ್ದೆವು. ಅವರು ಮಾತ್ರ ನಮ್ಮನ್ನು ವಿರೋಧಿಗಳೆಂದೇ ಭಾವಿಸಿದರು. ತುಂಬಿ ಹರಿಯುವ ನದೀತೀರದ ತರುಚ್ಛಾಯೆಯಂತೆ ದುರ್ಜನಸ್ನೇಹವು ದೋಷಾಸ್ಪದವು. ಲೋಕಾಪವಾದಕ್ಕೆ ಹೆದರದೆ ಗುಣದೋಷಗಳನ್ನು ಲಕ್ಷಿಸದೆ ಇರುವ ಧೂರ್ತರ ಪ್ರವೃತ್ತಿಯು ವಿಧಿವ್ಯಾಪಾರದಂತೆ ದುಜ್ಞೇಯವು. ಆ ಕಡುಧೂರ್ತರ ಮೋಸಕ್ಕೊಳಗಾಗಿ ಘಾಸಿಯಾಗುತ್ತಿದ್ದ ಈ ಹೃದಯವನ್ನು ಕೋಪತಾಪಗಳು ತಾವೇ ಕೈಗೊಟ್ಟು ನಿಲ್ಲಿಸುತ್ತ, ವೈರಿಗಳಿಗೆ ಪ್ರತೀಕಾರವನ್ನು ಮಾಡಲೇಬೇಕೆಂದು ಸಮಾಧಾನಗೊಳಿಸಿದ ಮೇರೆಗೆ ನಾನಿಲ್ಲಿಗೆ ಬಂದು ಪ್ರತೀಕಾರೇಚ್ಛೆಯಿಂದಲೇ ಹೇಗೋ ಬದುಕುತ್ತಿರುವೆನು. ಅವರ ವಂಚನೆಗೊಳಗಾಗಿ ಮೃಗಗಳಂತೆ ಕಾಡುಗುಡ್ಡ

ಗಳಲ್ಲಿ ಸಂಚರಿಸುತ್ತ ಜೀವಿಸುತ್ತಿರುವ ನನ್ನ ಸೋದರರೂ ಕೂಡ ತಮ್ಮೊಳಗೆ ಒಬ್ಬರನ್ನೊಬ್ಬರು ನೋಡಿಕೊಳ್ಳುವಾಗಲೇ ಲಜ್ಜಾನ್ವಿತರಾಗಿ ವೈರಿಪ್ರತೀಕಾರಾನಂತರವೇ ಇತರ ಪರಿಚಿತರನ್ನು ನೋಡುವೆವೆಂಬ ವ್ರತವನ್ನು ಕೈಗೊಂಡಿರುವರು.

ಬಾಳುವೆಯನ್ನು ಬೆಳಗಿಸತಕ್ಕ ಉತ್ಸಾಹವಿಲ್ಲದೆ ಸ್ವಾಭಿಮಾನಹೀನರಾಗಿ ದೈನ್ಯದಿಂದ ಬದುಕುವವರನ್ನು ಲೋಕವಲ್ಲಿ ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಕಡೆಗಣಿಸುವರು. ಕುಲಾಚಲವು ಉನ್ನತೋನ್ನತವಾದ ಕೂಟಗಳ ದೆಸೆಯಿಂದಲೇ ಅಲಂಘ್ಯವೆನಿಸಿರುವಂತೆ ಮಹಾತ್ಮರ ಮಾನವು ಗೌರವದಿಂದಲೇ ನೆಲಸುವುದೆಂದು ಸರ್ವರೂ ಆತ್ಮಗೌರವವನ್ನು ಪಾಲಿಸಿಕೊಳ್ಳಲು ಹೆಣಗುವರು. ನಿಬಿಡವಾದ ಅರಣ್ಯಗಳಿಂದಲೂ ಎತ್ತರವಾದ ಶಿಖರಗಳಿಂದಲೂ ಕೂಡಿ ಉನ್ನತಿಹೊಂದಿದ ಪರ್ವತವನ್ನು ಜನರು ಕಷ್ಟದಿಂದಲಾದರೂ ಅತಿಕ್ರಮಿಸುವರು. ಆದರೆ ಪ್ರಕೃತಿಗಂಭೀರನಾದ ಸ್ವಾಭಿಮಾನಿಯು ಮಾತ್ರ ಅಲಂಘ್ಯನೆನಿಸುವನು. ಅವನನ್ನೇ ಸೇರಿ ಲಕ್ಷ್ಮಿಯು ಒಲ್ಮೆಸುವಳು. ಆತನಲ್ಲಿ ಕೀರ್ತಿಯು ಕಾಲೂರಿ ನೆಲಸುವುದು. ಆತನೇ ಪುರುಷಶ್ರೇಷ್ಠನೆಂದು ಪರಿಗಣಿಸಲ್ಪಡುವನು. ಉತ್ತಮರ ಪರಿಗಣನೆಯಲ್ಲಿ ಅದ್ವಿತೀಯನೆನಿಸುವ ಆತನ ಜನ್ಮವು ಸಾರ್ಥಕವು. ಆತನ ವಂಶವು ಶಾಶ್ವತವಾದ ಅವನ ಹೆಸರಿನಿಂದ ಬೆಳಗುವುದು. ಆತನ ಮೂಲಕವೇ ಧರೆಯು ವಸುಂಧರೆಯೆಂಬ ಅನ್ವರ್ಥನಾಮದಿಂದ ಮೆರೆಯುವುದು. ಆತನ ಯಶಶ್ಚಂದ್ರಿಕೆಯಿಂದ ಚಂದ್ರಮಂಡಲವು ಕಲಂಕಿಯೆನಿಸುವುದು. ಅಶನಿಯಂತೆ ವೈರಿಗಳನ್ನು ಧ್ವಂಸಗೊಳಿಸುವ ಕೋಪವುಳ್ಳವನೇ ಲೋಕದಲ್ಲಿ ಆದರ್ಶಪುರುಷನೆಂದು ಶ್ಲಾಘಿಸಲ್ಪಡುವನು. ಇಂತಹ ಅಸಾಮಾನ್ಯಪ್ರಭಾವವುಳ್ಳ ಸಾಭಿಮಾನವನ್ನು ಕಳೆದುಕೊಂಡು ಯಾರಾದರೂ ಬದುಕುವರೆ?

ಭೂಸುರೋತ್ತಮ! ತರಂಗಪರಂಪರೆಯಂತೆ ಚಂಚಲವೆನಿಸುವ ಸುಖವನ್ನಾಗಲಿ, ಅದಕ್ಕೆ ಕಾರಣವೆನಿಸುವ ಸಂಪತ್ತನ್ನಾಗಲಿ ಒಲ್ಲೆನಲ್ಲದೆ, ಅನಿತ್ಯತೆಗೆ ಅಶನಿಯೆನಿಸಿ, ಶಾಶ್ವತಕ್ಕೆ ನೆಲೆಯೆನಿಸಿ ಮೆರೆಯುವ ಪರಬ್ರಹ್ಮಪದವಿಯನ್ನಾದರೂ ಬಯಸಲಾರೆನು. ಅರಾತಿಗಳ ಮೋಸದಿಂದಾದ

ಅಪಕೀರ್ತಿಯೆಂಬ ಕೆಸರನ್ನು ವಿಧವೆಯರಾಗಿ ದುಃಖಿಸುವ ವೈರಿವನಿತೆಯರ ಬಾಷ್ಪವಾಹಿನಿಗಳಿಂದಲೇ ತೊಳೆಯಬೇಕೆಂದು ಒಡಮೂಡಿದ ಸೇಡನ್ನು ಮತ್ತಾವುದೂ ತಡೆಯಲಾರದು. ಇದಕ್ಕಾಗಿ ಬಲ್ಲವರು ನನ್ನನ್ನು ಮತಿವಿಕಲನೆಂದು ಪರಿಹಾಸಮಾಡಿದರೂ, ತಮ್ಮ ಉಪದೇಶವು ಊಷರ ಭೂಮಿಯಲ್ಲಿ ಬಿತ್ತಿದ ಬೀಜದಂತೆ ತಮಗೆ ಬೇಸರವನ್ನೊದಗಿಸಿದರೂ, ಸೋಕಿದ ಕಳವಳವನ್ನು ಪರಿಹರಿಸಿ ವಂಶಲಕ್ಷ್ಮಿಯ ಮುಖವನ್ನು ಕಳೆದುಂಬಿಸದೆ ಬಿಡಲಾರೆನು. ಆಗ ಮಧ್ಯದಲ್ಲಿ ಬರುವ ಕೈವಲ್ಯಲಕ್ಷ್ಮಿಯಾದರೂ ಜಯಾಂಗನೆಗೆ ವಿಘ್ನಕಾರಿಣಿಯೆಂಬುದೇ ನನ್ನ ದೃಢ ಸಂಕಲ್ಪವು. ಮಾತ್ರವಲ್ಲ, ಶತ್ರುಸಂಹೃತವಾದ ಕೀರ್ತಿಯನ್ನು ಶರಗಳ ಮೂಲಕ ಸೆಳೆದುಕೊಳ್ಳಲಾರದಾತನು ಜಾತನೆನಿಸಿಯೂ ಅಜಾತಪ್ರಾಯನು; ತೃಣಪ್ರಾಯನೆನಿಸಿ ಬದುಕಿಯೂ ಜೀವನ್ಮೃತನು. ವೈರಿಗಳನ್ನು ಗೆದ್ದುಕೊಳ್ಳದೆ ತಣಿಯುವ ಕ್ರೋಧಾತ್ಮನು ಪುರುಷನೆನಿಸಲು ಯೋಗ್ಯನಲ್ಲವೆಂದರೆ, ಕೇವಲ ಜಾತಿಮಾತ್ರಸೂಚಕವಾದ ಆ ಪುರುಷಶಬ್ದದಿಂದ ಪ್ರಯೋಜನವಿಲ್ಲ. ಗುಣಪಕ್ಷಪಾತಿಗಳಾದ ಸಜ್ಜನರ ವ್ಯವಹಾರದಲ್ಲಿ ಉದಾಹರಣೆಗೆ ಯೋಗ್ಯನೆನಿಸುವಾತನೇ ಪುರುಷಪುಂಗವನು. ಸಮಿತಿಗಳಲ್ಲಿ ಸಭಿಕರು ಗೌರವದೊಡನೆ ಯಾರ ಯೋಗ್ಯತೆಯನ್ನು ಹೊಗಳುವರೋ, ಅದನ್ನು ಕೇಳಿದ ವೈರಿಗಳ ಶ್ಲಾಘನೆಗೆ ಪಾತ್ರನಾಗತಕ್ಕವನೇ ಪುರುಷಪುಂಗವನು. ಅಣ್ಣನಾದ ಯುಧಿಷ್ಠಿರನು ನನ್ನ ಮೂಲಕವೇ ವಿರೋಧಿಗಳಿಗೆ ಪ್ರತೀಕಾರಮಾಡಿಸುವೆನೆಂಬುದಾಗಿ ಆರೂಢಪ್ರತಿಜ್ಞನಾಗಿರುವನು. ಅವನ ವೈರಿಸಂಹಾರೇಚ್ಛೆಯೆಂಬ ಬಲವಾದ ತೃಷ್ಣೆಗೆ ನಾನು ಕೇವಲ ಜಲಾಂಜಲಿಯಂತಿರುವೆನು. ಕಷ್ಟಕಾಲದಲ್ಲಿ ಸ್ವಾಮಿಯ ನೇಮಕವನ್ನು ಮೀರುವಾತನು ಕುಲಕಲಂಕಿಯೆನಿಸುವನಲ್ಲದೆ, ಸ್ವಾರ್ಥಸಾಧಕನಾದ ಆ ವಂಶಘಾತುಕನಂತಹ ಪಾತಕಿಯು ಮತ್ತಾವನಿರುವನು?

ವಿಪ್ರೋತ್ತಮನೇ! ವರ್ಣಾಶ್ರಮಪದ್ಧತಿಗೆ ವ್ಯತಿಕ್ರಮವಾಗಿ ಗೃಹಸ್ಥಾಶ್ರಮದ ಮೊದಲು ಮುನಿವೃತ್ತಿಯನ್ನವಲಂಬಿಸುವುದು ಸರಿಯೆ? ಭಾರತಪುತ್ರನೆನಿಸಿ ಮನುವೇ ಮೊದಲಾದ ಹಿರಿಯರ ಹೇಳಿಕೆಯನ್ನತಿಕ್ರಮಿಸಲು ಸಾಧ್ಯವೆ? ನಾನು ಈ ವನಪ್ರದೇಶದಲ್ಲಿ ಬಂದು ನೆಲಸಿರುವುದರಿಂದ,

ಅನುಜನ ಸಹಾಯವನ್ನು ಅಪೇಕ್ಷಿಸುವ ಅಣ್ಣನೂ, ಪತ್ನಿಯಾದ ದ್ರೌಪದಿಯೂ ಅಲ್ಲಿ ವ್ಯಸನದಿಂದಲೇ ಕಾಲವನ್ನು ಪರಿಗಣಿಸುತ್ತಿರಬಹುದು ಎಂಬುದರಿಂದ ನನ್ನ ವೈರಾಗ್ಯಕ್ಕೆ ಅವಕಾಶವಿಲ್ಲ. ಜನನಿಯು ದೂರ ದಲ್ಲಿರಲು, ಅಣ್ಣನು ತಪೋಧಿಕನಾಗಿರಲು, ವೈರಿನಿರ್ಯಾತನವೆಂಬ ಕಾರ್ಯಭಾರವು ನನ್ನನ್ನವಲಂಬಿಸಿರುವಾಗ ನನಗೆ ಬೇರೆ ಸ್ವಾತಂತ್ರ್ಯ ವಿರುವುದೆ? ಇಲ್ಲದ ಸ್ವಾತಂತ್ರ್ಯವನ್ನವಲಂಬಿಸಿ ಹಿರಿಯರ ತಿರಸ್ಕಾರಕ್ಕೆ ಗುರಿಯಾಗುವೆನೆ? ಅಭಿಮಾನಶಾಲಿಗಳು ಕುಲಧರ್ಮವನ್ನು ಅನುವರ್ತಿ ಸುವರು. ವಿಪತ್ಪರಂಪರೆಗಳಿಂದ ಜರ್ಜರಿತವಾಗಿಯೂ ಧರ್ಮವನ್ನು ಅತಿ ಕ್ರಮಿಸಲಾರರು. ವೈರಿಗಳಿಂದ ಪರಿಭೂತರೆನಿಸಿಯೂ ಯುದ್ಧದ ಗೊಡವ ಯನ್ನು ಬಿಡಲಾರರು. ಹೀಗಿರುವಲ್ಲಿ ಕ್ಷತ್ರಿಯನೆನಿಸಿದ ನಾನು ಉಜ್ವಲ ವಾದ ವೀರಧರ್ಮವನ್ನು ಪರಿತ್ಯಜಿಸುವೆನೆ? ನಾನು ತಪಸ್ಸಿನ ಮೂಲಕ ಸಹಸ್ರಾಕ್ಷನನ್ನಾರಾಧಿಸಿ ನಾಟಿರುವ ಅಪಯಶಸ್ಸೆಂಬ ಶಲ್ಯವನ್ನು ಕಿತ್ತೊಗೆ ಯಬೇಕು; ಇಲ್ಲವೆ, ನಿರಂತರವೂ ಬೀಸುವ ಗಾಳಿಗೆ ಸಿಲುಕಿ ನುಚ್ಚು ನೂರಾಗುವ ಮೋಡದಂತೆ ಈ ಗಿರಿಶಿಖರದಲ್ಲಿದ್ದು ವಿಧಿಹತಕನಿಂದ ವಿಶೀ ರ್ಣನಾಗಬೇಕೆಂಬ ಅಚಲವಾದ ನಿರ್ಧಾರದಿಂದಿರುವೆನು.

ಹೀಗೆ ಹೇಳುತ್ತಿದ್ದ ನಿಜನಂದನನನ್ನು ದಿವ್ಯಸುಂದರವಿಗ್ರಹನಾದ ದೇವೇಂದ್ರನು ನೀಳವಾದ ತನ್ನ ಕೈಗಳಿಂದ ಬಿಗಿದಾಲಿಂಗಿಸಿಕೊಳ್ಳುತ್ತ "ಮುಂದಿನ ಶುಭಪರಂಪರೆಗಳಿಗೆ ಕಾರಣಕರ್ತನೂ, ಸುಖಸಂಸಾರ ನಿದಾನನೂ, ಸರ್ವಮಂಗಳಾಶ್ರಯನೂ ಎನಿಸಿರುವ ಶಂಕರನನ್ನು ನೀನು ಆರಾಧಿಸಬೇಕು! ಆ ಮಂಗಳಮಯನು ಪ್ರಸನ್ನನಾಗಿ ಅನುಗ್ರಹಿಸಿದರೆ, ನೀನು ಲೋಕಪಾಲಕರೊಡನೆ ತ್ರಿಭುವನದಲ್ಲಿಯೂ ಅಪ್ರತಿಹತಪ್ರಭಾವ ನೆನಿಸಿ, ವೈರಿಗಳನ್ನು ಪರಿಹರಿಸಿ, ರಾಜ್ಯಲಕ್ಷ್ಮೀಸಮಾಶ್ರಿತನಾಗಿ ಮೆರೆ ಯುವೆ" ಎಂದು ಬೋಧಿಸಿ ವೃದ್ಧನಾಗಿ ಬಂದ ವೃದ್ಧಶ್ರವನು ಅಂತರ್ಹಿತನಾದನು.

---

೧೬. ತಾಪಸರ ವಿಜ್ಞಾಪನೆ

ಸುರಪತಿಯು ಭೂಸುರನಾಗಿ ಬಂದು ತನ್ನ ಮನೋದಾರ್ಢ್ಯವನ್ನು ಪರೀಕ್ಷಿಸಿ ನೋಡಿ, ಶಿವಾರಾಧನೆಯಿಂದಲೇ ಕಲ್ಯಾಣವಾಗುವುದೆಂಬ ಭವಿಷ್ಯವನ್ನರುಹಿ, ಥಕ್ಕನೆ ಮಾಯವಾದುದನ್ನು ನೋಡಿ ಅರ್ಜುನನು ಧೈರ್ಯತಾಳಿದನು. ಹೊಡೆದೆಬ್ಬಿಸಿದಂತೆ ಅವನ ಉತ್ಸಾಹವು ಮೇರೆ ಮೀರಿತು. ಕ್ರಮದಂತೆ ತಪಸ್ಸುಮಾಡಿ ಶಂಕರನನ್ನೊಲಿಸಿಕೊಳ್ಳುವುದೇ ಸಿದ್ಧವೆಂಬ ಹಟಯೋಗಕ್ಕಾಗಿ ಸೊಂಟಗಟ್ಟಿದನು.

ಭಾಗ್ಯಶಾಲಿಗಳಿಗೆ ತಪಸ್ಸೆಂದರೆ ಅಗಾಧವಾದ ಸುಧಾಂಬುಧಿಯು. ಅರ್ಜುನನ ಮನವು ಕಳಿತು ಕಂಗೊಳಿಸುವ ಬಗೆವಗೆಯ ಹಣ್ಣುಹಂಪಲು ಗಳಲ್ಲಾಗಲಿ, ಹಸಿವೆಯ ನಿವಾರಣೆಗೆಂದು ಸಿದ್ಧಿಸಿದ ಕಂದಮೂಲಗಳ ಲ್ಲಾಗಲಿ, ಅಮೃತಪೂರದಂತೆ ಪ್ರವಹಿಸುವ ನಿರ್ಮಲೋದಕದಲ್ಲಾಗಲಿ ಲೀನವಾಗದೆ ದಿನದಿನಕ್ಕೂ ಆ ಕ್ಷೀರಾರ್ಣವದಲ್ಲಿ ಉದಯಿಸಿದ ಚಂದ್ರನಂತೆ ಕಳೆಗೊಂಡು ಶೋಭಿಸುತ್ತಿತ್ತು. ಆಹಾರ ಮೊದಲಾದುವುಗಳ ಪರಿವೆ ಯಿಲ್ಲದೆ ಒಂಟಿಗಾಲಿನಿಂದ ನಿಶ್ಚಲನಾಗಿ ನಿತ್ತು ಸೂರ್ಯನನ್ನು ದೃಷ್ಟಿಸಿ ನೋಡುತ್ತ ದಿನಗಳೆಷ್ಟು ಸಂದುಹೋದುವೆಂಬ ವಿಚಾರವಿಲ್ಲದೆ, ಇಂದ್ರಿಯ ಗಳನ್ನು ಸಂತಾಪಗೊಳಿಸುವ ಕಷ್ಟಕರವಾದ ತಪಸ್ಸಿನಲ್ಲಿ ಬೇಸರವಿಲ್ಲದೆ ಮೂಗು ಹಿಡಿದು ಯೋಗವನ್ನು ಸಾಗಿಸುತ್ತಿದ್ದನು. ಮಹಾತ್ಮರ ಧೈರ್ಯವು ಅನಿವಾರ್ಯವು; ಮಾತ್ರವಲ್ಲ, ತಿಳಿಯಲಸಾಧ್ಯವು. ಈ ವಿಧವಾದ ಕಠಿಣತಪಸ್ಸಿನಿಂದ ಆತನ ದೇಹವು ಬಹುಕೃಶವಾದರೂ ತ್ರಿಭುವನದ ಉತ್ಕರ್ಷೆಗೆ ಕಾರಣವೂ, ತತ್ವಜ್ಞಾನಿಗಳಿಗೆ ಅದ್ಭುತಕರವೂ ಆಗಿರುವ ಶಕ್ತಿ ಯನ್ನು ಸಂಪಾದಿಸಿಕೊಂಡಿತು. ಮನಸ್ವಿಗಳು ಸಾಧಿಸಿ ಸಬಳನುಂಗು ವರೆಂಬುದರಲ್ಲಿ ಸಂಶಯವಿಲ್ಲ. ಅಂತಸ್ಸಾರವೆನಿಸಿದ ಗುಣಗಳೇ ಗೌರವ ಹೇತುಗಳೆಂಬಂತೆ ಕೃಶಾಂಗನಾದ ಅರ್ಜುನನು ವ್ರತಾವಸಾನದ ಸ್ನಾನ ಕ್ಕಾಗಿ ಹೋಗುತ್ತಿರಲು, ಆತನ ಪಾದನ್ಯಾಸಗಳ ಭಾರವನ್ನು ಸಹಿಸದೆ ಭೂಮಿಯು ಕಂಪಿಸುತ್ತಿತ್ತು. ಅಸಾಧ್ಯವಾದ ಕಠಿಣತಪಸ್ಸಿನಿಂದ ಆತನು ಬೆರಗಾಗದೆ, ಫಲವು ವಿಳಂಬಿಸಿತೆಂದು ಉತ್ಸಾಹಗುಂದದೆ, ಸ್ವಕೀಯ ಕರ್ಮದಲ್ಲಿ ಒಂದೇ ರೀತಿಯಿಂದ ನಿರತನಾಗಿದ್ದನು.

ಅವನಲ್ಲಿದ್ದ ರಜಸ್ತಮಗಳೆಂಬ ಗುಣಗಳೆರಡೂ ಶಕ್ತಿಗುಂದಿ ಮಿದುವಾಗಿ ಗುಣಾಧಿಕ್ಯದಿಂದ ಮೆರೆಯುವ ಸತ್ವವನ್ನು ಕುಂದಿಸಲಾರದೆ ಹೋದುದರಿಂದಲೇ ಅವನು ಸಾತ್ವಿಕವರನೆನಿಸಿ ತಪಸ್ಸಿನಲ್ಲಿ ನೆಲಸಿದನು. ಅರ್ಧರಾತ್ರಿಯಲ್ಲಿ ಪ್ರಜ್ವಲಿಸುವ ಪಾವಕನಿಂದಲೂ ತೇಜಸ್ವಿಯೆನಿಸಿ, ಅಗಾಧವೂ ಭೀಕರವೂ ಎನಿಸಿದ ಅಂಬುಧಿಗಿಂತಲೂ ಗಂಭೀರನೆನಿಸಿ, ಉನ್ನತಗಿರಿಶೃಂಗದಿಂದಲೂ ಮಹೋನ್ನತನೆನಿಸಿ ಮೆರೆಯುವ ವಿಜಯನು ಅಜೇಯನೆನಿಸಿದನು. ಮನಸ್ಸಿನೊಳಗೇ ಮಂತ್ರವನ್ನು ಜಪಿಸುತ್ತಿದ್ದ ಆತನ ಮುಖಮಂಡಲವು ವ್ಯಾಪಿಸುವ ದಶನಕಾಂತಿಗಳಿಂದ ಪರಿವೇಷಭೀಷಣವೆನಿಸುವ ಮಾರ್ತಂಡಮಂಡಲದಂತೆ ಜಗಜಗಿಸುತ್ತಿತ್ತು. ಕವಚಧಾರಿಯಾಗಿ ಉಪವೀತದಂತೆ ಸಜ್ಯಕಾರ್ಮುಕವನ್ನು ಧರಿಸಿಕೊಂಡು ಸ್ಥಿರವಾಗಿ ತಪಸ್ಸಿನಲ್ಲಿ ನೆಲಸಿದ್ದ ನರನು ಇಂದ್ರಚಾಪಪರಿವೇಷ್ಟಿತನಾಗಿ ಅರಣ್ಯಭೀಕರನೆನಿಸಿ ಮೆರೆಯುವ ಗಿರಿರಾಜನಂತೆ ತೋರುತ್ತಿದ್ದನು. ತಲೆಯ ಮೇಲೆ ಕೈಗಳನ್ನು ಜೋಡಿಸಿಕೊಂಡು ಧ್ಯಾನಾಸಕ್ತನಾಗಿದ್ದಾಗ, ತಪಶ್ಶಕ್ತಿಯು ದಿವ್ಯತೇಜಸ್ಸಿನಂತೆ ಭೂವ್ಯೋಮಾಕಾಶಗಳಲ್ಲಿ ಪಸರಿಸುತ್ತಿತ್ತು. ತಡೆಯಲಾರದ ಆ ತೇಜಸ್ಸು ತಪಸ್ವಿಗಳ ಹಾಗೂ ದೇವತೆಗಳ ಸಂಚಾರಕ್ಕೆ ತಡೆಯಾಗಿ ಸೂರ್ಯನ ಪ್ರಖರಕಿರಣಗಳ ತೀಕ್ಷ್ಣತೆಯನ್ನು ಸೋಲಿಸುತ್ತಿತ್ತು.

ಹೀಗೆ ಅರ್ಜುನನು ಅಸಮಾನಶಕ್ತಿಯುಳ್ಳ ಕಠೋರವಾದ ತಪಸ್ಸನ್ನಾಚರಿಸುತ್ತಿರಲು, "ಜಟಾಧರನೂ, ಅಧಿಜ್ಯಕಾರ್ಮುಕನೂ ಶಕ್ತಿಸಂಪನ್ನನೂ ಆಗಿರುವ ರುದ್ರನು ಅನುದಿತಫಾಲಾಕ್ಷನೆನಿಸಿ, ತ್ರಿಪುರಸಂಹಾರಕ್ಕೆ ಹೊರಟಿರುವನೋ" ಎಂದು ಕುತೂಹಲದಿಂದ ಸಿದ್ಧರು ನೋಡುತ್ತಿದ್ದರು. ಆಗ ತಪಸ್ವಿಗಳು ಏನೆಂದರಿಯದೆ ಗೊತ್ತುಗುರಿಯಿಲ್ಲದೆ ಬೆರಗಾಗಿ—"ಬಹುದೂರದ ವರೆಗೂ ಪಸರಿಸುವ ದಿವ್ಯತೇಜವಿದೇನು? ಅರಣ್ಯಗಳನ್ನು ದಹಿಸದಿರುವುದರಿಂದ ದವಾಗ್ನಿಯಲ್ಲ! ನೀರನ್ನಾವಿಯಾಗಿ ಸೆಳೆಯದಿರುವುದರಿಂದ ಸೂರ್ಯನ ತೇಜವಿದಲ್ಲ! ಸಮುದ್ರವನ್ನು ಬತ್ತಿಸದಿರುವುದರಿಂದ ಬಡವಾಗ್ನಿಯಲ್ಲ! ಆದರೆ ಸರ್ವರ ಕಣ್ಮನಗಳನ್ನೂ ತಡೆಯುತ್ತಿರುವುದಿದೇನು!" ಎಂದು ವಿಮರ್ಶಿಸುತ್ತ ಕೊನೆಗೆ ಇಂದ್ರಕೀಲಪರ್ವತದಲ್ಲಿ ತಪಸ್ಸುಮಾಡುವ ಮಹಾಪುರುಷನ ದಿವ್ಯಶಕ್ತಿಯೆಂದು ಸಿದ್ಧಾಂತಪಡಿಸಿದರು. ಆದರೆ,

"ಇವನಾರು? ತಪಸ್ಸಿನ ಉದ್ದೇಶವೇನು? ದೇವೇಂದ್ರನೇ ಇಲ್ಲಿಗೆ ಬಂದು ತಪೋನಿರತನಾಗಿರಬಹುದೆ? ಶತಮುಖನಿಗೆ ಇಂದ್ರ ಪದವಿಗಿಂತ ಬೇರೇನು ಬೇಕಾಗಿದೆ? ಬೆಂಗದಿರನಾಗಿರಬಹುದೆ? ಲೋಕವನ್ನು ಬೆಳಗಿಸುವುದರಲ್ಲಿ ನಿರತನಾದವನಿಗೆ ತಪವೇಕೆ? ಪಾವಕನೋ? ಲೋಕಪಾಲಕರ ಗೋಷ್ಠಿಯಲ್ಲಿ ಸಿಲುಕಿ ಯಜ್ಞಾಹುತಿಗಳನ್ನು ಕೊಂಡೊಯ್ಯುವುದರಲ್ಲಿ ನಿಯುಕ್ತನಾದವನಿಗೆ ವಿರಾಮವಿಲ್ಲ!" ಹೀಗೆ ನಾನಾವಿಧವಾದ ವಿವಾದಗಳಿಂದ ನಿರ್ಧರಿಸಲಾರದೆ ಕಳವಳಗೊಂಡು, ಈ ಬೇಗೆಯಿಂದ ಲೋಕವನ್ನು ಪಾರಾಗಿಸಬೇಕೆಂಬ ಹೆಬ್ಬಯಕೆಯಿಂದ ತಾಪಸರೆಲ್ಲರೂ ಸೇರಿ, ಔದಾರ್ಯಾದಿಗುಣಗಳು ವಿನಯವನ್ನೂ, ನೀತಿಗಳು ವಿವೇಕವನ್ನೂ, ಸಮಯಗಳು ನ್ಯಾಯವನ್ನೂ ಮರೆಹೊಗುವಂತೆ ಲೋಕರಕ್ಷಕನನ್ನು ಮರೆಹೊಗುವುದಲ್ಲದೆ, ಬೇರೆ ದಾರಿಯಿಲ್ಲವೆಂದು ನಿಶ್ಚೈಸಿ, ಅನನ್ಯಮನಸ್ಸಿನಿಂದ ಶಂಕರನನ್ನು ಪ್ರಾರ್ಥಿಸುತ್ತ ಕೈಲಾಸಕ್ಕೆ ತೆರಳಿದರು.

ಆ ತಾಪಸೋತ್ತಮರು ಭಕ್ತಿವಿಶ್ವಾಸಗಳಿಂದ ಜಗದೊಡೆಯನ ನಾಮಸ್ಮರಣೆಮಾಡುತ್ತ, ಹಾಡುತ್ತ ನಡೆನಡೆದು ರಜತಾದ್ರಿಯ ಸಮೀಪವನ್ನೈದಿದರು. ಅಲ್ಲಿ ಸೂರ್ಯಮಂಡಲವನ್ನು ತಿರಸ್ಕರಿಸುವಂತೆ ಜಾಜ್ವಲ್ಯಮಾನವಾಗಿ ಬೆಳಗುವ ತೇಜಃಪುಂಜವನ್ನು ನೋಡಲಾರದೆ "ಕಾಲತ್ರಯಾತ್ಮಕನಾದ ಸರ್ವೇಶ್ವರನೇ, ಲೋಕರಕ್ಷಕನೇ, ಕೃಪಾಕರನೇ, ಶಂಕರನೇ, ದರ್ಶನವಿತ್ತು ಭಕ್ತರನ್ನು ಸಲಹಬೇಕು" ಎಂದು ದೈನ್ಯದಿಂದ ಸ್ತುತಿಸತೊಡಗಿದರು, ಕೂಡಲೆ ದಿವ್ಯವಾದ ಪ್ರಭೆಯು ವಿಪರ್ಯಾಸಗೊಂಡು. ದೇಹಾರ್ಧವನ್ನು ಗಿರಿಜಾತೆಗಿತ್ತು, ಹರಿಚಂದನಕುಂಕುಮವಿಲೇಪಿತನಾಗಿ ಕಮನೀಯಗಾತ್ರನೂ ತ್ರಿಣೇತ್ರನೂ ಎನಿಸಿದ ಉಮಾಮಹೇಶ್ವರನು ವೃಷಭಾರೂಢನಾಗಿ ವಿರಾಜಿಸಿದನು. ಆ ಮಹಾದೇವನು ತುಹಿನಗಿರಿಶಿಖರಸ್ಥನಾಗಿಯೂ ಲೋಕಾತಿಶಯವಾದ ತೇಜಸ್ಸಿನಿಂದ ಎಲ್ಲಾ ಗಿರಿಸಾಗರಾಂಬರದಿಗಂತಗಳಲ್ಲೂ ವ್ಯಾಪಕನು. ಸಾನುಭೂಮಿಗಳಲ್ಲಿ ಪಸರಿಸುವ ದಿನಕರತೇಜದಿಂದೊಪ್ಪುವ ಮಹಾಮೇರುವಿನಂತೆ ಜಾನುಮಧ್ಯದಲ್ಲಿ ಸ್ವಸ್ತಿಕದಂತೆ ಸುತ್ತಿಕೊಂಡಿರುವ ಸರ್ಪಭೋಗವುಳ್ಳ ಮಹಾಕಾಯದಿಂದ ಮೆರೆಯುತ್ತಿದ್ದನು. ಹಿಮರಾಶಿಗಳ ನಡುನಡುವೆ ರತ್ನರಾಶಿಗಳ ಕಾಂತಿ

ಗಳನ್ನು ವಿಪರ್ಯಾಸಗೊಳಿಸುವ ತುಹಿನಗಿರಿಯ ಹಾಗೆ ಶುಭ್ರವಾದ ಮಹಾಶೇಷನೆಂಬ ಉಪವೀತವನ್ನು ಶ್ರೀಕಂಠದ ಕಾಂತಿಯಿಂದ ಶ್ಯಾಮಲ ವನ್ನಾಗಿ ಮಾಡುತ್ತ ಅಪಾರಮಹಿಮನಾಗಿ ಕಂಗೊಳಿಸುತ್ತಿದ್ದನು. ರಜತ ಕುಂಭಗಳು ಗಂಗಾಜಲವನ್ನು ತುಂಬಿಕೊಳ್ಳುವಾಗ ಚದರುವ ಕೆನ್ನೈದಿಲೆ ಗಳನ್ನು ಬೆಳಗಿಸುವಂತೆ, ಜಾಜಿಮಲ್ಲಿಗೆಯಂತೆ ಶುಭ್ರವಾದ ರುಂಡಗಳಲ್ಲಿ ಕೆದರಿರುವ ಕೂದಲುಗಳನ್ನು ಶಿರೋಭೂಷಣವಾದ ಚಂದ್ರನ ಕಲೆಗಳು ಬೆಳಗಿಸುತ್ತಿದ್ದುವು. ಆ ಗಂಧದ ಮರಗಳಿಂದೊಪ್ಪುವ ಮಲಯಪರ್ವತ ದಂತೆ ಭುಜಗಕಂಕಣಗಳಿಂದೊಪ್ಪುವ ಸಹಸ್ರಬಾಹುಗಳುಳ್ಳ ವಿಶ್ವೇಶ್ವರನು ರಂಜಿಸುತ್ತಿದ್ದನು.

ಆ ದೇವದೇವನು ಪ್ರಸನ್ನತೆಯಿಂದ ಅಭಯಪ್ರದನಾಗಿರುವುದನ್ನು ತಿಳಿದು ತಾಪಸರು ಧೈರ್ಯಗೊಂಡು ಸವಿನಾಪಿಸಿ, ಲೋಕವು ತಪಶ್ಶಕ್ತಿ ಯಿಂದ ಬೆಂದು ಕಂಗೆಟ್ಟಿರುವುದನ್ನು ಕುರಿತು ಹೀಗೆ ವಿಜ್ಞಾಪಿಸಿಕೊಂಡರು. “ಲೋಕರಕ್ಷಕನೇ! ಇಂದ್ರಕೀಲಕ ಪರ್ವತದಲ್ಲಿ ವೃತ್ರಾಸುರನಂತೆ ಭೀಮ ವಿಗ್ರಹನಾದ ಪುರುಷನೊಬ್ಬನು ಹಠಾತ್ತಾಗಿ ಸೂರ್ಯತೇಜಸ್ಸನ್ನು ಕುಂದಿ ಸುತ್ತ ತಪಸ್ಸುಮಾಡುತ್ತಿರುವನು. ಆತನಿಗೆ ದೊಡ್ಡದೊಡ್ಡ ಬತ್ತಳಿಕೆ ಗಳು, ಬಿಲ್ಲುಬಾಣಗಳು, ಖಡ್ಗಕವಚಗಳು, ಜಟಾವಲ್ಕಲಾಜಿನಗಳು ಎಂಬ ವಿಚಿತ್ರತರವಾದ ವೇಷವಿದೆ. ಅವನು ಚಲಿಸಿದನೆಂದರೆ, ಭೂಸ ಭೋಮಂಡಲಗಳು ನಿಶ್ಚಲಗಳು! ಹೀಗೆ ಭೂಗೋಳ ಖಗೋಳಗಳನ್ನು ನಿಯಮಿಸುತ್ತಿರುವಾತನು ಸಾಮಾನ್ಯನಲ್ಲ! ಸುರಾಸುರಸಂಸೇವ್ಯವೆನಿಸಿದ ವಿಶ್ವವನ್ನೇ ಕಡೆಗಣಿಸಿ ಸಂತಪಿಸುವ ಆತನ ತಪಸ್ಸಿಗೆ ಕೊನೆಯಿಲ್ಲ. ಅವ ನೊಂಧೇ ಸವನೆ ಲೋಕವೆಲ್ಲವನ್ನೂ ಜಯಿಸಬೇಂದಿರುವನೋ ಸಂಹರಿಸ ಲಿರುವನೋ ಮೋಕ್ಷವನ್ನು ಸಾಧಿಸುವ ಉದ್ದೇಶದಿಂದಿರುವನೋ ಎಂಬು ದನ್ನು ತಿಳಿಯಲಾರದೆ ನಾವು ತಲ್ಲಣಿಸುತ್ತ ತಪಸ್ಸಿನ ಬೇಗೆಯನ್ನು ತಡೆಯ ಲಾರದೆ ಕಂಗೆಟ್ಟು ನೊಂದು ಬಂದಿರುವೆವು. ಪ್ರಭುವೆ! ಇಂತಹ ಕಷ್ಟ ದಶೆಯಲ್ಲಿ ಉಪೇಕ್ಷಿಸಬಾರದು. ಆ ತಪಸ್ಸಿನ ಮೂಲವನ್ನರಿಯಬೇಕು. ಕರುಣಾಮಯನೇ ನೀನು ಭಕ್ತವತ್ಸಲನಲ್ಲವೆ?

ಈ ಬಗೆಯಿಂದ ಮುನಿಗಳೆಲ್ಲರೂ ಸೇರಿ ಮೊರೆಯಿಡುತ್ತಿರಲು, ಅಂಧಕಾಂತಕನು ಸಮುದ್ರದಂತೆ ಗಂಭೀರವಾದ ಧ್ವನಿಯಿಂದ, ಆ ತಪಸ್ವಿಗಳನ್ನುದ್ದೇಶಿಸಿ ಹೀಗೆಂದನು—ಮುನಿಗಳೇ ಹೆದರದಿರಿ! ನೀವೆಂದಂತೆ ಇಂದ್ರಕೀಲಾಚಲದಲ್ಲಿ ತಪಸ್ಸುಮಾಡುತ್ತಿರುವವನು ಸಾಮಾನ್ಯನಲ್ಲ. ಮೊದಲು ಬದರಿಕಾಶ್ರಮದಲ್ಲಿ ನೆಲಸಿ ತಪಸ್ಸುಮಾಡುತ್ತಿದ್ದ ನರನಾರಾಯಣರ ವಿಷಯವಾಗಿ ಕೇಳಿರುವಿರಷ್ಟೆ! ಇವನೇ ಆ ನಾರಾಯಣಸಖನಾದ ನರನು. ಇಂದ್ರಾದಿಲೋಕಪಾಲಕರಂತೆ ಶಕ್ತಿಸಂಪನ್ನರಾದ ವೈರಿಗಳನ್ನು ಸಂಹರಿಸಬೇಕೆಂಬ ಬಯಕೆಯಿಂದ ಬಂದು ನನ್ನನ್ನು ಕುರಿತು ಹೀಗೆ ಕಠೋರವಾಗಿ ತಪಸ್ಸುಮಾಡುತ್ತಿರುವನು. ದುಷ್ಟಸಂಹಾರದಿಂದ ಸೃಷ್ಟಿಯನ್ನು ಪೊರೆಯಬೇಕೆಂಬ ಬ್ರಹ್ಮನ ಪ್ರಾರ್ಥನೆಯ ಮೇರೆಗೆ, ಮಹಾತ್ಮರಾದ ನರನಾರಾಯಣರಿಬ್ಬರೂ ಕೃಷ್ಣಾರ್ಜುನರಾಗಿ ಅವತರಿಸಿದರು. ಅದಕ್ಕಾಗಿ ನರನಾದ ಅರ್ಜುನನಿಲ್ಲಿಗೆ ಬಂದು ತಪಸ್ಸುಮಾಡುವುದನ್ನರಿತು ಮೂಕನೆಂಬ ಒಬ್ಬ ಘೋರದಾನವನು ಅವನ ಮೇಲೆ ಬೀಳಬೇಕೆಂದು ಸಮಯವನ್ನು ಹಾರೈಸುತ್ತಿರುವನು. ಆ ಪಾತಕಿಯು ಹೀಗೆ ಸಂದರ್ಭವನ್ನು ನಿರೀಕ್ಷಿಸುತ್ತಿದ್ದೂ, ವಿರೋಧಿಯನ್ನಿದಿರಿಸಲು ಧೈರ್ಯಸಾಲದೆ ಮಾಯೆಯಿಂದ ವರಾಹವಾಗಿ ಮೋಸಗೊಳಿಸಬೇಕೆಂದಿರುವನು. ಅವನ ವಧೆಯಿಂದ ಎಲ್ಲರ ಸಂಕಷ್ಟವೂ ಪರಿಹಾರವಾಗುವುದು. ನೀವೆಲ್ಲರೂ ಅಲ್ಲಿಗೆ ಹೋಗಿ ಏನೇನು ನಡೆಯಲಿರುವುದೆಂಬುದನ್ನು ಹಾರೈಸುತ್ತಿರಬೇಕು”

ಹೀಗೆ ಸೂಚಿಸುತ್ತ ಗಿರಿಜಾರಮಣನು ಮೊರೆಯಿಡಲು ಬಂದ ತಾಪಸರಿಗೆ ಆಶೆಯ ಮುಂಗುಡಿಯನ್ನು ತೋರಿಸಿ ಕಳುಹಿದನು.

---

೧೭ ಮಾಯಾಕಿರಾತನ ಲೀಲೆ

ಲೋಕಕಲ್ಯಾಣಕ್ಕಾಗಿ ಶಿವನು ಮಾಯೆಯನ್ನವಲಂಬಿಸುವುದೇನೂ ಹೊಸತಲ್ಲ. ಸಂದರ್ಭವನ್ನನುಸರಿಸಿ ಆತನೀಗ ಮಾಯಾಕಿರಾತನಾದನು. ಪೊದರಿನ ಬಳ್ಳಿಗಳನ್ನೆಳೆದು ಕಟ್ಟಿದ ತಲೆಮುಡಿಯು; ನವಿಲಿನ ಗರಿಗಳ

ಕಾಂತಿಯಿಂದೊಪ್ಪುವ ಕಪೋಲಗಳು; ಕೋಪದಿಂದ ಕೆಂಪೇರಿದ ಕಣ್ಣುಗಳು; ದಿಗಂತಗಳನ್ನು ಬೆಳಗಿಸುವ ಮಂದಹಾಸ; ಬೆಳ್ಳಗೆ ಬೆಳಗುವ ಹರಿಚಂದನರೇಖೆಗಳು; ಕವಡಿ, ಗುಲಗುಂಜಿ, ಮುತ್ತುಗಳ ಮಾಲಿಗಳಿಂದೊಪ್ಪುವ ಅಗಲವಾದ ಎದೆ; ಬೆವರಿಂದ ಸನೆದ ಕಪ್ಪು ದೇಹ; ಬಿಲ್ಲು, ಬಾಣ, ಬತ್ತಳಿಕೆಗಳನ್ನು ಧರಿಸಿಕೊಂಡು ಬಹುಭೀಕರನಾದ ಕಿರಾತಮೂರ್ತಿಯು ಕಾಲಪುರುಷನಂತೆ ತಲೆದೋರಿದನು.

ದೇವದೇವನು ಹೀಗೆ ವನೇಚರಾಧಿಪನಾದುದನ್ನು ನೋಡಿ ರುದ್ರಗಣವೆಲ್ಲವೂ ಕೂಡಲೆ ಬೇಡಪಡೆಯಾದುವು. ವಿಧವಿಧವಾದ ಆಯುಧಧಾರಣೆಗಳಿಂದಲೂ, ಬಗೆಬಗೆಯ ವೇಷಭೂಷಣಗಳಿಂದಲೂ, ವಿಭಿನ್ನವಾದ ಪ್ರಾಕೃತಭಾಷೆಗಳಿಂದಲೂ, ಬಾರಿಸುವ ಚರ್ಮವಾದ್ಯವಿಶೇಷಗಳಿಂದಲೂ ಕೂಡಿ ಸಮುದ್ರದಂತೆ ಘೂರ್ಮಿಸುತ್ತ, ಸುತ್ತಲೂ ನೆರೆದ ಪಡೆಯನ್ನು ನೋಡಿ ಮೃಡನು ಮುಂದಣ ಪ್ರಕರಣಕ್ಕಾಗಿ ಹೀಗೆ ಅಪ್ಪಣೆ ಮಾಡಿದನು—"ಇಂದು ವಿನೋದದ ಬೇಟೆಗೆಂದು ಮುಂದೊತ್ತಿ ಬಂದ ನೀವೆಲ್ಲರೂ ಸೇರಿ ಖಗವೆನ್ನದೆ, ಮೃಗವೆನ್ನದೆ, ಉರಗವೆನ್ನದೆ, ಜಲಚರವೆನ್ನದೆ ಬೇಟೆಯ ವೈವಿಧ್ಯದಲ್ಲಿ ನಿಮಗಿರತಕ್ಕ ಜಾಣ್ಮೆಯನ್ನು ತೋರಿಸಬೇಕು; ಎಲ್ಲೆಲ್ಲಿಯೂ ಬಲ್ಲಿದರ ಬೇಟೆಯಂತೆ ಅದು ಕೃಷಿಕರಿಗೆ ತೋಷದಾಯಕವಾಗಬೇಕು. ಗೋವಳರಿಗೆ ರಕ್ಷಣೆಯಾಗಬೇಕು; ಹಾದಿಹೋಗುವ ಸಾಧುಸಂತರಿಗೆ ಶಾಂತಿದಾಯಕವಾಗಬೇಕು. ಆದುದರಿಂದ ನೀವೀಗ ಸಾವಿರ ಸಾವಿರ ಜನರಂತೆ ಬೇರೆ ಬೇರೆಯಾಗಿ ಗಿರಿಗುಹಾರಣ್ಯಗಳನ್ನು ಪ್ರವೇಶಿಸಿ ಸೂಟಿಯಿಂದ ಬೇಟೆಯಾಡುತ್ತ, ಸೊಕ್ಕಿದ ಜೀವಜಾಲಗಳೆಲ್ಲವನ್ನೂ ದಕ್ಕಿಸಿಕೊಳ್ಳಬೇಕು."

ಅದನ್ನು ಕೇಳಿದೊಡನೆ ಬೇಡರ ಪಡೆಯು ಮುಂದೊತ್ತಿ ಬೊಬ್ಬಿಡುತ್ತ ಕಾಡೆಬ್ಬಿ ಬೇಟೆಯಾಡತೊಡಗಿತು. ಆ ಬೊಬ್ಬೆಯ ಅಬ್ಬರಕ್ಕೆ ಹೆದರಿ ಪಕ್ಷಿಸಂಕುಲವು ಚಿಲಿಪಿಲಿಗುಟ್ಟುತ್ತ, ಮರಿಗಳೆನ್ನದೆ ಗೂಡುಗಳೆನ್ನದೆ ಸರ್ವಸ್ವವನ್ನೂ ಬಿಟ್ಟು ಓಡಿ ಹೋಗಲು ಮನಸ್ಸಿಲ್ಲದೆ, ಹೋಗದೆ ವಿಧಿಯಿಲ್ಲದೆ ಉಕ್ಕಿ ಬರುವ ದುಃಖದಿಂದ ಎತ್ತರವಾಗಿ ಎತ್ತೆತ್ತಲೋ ಹಾರತೊಡಗಿದುವು. ಮೃಗಸಂದಣಿಗಳು ಇಕ್ಕೆಗಳನ್ನುಳಿದು ದಿಕ್ಕುಗೆಟ್ಟು ಅಬ್ಬರಿ

ಸುತ್ತ ಉಬ್ಬರದ ನಾಗಾಲೋಟದಿಂದ ಸಿಕ್ಕಿದತ್ತ ಧಾವಿಸತೊಡಗಿದುವು. ಹೀಗೆ ಉಂಟಾದ ಆಕ್ರಂದನಧ್ವನಿಯನ್ನು ಕೇಳಿ ಗಿರಿಯು ತಾನೇ ಹೆದರಿ ನಡುಗುತ್ತ ಗೋಳಾಡುತ್ತಿದ್ದಂತೆ ಗುಹಾಂತರಗಳು ಪ್ರತಿಧ್ವನಿಸುತ್ತಿದ್ದುವು. ಆಗ, ಕಾಗೆ ಗೂಗೆಯೆಂಬ ತಾರತಮ್ಯವಿಲ್ಲದೆ ಪಕ್ಷಿಗಳೂ, ಹರಿಣ ವ್ಯಾಘ್ರ ವೆಂಬ ಉಚ್ಚನೀಚವಿಚಾರವಿಲ್ಲದೆ ಮೃಗಗಳೂ "ಪ್ರಾಣಾಂತಿಕವಾದ ಘೋರವಿಪತ್ತಿನ ಮುಂದೆ ಜಾತಿವೈರವು ತಲೆದೋರುವುದಿಲ್ಲ"ವೆಂದು ಸಾರಿ ಹೇಳುವಂತೆ ಒಂದನ್ನೊಂದು ಅನುಸರಿಸಿ ಓಡಿಹೋಗುತ್ತಿದ್ದುವು. ಓಡು ತ್ತೋಡುತ್ತ ಬಾಲಗಳು ಬಿದಿರ ಮೆಳೆಗಳಲ್ಲಿ ಸಿಲುಕಿಕೊಂಡ ಚಮರಿಗಳು, ಬೇಟೆಯಿಂದ ಕೊಲೆಯು ಸಿದ್ಧವೆಂದು ತಿಳಿದೂ ಕೂಡ, ಪ್ರೀತಿಯ ಬಾಲದ ಗೊಂಡೆಗಳನ್ನು ಕಿತ್ತುಕೊಂಡು ಓಡಿಹೋಗಲು ಮನಸ್ಸಿಲ್ಲದೆ 'ಮಾನಹಾನಿ ಗಿಂತಲೂ ಪ್ರಾಣಹಾನಿಯೇ ಮೇಲು' ಎಂಬ ನೀತಿಯನ್ನು ಸಾರುವಂತೆ ಚಲಿಸದೆ ಅಲ್ಲಲ್ಲೇ ನಿಂತ್ತುಕೊಂಡಿದ್ದುವು. ಮದ್ದಾನೆಗಳ ಕುಂಭಸ್ಥಳ ಗಳನ್ನು ವಿದಾರಿಸಿ ಮದಗಂಧದಿಂದೊಪ್ಪುವ ಕೇಸರಗಳುಳ್ಳ ಸಿಂಹಗಳು, ಭುಲ್ಲೈಸುವ ಗುಲ್ಲಿನ ಮೂಲಕ ನಿದ್ದೆಯಿಂದ ಎಚ್ಚರಹೊಂದಿ, ಆ ಕಲಕಲ ವನ್ನು ನಿರ್ಭೀತಿಯಿಂದಲೇ ಕೇಳುತ್ತ, ಮೃಗಾಧಿಪತ್ಯವುಳ್ಳ ತಮ್ಮ ಧೈರ್ಯ ಸ್ಥೈರ್ಯಗಳನ್ನು ಪ್ರಕಟಿಸಿಕೊಂಡುವು. ಭೀಕರವಾದ ಕಳಕಳವನ್ನು ಕೇಳಿ ಜಲಜಂತುಗಳೆಲ್ಲ ತಳಮಳಿಸುತ್ತ ರಭಸದಿಂದ ತಳವನ್ನು ಸೇರಲು ನೀರೆಲ್ಲ ಕಲಕಿ ದುರ್ಗಮವೆನಿಸಿದರೂ, ನದೀತೀರದ ರಕ್ತಚಂದನವೃಕ್ಷಗಳು ಓಡಿ ಹೋಗುವ ಕಾಡಾನೆಗಳ ದಂತಾಘಾತಕ್ಕೆ ಸಿಲುಕಿ ಮುರಿದು ನೀರಿಗೆ ಬಿದ್ದುದ ರಿಂದ ತೊರೆಗಳು ರಕ್ತಪ್ರವಾಹದಂತೆ ಕಂಗೊಳಿಸುತ್ತಿದ್ದುವು. ಮದಿಸಿದ ಕಾಳ್ಕೋಣಗಳ ಕ್ಷಿಪ್ರಗತಿಯ ಪ್ರಹತಿಯಿಂದ ಜಜ್ಜಿಹೋದ ಏಲಾಲವಂಗಕ ರ್ಪೂರಲತಾಮಂಚಗಳೆಂಬ ಓಷಧಿಗಳಲ್ಲಿ ಬೀಸುತ್ತ, ಗುಣತ್ರಯವಿಶಿಷ್ಟವಾದ ಅರಣ್ಯಾನಿಲವು ನಿಲವಿಲ್ಲದೆ ಬೇಡರಿಗುಂಟಾದ ಆಯಾಸವನ್ನು ಪರಿಹರಿಸು ತ್ತಿತ್ತು. ಅಖಿಲಜೀವಜಾಲಗಳಲ್ಲಿಯೂ ತಲೆದೋರಿದ ತಳಮಳವು ಜಲಾಶಯ ಗಳ ನೀರನ್ನು ಕದಡಿ ಕಶ್ಮಲಗೊಳಿಸುತ್ತ, ಜೀವನವಿಕಸಿತಸುಂದರಕಮಲವನ ವನ್ನು ಪೀಡಿಸಿ ಬಾಡಿಸುತ್ತ, ಸಸ್ಯಜಾಲಗಳನ್ನು ಬೀಳಿಸಿ ಧೂಳೀಪಟಗೆ ಯ್ಯುತ್ತ, ಗ್ರೀಷ್ಮಕಾಲದಂತೆ ಭೀಕರಪರಿಣಾಮಕಾರಿಯಾಗಿತ್ತು.

ಹೀಗೆ ಮಾಯಾಕಿರಾತನೆನಿಸಿದ ಶಂಕರನು ಬೆಟ್ಟದ ತಪ್ಪಲು, ಅರಣ್ಯ, ಗಿರಿ, ಕಂದರಗಳೆನ್ನದೆ ಅಲ್ಲಲ್ಲಿ ಅಡಗಿದ್ದ ದುಷ್ಟಮೃಗಖಗೋರಗಸಂಕುಲವೆನ್ನದೆ ಎಲ್ಲವನ್ನೂ ಹೊಡೆದು ಕೆಡಹುತ್ತ ಹುರುಪುಗೊಂಡು ಮುಂದಣ ಬೇಟೆಗಾಗಿ ನಿಜಪರಿವಾರದೊಡನೆ ಇಂದ್ರಕೀಲಕತಪೋವನದ ಬಳಿಗಾಗಿ ಸಾಗುತ್ತಿದ್ದನು. ಕಿರಾತರೊಡೆಯನು ಹೀಗೆ ಮುಂದೊತ್ತಿ ನೋಡುತ್ತಿದ್ದಾಗ—ನಿಷ್ಠೆಯಿಂದ ಕಠಿನತಪಸ್ಸನ್ನಾಚರಿಸುತ್ತಿದ್ದ ಅರ್ಜುನನ ಮುಂದೆ ನಿತ್ತುಕೊಂಡು ಮುಖಾಗ್ರದಿಂದ ಭೂಮಿಯನ್ನು ವಿದಾರಿಸುತ್ತ, ಮೈದೋರಿದ ಕಾರ್ಮೋಡದಂತೆ ಬಹುಭೀಕರವಾದ ವರಾಹಾಕೃತಿಯನ್ನು ತಳೆದ ಮೂಕದಾನವನು ಗೋಚರಿಸಿದನು.

ಕೂಡಲೆ ಪಿನಾಕಿಯು ನಾಕನದೀತೀರದ ತರುಗಳೆಡೆಯಲ್ಲಿ, ಸೊಂಪಾಗಿ ಬೆಳೆದ ಗಿಡಬಳ್ಳಿಗಳ ನಡುವೆ ಬೇಡರ ಗುಂಪನ್ನು ನಿಲ್ಲಿಸಿ, ಗೂಡಾರದಂತೆ ಮರಬಳ್ಳಿಗಳಿಂದ ಕಿಕ್ಕಿರಿದ ಪಕ್ಕದ ಬಳ್ಳಿವಾಡಗಳ ಎಡೆಯಲ್ಲಿ ನಿತ್ತುಕೊಂಡು, ಕಂಡು ಬರುತ್ತಿದ್ದ ವರಾಹದ ಗತಿಯನ್ನೇ ನಿರೀಕ್ಷಿಸುತ್ತಿದ್ದನು.

೧೮ ಮೂಕಾಸುರನ ಸಂಹಾರ

ಅರ್ಜುನನು ನಿತ್ಯಪದ್ಧತಿಯಂತೆ ಸಮಾಧಿಯನ್ನು ಪೂರೈಸಿ ವಿಶ್ರಮಿಸುವುದರಲ್ಲಿದ್ದನು. ಆ ವೇಳೆಗೆ ಸರಿಯಾಗಿ, ಪರ್ವತಗಳನ್ನು ಭೇದಿಸುವ ಕ್ರೂರದಂಷ್ಟ್ರಗಳಿಂದ ಭೀಕರವೆನಿಸುವ ಮಹಾವರಾಹವು ತಪಸ್ಸುಮಾಡುತ್ತಿದ್ದ ತನ್ನ ಮೇಲೆ ಹಠಾತ್ತಾಗಿ ಬೀಳಬೇಕೆಂದು ಮಹಾರಭಸದೊಡನೆ ಧಾವಿಸಿ ಬರುತ್ತಿದ್ದುದನ್ನು ಕಂಡನು. ಅದನ್ನು ಎವೆಯಿಕ್ಕದೆ ನೋಡುತ್ತಿದಂತೆಯೇ ಅವನ ಮನಸ್ಸಿನಲ್ಲಿ ನಾನಾವಿಧದ ಸಂದೇಹಗಳು ಉಂಟಾಗತೊಡಗಿದುವು—ಇಲ್ಲಿರುವ ಮೃಗಗಳೆಲ್ಲವೂ ಜಾತಿವೈರವನ್ನು ಬಿಟ್ಟು ಪರಸ್ಪರಸೌಹಾರ್ದದಿಂದಲೇ ವರ್ತಿಸುತ್ತಿರುವುವು. ಆದರೂ ಈ ವರಾಹವು ಕ್ರೋಧದೊಡನೆ ನನ್ನ ಮೇಲೆ ಬೀಳಬೇಕೆಂದೋಡಿಬರಲು ಕಾರಣವೇನು? ನನ್ನ ತಪಸ್ಸಿಗೆ ಭಂಗವೊದಗಿರಬೇಕು! ಇಲ್ಲವೆ, ಇದು ನಿಜವರಾಹವಿರದೆ

ದುಷ್ಟದಾನವನ ಮಾಯವಾಗಿರಬೇಕು! ಅಥವಾ ಬೇರೊಬ್ಬ ಜನ್ಮಾಂತರ
ವೈರಿಯು ನನ್ನೊಡನೆ ಬಿಡದೆ ದ್ವೇಷಸಾಧಿಸುತ್ತಿರಬೇಕು! ಅಲ್ಲದೆ, ಸಹಜ
ವೈರವುಳ್ಳ ಮೃಗಗಳನ್ನು ಬಿಟ್ಟು ನನ್ನೊಡನೆ ಹೋರಾಡಬೇಕೆಂದು ಬರು
ವುದೆಂದರೇನು! ಇದನ್ನು ನೋಡಿದ ಕೂಡಲೆ ನನ್ನ ಹೃದಯವು ಕೋಪ
ಸಂತಪ್ತವಾಗಲು ಕಾರಣವೇನು! "ಇದಿರಾಗಿ ಬಂದವನನ್ನು ನೋಡಿ,
ಮನಸ್ಸು ಸಂತೋಷಹೊಂದಿದರೆ, ಬಂದವನು ಹಿತವಂತನು; ಕೋಪ
ಗೊಂಡರೆ ವಿರೋಧಿ"ಯೆಂಬ ನಿಯಮವನ್ನು ಪರ್ಯಾಲೋಚಿಸಿದರೂ,
ಧೂರ್ತನೊಬ್ಬನು ನನ್ನನ್ನು ಸಂಹರಿಸಬೇಕೆಂದು ಬಂದಿರಬಹುದಲ್ಲದೆ, ಇದು
ನಿಜವಾದಹಂದಿಯೆಂದು ನನಗನಿಸುವುದಿಲ್ಲ.

ತಪಸ್ವಿಯಾದ ನನಗೆ ಹೆದರಿಕೆಯೇನೆಂಬ ಸಮಾಧಾನದಿಂದ ನಾನೀಗ
ಸುಮ್ಮನಿರಬಹುದೆ? ಪರರ ಏಳಿಗೆಯನ್ನು ಸಹಿಸಲಾರದ ಧೂರ್ತರು
ಯಾವುದಕ್ಕೂ ಸಿದ್ಧರಾದುದರಿಂದ, ತಟಸ್ಥನಾಗಿರುವುದು ಶ್ರೇಯಸ್ಸಿಗೆ
ಕಾರಣವಲ್ಲ. ಕಾರ್ಮೋಡದಂತಿರುವ ವರಾಹವಿದು ಇಂದ್ರಕೀಲಾಚಲವನ್ನೇ
ನಡುಗಿಸುತ್ತಿರುವುದು. ನಿಜವಾಗಿ ಇವನೊಬ್ಬ ದುಷ್ಟದಾನವನಾಗಿರಬೇಕು!
ಕಾಡಹಂದಿಗೆ ಈ ಬಗೆಯ ಗಾಢಶಕ್ತಿಯೆಂದರೇನು! ನನ್ನ ತಪಸ್ಸಿನ ಸಮ
ಯವನ್ನು ಸಾಧಿಸಿಕೊಂಡು, ಈ ವನಕ್ಕೆ ಬೇಟೆಯ ನೆವದಿಂವ ಬಹುಮಂದಿ
ಸೈನಿಕರ ಬೊಬ್ಬೆಯೊಡನೆ ನನ್ನ ಮೇಲೆ ಬೀಳಬೇಕೆಂದೇ ಹಂದಿಯಾಗಿ
ಬಂದಿರಬಹುದು. ಕಿವಿಗೆ ಅಡಚಿಕ್ಕುವ ಮೃಗಯಾಕೋಲಾಹಲದಿಂದ
ಕಾನನವೇ ತಳಮಳಿಸುತ್ತಿರುವುದು. ಮಾಯಾವಿಯ ಈ ಬೇಟೆಯು
ನನ್ನ ತಪಸ್ಸಿಗೆ ಕಾಟವೋ ಕುಠಾರವೋ ಹೇಳಲರಿಯದು.

ಒಂದು ವೇಳೆ ಕುಹಕಿಯಾದ ಸುಯೋಧನನ ಪ್ರೇರಣೆಯಿಂದ
ಯಾವನೋ ದುಷ್ಟನು ನನ್ನನ್ನು ನಿಗ್ರಹಿಸಬೇಕೆಂದು ಸಮಯನಿರೀಕ್ಷಿ
ಸುತ್ತ ವನ್ಯಮೃಗವಾಗಿ ಬಂದು ಬೇಟೆಯ ಸೋಗಿನಿಂದ ಅಬ್ಬರದ ಕೋಲಾ
ಹಲವನ್ನೆಬಿಸುತ್ತಿರಬಹುದು! ಇಲ್ಲವೆ, ಖಾಂಡವಾಗ್ನಿಯ ಮೂಲಕ ಬೆಂದು
ಹೋದ ತನ್ನ ಬಂಧುವರ್ಗದ ಸೇಡನ್ನು ತೀರಿಸಿಕೊಳ್ಳಬೇಕೆಂದು ಅಶ್ವಸೇ
ನನೆಂಬ ಸರ್ಪವು ಹೀಗೆ ಬಂದಿರಬಹುದು! ಆ ತಕ್ಷಕಪುತ್ರನ ಹಗೆಯು
ಹೀಗೂ ಹೊಗೆಯುತ್ತಿರಬಹುದೆ? ಅಥವಾ ಅಣ್ಣನಾದ ಭೀಮಸೇನನಿಂದ

ನೊಂದ ಬೇರೆಯಾವನೋ ಒಬ್ಬನು ಕೊಬ್ಬಿನಿಂದುಬ್ಬಿ ಹೀಗೆ ಬಂದಿರಬಹುದೆ! ಅಂತೂ ಇದು ಮೋಸಗಾರರ ಮಾಯವೋ? ನಿಜವಾದ ವರಾಹವೋ? ಹೇಗಾದರೂ ಸರಿ! ಶತ್ರುವಿನಾಶವು ಪರಮಲಾಭವೆಂಬುದು ಸರ್ವಸಮ್ಮತವಾದುದರಿಂದ, ಬಲಶಾಲಿಯೆಂಬ ಗರ್ವದಿಂದ ನನ್ನೊಡನೆ ಹೋರಾಡಬೇಕೆಂದು ಬರುವ ವರಾಹವನ್ನೀಗಲೇ ಸಂಹರಿಸಬೇಕು. ದುಷ್ಟರ ಮೋಸಕ್ಕೊಳಗಾಗದೆ ತಪಸ್ಸುಮಾಡು ಎಂದು ಪೂಜ್ಯನಾದ ವೇದವ್ಯಾಸನು ನಿಯಮಿಸಿದಂತೆ ನಾನಿಲ್ಲಿಗೆ ಬಂದು ನಿರ್ದಿಷ್ಟಕರ್ಮದಲ್ಲಿ ತೊಡಗಿರಲು, ಪ್ರಬಲವಾದ ಈ ಸೂಕರವನ್ನು ಸಂಹರಿಸದೆ ವ್ರತವನ್ನು ಪೂರೈಸುವುದು ನನಗೆ ಅಸಾಧ್ಯವಾಗಿ ತೋರುವುದರಿಂದಲೂ, ದುಷ್ಟನಿಗ್ರಹವು ಧರ್ಮಕಾರ್ಯವೆಂದು ಶಿಷ್ಟಸಮ್ಮತವಿರುವುದರಿಂದಲೂ, ಇದನ್ನೀಗ ಕೊಲ್ಲುವುದೇ ಯುಕ್ತವು.

ಹೀಗೆ ಯೋಚಿಸುತ್ತ ಪಾರ್ಥನು ಪೌರುಷಸೂಚಕವಾದ ಬಿಲ್ಲನ್ನು ತೆಗೆದು, ಪರಭೇದನೆಯಲ್ಲಿ ಜ್ಞಾತಶಕ್ತಿಯುಳ್ಳ ಋಜುಸ್ವಭಾವದ ಮಂತ್ರಿಯಂತಿರುವ ಬಾಣವನ್ನು ಮೂಡಿಗೆಯಿಂದ ಹೊರಗೆಳೆದನು. ಪೂಜ್ಯನೂ, ನಿಶ್ಚಲನೂ, ಸತ್ಯಸಂಧನೂ, ಔದಾರ್ಯಾದಿಗುಣಾನ್ವಿತನೂ ಆಗಿರುವ ಸನ್ಮಿತ್ರನು ಧನಬಲವು ನಷ್ಟವಾಗಿ ಹೋದರೂ ಧನಿಕನಾಗಿದ್ದವನ ಹೇಳಿಕೆಗೊಳಗಾಗಿ ನಮ್ರತೆಯಿಂದ ನಡೆದುಕೊಳ್ಳುವಂತೆ ಭಾರವೂ, ಸ್ಥಿರವೂ, ಅಭಂಗುರವೂ, ಪ್ರತಿಷ್ಠಿತವೂ, ಸಜ್ಯವೂ ಎನಿಸಿದ ಗಾಂಡೀವವು, ತಪಸ್ಸಿನ ಮೂಲಕ ಬಲವು ಕ್ಷೀಣಿಸಿ ಹೋದರೂ ಅರ್ಜುನನ ಸೆಳೆತಕ್ಕೊಳಗಾಗಿ ಬಳಕಿಕೊಂಡಿತು. ಅವನು ಧನುಸ್ಸಿಗೆ ಮಾರ್ಗಣವನ್ನು ಸಂಧಿಸುತ್ತಿರಲು ಉಂಟಾದ ಧನುಷ್ಟಂಕಾರದಿಂದ ಪರ್ವತಗಳ ಸಂಧಿಬಂಧಗಳೂ, ಶಿಖರಗಹ್ವರಾರಣ್ಯಗಳೂ ಗಡಗಡನೆ ನಡುಗುತ್ತ, ಛಿನ್ನಭಿನ್ನವಾಗಿ ಕೆಡೆಯುತ್ತ, ಅಚಲಗಳೆಂಬ ತಮ್ಮ ಅನ್ವರ್ಥನಾಮಧೇಯಗಳಿಗೆ ಕುಂದನ್ನು ತಂದುಕೊಂಡುವು. ಹಾಗೆ ಬಾಣವನ್ನು ಬಿಲ್ಲಿಗೆ ಜೋಡಿಸಿ ಗುರಿಯಿಟ್ಟು ನಿಶ್ಚಲತೆಯಿಂದ ಆಕರ್ಣಾಂತವಾಗಿ ಸೆಳೆಯುತ್ತಿದ್ದ ಅರ್ಜುನನನ್ನು, ಮರೆಯಲ್ಲಿದ್ದ ಕಿರಾತನು ನೋಡುತ್ತ ತ್ರಿಪುರಸಂಹಾರಕ್ಕಾಗಿ ನಿತ್ತುಕೊಂಡಿದ್ದ ತನ್ನ ಭೀಕರವಾದ ಪ್ರತಿಮೂರ್ತಿಯೆಂದೇ ಭಾವಿಸಿದನು. ಕೂಡಲೇ ಪರ್ವತವು ಪಾತಾಳಕ್ಕೆ

ಕುಸಿದುಹೋಗುವ ಹಾಗೆ ಬಲವಾಗಿ ಕಾಲೂರುತ್ತ, ಕಿರಾತನು ಪಿನಾಕಕ್ಕೆ ಹೆದೆಯೇರಿಸಿ ಸೆಳೆಯುತ್ತಿದ್ದನು. ಆಗ ಲೋಕವೇ ಸುಟ್ಟುಹೋಗು ವಂತೆ ಶಿಂಜಿನಿಯಾಗಿದ್ದ ವಾಸುಕಿಯ ಮುಖದಿಂದ ಘೋರವಾದ ವಿಷ ಜ್ವಾಲೆಯು ಹೊರಸೂಸುತ್ತಿತ್ತು, ಆ ವೇಳೆಗೆ, ಒಂದಾಗಿ ಸೇರಿ ರೂಪಸಿದ್ಧಿ ಯನ್ನುಂಟುಮಾಡುವ ಪ್ರಕೃತಿಪ್ರತ್ಯಯಗಳ ನಡುವೆ ಸೇರಿದ ಇತ್ಸಂಜ್ಞಕ ವರ್ಣವು ಲೋಪಹೊಂದುವ ಹಾಗೆ ಏಕಕಾಲದಲ್ಲೇ ಶತ್ರುಸಂಹಾರವ ನ್ನೆಸಗಬೇಕೆಂದು ಬಯಸುತ್ತಿದ್ದ ಕಿರಾತಾರ್ಜುನರ ನಡುವೆ ಸಿಲುಕಿದ ಮೂಕನು ವಿನಾಶದ ಮುಖವನ್ನೇ ನೋಡುತ್ತಿದ್ದನು.

ಕೂಡಲೆ ಗಗನವನ್ನು ಬೆಳಗಿಸುತ್ತ, ಕರ್ಣಕಠೋರವಾಗಿ ನಡುಗುತ್ತ, ಕಪ್ಪಾದ ಮೋಡದ ದೆಸೆಯಿಂದ ಹೊರಡುವ ಸಿಡಿಲಿನಂತೆ ಅವಾರ್ಯವಾದ ಭೀಕರಶರವು ಗರ್ಜಿಸುತ್ತ, ಪಿನಾಕದ ದೆಸೆಯಿಂದ ಹೊರಹೊರಟಿತು. ರಭಸದಿಂದ ನೆಗೆದೋಡುತ್ತಿದ್ದ ಶರದ ಗರಿಗಳಿಂದಾದ ಶಬ್ದವು, ಗರುಡನು ಬಂದೆರಗುವನೆಂಬ ಭ್ರಮೆಯನ್ನು ಕಲ್ಪಿಸುತ್ತ, ಮಹಾಸರ್ಪಗಳ ಶ್ರೋತ್ರ ಹೃದಯಗಳನ್ನು ಭೇದಿಸುತ್ತಿತ್ತು. ರುದ್ರನ ಹಣೆಗಣ್ಣಿಂದ ಹೊರಟ ಜ್ವಾಲೆಯಂತೆ, ತ್ವರೆಯಿಂದ ಮನೋಗತಿಯನ್ನು ಮೀರುತ್ತ ಸರಿಯುತ್ತಿದ್ದ ಬಾಣದ ಕಿರಣಗಳಿಂದ ತಾರಾಪಥದಲ್ಲಿ ಉಲ್ಕಾರೇಖೆಯಂತೆ ತೋರುವ ದಾರಿಯು ವಿರಚಿತವಾಯಿತು. ಭಾಸ್ಕರನ ಪ್ರಭೆಯು ಬಹು ಬೇಗನೆ ಭೂಮಿಯಲ್ಲಿ ಪಸರಿಸುವಂತೆ ಪಿನಾಕದಿಂದ ಹೊರಟ ಶರವು ವರಾಹದ ಮೇಲೆ ಬಂದೆರಗಿದುದನ್ನು ಶಿವನ ಸಮೀಪದಲ್ಲಿದ್ದ ಖೇಚರರೂ, ನಭೋ ಮಧ್ಯದಲ್ಲಿದ್ದ ಸಿದ್ಧರೂ, ವರಾಹದ ಸಮೀಪದಲ್ಲಿದ್ದ ಚಾರಣರೂ ಒಂದೇ ವೇಳೆಗೆ ಸರಿಯಾಗಿ ನೋಡಿದರೆಂಬ ಕಾರಣದಿಂದ ಆ ಬಾಣದ ಗತಿಯು ವರ್ಣನಾತೀತವು. ಆ ಹರಶರವು, ವರಾಹಾಕೃತಿಯಿಂದ ಮಹಾಮೇಘ ದಂತೆ ಕಪ್ಪಾದ ಮೂಕದಾನವನನ್ನಿರಿದು, ದಟ್ಟವಾದ ಹಿಮರಾಶಿಯಲ್ಲಿ ಕಿಂಪುರುಷರೂ, ನದಿಯಲ್ಲಿ ಜಲಚರಗಳೂ ಸೇರಿಕೊಳ್ಳುವಂತೆ ಭರದಿಂದ ಭೂಮಿಯನ್ನು ಪ್ರವೇಶಿಸಿ ಅಗೋಚರವಾಯಿತು.

ಕಿರಾತನ ಬಾಣವು ನೆಗೆಯುತ್ತಿದ್ದಾಗಲೆ ಗಾಂಡೀವಧನುಸ್ಸಿನಿಂದ, ನಖರವೆಂಬ ಲೋಹಾಗ್ರದಿಂದ ಭೀಕರವೆನಿಸಿ ಕುಪಿತಾಂತಕನ ತೋರ್ಬೆ

ಟ್ಟಿನಂತಿದ್ದ ನರವಿಶಿಖವು ಘೂರ್ಣಿಸುತ್ತ, ಗಗನಕ್ಕೆ ನೆಗೆಯಿತು. ತಾರಾಪಥದಲ್ಲಿ ಭರದಿಂದ ನೆಗೆದು ತೋರುವ ಉಲ್ಕೆಯಂತೆ ಪ್ರಜ್ವಲಿಸುತ್ತ, ಹಾರುವ ಪಕ್ಷಿಗಳ ಗುಂಪಿನಂತೆ ಧ್ವನಿಗೆಯ್ಯುತ್ತ, ಆ ದಿವ್ಯಶರವು ಸಾಗುತ್ತಿತ್ತು. ಅದು ಬಹು ಬೇಗನೆ ಗಾಂಡೀವವಿಮುಕ್ತವೆನಿಸಿ, ಅಂತರವನ್ನು ಸಾಧಿಸಿ, ಗುರಿಯನ್ನು ಭೇದಿಸಿತೆಂಬುದನ್ನು ಪ್ರೇಕ್ಷಕರ ಕಣ್ಮನಗಳು ಕಂಡುಕೊಳ್ಳಲಾರದೆ ಹೋದುದರಿಂದಲೇ ಲೋಕವದನ್ನು "ಆಶುಗ" ವೆಂಬ ಅನ್ವರ್ಥನಾಮದಿಂದ ಸಂಭಾವಿಸಿತು. ಆ ವಿಜಯನ ಶರವು ಹರಬಾಣದಂತೆಯೇ ವರಾಹವನ್ನು ಹೊಡೆಯುತ್ತ, ವಿಧ್ಯುಕ್ತಕರ್ಮವನ್ನು ಬಹುಸುಲಭವಾಗಿ ಸಾಧಿಸಿಕೊಳ್ಳುವ ಪೌರುಷದಂತೆ, ವಿಜಯೈಕಹೇತುವೆನಿಸಿ ಮೆರೆದುಕೊಂಡಿತು. ಅವಿವೇಕವ್ಯಥಾಶ್ರಮಗಳು ಧನವನ್ನೂ, ದಾರಿದ್ರ್ಯಲೋಭಗಳು ಭೃತ್ಯಾನುರಾಗವನ್ನೂ, ದೌಷ್ಟ್ಯಚಿತ್ತಚಾಂಚಲ್ಯಗಳು ವಿಜಿಗೀಷುವನ್ನೂ, ಬಹಳ ಬೇಗನೆ ಕೆಡಿಸುವ ಹಾಗೆ ಬಾಣಗಳೆರಡೂ ವರಾಹವನ್ನು ಮೂರ್ಛೆಗೊಳಿಸುತ್ತ ಕೆಡಹಿದುವು.

ಆಗ ಗಮನವೇಗದ ಸಂಭ್ರಮದಿಂದ ಭೂಮಿಗೆ ಬಿದ್ದುಹೋದ ಉಷ್ಣರಶ್ಮಿಯಂತೆ ರಕ್ತಮಯವಾಗಿ, ನಿಶಾದೇವಿಯ ಸಂತತಿಯಂತೆ ಮಬ್ಬಾಗಿ, ಗುಂಡಾಗಿ ದಿಂಡುಗೆಡೆದ ಘೋರಾರಣ್ಯದಂತೆ ಭೀಕರವಾಗಿ, ಖುರದಂಷ್ಟ್ರಾಗ್ರಗಳಿಂದ ಪಾಷಾಣವನ್ನು ಸೀಳುವ ಚಾಣದಂತೆ ಕಠಿಣೋತ್ತರವಾಗಿ, ಪ್ರಾಣೋತ್ಕ್ರಮಣದ ಯಾತನೆಯನ್ನು ಸಹಿಸಲಾರದೆ, ಸುಂಟರಗಾಳಿಯೆಬ್ಬಿಸುವ ಪ್ರಕೃತಿಕ್ಷೋಭೆಯಂತೆ ದುಷ್ಪರಿಣಾಮದ ನಿಟ್ಟುಸಿರಾಗಿ, ಭೂಧರವೆಂಬ ನಾಮಸಾದೃಶ್ಯವನ್ನು ಸಹಿಸದಾದೆಯಾ" ಎಂದು ಪಾರ್ಥನನ್ನು ಕಡೆಗಣಿಸಿ ಮೂದಲಿಸುವಂತೆ ವಿಕಾರದ ನೋಟವಾಗಿ ಬಿದ್ದುಕೊಂಡು 'ಅಕಟಕಟಾ' ಎಂದು ಸಂಕಟಪಡುತ್ತ ವರಾಹವು ಪ್ರಾಣಬಿಟ್ಟಿತು.

೧೯ ಶಬರನ ಸಂಧಾನ

ಅನೇಕದಿವ್ಯಶರಸಂಪನ್ನನಾದರೂ ವಿಜಯನು, ಸತ್ಪುರುಷನು ಪರೋಪಕಾರಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವಂತೆ ಕ್ಷಣ ಮಾತ್ರದಿಂದಲೇ ಲಕ್ಷ್ಯವನ್ನು ಭೇದಿಸಿ ತನಗೆ ವಿಜಯವನ್ನು ಸಂಪಾದಿಸಿ ಕೊಟ್ಟ ಬಾಣವನ್ನು ಸ್ವೀಕರಿಸಿಕೊಳ್ಳಬೇಕೆಂದು ಬಯಸಿದನು. ಬಾಣವು ಆತ್ಮಪೌರುಷವನ್ನು ಬಹಳವಾಗಿ ಪ್ರಕಟಿಸಿಕೊಂಡು ತನಗುಂಟಾದ ಗೌರವ ದಿಂದ ನಾಚಿ ತಲೆತಗ್ಗಿಸಿದಂತೆ ಹಂದಿಯ ಮೈಯಲ್ಲಿ ನಾಟಿ, ದುರ್ಜನನಲ್ಲಿ ತೋರಿದ ಉಪಕಾರದಂತೆ ತಿಲಾಂಶವಾದರೂ ಕಾಣಿಸಿಕೊಳ್ಳದೆ ಹುದುಗಿ ಕೊಂಡಿತು. ಆದರೂ ಅದನ್ನು ಪರಿಗ್ರಹಿಸಿಕೊಳ್ಳುವ ಸಲುವಾಗಿ, ಅಗಲಿ ಹೋದವನನ್ನು ಕಂಡಾಗ ಪ್ರೀತಿಯ ಕುಶಲಪ್ರಶ್ನೆಯೊಡನೆ ನಿರೀಕ್ಷಿಸು ವಂತೆ ಆತನದನ್ನು ಬಿಡದೆ ನೋಡುತ್ತಿದ್ದನು.

ಆ ವೇಳೆಗೆ, ಬೇಡರೊಡೆಯನ ಸಂದೇಶವನ್ನು ತಪಸ್ವಿಗೆ ತಿಳಿಸಬೇ ಕೆಂಬ ದೌತ್ಯವನ್ನು ವಹಿಸಿಕೊಂಡ ಬೇಡನೊಬ್ಬನು ಅಲ್ಲಿಗೆ ಬಂದು ಪ್ರೀತಿಪೂರ್ವಕವಾಗಿ ನಮಸ್ಕರಿಸುತ್ತ ಅರ್ಜುನನೊಡನೆ ಹೀಗೆ ಮಾತಾಡ ತೊಡಗಿದನು—ತಪಸ್ವಿಯೇ, ನೀನವಲಂಬಿಸಿರುವ ಶಾಂತತೆಯು ನಿನ್ನ ವಿನಯ ಸಂಪನ್ನತೆಯನ್ನು ಪ್ರಕಟಿಸುತ್ತಿದೆ. ನೀನು ಸಕಲ ಶಾಸ್ತ್ರಾ ಗಮಕೋವಿದನೆಂಬುದನ್ನು ಆಚರಣೆಯ ತಪಸ್ಸೇ ಸೂಚಿಸುತ್ತಿದೆ. ದೇವತೆಗಳಿಗೆ ಯೋಗ್ಯವಾದ ನಿನ್ನ ಆಕೃತಿವಿಶೇಷವು ಸತ್ಕುಲ ಪ್ರಸೂತನೆಂಬುದನ್ನು ತಿಳಿಸುತ್ತಿದೆ. ತಪಸ್ವಿಯಾಗಿಯೂ ನೀನು ಸಕಲ ಸಂಪತ್ತುಗಳಿಗೂ ನೆಲೆಯಾದ ವಿಭುಗಳ ಪ್ರಭಾವವುಳ್ಳವನು. ಏಕಾಕಿ ಯಾಗಿಯೂ ಮಂತ್ರಿಯೇ ಮೊದಲಾದ ಅಧಿಕಾರಿವರ್ಗದಿಂದ ಕೂಡಿದವ ನಂತೆ ಸಂತೋಷಯುಕ್ತನು. ಮಾತ್ರವಲ್ಲ, ಸಕಲಕಲಾಭಾಸುರನು. ಈ ಮಹೋನ್ನತಗಿರಿಶಿಖರದಲ್ಲಿ ಮುನಿವೃತ್ತಿಯನ್ನವಲಂಬಿಸಿಯೂ ನೀನು ಗೌರವದಿಂದ ಧರಣೀಶ್ವರರೆಲ್ಲರನ್ನೂ ತಿರಸ್ಕರಿಸುತ್ತ, ದೇವೇಂದ್ರನೊಬ್ಬನೇ ತ್ರಿಲೋಕಾಧಿಪತ್ಯವನ್ನು ನಿರ್ವಹಿಸುವಂತೆ ನೋಡಿಕೊಳ್ಳುತ್ತ, ಪ್ರಭಾವಾ ತಿಶಯದಿಂದ ಸ್ವಯಂ ಪ್ರಕಾಶಮಾನನಾಗಿ ಮೆರೆಯುತ್ತಿರುವೆ.

ರಜಸ್ತಮಗುಣಗಳೆಂಬ ಗುಣಗಳೆರಡನ್ನೂ ಜಯಿಸಿದವನಿಗೆ ಈಡೇರದ ಬಯಕೆಯಿಲ್ಲ. ನಿನಗೆ ಜಯಲಕ್ಷ್ಮಿಯೊಲಿದುದರಲ್ಲಿ ಆಶ್ಚರ್ಯವಿಲ್ಲ. ಮೋಕ್ಷಲಕ್ಷ್ಮಿಯಾದರೂ ನಿನಗೆ ದೂರವಾಗಿಲ್ಲ. ಸ್ವಪ್ರಭೆಯಿಂದ ಭಾಸ್ಕರನನ್ನೇ ತಿರಸ್ಕರಿಸುವ ಪ್ರಭಾವಶಾಲಿಯೆನಿಸಿದ ನೀನು, ಸೂಕರವನ್ನು ಸಂಹರಿಸಿದ ನಮ್ಮೊಡೆಯನ ಬಾಣವನ್ನು ಹೀಗೆ ಬಲಾತ್ಕರಿಸಿ ತೆಗೆದುಕೊಳ್ಳುವುದು ಸರಿಯಲ್ಲ. ಮನುವೇ ಮೊದಲಾದ ಸತ್ಪುರುಷರು ನ್ಯಾಯಾವಲಂಬಿಗಳಾಗಿದ್ದುದರಿಂದಲೇ ಆದರ್ಶಪ್ರಾಯರೆನಿಸಿದರು. ನಿನ್ನಂತಹ ಮಹಾಪುರುಷರು ನ್ಯಾಯಕ್ಕೆ ವಿರೋಧವಾಗಿ ವರ್ತಿಸಿದರೆ ಮತ್ತದನ್ನು ಅನುಸರಿಸುವವರಾರು? ಸನ್ಮಾರ್ಗವು ಖಿಲವಾಗಬಹುದೆಂಬ ಭೀತಿಯಾದರೂ ನಿನ್ನ ಚಿತ್ತವನ್ನೆಚ್ಚರಿಸುವುದಿಲ್ಲವೆ? ಅನರ್ಥಕಾರಿಯಾದ ದುರ್ಮಾರ್ಗವನ್ನು ಜನರು ಬಾಲ್ಯದಿಂದಲೇ ಬಿಡಬೇಕು; ಅಂಟಿಕೊಂಡ ಚಟವನ್ನು ಪರಿಹರಿಸುವುದು ಬಹುಕಷ್ಟಕರವೆಂದು ಆತ್ಮಜ್ಞಾನದ ಪ್ರಭಾವದಿಂದ ಜನ್ಮಮೃತ್ಯುಗಳನ್ನು ಪರಿಹರಿಸಿಕೊಂಡ ಯೋಗಿಗಳ ಉದ್ಘೋಷಣೆಯು ಸಾಮಾನ್ಯವಲ್ಲ. ಯಾರಾದರೂ ಶೀಲವನ್ನು ಕೆಡಿಸಿಕೊಳ್ಳಬಾರದು. ತಪಸ್ವಿಗಳಿಗೆ ಧರ್ಮಸಾಧಕವೂ, ಸುಖಾರ್ಥಿಗಳಿಗೆ ಕಾಮಾರ್ಥಸಾಧಕವೂ, ಯೋಗಿಗಳಿಗೆ ಮೋಕ್ಷಸಾಧಕವೂ ಎನಿಸಿದ ಶೀಲವು ಯಾರಿಗೂ ಅಪ್ರಿಯವಲ್ಲ. ಚತುರ್ವರ್ಗಗಳನ್ನು ಸಂಪಾದಿಸತಕ್ಕ ಸೌಶೀಲ್ಯವನ್ನು ನೀನೆಂತೂ ಕಡೆಗಣಿಸಬಾರದು.

ಪೂಜ್ಯನೆ! ನಮ್ಮೊಡೆಯನ ಬಾಣವೂ ನಿನ್ನ ಬಾಣದಂತೆಯೇ ಇರುವುದರಿಂದ ಆ ವ್ಯತ್ಯಾಸವನ್ನು ಗಮನಿಸದೆ ತನ್ನದೆಂಬ ಭಾವನೆಯಿಂದ ನೀನದನ್ನು ಪರಿಗ್ರಹಿಸಬೇಕೆಂದು ತೊಡಗಿರಬಹುದು. ಅಲ್ಲವಾದರೆ, ಅನ್ಯರ ಬಾಣವನ್ನು ತೆಗೆದುಕೊಂಡರೆ ಅದರಿಂದಾಗುವುದೇನೆಂಬ ಧೈರ್ಯದಿಂದ ನೀನು ಬೇಕುಬೇಕೆಂದೇ ಹೀಗೆ ಮಾಡುತ್ತಿರಬಹುದು. ಬೇರೆಯವರು ಹೊಡೆದ ಮೃಗವನ್ನು ಕೊಲ್ಲುವುದು ಲಜ್ಜಾಸ್ಪದವೆಂದು ಲೋಕದಲ್ಲಿ ರೂಢಿಯಿದ್ದರೂ ನಾಚಿಕೆಯಿಲ್ಲದವನಂತೆ ನೀನು ಮೃಗವನ್ನು ಕೆಡಹಿದೆಯಷ್ಟೆ! ಬಲ್ಲವರು ನಮ್ಮೊಡೆಯನ ಚರಿತ್ರೆಗಳನ್ನು ಕೇಳುತ್ತ ಸದಾ ಹರ್ಷಚಿತ್ತರಾಗುವರು. ಆತನ ಕಥೆಗಳನ್ನು ಕೇಳಿ ಸ್ವಾಭಿಮಾನಿಗಳು ನಾಚುತ್ತಿರು

ವುದರಿಂದ ಲೋಕದಲ್ಲಿ ಆತನೇ ಪ್ರಥಮಪುರುಷನೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಸಂದರ್ಭವೊದಗಿದ ಕಾರಣ ನಾನು ಹೀಗೆ ಹೇಳ ಬೇಕಾಯಿತಲ್ಲದೆ, ಎಂದೆಂದಿಗೂ ಆತ್ಮಶ್ಲಾಘನೆಯಿಲ್ಲದ, ಪರದೋಷಪ್ರ ಸ್ತಾಪವಿಲ್ಲದ ನಮ್ಮ ಸ್ವಾಮಿಯ ಗುಣವು ಅನ್ಯಥಾ ಪ್ರಕಟವಾಗುವ ಸಂಭವವಿಲ್ಲ. ಆಗ ನಮ್ಮ ನಾಯಕನು ನಿಶಿತಾಸ್ತ್ರದಿಂದ ಈ ಮೃಗವನ್ನು ಹೊಡೆಯದಿರುತ್ತಿದ್ದರೆ, ಗರ್ವದಿಂದ ನಮ್ಮ ಮೇಲೆ ಬಿದ್ದು ಎಂತಹ ಅನ ರ್ಥವನ್ನುಂಟುಮಾಡುತ್ತಿತ್ತೋ ಹೇಳಲು ಸಾಧ್ಯವಿಲ್ಲ. ಇನ್ನು ಮುಂ ದಾದರೂ ನಿನಗೆ ಅಂತಹ ಅನಿಷ್ಟವು ಸಂಭವಿಸದಿರಲಿ! ವಜ್ರದಂತೆ ಕಠಿಣ ವಾದ ಶರೀರದ, ದುರ್ವಾರಗಮನದ, ಸೂಕರವನ್ನು ಬಾಣವೊಂದರಿಂ ದಲೇ ಹೊಡೆದು ಕೆಡಹಲು ನಮ್ಮೊಡೆಯನೊಬ್ಬನೇ ಸಮರ್ಥನಲ್ಲದೆ, ಅನ್ಯ ರಿಂದ ಸಾಧ್ಯವಿಲ್ಲ.

ಈ ರೀತಿಯಿಂದ ಮೃಗವನ್ನು ಕೊಂದು ನಿನ್ನ ಪ್ರಾಣಸಂಕಟವನ್ನು ನಿವಾರಿಸಿದ ಜೀವದ ಗೆಳೆಯನನ್ನು ವಿರೋಧಿಸಬೇಡ! ಸಜ್ಜನರಲ್ಲಿರತಕ್ಕ ಕೃತಜ್ಞತೆಯನ್ನು ತೊರೆಯಬೇಡ! ಕೃತಘ್ನತೆಯೆಂಬುದು ಕೇಡಿನ ಬೀಡು! ಲೋಕದಲ್ಲಿ ದ್ರವ್ಯವನ್ನು ಸಂಪಾದಿಸಬೇಕಾದರೆ ಬಹಳವಾಗಿ ಶ್ರಮಪಡ ಬೇಕು. ಹಾಗೆ ಸಂಪಾದಿಸಿದರೂ ಅದನ್ನು ಕಾಪಾಡಿಕೊಳ್ಳುವ ಕಷ್ಟ ಹೇಳಿ ತೀರದು. ಸ್ಥಿರಸಂಪತ್ತೆನಿಸಿದ ಭೂಮಿಯನ್ನೂ ಕೂಡ ವಿರೋಧಿ ಗಳು ಬಲಾತ್ಕರಿಸುವರು. ಆದುದರಿಂದ ಸಂಪತ್ತು ಯಾವಾಗಲೂ ಚಂಚಲವು. ಇಂತಹ ಅನರ್ಥಕಾರಿಯಾದ ಅರ್ಥಕ್ಕಿಂತ ಮಿತ್ರಲಾಭವೇ ಮೇಲು. ಉಪಕಾರವೊಂದರಿಂದಲೇ ಅದು ಲಭಿಸುವುದು. ಹಾಗೆ ದೊರೆತುದನ್ನು ಕೃತಜ್ಞತೆಯಿಂದ ಬಹು ಸುಲಭವಾಗಿ ರಕ್ಷಿಸಬಹುದು. ಲೋಕದಲ್ಲಿ ಪರ್ವತದಂತೆ ಸ್ಥಿರನೆನಿಸಿದ ಅಧೀಶ್ವರನು ಸಿಗಬೇಕೆಂದು ಹುಡುಕಿಕೊಂಡು ಹೋದರೂ ದುರ್ಲಭನಾಗಿರುವಾಗ, ಸನ್ಮಿತ್ರನಂತೆ ತಾನಾಗಿ ನಿನ್ನ ಬಳಿಗೆ ಬರತಕ್ಕವನನ್ನು ವಿಚಾರಮಾಡದೆ ತಿರಸ್ಕರಿಸುವುದು ಸರಿಯಲ್ಲ.

ಮೋಕ್ಷಾರ್ಥಿಗಳು ಶಸ್ತ್ರಧಾರಿಗಳಲ್ಲದುದರಿಂದ ನೀನು ಜಯಾಭಿ ಲಾಷೆಯಿಂದಲೇ ತಪಸ್ಸುಮಾಡುವ ಹಾಗೆ ತೋರುತ್ತಿದೆ. ಆದುದರಿಂದ

ನಮ್ಮೊಡೆಯನ ಸ್ನೇಹವನ್ನು ಸಂಪಾದಿಸಿಕೊಂಡರೆ, ಈ ತಪಸ್ಸಿನ ಸಂಪೂರ್ಣಫಲವೂ ನಿನಗೆ ತಪ್ಪದೆ ದೊರಕುವುದು. ಆತನು ನಿನಗೆ ಸ್ನೇಹಿತನಾಗಿರಲು ತಕ್ಕವನೇ ಸರಿ. ಕುದುರೆಗಳಿಗೆ ಹೆಸರುವಾಸಿಯಾದ ಗಾಂಧಾರ ಕಾಶ್ಮೀರ ಮೊದಲಾದ ಪ್ರದೇಶಗಳೂ, ಗಜಘಟೆಗಳಿಗೆ ಜನ್ಮಭೂಮಿಗಳಾದ ವಿಪಿನಸ್ಥಲಗಳೂ, ಅಸಂಖ್ಯರತ್ನರಾಶಿಗಳೂ ಆತನ ಸ್ವಾಧೀನದಲ್ಲಿರುವುವು. ಈ ಸ್ವರ್ಣಮಯವಾದ ಬಾಣವೊಂದರಿಂದ ಆತನಿಗೆ ವಿಶೇಷಲಾಭವೇನೂ ಇಲ್ಲವಾದರೂ, ಮರ್ಯಾದೆಯ ಉಲ್ಲಂಘನೆಯನ್ನು ಮಾತ್ರ ಅವನೆಂದಿಗೂ ಸಹಿಸಲಾರನು. ಬಾಣದ ಸಂಗತಿ ಹಾಗಿರಲಿ! ಪರರು ಗರ್ವದಿಂದ ಅವಮಾನಪಡಿಸುವ ಸಂದರ್ಭವುಂಟಾದರೆ, ಆ ಮಹಾತ್ಮನು ಕಿಂಚಿತ್ತಾದ ಧೂಳಿಯ ಸಂಗತಿಯಲ್ಲಾದರೂ ಬಹಳವಾಗಿ ಕ್ಷೋಭಗೊಳ್ಳುವನು. ಅಂಗಲಾಚಿ ಬೇಡಿಕೊಂಡರೆ, ತನ್ನ ಜೀವಿತವನ್ನು ಬೇಕಾದರೂ ದಾನ ಮಾಡಬಲ್ಲನು. ದ್ರವ್ಯದ ವಿಷಯದಲ್ಲಿ ಅವನೆಂದೆಂದಿಗೂ ನಿರ್ಲಕ್ಷ್ಯನೇ ಸರಿ. ಆದುದರಿಂದ ನೀನೀಗ ಸರಿಯಾಗಿ ಯೋಚಿಸಿಕೊಳ್ಳಬೇಕು! ಈ ಬಾಣವನ್ನಾತನಿಗೆ ಕಳುಹಿಸಿಕೊಡಬೇಕು! ಶ್ರೀ ರಾಮಚಂದ್ರಸುಗ್ರೀವರೊಳಗೆ ಬಲಿತ ಸಖ್ಯದಂತೆ ನಿಮ್ಮಿಬ್ಬರೊಳಗೂ ಪರಸ್ಪರವಿಶ್ವಾಸವು ನೆಲಸಬೇಕು ಹಾಗೆ ನೆಲಸಿದ ಸಖ್ಯವು ಲೋಕವಿಖ್ಯಾತವೆನಿಸಬೇಕು!

ನಾವಾದರೂ ನಿನ್ನೊಡನೆ ಅಲ್ಲಸಲ್ಲದ ಮಿಥ್ಯಾವಾದವನ್ನು ಹೂಡಬಾರದು. ತಪಸ್ವಿಯಾದ ನಿನಗೆ ಶರವಿಷಯದಲ್ಲಿ ಅಂತಹ ಆಸ್ಥೆಯೇನು? ನಾವು ವಾಸಿಸುವ ಬೆಟ್ಟದಲ್ಲಿ ವಜ್ರಾಯುಧವನ್ನು ಮೀರಿಸುವ ಸಾವಿರಾರು ಬಾಣಗಳಿರುವುವು. ಅವುಗಳಿಂದ ನಿನಗೆ ಹೆಚ್ಚಿನ ಪ್ರಯೋಜನವಿರುವುದಾದರೆ ನೀನು, ಬೆಟ್ಟದೊಡೆಯನಾದ ನಮ್ಮ ಸ್ವಾಮಿಯನ್ನು ಕೇಳಿಕೊಳ್ಳಬಹುದು. ನಿನ್ನ ಹಾಗಿರುವ ಸನ್ಮಿತ್ರನು ಹೋಗಿ ಯಾಚಿಸಿಕೊಂಡರೆ ಅವನು ಒಲ್ಲೆನೆನ್ನುವ ಹಾಗಿಲ್ಲ. ಬೇಕಾದರೆ ಕೂಡಲೆ ಲೋಕವನ್ನಾದರೂ ಜಯಿಸಿಕೊಡಬಲ್ಲನು. ಸಕಲವನ್ನೂ ಬಲ್ಲವನಾದ ಬಿಲ್ಲರೊಡೆಯನು, ಪರೋಪಕಾರವೇ ಸ್ಥಿರವಾದ ಸಂಪತ್ತೆಂಬ ಗ್ರಹಿಕೆಯುಳ್ಳವನಾದ್ದರಿಂದ ಬೇಡಿಕೆಯನ್ನೀಡೇರಿಸತಕ್ಕವನು. ಯಾಚನೆಯನ್ನಲ್ಲಗಳೆದರೆ, ಅರ್ಥಿಗಳ ಚಿತ್ತವು ಹೇಗೆ ತಳಮಳಿಸಬಹುದೆಂಬುದನ್ನು ಸ್ವತಃ ಬಲ್ಲವನಾದುದರಿಂದ,

ನೀನಾತನ ವಿಷಯದಲ್ಲಿ ಯಾಚನೆಗೆ ಭಂಗವಾಗಬಹುದೆಂಬ ಸಂದೇಹ ವನ್ನು ತಂದುಕೊಳ್ಳಬೇಡ. ಲೋಕದಲ್ಲಿ ಸಾಮರ್ಥ್ಯಶಾಲಿಗಳು ಶ್ರೀಮಂತ ರಲ್ಲಿರುವ ದ್ರವ್ಯವನ್ನು ಬಲಾತ್ಕರಿಸಿ ಸೆಳಕೊಳ್ಳುವರು; ಅಥವಾ ಮಿತ್ರರೆನಿಸಿ ಪ್ರೀತಿಯಿಂದಲೇ ಕಸಿದುಕೊಳ್ಳುವರು. ಇವೆರಡು ಬಗೆಯ ವಿಧಾನಗಳನ್ನೂ ಅವಲಂಬಿಸದೆ, ಅರ್ಥವನ್ನಾರ್ಜಿಸಬೇಕೆಂದು ಧನಿಕರೊಡನೆ ಯಾಚಿಸಿಕೊ ಳ್ಳುವುದರಿಂದ, ಅನರ್ಥದ ಪರಿಣಾಮವಲ್ಲದೆ ಪ್ರಯೋಜನವಿಲ್ಲ. ತಪಸ್ವಿಗಳ ಕುರಿತು ವಿಚಾರಮಾಡಿ ನೋಡಿದರೆ–ಶಸ್ತ್ರವಿದ್ಯೆಯಲ್ಲಿ ನಿಪುಣನೆನಿಸಿ, ಭುಜ ಬಲಸಂಪನ್ನನೆನಿಸಿ, ವೀರಪುಂಗವನೆಂಬ ಕೀರ್ತಿಯನ್ನು ಗಳಿಸಿದವನು ಭಾರ್ಗವರಾಮನೊಬ್ಬನಲ್ಲದೆ, ಇನ್ನಾರೂ ತೋರಿಬರುವುದಿಲ್ಲ. ತಪಸ್ವಿ ಯಾದುದರಿಂದ ನೀನಿಂದಾ ಮೈತ್ರಿಯಿಂದ ನಡಕೊಳ್ಳುವುದೇ ಮೇಲೆ ನಿಸುವುದು.

ನಮ್ಮ ಯಜಮಾನನು ಬೆನ್ನಟ್ಟಿ ಬಂದು ಹೊಡೆದ ಮೃಗವನ್ನು ನೀನು ಹೊಡೆದು ಕೆಡಹಿದುದು ನಿಜವು. ಅದರಿಂದ ನಿನ್ನಲ್ಲಿ ಸಹಜವಾಗಿರುವ ಚಾಪಲ್ಯವು ಸ್ಫುಟವಾಗುವುದು. ಅವಿಚಾರಕಾರಿಗಳ ದೋಷವನ್ನು ಅಜ್ಞತೆಯೇ ಮರೆಯಿಸುವುದೆಂಬ ಮಾತಿಗನುಸಾರವಾಗಿ, ನಿನ್ನ ಕರ್ತವ್ಯ ವನ್ನು ಆತನು ತಪ್ಪೆಂದೆಣಿಸದೆ, ಅವಿಚಾರಕಾರಿಯೆಂದು ಮಾತ್ರ ತಿಳಿದು, ನಿನ್ನನ್ನು ತಪ್ಪದೆ ಮನ್ನಿಸುವನು. ಸತ್ಕುಲದಲ್ಲಿ ಜನಿಸಿ, ಜಟಾವಲ್ಕಲ ಗಳನ್ನು ಧರಿಸಿ, ನಿಯಮವನ್ನನುಸರಿಸಿ, ತಪಸ್ವಿಯೆನಿಸಿರುವ ನೀನು ಇನ್ನೆಂದಿಗೂ ಹೀಗೆ ವಿಪರೀತವಾಗಿ ನಡಕೊಳ್ಳಬೇಡ. ಅನ್ಯಾಯವಾಗಿ ವರ್ತಿಸುವ ತಿಳಿಗೇಡಿಗೆ ಇಹಪರಗಳಲ್ಲಿಯೂ ಕೇಡು ತಪ್ಪಲಾರದು. ವಿಚಾರಮಾಡಿ ನೋಡಿದರೆ, ಪ್ರಾಣಿಹಿಂಸೆಯ ಮೂಲಕವಾದ ಹವ್ಯಾದಿ ಗಳಿಂದ ದೇವತೆಗಳನ್ನೂ, ಕವ್ಯಾದಿಗಳಿಂದ ಪಿತೃಗಳನ್ನೂ ತೃಪ್ತಿಪಡಿಸು ವುದು ನಮ್ಮ ದೇಶದ ಪುರಾತನಪದ್ಧತಿಯು. ಅದಕ್ಕನುಸಾರವಾಗಿ ನೀನು ದೇವತೆಗಳನ್ನಾಗಲಿ, ಪಿತೃಗಳನ್ನಾಗಲಿ, ತೃಪ್ತಿಪಡಿಸಲು ತೊಡಗಿರು ವಂತೆ ನನಗನಿಸುವುದಿಲ್ಲ. ಭರದಿಂದ ಓಡಿ ಬರುತ್ತಿದ್ದ ವರಾಹಕ್ಕೆ ತೊಲಗಿ ದಾರಿ ಬಿಡಬೇಕಾಗಿದ್ದ ನೀನು ಬಾಣಹೊಡಿರುವುದು ಬಲು ಸೋಜಿಗದ ಸಂಗತಿಯು. ಯೋಗಿಯಾಗಿರುವ ನೀನು ಬಲು ಸಜ್ಜನನು. ಯಾರಾ

ದರೂ ಅವಿಚಾರಕಾರಿಗಳ ದುಡುಕನ್ನು ಎಂದಿಗೂ ಸಹಿಸಲಾರರು. ಆದುದರಿಂದ ನೀನು ಇನ್ನಾದರೂ ಚಾಪಲ್ಯವನ್ನು ಬಿಟ್ಟುಬಿಡು. ಲೋಕದಲ್ಲಿ ಪ್ರತಿಷ್ಠೆಗೆ ಬಂದ ಮಹಾನುಭಾವರು ಚಾಪಲ್ಯಕ್ಕೊಳಗಾದರೆ, ಅಂಬುಧಿಯು ಪ್ರಳಯಕಾಲದ ಬಿರುಗಾಳಿಗೆ ಕ್ಷೋಭೆಗೊಳ್ಳುವಂತೆ ತಳಮಳಿಸದೆ ಇರಲಾರರು.

ನಮ್ಮೊಡೆಯನು ಬೆಟ್ಟದ ಜೀವಿಯೆನಿಸುವ ಸಾಮಾನ್ಯನಾದ ಬೇಡನೆಂದು ತಿಳಿದುಕೊಳ್ಳಬೇಡ. ಆತನು ಶಸ್ತ್ರವಿದ್ಯಾಪರಿಣತನು; ಮಾತ್ರವಲ್ಲ, ನಿಗ್ರಹಾನುಗ್ರಹಸಮರ್ಥನು. ಪೊಡವಿಯೊಡೆತನವನ್ನು ಮಾಡುತ್ತಿರಬೇಕೆಂದು ಬಿಡೌಜನು ಬೇಡಿಕೊಂಡ ಮೇರೆಗೆ ಜಗದೊಡೆಯನೆನಿಸಿದ ಆತನಿಗೆ ಬೆಟ್ಟವೇ ಬೀಡೆನಿಸಿತು. ಆದುದರಿಂದಲೇ ಅವನು "ಸಹಜವಾದ ಚಾಪಲ್ಯದಿಂದ ಬಂದು ಹೋದ ವರಾಹಸಂಹಾರರೂಪವಾದ ಮುನಿಯ ಅಪರಾಧವನ್ನು ಮನ್ನಿಸಿರುವೆನು ಎಂದು ನನ್ನೊಡನೆ ಹೇಳಿಕಳುಹಿದನು. ಶೀಲಸಂಪನ್ನನಾದ ನೀನು ಆತನ ಶರವನ್ನು ಪೂಜ್ಯಬುದ್ಧಿಯಿಂದ ಸಮರ್ಪಿಸಿ, ಎಂದೆಂದಿಗೂ ಕುಂದದ ಅತುಲೈಶ್ವರ್ಯವನ್ನನುಭವಿಸುತ್ತಿರು.

ಸಜ್ಜನಸಮಾಗಮವೆಂಬುದು ಸಾಮಾನ್ಯವಲ್ಲ! ಅದು ದೊರಕಬೇಕಾದರೆ ಅಗಣ್ಯಪುಣ್ಯವಿರಬೇಕು! ಅದು ಸುಯೋಗದಿಂದ ಕೈಗೂಡಿದರೆ ಅದರಿಂದ ಆತ್ಮಹಿತವು ಸಂಭವಿಸುವುದು! ಅದರಿಂದ ವಿನಯಾದಿಸದ್ಗುಣಗಳು ಒಡಮೂಡುವುವು! ಮಾತ್ರವಲ್ಲ, ಅದರಿಂದ ದುರಿತಗಳೆಲ್ಲವೂ ಪರಿಹಾರವಾಗುವುವು. ಹೀಗೆ ನಾನಾಫಲದಾಯಕವಾದ ಆರ್ಯಸಂಗಮದಲ್ಲಿಯೂ ನಿನಗೆ ಯೋಚನೆಯೇ?

ನೀರಾಕರವು ಸರ್ಪಗಳಂತಿರುವ ತರಂಗಮಾಲೆಗಳಿಂದ ಸೇರಿ ಭೋರ್ಗರೆಯುತ್ತ ಗಂಭೀರವಾಗಿ ಮೆರೆಯುವುದಾದರೂ ಸೇತುನಿವಾರಿತವಾಗಿರುವಂತೆ ಆ ಜಗದೊಡೆಯನು ಕೃತಾಂತದಂಷ್ಟ್ರಗಳಂತೆ ತೀಕ್ಷ್ಣಗಳಾದ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡಿರುವ ಬೇಡಪಡೆಗಳ ನಡುವೆ ಉದ್ಧತನಾದರೂ ಮರ್ಯಾದೆಯನ್ನನುಸರಿಸುತ್ತ ಮುಂದೆ ತೋರುವ ಬಳ್ಳಿವಾಡದ ನಡುವೆ ವಿರಾಜಿಸುವನು. ಕಣ್ದೆರೆದು ನೋಡು! ಆತನ ಕೈಯಲ್ಲಿ, ಶೋಭೆಯಿಂದ ಮಹೇಂದ್ರಧ್ವಜವನ್ನು ತಿರಸ್ಕರಿಸುವ ಮಹಾಕಾರ್ಮುಕವು

ಮೌರ್ವಿಯೊಡನೆ ಸಿದ್ಧವಾಗಿ ಮೆರೆಯುತ್ತಿರುವುದು. ಮತಿವಂತನೇ, ತಡ ಮಾಡದೆ ಹೊರಡು! ಅವನ ಇಷ್ಟಸಂಪಾದನೆಯಿಂದ ನಿನ್ನ ಮನೋಭೀಷ್ಟವು ನೆರವೇರುವುದರಲ್ಲಿ ತಿಲಾಂಶವಾದರೂ ಸಂಶಯಬೇಡ!

ಹೀಗೆ ಬೇಡನು ಬಗೆವಗೆಯ ಉತ್ತೇಜಕವಾಕ್ಯಗಳಿಂದ ಕೌಂತೇಯನ ಚಿತ್ತವನ್ನು ಹದಗೆಡಿಸಿ ಹೊಡೆದೆಬ್ಬಿಸಬೇಕೆಂದು ಎಡೆಬಿಡದೆ ಬಿರುನುಡಿಗಳನ್ನಾಡಿದನು.

---

೨೦ ಅರ್ಜುನನ ನಿರ್ಧಾರ

ಮರ್ಯಾದೆಯ ಮೇರೆಯನ್ನು ಮೀರಿ ನುಡಿದ ಬೇಡನ ಮಾತುಗಳಿಂದ ಪರ್ವತದಂತೆ ಸ್ಥಿರಗಂಭೀರವಾಗಿ ಮೆರೆಯುತ್ತಿದ್ದ ಅರ್ಜುನನ ಮನಸ್ಸಿನ ಏಕಾಗ್ರತೆಯು ಚಲಿಸಿತು. ಮೂರು ಲೋಕದ ಗಂಡನಾದ ತನ್ನ ಅಗ್ಗಳಿಕೆಯೆಂಬ ಬಾವುಟವನ್ನೆತ್ತಿ ತೋರುತ್ತ ಉತ್ತಮರೆತ್ತೆತ್ತಲೂ ನಿಶ್ಚಲಚಿತ್ತರೆಂಬ ತತ್ವವನ್ನು ಬೇಡನ ಮನದಲ್ಲೊಡಮೂಡಿಸುವಂತೆ ಆತನ ಮನೋಮಂದಿರದಲ್ಲಿ ವಿಶ್ರಮಿಸುತ್ತಿದ್ದ ಸ್ಥೈರ್ಯಧೈರ್ಯಗಳು ಥಕ್ಕನೆ ಎಚ್ಚರಗೊಂಡುವು. ಕೂಡಲೆ ವಚನಸಾರವನ್ನು ಸಂಗ್ರಹಿಸುವುದರಲ್ಲಿ ಸಮರ್ಥನಾದ ಪಾರ್ಥನು ಆ ದೌತ್ಯದ ಭಾವವನ್ನರಿತುಕೊಂಡು ಸಮಯಕ್ಕೆ ತಕ್ಕ ಹಾಗೆ ಪ್ರಶಾಂತಗಂಭೀರವಾದ ರೀತಿಯಿಂದ ವನೇಚರನೊಡನೆ ಹೀಗೆಂದನು—ಬೇಡನೆ ಕೇಳು! ವರ್ಣಾಭರಣಗಳ ಹೆಚ್ಚಳದಿಂದ ಸೌಂದರ್ಯವೇ ಮೂರ್ತಿಗೊಂಡಂತೆ ವಿರಾಜಿಸುತ್ತ, ಮಂಜುಭಾಷಣದಿಂದ ವೈರಿಗಳ ಮನಸ್ಸನ್ನಾದರೂ ಸೆಳಕೊಳ್ಳುತ್ತ, ಗಂಭೀರವಾದ ನಡಿಗೆಯಿಂದ ಪ್ರಸನ್ನಳಾಗಿ ಮೆರೆಯುತ್ತ, ಬರುವ ನಾರೀರತ್ನದ ಹಾಗೆ ಸ್ಪಷ್ಟವಾದ ಉಚ್ಚಾರಣೆಯಿಂದ ಸುಶ್ರಾವ್ಯವೂ, ಶಾಂತತೆಯಿಂದ ಸಮಸ್ತ ಚಿತ್ತಪ್ರಸಾದಕವೂ, ಅರ್ಥಗೌರವದಿಂದ ವಿದ್ವಜ್ಜನಾದರಣೀಯವೂ ಎನಿಸುವ ಜಾಣ್ಮೆಯ ವಾಣಿಯು ಭಾಗ್ಯಶಾಲಿಗಳ ಪುಣ್ಯಪ್ರಭಾವದಿಂದಲೇ ಉದಯಿಸುವುದು. ಭಾವನೆಗಳನ್ನು ಮನಸ್ಸಿಗೆ ತಂದುಕೊಳ್ಳತಕ್ಕವರು ಹಲವರಿರ

ಬಹುದಾದರೂ, ಅವುಗಳನ್ನು ಮಾತಿನ ಮೂಲಕ ಪ್ರಕಟಪಡಿಸುವುದು ಕೆಲವರಿಂದಲೇ ಸಾಧ್ಯವು. ವಾಗ್ಮಿಗಳೆಂಬ ಮನ್ನಣೆಗೆ ಯೋಗ್ಯರಾದವರಲ್ಲಿಯೂ ಕೂಡ ಗೂಢವಿಷಯವನ್ನು ಸ್ಪಷ್ಟವಾಗುವಂತೆ ವಿವರಿಸಿ ತಿಳಿಸುವ ನೈಪುಣ್ಯವು ವಿರಳವಾಗಿ ಕೆಲವರಲ್ಲಿ ಮಾತ್ರ ತೋರಬಹುದು. ಅಂತಹ ಪುಣ್ಯಪುರುಷರೇ ವಿದ್ವನ್ಮಂಡಲಿಯಲ್ಲಿ ಪ್ರಮುಖರಾಗುವರು. ಪಂಡಿತರ ಕೂಟದಲ್ಲಿ ಅರ್ಥಗೌರವದ ಕಡೆಗೆ ಮನಸ್ಸನ್ನು ಹರಿಯಬಿಡುವವರು ಕೆಲವರು; ಇತರರು ಶಬ್ದಸಾಮರ್ಥ್ಯದ ವಿಷಯದಲ್ಲಿ ಮೆಚ್ಚುಗೆಯುಳ್ಳವರು. ಬಲ್ಲವರ ಬಗೆಯು ಹೀಗೆ ನಾನಾವಿಧವಾಗಿ ತೃಪ್ತಿಹೊಂದುವುದಾದರೂ, ಒಮ್ಮೆಗೇ ಸರ್ವರನ್ನೂ ತೃಪ್ತಿಪಡಿಸುವಂತೆ ಮಾತಾಡಬಲ್ಲವರು ದುರ್ಲಭರು.

ಆದರೂ ಒಂದೇ ಸಮಯದಲ್ಲಿ ಸರ್ವರನ್ನೂ ತೃಪ್ತಿಗೊಳಿಸುವಂತೆ ಮಾಡಿದ ಈ ಸರಸಭಾಷಣದಿಂದ ನಿನ್ನ ಧನ್ಯತೆಯು ತನ್ನಂತೆಯೇ ವ್ಯಕ್ತವಾಗುವುದು. ದೌತ್ಯದ ಭಾರವನ್ನು ನಿನ್ನ ತಲೆಗೆ ಹೇರಿದ ವಿಭುವಿನ ಅಭಿಮತದ ಮರ್ಮವನ್ನರಿತುಕೊಂಡು ಕೈಗೊಂಡ ಸಂದೇಶವನ್ನು ಶಾಂತಿವಿನಯಗಳ ಪಾಲನೆಯೊಂದಿಗೆ ಹೀಗೆ ಧೈರ್ಯದಿಂದ ವಿಶದಪಡಿಸಿದ ನಿನ್ನ ದೌತ್ಯವೂ; ಪ್ರಭುಭಕ್ತಿಯೂ, ಕಾರ್ಯನಿರ್ವಹಣಶಕ್ತಿಯೂ ಪ್ರಭಾವಯುತವಾಗಿ ಸದಾ ಸಂಸ್ತುತ್ಯವೆನಿಸುವುದು. ಚಿತ್ತವನ್ನು ಮೋಹಗೊಳಿಸುವಂತೆ ಕೇಳಿಸಿದ ನಿನ್ನ ಸಾಮವು ಅಸಾಮಾನ್ಯವು. ಸ್ಥೈರ್ಯವನ್ನು ಕೆಡಿಸುವಂತೆ ನಿವೇದಿಸಿದ ಭೀತಿಯು ಕಷ್ಟಸೂಚಕವಾದರೂ ನೀತಿಯುಕ್ತವು. 'ಹೇಗೂ ನಮ್ಮೊಡೆಯನ ಬಾಣವನ್ನು ಕೊಡಬೇಕೆ'ಂಬ ಚತುರೋಪಾಯಪೂರ್ವಕವಾದ ಕೇಳಿಕೆಯಲ್ಲಿ ಅಡಗಿರುವ ನ್ಯಾಯವು ತಾನಾಗಿ ಸ್ಫುಟವಾಗುವುದು. "ಈ ಶರವು ತಪಸ್ಸಿದ್ಧಿಯ ಕಾರ್ಯಕ್ಕೆ ಅಂತರಾಯವು; ಇದರ ಪರಿಗ್ರಹವು ನಮ್ಮ ವಿಭುವಿನ ಅಭಿಮಾನನಿಗ್ರಹವು; ಅದರ ಪರಿಣಾಮವೇ ಭೀಕರ ವಿಗ್ರಹವು" ಎಂದು ಉಚ್ಚರಿಸಿದ ನಿನ್ನ ಮೆಚ್ಚಿನ ಎಚ್ಚರವು ಉಚ್ಚತರವಾದ ಧ್ಯೇಯವನ್ನವಲಂಬಿಸಿರುವುದು. ಸ್ವಾಮಿಯ ಹಿತಸಾಧನೆಯೇ ಭೃತ್ಯನ ಕರ್ತವ್ಯವೆಂದಿರುವಾಗ ಸುಖದುಃಖಗಳಲ್ಲಿ ನೆರಳಿನಂತೆ ಅನುಸರಿಸುತ್ತ, ಆತನ ಕಾರ್ಯವು ಸರ್ವಥಾ ನೆರವೇರಬೇಕೆಂದು ಯತ್ನಿಸಿದ ನಿನ್ನ ಸಾಹಸವು ಮನಸ್ಸಿಗೆ ಬಹುತೋಷದಾಯಕವು.

ವನೇಚರನೇ, ವಿವೇಚಿಸಿ ನೋಡು! ಹೂಡಿದ ಬಾಣವು ಕಾಣೆಯಾಗಿರುವುದು ಸಹಜವು. ಆದರೆ ಅದನ್ನು ಆವಾಸದ ಬೆಟ್ಟದಲ್ಲಿ ಹುಡುಕಾಡುವುದು ನ್ಯಾಯವು. ಅದನ್ನು ಬಿಟ್ಟು ಬಂದು ಹೀಗೆ ಹದಗೆಟ್ಟ ಮಾನವಂತರೊಡನೆ ಮಾತಾಡುವುದು ನೀತಿಬಾಹಿರವು. ಸಜ್ಜನಾತಿಕ್ರಮವು ಅಪಾಯಮೂಲವೆಂದೇ ವರ್ಜ್ಯವಾಗಿರುವುದು. ಪುಳಿಂದನೇ, ಹಿಂದೆ ಖಾಂಡವವನದಹನದಿಂದ ತೃಪ್ತಿಹೊಂದಿದ ಧನಂಜಯನು, ತೆಗೆದಷ್ಟೂ ಮುಗಿಯದ ಬಾಣಗಳಿರುವ ಅಕ್ಷಯತೂಣೀರವೆಂಬ ಬತ್ತಳಿಕೆಯನ್ನು ನನಗೆ ಪಾರಿತೋಷಿಕವಾಗಿ ಇತ್ತಿರಲು, ದೇವತೆಗಳ ದಿವ್ಯ ಶರಗಳನ್ನೂ ಕಡೆಗಣಿಸುವ ನಾನು ಆ ಕಿರಾತನ ಶರವನ್ನು ಪರಿಗ್ರಹಿಸುವೆನೆಂದು ನೀನು ಎಣಿಸುವೆಯಾದರೆ, ಆ ನಿನ್ನೆಣಿಕೆಗೆ ಎಣೆಯಿಲ್ಲ. ಆರ್ಯರ ಸಚ್ಚರಿತೆಯೇ ಪ್ರಮಾಣವೆಂಬ ನಿರ್ಧಾರದಿಂದ ಇಲ್ಲಿಗೆ ಬಂದು ತಪಸ್ಸುಮಾಡುವ ನನ್ನೊಡನೆ ಹೀಗೆ ಮಾತಾಡುತ್ತ, ನನ್ನನ್ನು ತಿರಸ್ಕರಿಸುವೆಯೊ? ಪುರಸ್ಕರಿಸುವೆಯೊ? ಬೇಡನೇ, ಮುನ್ನುಡಿಯೇ ಪರನಿಂದಕವಾದರೆ, ದೋಷವು ಭಾಷಣಕರ್ತನಿಗಲ್ಲದೆ, ಶ್ರೋತೃಗಳಿಗಲ್ಲ. ಸತ್ಪುರುಷನಲ್ಲಿರತಕ್ಕ ಗುಣವನ್ನಡಗಿಸುತ್ತ, ಇಲ್ಲದ ದೋಷವನ್ನಾರೋಪಿಸುತ್ತ ಮೆರೆಯುವ ದುಷ್ಟರು ತಮ್ಮ ಮಾತೆಂಬ ಖಡ್ಗದಿಂದ ತಮ್ಮ ಹೃದಯವನ್ನೇ ತುಂಡಿಸಿ, ಆ ಚಿತ್ತಭಿತ್ತಿಯ ಮರೆಯಲ್ಲಿರುವ ದೌಷ್ಟ್ಯವನ್ನು ಪ್ರಕಟಿಸಿಕೊಳ್ಳುವರು.

ಕಾಡಿನ ಮೃಗಗಳ ಮೇಲೂ ಒಡೆತನವೆ? ಪೌರುಷದಿಂದ ಹೊಡೆದುಕೊಂದವರಿಗೇ ಅವು ಸೇರಬೇಕೆಂಬುದು ಸಾಧಾರಣವಾಗಿ ಸರ್ವರಿಗೂ ಗೊತ್ತಿರಲು, ಇದು ನನ್ನ ಮೃಗವೆಂದು ನಿನ್ನೊಡೆಯನು ಅಭಿಮಾನಪಡದಿರುವುದಾದರೆ, ಅದನ್ನು ಬಿಡುವುದು ಲೇಸು. ಅಭಿಮಾನಪಡುವುದರಿಂದ ಲೋಕದಲ್ಲೇನಾದರೂ ಕರಗತವಾಗುವುದೆ? "ಯಾರಿಗಾದರೂ ಸರಿಯೆ! ನೀನು ದಾರಿಯನ್ನು ತೊರೆಯದಿರೆ"ಂದು ಮಹಾಮುನಿಯು ಉಪದೇಶಿಸಿದಂತೆ ನಾನು ಈ ವನದಲ್ಲಿ ವ್ರತಪರಿಪಾಲನೋದ್ಯುಕ್ತನಾಗಿದ್ದಾಗ, ಹಿಂಸಾದೃಷ್ಟಿಯಿಂದ ನನ್ನ ಮೇಲೆ ಬೀಳಬೇಕೆಂದು ಓಡಿ ಬರುತ್ತಿದ್ದ ವರಾಹವನ್ನು ನಾನೇ ಹೊಡೆದು ಕೆಡಹಿದೆನು. ಆ ಬೇಡನು ಬೇಟೆಯಾಡುತ್ತ, ಆಶ್ರಮವಾಸಿಗಳಾದ ತಪಸ್ವಿಗಳಿಗೆ ಬಹಳ ಉಪಕಾರಿಯು; ಮಾತ್ರವಲ್ಲ, ಆತನು

ಪರಮದಯಾಳು"ವೆಂದು ಹೇಳಿದ ನಿನ್ನ ಮಾತನ್ನು ಕೇಳಿ ಯಾರಾದರೂ ನಗದಿರಲಾರರು. ಕೇವಲ ಸ್ವಾರ್ಥಕ್ಕಾಗಿ ಮೃಗಗಳನ್ನು ಕೊಲ್ಲುವಾತನು ಪರೋಪಕಾರಿಯೆ? ಪರಮದಯಾಳುವೆ? ಇನ್ನಾದರೂ ಇಂತಹ ನಗೆಗೇಡನ್ನಾಡದಿರು! ಈ ಹಂದಿಯು ನಮ್ಮಿಬ್ಬರಿಂದಲೂ ಮಡಿದಿರಲು, ಅವನೇ ಮೊದಲು ಕೊಂದವನು; ಅನಂತರದವನು ನಾನೆ"ಂಬ ಈ ಒಣ ಜಗಳಕ್ಕೆ ಆಧಾರವೇನು! ಮತ್ತದರ ಪ್ರಯೋಜನವೇನು!

ದುಷ್ಟಮೃಗವೆಲ್ಲಿಯಾದರೂ ನಿರಾಯುಧನಾದ ಮುನಿಯನ್ನು ಕೊಲ್ಲಲು ಹವಣಿಸುತ್ತಿದ್ದರೆ, ಆತನಲ್ಲಿ ದಯೆತೋರಿಸುವುದು ಮಹಾತ್ಮರ ನಿಜವಾದ ಗುಣವು. ಬಿಲ್ಲುಬಾಣಗಳೊಡನೆ ಸನ್ನದ್ಧನಾದ ನನ್ನಲ್ಲಿ, ಆತನು ಬಹಳ ದಯೆಯನ್ನು ತೋರಿದನೆಂದರೆ, ನಾನದನ್ನು ಹೇಗೆ ತಿಳಕೊಳ್ಳಬೇಕು? ಅವನ ಬಾಣಪ್ರಯೋಗಕ್ಕೆ ನನ್ನ ರಕ್ಷಣೆಯೇ ಕಾರಣವೆ? ಅದರ ಫಲವು ಮೃಗವಧೆಯಲ್ಲವೆ? ಇಲ್ಲಿ ಅವೆರಡನ್ನೂ ನಾನೇ ಸಾಧಿಸಿಕೊಂಡಾಗ, ದಯಾಳುವಾದ ನಿಮ್ಮ ಯಜಮಾನನ ಕೃತಾರ್ಥತೆಗೆ ಏನಾದರೂ ಭಂಗವೊದಗುವುದೆ? 'ಆತನೊಡನೆ ಬೇಡಿಕೊಳ್ಳಬೇಕೆ'ಂದು ಹೇಳಿದ ನಿನ್ನ ಮಾತನ್ನು ಕ್ಷತ್ರಿಯವೀರರೆಂದಿಗೂ ಒಪ್ಪಿಕೊಳ್ಳಲಾರರು. ದೈನ್ಯದ ಯಾಚನೆಯಿಂದ ಶ್ರೀಕಾಂತೆಯ ಕಾಂತಿಯು ಮಾಸಿ ಹೋಗುವುದೆಂದು ನಂಬುವ ವೀರಪುಂಗವರು ಬಲಾತ್ಕಾರದಿಂದಲೇ ಸೆಳಕೊಳ್ಳತಕ್ಕ ಸಂಪತ್ತನ್ನೆಂದಿಗೂ ದೈನ್ಯದಿಂದ ಯಾಚಿಸಿಕೊಳ್ಳಲಾರರು. ಆದರೆ ನಿನ್ನವನು ಪಡೆಯಲಸಾಧ್ಯವಾದ ಹೆಚ್ಚಿನ ಫಲವನ್ನು ಸುಳ್ಳಿನಿಂದಲೇ ದೊರಕಿಸಿಕೊಳ್ಳಬೇಕೆಂದು ಹವಣಿಸಿದನೆಂದೇ ನನಗನಿಸುವುದು. ಮೋಸದಿಂದ ಉಂಟಾಗಬಹುದಾದ ಆ ಭಯಂಕರವಾದ ಪರಿಣಾಮವನ್ನು ತಿಳಿದಿದ್ದರೂ ಕೂಡ, ಕೆಡುವ ಕಾಲದಲ್ಲಿ ಮನುಷ್ಯನ ಬುದ್ಧಿಯು ವಿಪರೀತವಾಗಿಯೇ ವರ್ತಿಸುವುದು. ಹಾಗೂ ಆತನು ಅಪೇಕ್ಷಿಸುವನಾದರೆ, ಶರವೊಂದರಿಂದ ಮಾತ್ರವೇ ಪ್ರಯೋಜನವೇನು? ಆಶೆಪಟ್ಟು ಯಾಚಿಸುವನಾದರೆ, ಖಡ್ಗ ಕವಚ ಬಾಣಬತ್ತಳಿಕೆ ಮಹಾಧನುಸ್ಸು ಇವೆಲ್ಲವನ್ನೂ ತಡವಿಲ್ಲದೆ ಕೊಡುವೆನು. ಅಥವಾ ಅವನು ವೀರನಾದರೆ, ನನ್ನೊಡನೆ ಕೇಳಿಕೊಳ್ಳಬೇಕೆಂಬ ಅಗತ್ಯವಿಲ್ಲ. ಬಲಾತ್ಕಾರದಿಂದ ಸೆಳೆದುಕೊಳ್ಳುವುದು ಶಕ್ತಿವಂತರಿಗೆ ಭೂಷಣವಲ್ಲದೆ. ಅದರಿಂದ ಲೇಶವಾದರೂ ದೋಷವಿಲ್ಲ.

ಇಲ್ಲಿ ನಿರಪರಾಧಿಯಾಗಿ ತಪಸ್ಸುಮಾಡುವ ನನ್ನೊಡನೆ ಅಸೂಯೆ ಪಡುವನೆಂದ ಮೇಲೆ "ಆತನು ನಿನಗೆ ಹಿತಚಿಂತಕನಾದ ಸನ್ಮಿತ್ರನೆ"ಂದು ಹೇಳಿದ ನಿನ್ನ ಮಾತಿನ ಅರ್ಥವೇನು? ನಿಜಾಂಶವನ್ನು ಯೋಚಿಸಿದರೆ ಅದು ನಂಬಿಕೆಗೆ ಯೋಗ್ಯವಲ್ಲ. ಹೆಚ್ಚಿನ ಏಳಿಗೆಯನ್ನು ನೋಡಿ ಸಹಿಸದ ದುರ್ಜನರು ಸಜ್ಜನರಿಗೆ ಪರಮಶತ್ರುಗಳೆಂಬುದು ಜನಜನಿತವು. ಯಾವ ರೀತಿಯಿಂದಲೂ ಕೊರತೆಯುಂಟಾಗದಂತೆ ವರ್ಣಾಶ್ರಮಪದ್ಧತಿಗಳನ್ನು ಸರಿಯಾಗಿ ಪಾಲಿಸಿಕೊಂಡು ಬರತಕ್ಕ ಕ್ಷತ್ರಿಯೋತ್ತಮರ ಯೋಗ್ಯತೆ ಯೇನು! ಮೃಗಪಕ್ಷಿ ಮೊದಲಾದ ಮೂಕಪ್ರಾಣಿಗಳನ್ನು ಕೊಂದು ತಿಂದು ಬದುಕುವ ಕಾಡಾಡಿಗಳಾದ ಬೇಡರ ಅಯೊಗ್ಯತೆಯೇನು! ಸದ್ವೃತ್ತಿಯ ಉತ್ತಮ ಜಾತಿಯವರಿಗೆ ಹಾಳು ಕೆಲಸದ ಕೀಳು ಜಾತಿಯವರೊಡನೆ ಸ್ನೇಹವೆಂದರೇನು! ಅದು ಸಂಭವಿಸುವುದಾದರೂ ಹೇಗೆ? ಕರಿನರಿಗಳಿಗೆ ಗೆಳೆತನವೆ?

ವಿಚಾರವಿಲ್ಲದ ನೀಚನು ಪರರಿಗೆ ಅವಮಾನವಾಗುವಂತೆ ವರ್ತಿಸಿ ದರೂ, ಉತ್ತಮರು ಅದನ್ನು ಮನಸ್ಸಿಗೆ ತಂದುಕೊಳ್ಳುವುದಿಲ್ಲ. ಜಾತಿವೃತ್ತಿ ಪೌರುಷಗಳಿಂದ ಸಮಾನನಾದವನು ಮಾಡುವ ಅತಿಕ್ರಮವೇ ತಿರಸ್ಕಾರ ವೆಂದು ಅವರ ವಿಚಾರವು. ನೀಚನೊಡನೆ ಜಗಳಮಾಡಿದರೆ ಕೀರ್ತಿ ನಾಶವು; ಸ್ನೇಹಮಾಡಿದರೆ ಗುಣನಾಶವು; ಎರಡಾದರೂ ಬರುವುದು ಕೇಡೆಂದು ಯೋಚಿಸಿಯೇ ವಿವೇಚನಶೀಲರು ನೀಚನನ್ನು ಕಡೆಗಣಿಸು ವರು. ಹೀಗಿರಲು ಆ ಬೇಡನೊಡನೆ ನನಗೆ ಸಂಧಿಯೇನು! ಎಂಬ ಯೋಚನೆಯಿಂದಲೇ ನಿನ್ನೊಡನೆ ಹೇಳಿಕಳುಹಿದ ಅವಮರ್ಯಾದೆಯ ಮಾತುಗಳನ್ನು ಮನಸ್ಸಿಗೆ ತಂದುಕೊಳ್ಳದೆ ಸುಮ್ಮನಿರುವೆನು. ಆದರೂ ಅವನು ಬಾಣದ ನೆವದಿಂದ ನನ್ನನ್ನು ಕೆಣಕಲು ಬಂದರೆ, ಮಾಣಿಕ್ಯವನ್ನು ತೆಗೆದುಕೊಳ್ಳಬೇಕೆಂಬ ಆಶೆಯಿಂದ ಸರ್ಪದ ಹೆಡೆಗೆ ಕೈನೀಡಿದವನ ಗತಿ ಯನ್ನು ಹೊಂದದಿರಲಾರನೆಂಬುದನ್ನು ಇನ್ನಾದರೂ ಮರೆಯದಿರಲಿ!

ಈ ಬಗೆಯ ಜಾಣ್ಮೆಯ ನುಡಿಗಟ್ಟುಗಳಿಂದ ಫಲುಗುಣನು ತನ್ನ ನಿರ್ಧಾರವನ್ನು ತಿಳಿಸಿದನು. ಅದೆಲ್ಲವನ್ನೂ ಕೇಳಿದ ಕಿರಾತದೂತನು 'ಸರಿ! ಹೊಡೆದಾಟವೇ ತಲೆಗಟ್ಟಿತು' ಎಂದು ಮನಸ್ಸಿನಲ್ಲೇ ತಿಳಿದು

ಕೊಂಡು, 'ಮುಂದೆ ನಡೆಯುವ ಬಡಿದಾಟದಲ್ಲಿ ನಿನ್ನ ಗಂಡಗರ್ವವನ್ನು ನೋಡಿಕೊಳ್ಳೋಣ,' ಎಂದು ಹೇಳುತ್ತ, ತನ್ನೊಡೆಯನಲ್ಲಿಗೆ ಹೋಗಿ ತಪಸ್ವಿಯ ಪ್ರತಿಸಂದೇಶವನ್ನು ವಿವರಿಸಿ ಹೇಳಿದನು.

---

೨೧ ಶಬರಸೈನ್ಯದ ಪರಾಜಯ

ದೂತನು ಬಂದು ವಿವರಿಸಿ ಹೇಳಿದ ತಾಪಸನ ವೀರಾವೇಶದ ನುಡಿಗಳನ್ನು ಕೇಳಿ ಬೇಡರೊಡೆಯನು ಕೋಪದಿಂದ ಕೆರಳಿದನು. ಒಡೆಯನ ಭಾವವನ್ನರಿತು ಯುದ್ಧವು ಅನಿವಾರ್ಯವೆಂದು ತಿಳಿದ ಸೇನಾಪತಿಯು ಸೈನ್ಯವನ್ನು ಕುರಿತು ಹೀಗೆ ಘೋಷಿಸಿದನು—"ಬೇಡರೆಲ್ಲರೂ ಕೇಳಿಕೊಳ್ಳಬೇಕು. ಬೇಕುಬೇಕೆಂದೇ ಬಡಕಿತ್ತಡಿಯು ನಮ್ಮನ್ನು ಕೆಣಕುತ್ತಿರುವಂತೆ ತೋರುತ್ತಿದೆ. ಇದೆಂತಹ ಘೋರಪರಿಣಾಮಕಾರಿಯೆಂಬುದನ್ನು ಆತನು ಅನುಭವದಿಂದಲೇ ತಿಳಿದುಕೊಳ್ಳಲಿ. ಕಳ್ಳನಂತೆ ನಮ್ಮ ಬೇಟೆಯನ್ನು ಸಾಧಿಸಿಕೊಳ್ಳಬೇಕೆಂದು ಹವಣಿಸುವಾತನೇನು ಬಕಸನ್ಯಾಸಿಯೆ? ಆ ಸನ್ಯಾಸದ ಫಲವನ್ನಾತನು ತಡೆಯದೆ ಪಡೆಕೊಳ್ಳಲಿ! ನಮ್ಮ ಪಡೆಯೆಲ್ಲವೂ ಅಲ್ಲಿಗೀಗಲೇ ಹೊರಡಲಿ! ಇಂದ್ರಕೀಲದ ಕಡೆಗೆ ನಡೆಯಲಿರುವ ನಮ್ಮ ಪಡೆಯ ಸಾಂದ್ರತೆಯನ್ನು ಮಹೇಂದ್ರನು ತಾನೇ ಬಿಡುಗಣ್ಣಿಂದ ನೋಡುತ್ತಿರಲಿ!"

ಸೇನಾಧಿಪನ ಕಟ್ಟಪ್ಪಣೆಯನ್ನು ಕೇಳಿ, ಪ್ರಳಯಕಾಲದಲ್ಲಿ ಪ್ರಕ್ಷೋಭಿಸಿ ಘೂರ್ಮಿಸುವ ಮಹೋದಧಿಯ ತರಂಗಮಾಲೆಗಳಂತೆ ಕಿರಾತನ ಸೈನ್ಯಗಳು ಕೆರಳಿ ಹೂಂಕರಿಸುತ್ತ ಮುಂತೆರಳಿದುವು. ಕಾಲಾಂಬುದದಂತೆ ಮುಂಬರಿವ ಕಾಲಕಂಧರನ ಪಡೆಗೆ ಮುಂದೆ ರಣದಲ್ಲಿ ಜಯವನ್ನು ಸೂಚಿಸುವಂತೆ ಶೈತ್ಯಸೌರಭ್ಯಮಾಂದ್ಯಗಳೆಂಬ ತ್ರಿಗುಣಾತ್ಮಕವಾದ ಸಮೀರಣವು ಅನುಕೂಲವಾಗಿ ಬೀಸುತ್ತಿತ್ತು. ಆಗ ಸೈನಿಕರ ಜಯಘೋಷಗಳೂ, ವೀರರ ಸಿಂಹನಾದಗಳೂ, ಧನುಸ್ಸುಗಳ ಠಂಕಾರಗಳೂ, ಖಡ್ಗಗಳ ಝಣತ್ಕಾರಗಳೂ, ಭೇರಿಗಳ ಭಾಂಕಾರಗಳೂ ಸೇರಿ ಕಂದರಗಳ ಪ್ರತಿ

ಭಟನೆಗೆ ಒಂದಾಗಿ ಪರುಟವಿಸಿ ಗುಡುಗಿನಂತೆ ಭೂಮಿಯನ್ನು ನಡುಗಿಸುತ್ತ ದಿಗ್ದೆಸೆಗಳನ್ನು ವ್ಯಾಪಿಸುತ್ತಿದ್ದುವು. ತೀಕ್ಷ್ಣಧಾರೆಗಳಿಂದ ಥಳಥಳಿಸು ತ್ತಿದ್ದ ಆಯುಧವಿಶೇಷಗಳಲ್ಲಿ ತೋರುತ್ತಿದ್ದ ಸೈನಿಕರ ಪ್ರತಿಬಿಂಬಗಳು ದಿಗಂತಗಳಲ್ಲಿ ಮಾರ್ಪೊಳೆಯುತ್ತ, ಜಾಜ್ವಲ್ಯಮಾನಗಳಾಗಿ ಬೆಳಗುವ ಭಾಸ್ಕರಕಿರಣಗಳಂತೆ ಸೃಷ್ಟಿಯೇ ಮುನಿದು ಸೇನೆಯನ್ನು ಬೆಸಲಾದಂತೆ ಭಾಸವಾಗುತ್ತಿದ್ದುವು.

ಆಗಲೇ ವೃಡನು ಕದನಕ್ಕಾಗಿ ಹೆದೆಯೇರಿದ ಬಿಲ್ಲಿನ ಹಗ್ಗದ ಹದವನ್ನು ಅಂಗುಲಿಗಳಿಂದ ಮಿಡಿದು ನೋಡುತ್ತ, ಮಹಾಪುರುಷಲಕ್ಷಣ ಸಂಪನ್ನನಾಗಿ ಪಡೆಯ ನಡುವೆ ನಡೆಯುತ್ತ, ತಾನೇ ಬೇಡರೊಡೆಯನೆಂಬು ದನ್ನು ಸ್ಪಷ್ಟಪಡಿಸುವಂತೆ ನೆಗೆದು ತೋರುತ್ತಿದ್ದನು. ಎತ್ತೆತ್ತಲೂ ಎತ್ತರವಾದ ಕಾಡುದಾರಿಯಲ್ಲಿ ಸಮಾನವಿಕ್ರಮರಾದ ಪಡೆವಳರು 'ನಾನು ಮೊದಲು ನಾನು ಮೊದಲೆ'ಂಬ ಹುರುಡಿನ ಗಡಿಬಿಡಿಯಿಂದ ಎಡೆಬಿಡದೆ ನಡೆಯುತ್ತಿ ದ್ದಾಗ, ಅರಣ್ಯದ ಪ್ರಾಣಾನಿಲವು ತಡೆಗಟ್ಟಿ ನಿಶ್ಚಲವಾದಂತೆ ತೋರುತ್ತಿತ್ತು. ಅಷ್ಟು ಮಾತ್ರವಲ್ಲದೆ, ಪಡೆಯ ಸಡಗರದ ನಡೆಯ ಪದಹತಿಗೆ ಸಿಲುಕಿದ ಮರಬಳ್ಳಿಪೊದರುಗಳೆಲ್ಲವೂ ನೆಲಸಮವಾದುದು, ಯುದ್ಧ ಸಂಸಿದ್ಧಿಯಿಂದ ಕಾಡೆಲ್ಲವೂ ನಾಡಾಗುವ ಶುಭಸೂಚನೆಯಂತೆ ತೋರುತ್ತಿತ್ತು. ಸಮೃದ್ಧ ವಾದ ಕಿರಾತವಾಹಿನಿಯು ಶೀಘ್ರಗತಿಯಿಂದ ಹರಿಯುತ್ತ, ಇಂದ್ರಕೀಲಾ ಚಲದಲ್ಲಿ ತನ್ನ ಗುರಿಯನ್ನು ನಿರೀಕ್ಷಿಸುತ್ತಿತ್ತು.

ಸಮುದ್ರದಂತೆ ಹೀಗೆ ಭೋರ್ಗರೆಯುತ್ತ ಮುಂದೊತ್ತುತ್ತಿದ್ದ ಕಿರಾತ ಸೈನ್ಯದ ಅಬ್ಬರವು ಅರ್ಜುನನನ್ನು ಬೆರಗುಗೊಳಿಸಲಿಲ್ಲ. ತನ್ನ ವಿಜಯ ದಲ್ಲಿ ಅಚಲವಿಶ್ವಾಸವುಳ್ಳ ಆತನು ಆ ಸೈನ್ಯವನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತ ಮೂಡಿಗೆಯಿಂದ ಸರಳನ್ನು ತೆಗೆಯುತ್ತಿದ್ದನು. ತಪಸ್ವಿ ಯಾಗಿದ್ದರೂ ಕೂಡ ಆ ವಿಜಯನು, ಮದಜಲವು ಸುರಿದು ಕೃಶವಾದರೂ ಪರ್ವತಶಿಖರಗಳನ್ನು ಕೆಡಹಿ ವಪ್ರಕ್ರೀಡೆಯಾಡಲು ತವಕಿಸುವ ಗಜೇಂದ್ರ ದಂತೆ ಕ್ಷೀಣಾಂಗನೆನಿಸಿಯೂ ಸಮರೋತ್ಸಾಹಸಂಪನ್ನನು. ಬೂದಿ ಮುಚ್ಚಿ ಶಾಂತವಾಗಿ ತೋರಿದರೂ ದಿಗಂತಗಳನ್ನೇ ಸುಟ್ಟುರುಹುವ ಶಕ್ತಿ ಯುಳ್ಳ ಪಾವಕನಂತೆ ದುಷ್ಟಗಣವನ್ನು ಪರಿಹರಿಸತಕ್ಕ ಅಂತಃಸಾರವುಳ್ಳ

ವನು. ಬರತಕ್ಕ ವಿಪತ್ತನ್ನು ಪರಿಹರಿಸಬೇಕೆಂದು ಗುಣದೊಡಗೂಡಿ ಸ್ಥಿರವಾದ ಶರಾಸನದಂತೆ ಸದ್ಗುಣಸ್ಥೈರ್ಯನು. ಗಾಳಿಬೀಸದೆ ಪ್ರಕೃತಿಯು ಶಾಂತವಾಗಿರಲು ನಿಶ್ಚಲಗಂಭೀರವಾದ ಜಲಧಿಯಂತೆ ನಿಶ್ಚಲಚಿತ್ತಗಭೀರನು. ಪರೇತಲೋಕಾಧಿಪತಿಯಾದ ಭೀಕರಾಂತಕನಂತೆ ಕಿರಾತನು ಓಡಿಸಿಕೊಂಡು ಬಂದ ಭಯಂಕರವಾದ ವರಾಹಕ್ಕೆ ಅಂತಕನು. ಯಾಗಪಶುವಿನ ಮುಂದೆ ನೆಲಸಿದ ಜಗದೀಶ್ವರನಂತೆ ವರಾಹದ ಸಮೀಪದಲ್ಲಿ ಕುಳಿತಿದ್ದ ಯೋಗೀಶ್ವರನು. ಅಪಾರವಾದ ಪ್ರಕೃತಿಗಾಂಭೀರ್ಯದಿಂದಲೂ ತರುಲತಾಗುಲ್ಮಗಳ ಸಾಂದ್ರತೆಯಿಂದಲೂ ತಾನೊರ್ವನೇ ವಿಜಿತಾನ್ಯಗೌರವನೆಂದು ಗರ್ವಿಸಿ ತಲೆಯೆತ್ತಿ ನಿತ್ತಿರುವ ಗಿರಿರಾಜನಂತೆ ದುರ್ಧರ್ಷನು. ಮಾತ್ರವಲ್ಲ; ಅಗಮ್ಯನು. ಜಗದ್ರಕ್ಷಕನಾದ ಮಹಾವರಾಹಮೂರ್ತಿಯಂತೆ ದುಷ್ಟಾರ್ಣವದ ದೆಸೆಯಿಂದ ಭಾರವತ್ತಾದ ಜಗತ್ತನ್ನು ಹಿಡಿದೆತ್ತಿ ಕಾಪಾಡಲು ಬಯಸುವ ಮಹಾವೃಷಸ್ಕಂಧನು. ಮಾತ್ರವಲ್ಲ; ವ್ಯೂಢೋರಸ್ಕನು. ಸಮಸ್ತಜೀವಜಾಲಗಳ ಸತ್ವವನ್ನೂ ತಿರಸ್ಕರಿಸುತ್ತ ಜಲಾಶಯದಲ್ಲಿ ಪ್ರತಿಬಿಂಬಿಸುವ ಸೂರ್ಯನಾರಾಯಣನಂತೆ ತೇಜಃಪುಂಜಾನ್ವಿತನು. ಮಾತ್ರವಲ್ಲ; ವಿಷ್ಣುಪದಾಸಕ್ತನು. ತಪಶ್ಚರಣೆಗಾಗಿ ನರರೂಪದಿಂದ ಬದರಿಕಾಶ್ರಮದಲ್ಲಿ ನೆಲಸಿದ ಪುರಾಣಪುರುಷನಂತೆ ಅಗಣ್ಯಪುಣ್ಯಾರಣ್ಯನು. ಮಾತ್ರವಲ್ಲ; ಪುರುಷೋತ್ತಮನು. ಆದರೂ ಋತುಧರ್ಮಾನುಸಾರವಾಗಿ ಸಂಚಿತವಾದ ಜಲಬಿಂದುಗಳೇ ಗ್ರೀಷ್ಮಾವಸಾನದಲ್ಲಿ ಗುಡುಗುವ ಕಾರ್ಮೋಡವೆನಿಸಿ ಪರ್ವತೋತ್ತಮವನ್ನು ಸುತ್ತುವರಿದು ಆಚ್ಛಾದಿಸುವಂತೆ ಕರ್ಮಾನುಸಾರವಾದ ಫಲವಿಶೇಷದಿಂದ ಮಹಾತ್ಮನೂ, ಲೋಕೋತ್ತರವಾದ ವಿಕ್ರಮಾತಿಶಯದಿಂದ ಅಲಂಘ್ಯನೂ ಎನಿಸಿರುವ ತಾಪಸೋತ್ತಮನನ್ನು ಕಾರೊಡಲ ಬೇಡಪಡೆಯು ಕೂಡಲೇ ಮುಂದೊತ್ತಿ ಮುತ್ತಿಕೊಂಡಿತು.

ಆದರೇನು! ಮಹಾತ್ಮರ ಪ್ರಭಾವದ ಮುಂದೆ ಪೌರುಷವು ನಡೆಯುವುದೆ? ಬಾಣವೊಂದರಿಂದಲೇ ಬಡತಾಪಸನ ಉಸಿರನ್ನು ಅಡಗಿಸಿಬಿಡುವೆನೆಂದು ಮನಬಂದಂತೆ ಸ್ವಸಾಮರ್ಥ್ಯಗಳನ್ನು ಕೊಚ್ಚಿಕೊಳ್ಳುತ್ತಿದ್ದ ಕಿರಾತವೀರರು, ಆಗ, ತಪಸ್ವಿಯ ಪ್ರಭಾವಾತಿಶಯದಿಂದ ಬೆರಗುಗೊಂಡು ಸ್ತಬ್ಧರಾದರು. ಆದರೂ ಬಿಡದೆ "ನಾವೀಗ ಬಂದಂತೆಯೇ ಹಿಂದಿರುಗಿದರೆ

ಗಿರೀಶನಿಗೆ ಕೊರತೆತಂದುಕೊಂಡಂತಾಗುವುದರಿಂದ ಸರ್ವಥಾ ಹಿಂಜರಿಯಲಾಗದು! ಬಲಶಾಲಿಗಳಾದರೂ ಲೋಕದಲ್ಲಿ ಸಾಂಘಿಕಶಕ್ತಿಯಿಂದಲೇ ಕಾರ್ಯಗಳನ್ನು ಸಾಧಿಸಿಕೊಳ್ಳುವರು" ಎಂದು ನೆನೆದುಕೊಳ್ಳುತ್ತ ಅವರೆಲ್ಲರೂ ಹಿಂದುಮುಂದು ನೋಡದೆ ಗುಂಪಾಗಿ ಮಹಾಧನುಸ್ಸುಗಳಿಗೆ ಬಾಣಗಳನ್ನು ಜೋಡಿಸಿ ಆಕರ್ಣಾಂತವಾಗಿ ಸೆಳೆಸೆಳೆದು ಬಿಡುತ್ತಿದ್ದರು. ಕಠಿಣಹೃದಯದ ಬೇಡರ ಹಾವಳಿಯಿಂದ ಕೂಡಿದ ಗೊಂಡಾರಣ್ಯದ ನಡುವಿಂದ ಬಲು ದೂರಕ್ಕೆ ಹೋಗಬೇಕೆಂದು ಗರಿಗೆದರಿ ದ್ರುತಗತಿಯಿಂದ ಹಾರುವ ಪಕ್ಷಿಸಂಕುಲದಂತೆ ಆ ಶರತತಿಯು ಮಹಾರಭಸದೊಡನೆ ಹಾರಾಡುತ್ತಿತ್ತು. ಹಾಗೆ ನೆಗೆಯುವ ಭರಕ್ಕೆ ಉಂಟಾದ ಶಬ್ದಗಳೊಡನೆ ಗಿರಿಗುಹಾರಣ್ಯಗಳ ಪ್ರತಿಧ್ವನಿಗಳು ಸೇರಿ ದಶದಿಕ್ಕುಗಳನ್ನೂ ಭೇದಿಸುವಂತೆ ಘನಗಂಭೀರಧ್ವನಿಯೊಡನೆ ಭೀಕರಾರಣ್ಯಗಳನ್ನು ನಡುಗಿಸುತ್ತ, ಗಗನದಿಗಂತರಾಳಗಳನ್ನಾಚ್ಛಾದಿಸುತ್ತ, ಝಂಝಾನಿಲಪ್ರೇರಿತ ಮಹಾವೃಷ್ಟಿಯಂತೆ ಮುಂದುವರಿಯುತ್ತಿದ್ದುವು. ಶರವೇಗದ ರಭಸಕ್ಕುಂಟಾದ ಗಾಳಿಯು, ಆರು ತಿಂಗಳುಗಳಿಂದಲೂ ಕೇವಲ ವಾಯುಸೇವನೆಯಿಂದ ಶರೀರಧಾರಣೆಮಾಡುತ್ತ ಕೃಶನಾಗಿದ್ದ ಅರ್ಜುನನ ದೇಹವನ್ನು ಸೋಕಿದ ಕೂಡಲೆ, ಕೆಣಕಿದ ಎಲರುಣಿಯು ಮಾರಣೋತ್ಸಾಹಿಯಾಗುವಂತೆ ಕೌಂತೇಯನು ರೋಷಭೀಷಣನಾಗಿ ರಣೋತ್ಸಾಹಿಯಾದನು. ಭೂಮ್ಯಾಕಾಶಗಳನ್ನು ವ್ಯಾಪಿಸುತ್ತ ಶರಾಸಾರವು ನಿರಂತರವೂ ಸುರಿಯುತ್ತಿರಲು, ಗಾಂಡೀವಧನುಸ್ಸನ್ನು ಸೆಳೆಯುತ್ತಿದ್ದ ಪಾರ್ಥನ ದೃಷ್ಟಿಯು ಬೇಡಪಡೆಯ ಮೇಲೆ ಉಲ್ಕಾಪಾತದಂತೆ ಬೀಳತೊಡಗಿತು. ಆ ರಣಪಂಡಿತನು ಕೂಡಲೆ ದಾರುಣಬಾಣಗಳಿಂದ ದಿಕ್ಕುಗಳೆಲ್ಲವನ್ನೂ ಒಂದೇ ಕಡೆಗಾಗಿ ಹೊಂದಿಸುವನೋ, ಸೂರ್ಯಕಿರಣಗಳನ್ನು ಹೊಡೆದು ಧರೆಗುರುಳಿಸಿ ಕೆಡಿಸುವನೋ, ಮಾರುತನ ಸಂಚಾರವನ್ನೇ ತಡೆಗಟ್ಟುವನೋ, ಅಚಲಗಳೊಡನೆ ಭೂತಲವನ್ನು ನಡುಗಿಸುವನೋ ಎಂಬ ಹಾಗೆ ಕಲ್ಪಾಂತಕನಂತೆ ಮುಳಿದೆದ್ದನು.

ಯೋಗಿಗೆ ಮೂಗುಬ್ಬಸವನ್ನೊದಗಿಸಬೇಕೆಂದು ಅಹಮಹಮಿಕೆಯಿಂದ ವನೇಚರರು ಪ್ರಯೋಗಿಸಿದ ಶಸ್ತ್ರಾಸ್ತ್ರಗಳು ಬಂದೆರಗುತ್ತಿದ್ದ

ವೇಳೆಗೆ, ವೇಳೆಯು ಮೀರಿತೆಂದು ಬೇಗನೆ ಪಾಂಡವನು ಗಾಂಡೀವಧನು ಸ್ಸಿಗೆ ತೀಕ್ಷ್ಣಧಾರೆಯ ಶರಜಾಲಗಳನ್ನು ಹೂಡಿದನು. ಒಡನೆಯೇ ಅವು ಗಳು, ಎದುರಾಳಿಗಳಿಂದ ಊಹಿಸಿ ತಿಳಿದುಕೊಳ್ಳಲು ಸಾಧ್ಯವಾಗದಂತೆ ಪರ ಬಲಗಳಿಂದೊದಗತಕ್ಕ ವಿಪತ್ಪರಂಪರೆಗಳನ್ನು ಲಗುಬಗೆಯಿಂದ ನಿವಾರಿಸಿ ಕೊಂಡು ಯಾರಿಗೂ ಕಾಣಿಸಿಕೊಳ್ಳದೆ ಪರಮಂಡಲಗಳನ್ನು ಪ್ರವೇಶಿಸಿ ಭೇದಿಸುವುದೆಂಬ ಮಹಾಕಾರ್ಯಸಾಧನೆಯ ಉದ್ದೇಶದೊಡನೆ ಐದುವ ಗೂಢನಿಯೋಗಿವರ್ಗಗಳಂತೆ ಹೊರಡತೊಡಗಿದುವು. ಅದನ್ನು ನೋಡಿ— ಇದೇನದ್ಭುತವು! ಶರಾಸಾರವಿದು ಗಗನದಿಂದಲೋ, ಭೂತಲದಿಂದಲೋ, ದಿಗಂತರಾಳಗಳಿಂದಲೋ, ಅರ್ಕಮಂಡಲದಿಂದಲೋ, ಮುನಿದ ಮುನಿ ಕಾಯದಿಂದಲೋ, ಆತನ ಮಾಯದ ಕಾರ್ಮುಕದಿಂದಲೋ" ಎಂದು ಶಬರರೆಲ್ಲರೂ ಬೆಚ್ಚಿ ಬೆರಗಾದರು. ಹಾಗೆ ಸುರಿಯುತ್ತಿದ್ದ ಆ ಬಲುಹಿನ ಫಲುಗುಣನ ಬಾಣಗಳು ಮರ್ಮವಿದಾರಣಗಳಾದರೂ, ಗಣಾಧಿಪರನ್ನು ಮರಣಗೊಳಿಸಲಾರದ ನಾಚುಗೆಯಿಂದ ಅಪರಾಧಿಗಳಂತೆ ತಲೆಕೆಳಗಾಗಿ ತೆರಳಿ ಮಂಜುಪೆಟ್ಟದ ಕೆಳಗಿಳಿದು ತಲೆಮರಸಿಕೊಂಡುವು. ವೈರಿಗಳ ಕವಚಗಳನ್ನು ಹರಿದು, ಒಳಸರಿದು ಸರಿಯಾಗಿ ಗಾಯಗೊಳಿಸಿ, ತಲೆಮ ರಸಿಕೊಂಡವುಗಳ ಸ್ಥಿತಿಯನ್ನರಿತುಕೊಂಡು ಬರುತ್ತಿದ್ದ ಮತ್ತಿನ ಬಾಣಗಳು ಹೊಸಹೊಸತಾದ ಬೇರೆ ಲಕ್ಷ್ಯಗಳನ್ನೇ ಸಾಧಿಸುತ್ತ, "ಮಹಾತ್ಮರ ಪರಿಸ್ಪಂ ದದವರೂ ಕೂಡ ಪೀಡಿತರನ್ನು ಪೀಡಿಸಲಾರರೆ"ಂಬ ತತ್ವವನ್ನು ಸಾರಿ ಹೇಳುವಂತೆ ನಿರಾತಂಕವಾಗಿ ಸರಿಯುತ್ತಿದ್ದುವು. ವಿರೋಧಿಗಳನ್ನು ಪರಿ ಗಣಿಸಿ ಸಕಲರಿಗೂ ಒಂದೊಂದರಂತೆ ಅಭಿನ್ನತೆಯಿಂದ ಬಂದೆರಗುತ್ತಿದ್ದ ನರನ ಬಾಣಗಳೆಂಬ ರಾಕಾನಿಶಾಕರಕಿರಣಗಳು ಪರಮಂಡಲವೆಂಬ ಜಡ ಜವನವನ್ನು ತಳಮಳಗೊಳಿಸಿ ಕಳೆಗೆಡಿಸಿದುವು. ವಕ್ರಗತಿಯಿಲ್ಲದೆ ಕಿಡಿಗೆ ದರುತ್ತ ಫಲವನ್ನು ಸಾಧಿಸಬೇಕೆಂಬ ಹಟದೊಡನೆ ಮುಂದುವರಿದು "ಇರಿ ವುದು, ಕೊರೆವುದು, ಬೀಳಿಸುವುದೆ"ಂಬ ಬಗೆಬಗೆಯ ವಿಧಾನಗಳಿಂದ ಮೆರೆಯುತ್ತಿದ್ದ ನರನ ಆ ಶರಪರಂಪರೆಯನ್ನು ತಡೆಯಲಾರದೆ ಬೇಡ ಪಡೆಯು ಎದೆಯುಳಿದು ಹದಗೆಟ್ಟಿತು. ಅಲ್ಲಲ್ಲಿದ್ದು ಗಡಗಡನೆ ನಡುಗು ತ್ತಿದ್ದ ಪಡೆಗೆ ಮೂಡಿಗೆಯಿಂದ ಮೊಗೆಮೊಗೆದು ಗಾಂಡೀವದ ಮೂಲಕ

ಎಡೆಬಿಡದೆ ಶರವೃಷ್ಟಿಯನ್ನು ಸುರಿಸುತ್ತಿದ್ದ ಪಾಂಡವನು ಉಜ್ವಲವಾದ ಮಾರ್ತಂಡಮಂಡಲದಂತೆ ಎಲ್ಲೆಲ್ಲಿ ನೋಡಿದರೂ ಸರಿಯೆದುರಾಗಿ ವಿರಾಜಿಸುತ್ತಿದ್ದನು. ಮಹಾರಭಸದ ಚಂಡಮಾರುತನು ಕಡುಬೇಸಗೆಯ ಧೂಳಿಯನ್ನೆಬ್ಬಿಸಿ ಕೊಂಡೊಯ್ದು ಬಹುದೂರ ಚೆಲ್ಲುವಂತೆ ಆತನ ಶರೌಘವು ಬೇಡಪಡೆಯನ್ನು ಬಿಡುವಿಲ್ಲದೆ ಚಡಪಡಿಸುವಂತೆ ಗಡಿಬಿಡಿಯಿಂದ ಹೆದರಿಸಿ ಚದರಿಸಿಕೊಂಡೋಡಿ ಒಂದಾಗಿಸಿತು.

ಆ ಬಗೆಗೆ ಬಸವಳಿದ ಸೇನೆಯೆಲ್ಲವೂ ಮಾನಗೆಟ್ಟು ಒಟ್ಟಾಗಿ ನೊಂದು— "ಹಾಯ್! ಇದೇನು ವಿಚಿತ್ರವು! ಅತ್ಯದ್ಭುತಕಾರಿಯೆನಿಸಿದ ಮುನಿಯಿವನು ತಪೋಬಲದ ಮಹಿಮೆಯಿಂದ ಮಿತಿಯಿಲ್ಲದಂತೆ ತನ್ನ ಪ್ರತಿಮೂರ್ತಿಗಳನ್ನು ಸೃಜಿಸಿ ಹೀಗೆ ಮಾರ್ಗಣವೃಷ್ಟಿಯನ್ನು ಸುರಿಸುತ್ತಿರಬಹುದು! ಇಲ್ಲವೆ, ನಾವು ಪ್ರಯೋಗಿಸಿದ ಆಯುಧಗಳೇ ತಿರುಗಿ ನಿಂದು ನಮ್ಮನ್ನು ಪ್ರತಿಭಟಿಸುವಂತೆ ಈತನ ಮಾಯೆಯು ಪ್ರೇರೇಪಿಸುತ್ತಿರಬಹುದು! ಅಥವಾ ಈತನ ಗುಣಾತಿಶಯಗಳ ಪ್ರೀತಿಗಾಗಲಿ, ಭೀತಿಗಾಗಲಿ ಸೋತ ದೇವತೆಗಳು ಹೀಗೆ ನಮ್ಮ ಮೇಲೆ ಶರಜಾಲಗಳನ್ನು ಒಡ್ಡುತ್ತಿರಬಹುದು! ಅಲ್ಲದೆ ಜಲಧಿಯ ಕಲ್ಲೋಲಮಾಲೆಗಳಂತೆ ಶರಜಾಲಗಳು ಅನಂತವಾಗಲು ಕಾರಣವೇನು? ಜಯವಿಲ್ಲದೆ ಈತನು ಯುದ್ಧದಿಂದ ವಿರಮಿಸಲಾರನೆ! ಪರಮಾತ್ಮ! ಚರಾಚರಾತ್ಮಕವಾದ ಸೃಷ್ಟಿಯು ಸಹಜವಾಗಿ ನಷ್ಟವಾಗುವುದು" ಎಂದು ಪರಿಪರಿಯಿಂದ ನರನ ಇರವನ್ನರಿಯದೆ ಬೇಗುದಿಗೊಂಡಿತು.

ಮುಂಗೋಪಿಯು ಶಾಂತಿಸಾಧ್ಯವಾದ ಕೃತ್ಯವನ್ನೂ, ಮದೋದ್ಧತನು ಆಪ್ತರ ವಚನವನ್ನೂ, ಬಲವತ್ತರವಾದ ದೈವವು ಪುರುಷಕಾರವನ್ನೂ ಕೆಡಿಸಿಬಿಡುವಂತೆ ಅರ್ಜುನನು ಶತ್ರುಗಳ ಮೊತ್ತವನ್ನು ಗತಿಗೆಡಿಸಿ ಮತಿಯಳಿಸಿ ಗೋಣಗುಟ್ಟಿಸಿದನು. ಗಾಂಡೀವಿಗೆ ಗುರಿಯೆನಿಸಿ ಸಂಭವಿಸಿದ ವ್ರಣಗಣದಿಂದ ಬಲಗುಂದಿದ ಪುಳಿಂದರ ಬಲ್ಲವೆಲ್ಲವೂ, ಮೆಲ್ಲಮೆಲ್ಲನೆ ಭಾಸ್ಕರಕಿರಣಗಳಿಂದ ಉಗಿಯಾಗಿ ನೆಗೆದು ಗಗನದಲ್ಲಿ ಮಂಡಳಿಸುವ ಮೇಘಗಳಂತೆ ದಿಗ್ದೆಸೆಗಳಲ್ಲಿ ಮಂಡಲಗೊಂಡುವು. ಪಾಂಡವೋತ್ತಮನು ಜಗವನ್ನೇ ಮುಸುಕುವಂತೆ ಶರವರ್ಷವನ್ನು ಕರೆವ ಗಾಂಡೀವವನ್ನು ಮಂಡಳಿಸುತ್ತಿದ್ದುದನ್ನು ನೋಡಿ ಜಯಲಕ್ಷ್ಮಿಯು ನಗುತ್ತ

ಮೆಲ್ಲಮೆಲ್ಲನೆ ವಿಷವಾಕ್ಷನ ಪಡೆಯನ್ನು ತೊರೆದು ತಪಸ್ವಿಯ ಸಮೀಪಕ್ಕೆ ಬರುತ್ತಿದ್ದಳು.

————

೨೨ ಸೇನಾಧಿಪನ ದರ್ಪ

ನರನ ಶರವೃಷ್ಟಿಯಿಂದ ಜೀವಜಾಲಗಳು ತಳಮಳಿಸಿದುವು. ಸೃಷ್ಟಿಯು ಹದಗೆಟ್ಟಿತು. "ಹೆದರಿದ ಹೃದಯವು ಇದಿರಲ್ಲಿರುವುದನ್ನೂ ತಾನರಿಯದು" ಎಂಬ ಹಾಗೆ ಒಡೆಯನು ತಮ್ಮೊಡನಾಡಿಯಾಗಿದ್ದರೂ, ಬೇಡಪಡೆಯು ಬಿಲ್ಲು ಬಾಣ ಮೊದಲಾದ ಯುದ್ಧೋಪಕರಣಗಳ ಗೊಡವೆಯಿಲ್ಲದೆ ನಡುಗುತ್ತ ಪ್ರಾಣಭಯದಿಂದ ದೆಸೆಗೆಟ್ಟೋಡತೊಡಗಿತು. ಹೀಗೆ ಬೆರಗಾಗಿ ಜಯದ ಆಶೆಯನ್ನೇ ತೊರೆದು ಹರಿದೋಡುವ ಕಿರಾತರನ್ನು ನೋಡಿ ಗಾಂಡೀವಿಯ ಗಂಡೆದೆಯು ಕರುಣೆಗೊಂಡಿತು "ಪೌರುಷಾತಿಶಯವನ್ನು ತಡೆಯಲಾರದೆ ವಶಗೆಟ್ಟ ವೈರಿಗಳು ಕಡುದುಷ್ಟರಾದರೂ, ಅವರೊಡನೆ ತೋರಿದ ಕರುಣೆಯೇ ವೀರರ ಮಹತ್ವವನ್ನು ಸ್ಫುಟಗೊಳಿಸುವುದು" ಎಂಬ ತತ್ವವನ್ನನುಸರಿಸಿ ಆತನ ವಿರೋಧಿಗಳನ್ನು ಅನುಸರಿಸುವುದರಲ್ಲಿ ಬೇಸರಗೊಂಡನು.

ಹೀಗೆ ಸೈನ್ಯವು ಹದ್ದುಮೀರಿ ಹರಿದೋಡುತ್ತಿದ್ದುದನ್ನು ನೋಡಿ ಸೇನಾಪತಿಯು ತನಗುಂಟಾದ ಅವಮಾನದಿಂದ ಖಿನ್ನನಾಗಿ ಸೈನಿಕರನ್ನು ಕುರಿತು ಮಾರ್ಮಿಕವಾಗಿ ಹೀಗೆಂದನು—ರಣರಂಗವನ್ನು ಕ್ರೀಡಾಂಗಣವೆಂದು ಪರಿಗಣಿಸುತ್ತಿದ್ದ ನೀವಿಂದು ಪ್ರಾಣದಾಶೆಯಿಂದ ಪಲಾಯನ ಮಾಡುತ್ತಿರುವುದು ನಿಮಗೆ ಸರ್ವಥಾ ಸರಿಯಲ್ಲ. ಅಸುರರ ಪಡೆಯು ಪರಾಜಿತವಾಗಿ ದಿಕ್ಕುಗೆಟ್ಟೋಡಿ ನಿಂದೆಯನ್ನು ತಂದುಕೊಂಡಂತೆ ಮಹಾಶೂರರೆನಿಸಿದ ನಿಮಗಿದು ತರವಲ್ಲದ ಕೊರತೆಯೇ ಸರಿ. ನಿಮ್ಮ ಕೈಯಲ್ಲಿರುವ ಖಡ್ಗಗಳು ಭಾಸ್ಕರಕರಸಂಪರ್ಕದಿಂದ ಥಳಥಳಿಸುತ್ತ ನಿಮ್ಮ ಸ್ಥಿತಿಯನ್ನು ಕಂಡು ನಗುತ್ತಿರುವುದನ್ನೂ ನೀವು ಕಡೆಗಣಿಸುವುದೇ? ಒಡೆಯನು ಒಡನಾಡಿಯಂತೆ ತಾನೇ ಬಿಲ್ಲಿಗೆ ಬಾಣವನ್ನು ತೊಡಿಸಿ

ಯುದ್ಧಸನ್ನದ್ಧನಾಗಿರಲು, ಪಶುಪ್ರಾಯರಾಗಿ ಕಾಡುಗುಡ್ಡಗಳ ದಾರಿಯನ್ನನುಸರಿಸುವ ನಿಮ್ಮ ಅಪರಾಧವು ಕೇವಲ ಅಕ್ಷಮ್ಯವು. ಗೌರವವನ್ನು ಕಳಕೊಂಡು ಯಶಸ್ಸನ್ನು ನಾಶಪಡಿಸಿ ಯಾವ ಗಂಡವನ್ನು ಪರಿಹರಿಸಲೆಂದು ರಣಾಂಗಣವನ್ನು ತೊರೆದು ಓಡಿಹೋಗುತ್ತಿರುವುದೆಂಬ ವಿಚಾರವು ತಿಲಾಂಶವಾದರೂ ನಿಮ್ಮಲ್ಲಿರುವುದೇ? ನಿಮ್ಮ ಇದಿರಾಳಿಯೇನು ದೈತ್ಯನೇ; ಪನ್ನಗನೇ; ಪರ್ವತಾಕಾರನೇ? ರಾಕ್ಷಸನೇ! ವಿಚಾರವಮಾಡಿ ನೋಡಿದರೆ ನರನು; ಕ್ಷತ್ರಿಯನು; ಮಹೋತ್ಸಾಹಸಂಪನ್ನನಾದರೂ, ಸುಖಸಾಧ್ಯನು! ಗೋಪಾಲಕನು ಪಶುಗಳನ್ನು ಸೆಳೆಗೋಲಿಂದ ಹೊಡೆಯುವಂತೆ ಓಡಿಹೋಗುವ ನಿಮ್ಮನ್ನು ಆತನು ಕಣೆಗಳಿಂದ ಹೊಡೆಯುವುದು ಕೊರತೆಯಲ್ಲವೆ?

ತನಗಿಂತ ಕೀಳಾದವನಿಂದ ಹೊಡೆಯಿಸಿಕೊಂಡವನು ಪುರುಷನೆನಿಸಲಾರನು. ಆತನಿಗೆ ಹೆದರಿ ಓಡಿದವನ ಪಾಡನ್ನು ಹೇಳುವುದೇನು? ವಿರೋಧಿಯ ಹೊಡೆತವನ್ನನುಭವಿಸಿಯೂ ಒಡೆಯನನ್ನು ಬಿಡದಿರುವಾತನೇ ಸೇವಕನು. ಅಂತಹ ಹೊಡೆತವು ಸ್ವಾಮಿಗಲ್ಲದೆ ಸೇವಕನಿಗಲ್ಲ. ಅಷ್ಟು ಮಾತ್ರವಲ್ಲ; ನೊಂದವರನ್ನು ಮತ್ತೂ ಬಿಡದೆ ನೋಯಿಸುವಾತನು ಧರ್ಮಗೇಡಿಯು. ಈ ರಹಸ್ಯವನ್ನರಿತೂ ಕೂಡ ಒಡೆಯನನ್ನು ತೊರೆದು ಗಡಿಬಿಡಿಯಿಂದ ಓಡುವುದೆಂದರೆ, ನೀವು ಮರ್ಯಾದೆಯ ಮೇರೆಯನ್ನು ಮೀರಿದಂತೆಯೇ ಸರಿ. ರತ್ನಭ್ರಷ್ಟವಾದ ಆಭರಣಕ್ಕಿಂತಲೂ ರತ್ನವಿಲ್ಲದ ಭೂಷಣವೇ ಮೇಲೆನಿಸುವಂತೆ ಗುಣವನ್ನು ಕೆಡಿಸಿಕೊಂಡು ಬದುಕುವುದಕ್ಕಿಂತ ನಿರ್ಗುಣಿಗಳ ಜನ್ಮವಾದರೂ ಶ್ಲಾಘ್ಯವು. ಇಲ್ಲಿ ನಮ್ಮ ಪ್ರತಿಭಟನು ನಿಸ್ಸಹಾಯಕನಾಗಿರುವನು. ಆದುದರಿಂದ "ನಮಗಿಲ್ಲಿ ವೇಗವಾಗಿ ಸಾಗುವ ರಥಗಳಿಲ್ಲ; ನಾಗಾಲೋಟದ ಕುದುರೆಗಳಿಲ್ಲ; ಸಂರಂಭದೊಡನೆ ಬೃಂಹಿಸುವ ಗಜಘಟೆಗಳಿಲ್ಲ; ಉತ್ಸಾಹದಿಂದ ಮುಂದೊತ್ತುವ ಪದಾತಿಗಳಿಲ್ಲ;" ಎಂಬುದಾಗಿ ನೀವು ಭ್ರಮಿಸಲು ಕಾರಣವಿಲ್ಲ. ಎಸೆಯುತ್ತಿದ್ದ ಜಲಾಶಯವು ಪ್ರಭಾಕರನ ಪ್ರಖರಕಿರಣಗಳದೆಸೆಯಿಂದ ಬತ್ತಿಹೋದರೂ, ದುಸ್ತರವಾದ ಕೆಸರಿನಿಂದ ಕೂಡಿರುವಂತೆ ಈತನಿಗೆ ಹೆದರಿ ಪೌರುಷವನ್ನು ಕಳಕೊಂಡ ನೀವು ಕೇವಲ ನಿಂದೆಗೆ ಗುರಿಯಾದಿರಿ.

ತರುಲತಾಗುಲ್ಮಗಳಿಂದ ಸಾಂದ್ರವಾದುದರಿಂದ ದುಷ್ಪ್ರವೇಶ್ಯವೂ, ಗಾಳಿಯ ಸುಳಿದಾಟವಿಲ್ಲದುದರಿಂದ ನಿಷ್ಕಂಪವೂ, ವ್ಯಾಘ್ರಭಲ್ಲೂಕಾದಿ ಮೃಗಸೇವಿತವಾದುದರಿಂದ ಬಹುಭೀಕರವೂ, ವೈರಿವರ್ಗದ ಅವಗಾಹನೆಗೆ ಅಸಮರ್ಥವೆನಿಸಿದುದರಿಂದ ನಿರಪಾಯವೂ ಆಗಿರಬಹುದೆಂಬ ವಿಚಾರದಿಂದ ನೀವು ಇಂದು ಈ ಮಹೇಂದ್ರಾಚಲವನ್ನು ಮಂದಮತಿಗಳಂತೆ ಮರೆಹೊಂದುವಿರೇನು? ಹೀಗೆ ಸಾಂದ್ರತೆಯಿಂದ ಮುಂದಾಗಿ ಓಡಿಹೋಗಲು, ದಿಗ್ದೆಸೆಗಳನ್ನು ಜಯಿಸಿಕೊಳ್ಳಬೇಕೆಂಬಾತುರವೋ; ನಿಂದೆಗೊಳಗಾಗುವ ಕಾತರವೋ; ಕಾರಣವೇನು? ಅಂದು ಸುರಲೋಕದಲ್ಲಿ ನೆಲಸಲು ಉದ್ಯುಕ್ತರಾದ ದನುಜರನ್ನು ಹೊಡೆದೋಡಿಸಿ ಜಯಶಾಲಿಗಳೆನಿಸಿದ ನೀವಿಂದು ಬೇಡರೆನಿಸಿಯೂ, ಕಾಡುಗುಡ್ಡಗಳಲ್ಲಿ ನೆಗೆದೋಡಿ ಬೇಡದ ಕಾಡಾಡಿಗಳೆನಿಸುವುದೆ? ವಿರೋಧಿಗೆ ಬೆನ್ನಿತ್ತು ಓಡಿಹೋಗುವ ನಿಮ್ಮನ್ನು ಕಾಪಾಡಲು, ತೊದಲಡಿಯಲ್ಲಿ ತಪ್ಪಿಬೀಳುವ ಮಕ್ಕಳನ್ನು ಹಿಡಿದೆತ್ತುವ ತಂದೆಯಂತೆ ಒಡೆಯನು ತಾನೇ ಸಿದ್ಧನಾಗಿರುವಾಗ, ನಿಮ್ಮ ಉದ್ಯಮವಿದು ಬಹುಚೋದ್ಯವೆನಿಸುವುದು. ಸುರಿತವರು ವೈರಿಯನ್ನಿರಿಯಬೇಕೆಂದು ಅರಿತಿರಬೇಡವೆ? ನೀವಿಂದು ಧೃತಿಗೆಡದೆ ನಿಂದು ವಿರೋಧಿಬಲಜಲಧಿಯನ್ನು ಕಡೆಯಲು ಮಂದರಸಮಾನರೆನಿಸಬೇಡವೆ? ಗೊತ್ತುಗಾರರಾದ ನೀವಿಂದು ಶತ್ರುಪೋತಕ್ಕೆ ಸುತ್ತಲೂ ಮುತ್ತುವ ಕ್ರೂರತಿಮಿಂಗಿಲಗಳೆನಿಸಬೇಡವೆ? ಬಿಡದೆ ಕೈಗೂಡಿದ ಕಾರ್ಯದಿಂದ ಸ್ವಾಮಿಯನ್ನು ತುಷ್ಟಿಪಡಿಸಬೇಕಾದ ಸೈನಿಕರು ನೀವಲ್ಲವೆ? ಹಾಹಾ! ಕಷ್ಟವೇ! ನಿತ್ತಲ್ಲಿ ನಿಲ್ಲದೆ ಗೊತ್ತುಗುರಿಯಿಲ್ಲದೆ ಪಲಾಯನಗೈದಿರೇ! ಮಾನಕ್ಕೆ ಕುಂದು ತಂದಿರೇ! ಸೇನೆಯ ಹೆಸರಿಗೆ ದೋಷತಂದಿರೇ!

"ಸೈನಿಕರೆಂದರೆ ಕಾರ್ಯರಕ್ಷಣಾಸಂಸಿದ್ಧರು; ಪ್ರಾಣದಾನಸನ್ನದ್ಧರು; ತ್ರಿಕರಣಶುದ್ಧರು; ಮಾತ್ರವಲ್ಲದೆ, ಸತ್ಯಪ್ರತಿಜ್ಞರು; ಭಯಂಕರಾಕಾರರು; ಅಭಯ ಪ್ರದಾತರು" ಎಂಬ ಬಳಕೆಯ ತಿಳಿವೂ ನಿಮಗಿಲ್ಲವೆ? ರಣಕಾರ್ಯನಿರತರಾದ ನೀವು ಮರಣರಹಿತರೆಂಬುದನ್ನೂ ಇಂದು ಮರೆತಿರುವಿರೇನು! ಸುತ್ತಲೂ ಮುತ್ತುವ ಬೇಡರ ಬೆಲೆಯನ್ನರಿತುಕೊಳ್ಳುವ ಕೌತುಕದಿಂದ ವೈರಿಯು ಹರಿತವಾದ ಕತ್ತಿಯನ್ನೆತ್ತಿಕೊಂಡಿರಲು, ನೀವು

ಹಿಂಜರಿಯದೆ ಸ್ಥೈರ್ಯವನ್ನವಲಂಬಿಸಬೇಡವೆ? ಉನ್ನತವಾದ ವಕ್ಷಸ್ಥಲವುಳ್ಳ ತೇಜಸ್ವಿಯು ಕವಚಾದಿಗಳಿಂದ ಸಂಸಿದ್ಧನಾದರೂ, ಪ್ರಪಂಚದ ಪ್ರಾಣವನ್ನೇ ಆಹುತಿಗೊಳ್ಳಬೇಕೆಂಬ ಮಹಾರವದೊಡನೆ ಆತುರದಿಂದ ಹಾತೊರೆಯುವ ರಣಯಜ್ಞದಲ್ಲಿ, ನಿರ್ಭೀತಿಯಿಂದ ವರ್ತಿಸುವ ಧೀರನು ಮಾತ್ರವೇ ವೀರಪುಂಗವನೆನಿಸುವನು.

ಆದರೂ ನೀವು ನಿಮ್ಮ ಗತವೈಭವವನ್ನು ಮನಸ್ಸಿಗೆ ತಂದುಕೊಂಡಿರೆ? ಕಾರಿರುಳು ನಡೆದ ದಾರಿಯಲ್ಲಿ ನಟ್ಟನಡುವಗಲ ಕಾಲದಲ್ಲೂ ನಡೆಯದಾದಿರೇ? ಇಂದಿನ ನಿಮ್ಮ ದುಸ್ಥಿತಿಯೇನು! ಅಂದಿನ ನಿಮ್ಮ ಸುಸ್ಥಿತಿಯನ್ನೂ ಮರೆಯುವುದೆ? ಎಂದೆಂದಿಗೂ ಮರೆಯಲು ಸಾಧ್ಯವಿಲ್ಲದಂತೆ, ರಥಗಳ ದಾರಿಯನ್ನು ತಡೆಯಬೇಕೆಂದು ಕೆಡೆದ ಕುದುರೆಗಳ ಸೈನ್ಯವೆಂಬ ಬಂಡೆಗಳಿಂದಲೂ, ಕೂಲಂಕಷವಾಗಿ ಹರಿಯುವ ರಕ್ತಪ್ರವಾಹಗಳನ್ನು ಬಂಧಿಸಬೇಕೆಂದು ತಂದೊಟ್ಟಿದ ಬೆಟ್ಟಗಳಂತೆ ಬಿದ್ದ ಪೇರಾನೆಗಳ ಅಟ್ಟೆಗಳಿಂದಲೂ, ರಥಸಂಚಾರವು ತಡೆದುಹೋಗಲು ಕೆಚ್ಚೆದೆಯ ವೀರರು ವೈರಿಗಳೊಡನೆ ಮಾರ್ಮಲೆತು ನುಡಿವ ವೀರಾಲಾಪಗಳಿಂದಲೂ, ಆಯುಧಗಳ ಝಣತ್ಕಾರಗಳಿಂದಲೂ, ರೌದ್ರವನ್ನು ಕೆರಳಿಸುವ ಭೇರಿಗಳ ಭಾಂಕಾರಗಳಿಂದಲೂ ರಣರಂಗವು ಬಹುಭೀಷಣವೆನಿಸಿರಲು—ಕುಣಿದಾಡುತ್ತಿದ್ದ ಮುಂಡಗಳನ್ನು ಕಂಡು ಬೆಚ್ಚಿ ಓಡಿಹೋಗಬಾರದೆಂದು ಅಭ್ಯಾಸದ ಬಲದಿಂದ ಕಡಿವಾಣಗಳನ್ನು ಹಿಡಿದು ಎಳೆದುಕೊಳ್ಳಲು ಪೇಚಾಡುತ್ತಿದ್ದ ಸಾರಥಿಗಳೂ, ಕರ್ಣಮೂಲದ ವರೆಗೂ ಸೆಳೆದು ಬಿಡುವ ಕಣೆಗಳು ತಾಗುವ ಶಂಕೆಯಿಂದ ಮದಗಜಗಳನ್ನು ಓಡಲು ಬಿಡದೆ ಹೇಗಾದರೂ ಅಂಕೆಗೆ ತರಬೇಕೆಂದು ಆತುರದೊಡನೆ ಅಂಕುಶಗಳನ್ನೂರಲು ಚಡಪಡಿಸುತ್ತ ಮುಂಕರಾಗುತ್ತಿದ್ದ ಸಾದಿಗಳೂ, ಕಂಗೆಟ್ಟು ತಳಮಳಿಸುತ್ತಿರಲು—ವೀರವಾಣಿಗಳಿಂದ ಸತ್ವಶಾಲಿಗಳನ್ನು ಹುರುಪುಗೊಳಿಸಿ ಕೆರಳಿಸಿ ಲೋಕಾದ್ಭುತಕರವೆನಿಸಿ ಮೆರೆದ ಮಹಾಸುರರ ಘೋರವಾದ ಸಂಗ್ರಾಮದಲ್ಲಿಯೂ "ಪ್ರಮಥರೇ ಪ್ರಥಮಶ್ರೇಣಿಯ ವೀರರೆ"ಂದು ನೀವು ಹೆಸರಿಗೆ ಬಂದವರಲ್ಲವೆ? ಮುಂದರಂತೆ ನೀವಿಂದು ನಿಂದೆಗೊಳಗಾಗುವುದೆ? ಎಲ್ಲರೂ ಪೌರುಷವನ್ನವಲಂಬಿಸಿ ಗುಂಪಾಗಿರಿ!

ಹೀಗೆ ಪರುಟವಿಸಿದ ಪಡೆವಳನ ಗುಡುಗನ್ನು ಕೇಳಿ ಕಿರಾತಪತಿಯು ದರಹಾಸವಿಕಸಿತಮುಖಾರವಿಂದನಾಗಲು, ಹೆದರಿ ಚದರಿ ಕಂಗೆಟ್ಟ ಬೇಡರೆಲ್ಲರೂ ಚೇತರಿಸಿ ಬಂದು ಒಂದಾಗಿ ಸೇರಿ ತಲೆವಾಗಿದರು.

---

೨೩ ಶಬರತಾಪಸರ ಸಂಗರ

"ತಾಪಸನ ವಿಶಿಖಾನಲನಿಂದ ಬೆಂದು ನೊಂದು ಬಸವಳಿದು ಬಾಡಿ ತಲೆಮರಸಿಕೊಳ್ಳುವುದೇ ಮೇಲೆಂದು ನುಸುಳುತ್ತ ಓಡಿ ಹೋಗುವ ನಂದಿ ಮೊದಲಾದ ಪ್ರಮಥರು ಕೇಳಬೇಕು! ಇಲ್ಲಿ ನಾನಿರುವಾಗ ಯಾರಿಗೂ ಅಂತಹ ಹೆದರಿಕೆಗೆ ಕಾರಣವಿಲ್ಲ! ಎಲ್ಲರೂ ಇಲ್ಲಿಗೀಗಲೇ ಬರಬೇಕು!" ಎಂದು ಕೇಳಿಸಿದ ಹರನಿರೂಪವು ಬಾಡಿದ ಬೇಡರಿಗೆ ಶೀತಲೋದಕದಂತೆ ಪರಮಾನಂದಕರವಾಯಿತು. ವೈರಿಯ ಬಲದಿಂದ ಬಲವಳಿದು ತಳಮಳಿಸುವ ಪುಳಿಂದರಿಗೆ ಶಂಕರನೇ ಕಲ್ಯಾಣಕಾರಕನೆಂದು ಮನವರಿಕೆಯಾಯಿತು. ಅರಾತಿಯ ಶರಾರ್ಣವದಲ್ಲಿ ಮುಳುಗಿ ಪ್ರಾಣಸಂದೇಹಕ್ಕೊಳಗಾಗಿ ತಲ್ಲಣಿಸುತ್ತಿದ್ದ ಕಿರಾತರಿಗೆ ಪರಮೇಶ್ವರನೇ ಪಾರದರ್ಶಕನೆಂಬ ಅರಿವಾಯಿತು. ಯುದ್ಧರಂಗದಿಂದ ಹಿಂಜರಿದು ಓಡಿಹೋಗುತ್ತಿದ್ದ ಬೇಡಪಡೆಗೆ ಮೃಡನು ಮೂಡುವ ಸೂರ್ಯನಂತೆ ಪರಮೋತ್ಸಾಹದಾಯಕನಾದನು. ಪೂರ್ವಾಹ್ನದ ಹೊತ್ತು ಮೀರಿದಂತೆ ಮಹಾತರುಚ್ಛಾಯೆಯು ಅದರೆಡೆಗೆ ಬಂದಡಗಿಕೊಳ್ಳುವಂತೆ ಕೂಡಲೆ ಬೇಡಪಡೆಯು ಕಿರಾತಮೂರ್ತಿಯ ಬಳಿಗೈದಿ ನೂತನವಾದ ಸ್ಫೂರ್ತಿಯಿಂದ ಬಲಗೊಂಡು ನಲಿದಾಡಿತು.

ಆಗ ಶಬರೇಶ್ವರನು ಗುರಿಗೊಂಡು ತಪಸ್ವಿಯನ್ನು ಹೊಡೆಯಬೇಕೆಂದು ಹೆದೆಗೊಂಡ ಪಿನಾಕಧನುಸ್ಸಿಗೆ ಕಣೆಗೂಡಿಸಿ ಕರ್ಣಮೂಲದವರೆಗೂ ಸೆಳೆದು ಪ್ರಯೋಗಿಸುತ್ತಿರಲು, ಇಂದ್ರಕೀಲಾಚಲವು ಛಿನ್ನವಿಚ್ಛಿನ್ನವಾಗಿ ಒಡೆದು ಹಾರುವುದೋ ಎಂಬಂತೆ ಅಭೂತಪೂರ್ವವಾದೊಂದು ಮಹಾಧ್ವನಿಯು ಕೇಳಿಸಿತು. ಆಗ, "ಇದೀಗ ಶಬರತಾಪಸರೊಳಗೆ

ನಡೆಯಲಿರುವ ಭೀಕರಸಮರದ ನಾಂದಿಯು; ನಾವಿದನ್ನೀಗಲೆ ತಪ್ಪದೆ ನೋಡಬೇಕು" ಎಂಬ ಕುತೂಹಲದೊಡನೆ ಪ್ರಮಥರ ಸಂಘಗಳು ಗಿರಿಶಿಖರಗಳಲ್ಲಿ ವಿಚಿತ್ರತರದ ಬಂಡೆಗಳಂತೆ ನಿಶ್ಚಲವಾಗಿ ಕುಳಿತುಕೊಂಡು ನೋಡುತ್ತಿದ್ದುವು.

ಜಯಶೀಲನಾದ ತಾಪಸನು ಪ್ರಯೋಗಿಸಿದ ಬಾಣಸಂಘಾತವನ್ನು ಶಬರನು ಬಹಳ ಜಾಣ್ಮೆಯಿಂದಲೇ ಪರಿಹರಿಸಿದನು. ಅದನ್ನು ಕಂಡು ಪಾಂಡವನು, ಆತನ ನಿರಂತರಾಭ್ಯಾಸದ ಪಾಟವವನ್ನು ಕೊಂಡಾಡುತ್ತ, ಅವಸಾನಗೊಳಿಸುವ ಸಾಯಕಗಳಿಂದ ಶಬರನ ಶರಜಾಲಗಳನ್ನು ಕೇವಲ ಲೀಲೆಯಿಂದಲೇ ತುಂಡಿಸಿದನು. ಮಾತ್ರವಲ್ಲದೆ, ತನ್ನ ರಣನೈಪುಣ್ಯವನ್ನು ತೋರಿಸಬೇಕೆಂದು ಬಹು ಚಾತುರ್ಯಸಾಧ್ಯವೆನಿಸುವ ಚಾರವೇ ಮೊದಲಾದ ಗತಿವಿಶೇಷಗಳಿಂದ ಉತ್ಸಾಹಪ್ರೇರಿತನಾಗಿ ರಣರಂಗದಲ್ಲಿ ಸಂಚರಿಸಿದನು. ಒಡನೊಡನೆ ಮೂಡಿಗೆಯಿಂದ ಶರವಿತತಿಯನ್ನು ತೆಗೆತೆಗೆದು ಮಹಾಧನುಸ್ಸಿನ ಪಿಶಂಗವರ್ಣದ ಶಿಂಜಿನಿಗೆ ಜೋಡಿಸಿ ಸೆಳೆಯುವ ರಭಸಕ್ಕೆ ಕೆಂಗಿಡಿಗಳು ಹೊರಹೊಮ್ಮುತ್ತಿರಲು, ಆ ಮಹೋದ್ದಂಡ ಗಾಂಡೀವಿಯು ಮಾರ್ತಂಡಮಂಡಲದಂತೆ ಪ್ರಚಂಡನೆನಿಸಿದನು. ಕೂಡಲೆ ಪಿನಾಕಿಯು ಕೋಪಸಂತಪ್ತನಾಗಿ ತಪನಾಸ್ತ್ರವನ್ನು ಹೂಡಲು, ಒಡನೆಯೆ ಅರ್ಜುನನು ಎಚ್ಚ ಮೋಡವು ಬೇಗನೆ ನೆಗೆದೋಡಿ ಗಗನದಲ್ಲಿ ಗುಂಪುಗೂಡಿ ಗೂಡಿನಂತೆ ಅದನ್ನಾವರಿಸಿ ಮರೆಗೊಳಿಸಿತು. ಆಗ ತಪಸ್ವಿಯು ಕೋಪಾವಿಷ್ಟನಾಗಿ ಶರವೃಷ್ಟಿಯನ್ನು ಕರೆಯಲು, ಹರನು ಬಿರುಗಾಳಿಯಿಂದ ನಿವಾರಿಸಿದನಲ್ಲದೆ, ಬಿಡುವಿಲ್ಲದೆ ಪ್ರಯೋಗಿಸಿದ ಆತನ ಸುವರ್ಣಬಾಣಗಳು ಮಯೂರಬರ್ಹಗಳಿಂದೊಪ್ಪುತ್ತ, ಗುಡುಗಿನಂತೆ ಕರ್ಣಕಠೋರವಾಗಿ ಗರ್ಜಿಸುತ್ತ, ವಿದ್ಯುನ್ಮಾಲೆಯಂತೆ ಗಗನನಾಕಗಳನ್ನು ಬೆಳಗಿಸುತ್ತ ಎತ್ತೆತ್ತಲೂ ನಿಲ್ಲದೆ ವ್ಯಾಪಿಸುತ್ತಿದ್ದುವು. ಹೀಗೆ ಬುಸುಗುಟ್ಟುತ್ತ ಸುತ್ತಲೂ ಮುಸುಕಿ ಮುಂಬರಿವ ವಿಶಿಖವಿಶೇಷಗಳನ್ನು ಮೂಡಿಗೆಯಿಂದ ಮೊಗೆಮೊಗೆದೇರಿಸಿದ ಪಾಂಡವನ ಪ್ರತಿಶರಗಳು ತುಂಡಿಸಲಾರದೆ ಹೋದುವು. ಲಕ್ಷ್ಯಭೇದಿಗಳಾದ ತನ್ನ ಶರಜಾಲಗಳು ಅಸಮಾನಮಹಿಮೆಯುಳ್ಳ ಬೇಡನ ಕಣೆಗಳೊಡನೆ ಶರಣೆನ್ನುವ ಪರಿಯನ್ನರಿತು ನರನು ಪರಮಾಶ್ಚರ್ಯಭರಿತನಾಗಿ ಫಕ್ಕನೆ ಸ್ತಬ್ಧನಾದನು.

ಈಶರಣಾಸಕ್ತನೂ, ಸಿಂಹವಿಕ್ರಮನೂ, ಸುಂದರಕಾಯನೂ, ಉದಾರನೂ, ಜಯಾಭಿಲಾಷೋತ್ಸುಕನೂ ಎನಿಸಿದ ನರನು-ಜಲಮಯ ವಾಗಿ ಪೊಡವಿಯು ಕೆಡದಂತೆ ನೋಡಿಕೊಳ್ಳುವೆನೆಂದು ತಲೆಯೆತ್ತಿ ನಿತ್ತು ಕೊಂಡು, ಕೇಸರಿಗಳಿಗೆ ನಿವಾಸವನ್ನು ಕಲ್ಪಿಸಿಕೊಡುತ್ತ, ಸಿಂಹಪ್ರಿಯನೂ, ಹಿಮಮಯನಾಗಿ ಸುಂದರವಿಗ್ರಹನೂ, ಭೂಧರರಾಜನೆನಿಸಿ ಲೋಕೋನ್ನತನೂ, ಶಾಂತಿಕಲ್ಪಕನೆನಿಸಿ ಸುರನರದೈತ್ಯದಾನವಋಷಿಗಣಸಂಸ್ತುತ್ಯನೂ ಎನಿಸಿ ತೋರುವ ಹಿಮವಂತನಂತೆ ಮೆರೆಯುತ್ತಿದ್ದನು. ದುಷ್ಟಸಂಹನನಾಸಕ್ತನೂ, ಮಹೇಂದ್ರಪ್ರಿಯನೂ, ಸುಧಾಧವಳಿಮಶೀಲನೂ, ದಾನಾಸಕ್ತನೂ, ವಿಜಯಾಕಾಂಕ್ಷನೂ ಎನಿಸಿದ ಆ ರಾಜಶ್ರೇಷ್ಠನು-ಲೋಕ ಕಂಟಕರಾದ ರಾಕ್ಷಸರ ಹೋರಾಟದಲ್ಲಿ ನಿರತನೂ, ಇಂದ್ರಪ್ರಿಯನೂ, ಪೀಯೂಷಶುಭ್ರಗಾತ್ರನೂ, ದಾನಕ್ಷರಣಶೀಲನೂ, ಜಯಾಭಿಲಾಷೋತ್ಸನ್ನನೂ ಎನಿಸಿ ಐರಾವತವೆಂಬ ಹೆಸರಿನಿಂದ ಮೆರೆವ ಗಜರಾಜನಂತೆ ವಿರಾಜಿಸುತ್ತಿದ್ದನು. ಭೂಭರಣಾಸಕ್ತನೂ, ಬದರಿಕೆಯಲ್ಲಿ ತಪೋನಿರತನಾಗಿ ನಾರಾಯಣಪ್ರಿಯನೂ, ಧರಣೀಸುಧಾರಣಾಸಕ್ತನೂ, ದೈತ್ಯದಾನವ ತಾಪಸಗಣವಿಜಯಾಂಗನಾಸಂಸ್ತೂಯಮಾನನೂ ಎನಿಸಿದ ತಾಪಸೋತ್ತಂಸನು-ಭೂಧಾರಣಾಸಕ್ತನೂ, ತಲ್ಪವೆನಿಸಿ ಸದಾಸನ್ನನಾರಾಯಣನೂ, ಸುಧಾಪ್ರಿಯನೂ, ದೈತ್ಯದಾನವಋಷಿಗಣರಮಾಸಂಸ್ತುತ್ಯನೂ ಎನಿಸಿ ಮೆರೆವ ಸರ್ಪರಾಜನಂತೆ ವಿಭ್ರಾಜಿಸುತ್ತಿದ್ದನು.

ಆ ಗಾಂಡೀವಿಯು ತನ್ನ ಪ್ರಯತ್ನವು ಹೀಗೆ ನಿಷ್ಫಲವಾದುದನ್ನು ನೋಡಿ ಕಡುಮುಳಿದು ಗುಡುಗುಟ್ಟಿ ಕೆಂಗಿಡಿಗಳನ್ನು ಹೊರಗೆಡಹುತ್ತಿದ್ದನು. ಕೋಪಾನಲೋದ್ದೀಪಿತನಾದ ಆ ಪಿಶಂಗಜಟಾಜೂಟನು, ಓಷಧಿವಿಶೇಷಗಳಿಂದಲೂ ಪ್ರಜ್ವಲಿಸುವ ದವಾಗ್ನಿಯಿಂದಲೂ ಸುತ್ತುವರಿದು ಥಳಥಳಿಸುವ ಹಿಮಾದ್ರಿಯಂತೆ ಅಸಹನೀಯನೆನಿಸಿದನು. ಆದರೂ ವೃಡನು ಪರಿವೃಢಪ್ರಭಾವನಾಗಿ, ಗಾಂಡೀವದ ಮೂಲಕ ಖಂಡಿಸಲಾರದ ಪ್ರಕಾಂಡ ವಿಶಿಖಗಳನ್ನು ಧನುರ್ಮಂಡಲದಿಂದ ನಿರಂತರವೂ ಸುರಿಸುತ್ತಿದ್ದನು. ನರನು ಸೂರ್ಯಮಂಡಲದಿಂದ ಹೊರಡುವ ಪ್ರಖರಕಿರಣಗಳಂತೆ ಅನಿವಾರ್ಯವೆನಿಸಿ ಸುರಿವ ಆ ಶಿವಶರಪರಂಪರೆಗಳನ್ನು ನಿವಾರಿಸಲುಉದ್ಯುಕ್ತ

ನಾಗಿ, ಲೋಕವು ಶರವೃಷ್ಟಿಮಯವೆನಿಸುವಂತೆ ಒಡನೊಡನೆ ಅಕ್ಷಯತೂಣೀರದಿಂದ ಬಾಣಗಳನ್ನೆಳೆದೆಳೆದು ಸುರಿಸುತ್ತಿದ್ದನು. ಯೋಚಿಸಿ ತಿಳಿವುದಕ್ಕೂ ಅಸದಳವೆಂಬಂತೆ ಘನಗಂಭೀರಧ್ವನಿಯೊಡನೆ ಹೊರಟು ಬರುವ ವಿಷಮಾಕ್ಷನ ಶರಸಂತತಿಯು ಕಿರೀಟಿಯ ಶರಾಸಾರವನ್ನು ಖಂಡಿಸಿ ನಿವಾರಿಸುತ್ತ ಪಸರಿಸುತ್ತಿರಲು, ನರನ ಶರಗಳು ಮತ್ತೂ ಭರದಿಂದಲೇ ಹೊರಡುತ್ತಿದ್ದುವು. ಎದುರಾಳಿಯ ಬಾಣಗಳನ್ನಿರದೆ ಖಂಡಿಸಬೇಕೆಂದು ಮಂಡಳಿಸಿದ ಧನುರ್ದಂಡವನ್ನು ದೋರ್ದಂಡದಲ್ಲಿ ಧರಿಸಿಕೊಂಡು ವಿಶಿಖಾಸಾರಗಳಿಂದ ಭೂವ್ಯಂತರಿಕ್ಷಗಳನ್ನೂ ನಿಖಿಲದಿಙ್ಮಂಡಲಗಳನ್ನೂ ತುಂಬಿಸುತ್ತ, ಗತಿವಿಶೇಷಗಳಿಂದ ತಾನೆತ್ತೆತ್ತಲೂ ರಣರಂಗದಲ್ಲಿ ಚಲಿಸುತ್ತ, ನೋಟಕರಾಗಿದ್ದ ಋಷಿಗಣಗಳ ಭಾವನೆಗೆ ಆ ನರನ ಹೊಡೆದಾಟವು ಪ್ರಳಯನಾಟಕವಾಗಿ ತೋರುತ್ತಿತ್ತು.

ಅಸಮಾನರಣನಿಪುಣನಾದ ಫಲುಗುಣನ ಗರಿಗಟ್ಟಿದ ಬಾಣಗಳು ವಾಯುವೇಗದಿಂದ ಮೂಜಗವನ್ನೂ ವ್ಯಾಪಿಸಿದುವು. ಆಗಲೇ ಜಗದೊಡೆಯನ ಮಾರ್ಗಣಗಳು ಗತಿಗೆಟ್ಟು ವಿಷಮತೆಯನ್ನೈದಿದುವು. "ಈತನು ದೇವದೇವನನ್ನೂ ಬಿಡಲಾರನೇ" ಎಂಬ ಸೋಜಿಗದೊಡನೆ ದಾನವಧ್ವಂಸಿಗಳಾದ ಪ್ರಮಥರ ಕೂಟಗಳು ನರನ ವಿಷಯವಾಗಿ ತಮಗುಂಟಾದ ಮೆಚ್ಚುಗೆಯನ್ನು ಉಚ್ಚರಿಸುತ್ತಿದ್ದುವು. ಮಹಾದೇವನನ್ನು ನೋಡಬೇಕೆಂದು ಇಂದ್ರಕೀಲಾಚಲವನ್ನೈದಿದ ತುಂಬುರುನಾರದರೇ ಮೊದಲಾದ ದೇವರ್ಷಿಸಂಘಗಳು ಅಭೂತಪೂರ್ವವೆನಿಸುವ ಈ ಭೀಕರಸಂಗರವನ್ನು ನೋಡುವೆ"ವೆಂದು ದ್ರುತಗತಿಯಿಂದ ಗಗನವನ್ನೈದಿದುವು. ಸಿದ್ಧಚಾರಣರ ಗಡಣಗಳು ಸಂಸಿದ್ಧವಾದ ಯುದ್ಧವನ್ನು ನೋಡುವೆವೆಂದು ಬಂದು ಮುಂದೈಸಿದುವು.

ಗಿರೀಶನು ಹೀಗೆ ಆಗ್ರಹಪೂರ್ವಕವಾಗಿ ವಿಗ್ರಹದ ಮೂಲಕ ನರನ ಪೌರುಷದ ಸಾರವನ್ನು ಒರೆಹಚ್ಚುತ್ತಿರಲು, ಪ್ರೇಕ್ಷಕರಾಗಿದ್ದ ಗಣಾಧಿಪರೂ ಮುನಿವರ್ಯರೂ, ತತ್ವಜ್ಞರೂ, ಸಿದ್ಧಚಾರಣರೂ ಬೆಚ್ಚಿ ಬೆರಗಾಗುತ್ತಿದ್ದರೆಂಬುದನ್ನು ಹೆಚ್ಚಿನ ರೋಮಾಂಚದೊಡಗೂಡಿದ ಅವರ ದೇಹಗಳೇ ಸೂಚಿಸುತ್ತಿದ್ದುವು.

೨೪ ನರನ ವಿತರ್ಕ

ನರನು ಕಿರಾತಪತಿಯ ರಣನೈಪುಣ್ಯವನ್ನು ನೋಡಿ "ವಿಜಯಿಯೆನಿಸಿ ಮೆರೆದುಕೊಂಡ ತನಗೆ ಇಂದು ಈತನೊಡನೆ ಹೀಗೆ ಅಪಜಯವುಂಟಾಗಲು ಕಾರಣವೇನಿರಬಹುದು" ಎಂದು ಬಗೆವಗೆಯಾಗಿ ಯೋಚಿಸತೊಡಗಿದನು—

ಇದೇನು! ತನಗೊಂದು ದುರ್ದಿನವೊ! ಇಂದಿನ ಕದನದಲ್ಲಿ, ಭದ್ರವಾದ ಕೋಟೆಕೊತ್ತಲಗಳಂತೆ, ನದಿಗಳಿಗೆ ಉಗಮವಾದ ಪರ್ವತಪಂಙ್ತಿಗಳಂತೆ ದಾನಧಾರೆಗಳನ್ನು ಸುರಿಸುತ್ತ ಔದ್ಧತ್ಯದಿಂದ ಕೋಲಾಹಲವೆಬ್ಬಿಸುವ ಗಜಘಟೆಗಳ ಕಾಟವಿಲ್ಲ. ಸೂರ್ಯಪ್ರಭೆಯಂತೆ ಅಮೋಘರತ್ನಗಳಿಂದ ಥಳಥಳಿಸುವ ಕೇತನತತಿಗಳಿಂದೊಪ್ಪುವ ರಥಪಙ್ತಿಗಳ ಚೀತ್ಕಾರಗಳ ತೀಕ್ಷ್ಣತೆಯಿಲ್ಲ; ಮೇರೆವಿರಾರಿ ಹರಿವ ಪಾರಾವಾರದಂತೆ ಕುಂತಾವಲಿಗಳೆಂಬ ತರಂಗಮಾಲೆಗಳಿಂದಲೂ, ಚಾಮರಸಮೂಹವೆಂಬ ನೊರೆವಿಂಡುಗಳಿಂದಲೂ ಮೆರೆಯುತ್ತ ದಿಗ್ದೆಸೆಗಳನ್ನಾವರಿಸುವ ತುರಗಸೈನ್ಯಗಳ ರಂಭಾಟವಿಲ್ಲ. "ಹೊಡೆಯಿರಿ! ಕೆಡಹಿರಿ" ಎಂದು ಅಬ್ಬರದಿಂದ ಬೊಬ್ಬಿಡುತ್ತ ಹೂಡುವ ಶಸ್ತ್ರಾಸ್ತ್ರಗಳ ಸಂಚಾರವು ಭಾಸ್ಕರಕಿರಣಗಳಿಂದ ಮಿಂಚುವ ಮಿಂಚಿನ ಬಳ್ಳಿಗಳಂತೆ ಅಂತರಿಕ್ಷದಲ್ಲಿ ಗೋಚರಿಸುವುದಿಲ್ಲ. ವೀರರನ್ನಾವರಿಸಿ ಗಿಳಿಂಕರಿಸಬೇಕೆಂದು ಬರುವ ಕಾಲನ ಸಂಬಂಧಿಯಂತೆ, ಕತ್ತಲೆಯ ಮೊತ್ತದಂತೆ, ನೆಗೆದೇರುವ ಹೊಗೆಯಂತೆ ಮುಂದೊತ್ತಿ ವ್ಯಾಪಿಸುವ ಅಶ್ವಸೈನ್ಯಗಳ ಖುರಪುಟೋದ್ಧತಿಯಿಂದಲೂ, ಗಿರಗಿರನೆ ತಿರುಗುವ ಚಕ್ರಾರಪಙ್ತಿಗಳಿಂದಲೂ ಏಳುವ ಧೂಳೀಜಾಲವನ್ನು ಕೊಂಡೊಯ್ಯುವ ಚಂಡಮಾರುತನ ಹುಯ್ಯಲಿಲ್ಲ. ವೀರಪುಂಗವರನ್ನು ಆವರಿಸಿಕೊಳ್ಳಬೇಕೆಂದು ಅಹಮಹಮಿಕೆಯಿಂದ ಬಂದು ಬಿಡುಗಣ್ಣಿಂದ ಹುಡುಕುವ ಸುರಸುಂದರಿಯರ ನೇತ್ರೋತ್ಪಲಗಳಿಗೆ ಪ್ರದೋಷಕಾಲವೆಂಬ ಭ್ರಮೆಯನ್ನು ಕಲ್ಪಿಸುತ್ತ, ಪೀತಾಂಬರದಂತೆ ಅಂಬರವನ್ನಾವರಿಸುವ ಧೂಳೀವಿಸರದ ಸಂಭವವಿಲ್ಲ. ಘನಗಂಭೀರವಾದ ಭೇರೀನಿರ್ಘೋಷದೊಡನೆ ಸ್ಪರ್ಧಿಸುವ ಚೀತ್ಕಾರಗಳಾಗಲಿ, ಅಶ್ವಸೈನ್ಯಗಳ ಹೇಷಿತಗಳಾಗಲಿ, ಗಜಘಟೆಗಳ ಬೃಂಹಿತಗಳಾಗಲಿ ಕೇಳಿಸುವುದಿಲ್ಲ. ಇದೊಂದು ಹೊಸತೆರದ ಸಂಗರವು!

ವಿಚಾರವಮಾಡಿ ನೋಡಿದರೆ, ಈ ಹೋರಾಟದಲ್ಲಿ ಪೌರುಷಕೀರ್ತಿಗಳನ್ನು ಗಳಿಸಿಕೊಳ್ಳಬೇಕೆಂಬ ಉತ್ಸಾಹದಿಂದ ವೈರಿಗಳು ಗುರಿಯಿಟ್ಟ ವಿಶಾಲವಾದ ಉರಸ್ಥಳವನ್ನು ಹೊಡೆಯಲು ಕವಿಯುವ ಕಣ್ಣುಗತ್ತಲೆಯನ್ನು ನಿವಾರಿಸುವಂತೆ ಕರಿಗಳು ಸೊಂಡಿಲುಗಳಿಂದ ಹೊರಗೆಡಹುವ ಶೀಕರಗಳ ಶೈತ್ಯೋಪಚಾರದ ಸಂಗತಿಯಿಲ್ಲ. ಕರಿಶೀಕರಗಳ ದೆಸೆಯಿಂದ ನನೆದುಹೋದ ಹಸ್ತ್ಯಾರೋಹಿಗಳ ಕವಚಗಳಲ್ಲಿಯ ರತ್ನವಿಶೇಷಗಳು ದಿವಾಕರನ ಕರಸಂಪರ್ಕದಿಂದ "ಇಂದ್ರಚಾಪವದೋ ಒಡಮೂಡಿ ತೋರುವುದು" ಎಂಬ ಭ್ರಮೆಯನ್ನು ಮನಸ್ಸಿಗೆ ಒಡಮೂಡಿಸುವ ಗಡಿಬಿಡಿಯಿಲ್ಲ. ಗಜಗಳ ದಂತಪ್ರಹತಿಗಳಿಂದ ಮೂರ್ಛೆಗೊಂಡು ಬೀಳುವ ಜೋದರನ್ನು ವರಿಸಿಕೊಳ್ಳಬೇಕೆಂಬ ಕುತೂಹಲದ ಸುರಸುಂದರಿಯರ ಕೈಗಳಿಂದ ಬೀಳುವ ಮಂದಾರಮಾಲೆಗಳ ಶೀತಲಸೌರಭ್ಯವು ಕವಿದ ನಿಷಾದಿಗಳ ಮೋಹವನ್ನು ನಿವಾರಿಸುವ ಸೋಜಿಗದ ಸುಳಿವಿಲ್ಲ.

ಅಷ್ಟುಮಾತ್ರವಲ್ಲ; ವಜ್ರಾಹತಿಗೆ ಹೆದರಿ ಮೈನಾಕವು ಸಮುದ್ರವನ್ನು ಪ್ರವೇಶಿಸುವಂತೆ ಮದಗಜವೊಂದು ಶತ್ರುಸೇನಾಂಬುಧಿಯನ್ನು ಪ್ರವೇಶಿಸುವ ಅಬ್ಬರಕ್ಕೆ ಚದರಿ ಬೊಬ್ಬಿರಿವ ಚತುರಂಗತರಂಗಾವಲಿಗಳ ಘೋಷವು ಕೇಳಿಸಲವಕಾಶವಿಲ್ಲ. ರಭಸದಿಂದ ಮುಂದುವರಿವ ರಥಿಕರ ದಾರಿಯನ್ನು ಮುಂದೈಸುವಂತೆ ತುಂಡಾಗಿ ಬಿದ್ದ ಸೊಂಡಿಲುಗಳ ತಂಡವನ್ನಂತೂ ಕಂಡವರಿಲ್ಲ. ರಣರಂಗದಲ್ಲಿ ಮಡಿದು ಬಿದ್ದ ರಮಣರ ಎದೆಯಲ್ಲಿ ತಲೆಮುಡಿಗಳನ್ನು ಕೆದರಿಕೊಂಡು ಹೊರಳಾಡುವ ನಾರೀಮಣಿಯರಂತೆ ಮಯೂರಬರ್ಹಗಳಿಂದೊಪ್ಪುತ್ತ, ಹಿಡಿಕೆಗಳು ಮಾತ್ರವೇ ತೋರಿಬರುತ್ತ ಯುದ್ಧದಲ್ಲಿ ಬಿದ್ದು ಹೋದ ವೀರರ ಎದೆಯಲ್ಲಿ ನಾಟಿದ ತೋಮರಗಳ ಕರುಣಾಜನಕದೃಶ್ಯಗಳಿಲ್ಲ. ಹದಗೆಟ್ಟ ಕದನದಲ್ಲಿ ಕ್ಷಣಮಾತ್ರದಿಂದಲೇ ಅಸಂಖ್ಯವೀರರು ಬಾಳ್ವೆಯನ್ನು ತೊರೆಯುತ್ತಿರಲು, ತಿಂದು ತೃಪ್ತಿಪಡಬೇಕೆಂಬ ಲವಲವಿಕೆಯಿಂದ ಕೆನ್ನಾಲಗೆಯನ್ನು ನೀಡುತ್ತ ಕುಣಿಕುಣಿದಾಡುವ ಮೃತ್ಯುದೇವತೆಯ ರಂಗಭೂಮಿಯ ತೆರೆಯು ತೆರೆದಿರುವಂತೆ ತೋರುವುದಿಲ್ಲ. ಮೇರೆ ಮೀರಿ ಹರಿಯುವ ರಕ್ತಪ್ರವಾಹಗಳಲ್ಲಿ ತೇಲುತ್ತ ಬಂದು ಸಿಲುಕಿದ ಹೆಣದ ರಾಶಿಗಳು ಕೊಳೆತು ಉಂಟಾದ ಕೋಳ್ಮೆಸರಿಂದ

ತೀರಗಳು ದುಷ್ಪ್ರವೇಶ್ಯಗಳಾಗಿ ಅಸಹ್ಯವೆನಿಸುವಂತೆ ಇಂದಿನ ರಣರಂಗವು ಬೀಭತ್ಸರಸೋತ್ಪಾದಕವೆನಿಸಿಲ್ಲ.

ಹಾಗಿದ್ದರೂ ಕೂಡ, ಲೋಕವನ್ನು ಬೆಳಗಿಸಿ ಮೆರೆವ ಭಾಸ್ಕರ ತೇಜವು ನಿಶಾಕರಕಿರಣದ ಮುಂದೆ ತಲೆಮರಸಿಕೊಳ್ಳುವಂತೆ ದುರ್ವಾರ ವಿಕ್ರಮರಾದ ಮಹಾರಥರನ್ನು ಭಂಗಿಸಿ ವಿಜಯಿಯೆನಿಸಿ ಮೆರೆವ ನಾನಿಂದು, ಈ ಬೇಡನ ಕೂಡೆ ಹೋರಾಡಿ ಕುಂಠಿತವಿಕ್ರಮನೆನಿಸಿಕೊಳ್ಳುವುದು ನಿಂದೆಗೀಡಲ್ಲವೆ? ಈ ಸಂಗತಿಯಲ್ಲಿ ಸಹಜವಾಗಿ ಯೋಚಿಸಿದಷ್ಟೂ ಬಗೆಹರಿಯದ ಸೋಜಿಗವೇ ತಲೆದೋರುವುದು. ಗಾಂಡೀವನಿರ್ಮುಕ್ತಗಳಾದ ಶರಜಾಲಗಳು, ಈ ಕಿರಾತಪತಿಯೊಡನೆ ಕುಂಠಿತವಾಗುವುದೆಂದರೆ ಇದೇನು ದೈವಮಾಯೆಯೊ; ನನ್ನ ಬುದ್ಧಿವಿಪರ್ಯಾಸವೋ; ಅಥವಾ ನನ್ನ ಶಕ್ತಿಯು ಗಲಿತವೆನಿಸಿತೊ? ಒಂದು ವೇಳೆ ನಾನು ಅರ್ಜುನನಲ್ಲವೊ? "ವೇಷಧಾರಿಯಾದರೂ ಕಾರ್ಯಮಹತ್ವವೇ ಯೋಗ್ಯತೆಯನ್ನು ತಿಳಿಸುವುದೆ"ಂಬ ನಾಣ್ಣುಡಿಯಂತೆ ಅಂತರಿಕ್ಷವನ್ನೇ ವಿಭಾಗಿಸುವಂತೆ ಕೇಳುವ ಧನುಷ್ಟಾಂಕಾರವುಳ್ಳಾತನು ಕಿರಾತನೆ? ಕಿರಾತವೇಷಧಾರಿಯಲ್ಲದೆ ನಿಜವಾದ ನಿಷಾದನಿವನಲ್ಲ! ರೋಷಾವೇಶದೊಡನೆ ಹೂಂಕರಿಸುವಂತೆ ಧನುಷ್ಟಂಕಾರವು ಎಡಬಿಡದೆ ಕೇಳುತ್ತಿರುವುದು. ಕಿವಿವರೆಗೂ ಸೆಳೆದ ಮೌರ್ವಿಯು ಚಿತ್ರದ ರೇಖೆಯಂತೆ ನಿತ್ತುಕೊಂಡು ಕಾಣಿಸುವುದು. ಮೂಡಿಗೆಯಿಂದ ಬಾಣಗಳನ್ನು ತೆಗೆದು ಚಾಪದೊಡನೆ ಜೋಡಿಸಿ ಬಿಡುವ ಕಾರ್ಯವು ತೋರಿಕೆಗಿಲ್ಲ. ಮುಷ್ಟಿಬಂಧದ ಅಪೇಕ್ಷೆಯಿಲ್ಲದ ಬಾಣಮೋಕ್ಷವು. ಆದರೂ ಶರಾಸಾರವು ನಿರಂತರವಾಗಿ ಸುರಿಯುತ್ತಿರುವುದು. ಬಳಕಿಕೊಂಡಿರುವ ಭುಜಗಳ ನಡುವೆ ಸಮಾಧಿಯನ್ನು ಸಾಧಿಸುವಂತೆ ನಿಶ್ಚಲವಾದ ಕಂಧರವೂ ಚಂದ್ರಮಂಡಲದಂತೆ ಕಳೆಗೊಂಡು ತೋಭಿಸುವ ಮುಖಮಂಡಲವೂ ಕಂಡುಬರುವುದರಿಂದ ಈತನು ಶ್ರಮಲೇಶವನ್ನಾದರೂ ಕಂಡರಿಯನು. ಯುದ್ಧದ ಮಧ್ಯದಲ್ಲಿ ಆಲೀಢವೇ ಮೊದಲಾದ ಸ್ಥಾನವಿಶೇಷಗಳಲ್ಲಿ ಸಂಚರಿಸುವಾಗಲೂ ದೇಹವು ಸ್ಥಿರತೆಯನ್ನು ಬಿಟ್ಟಿರಲಾರದು. ಚಲಾಚಲಗಳೆಂಬ ಲಕ್ಷ್ಯಭೇದಗಳನ್ನು ಬಹುಸುಲಭದಿಂದ ಭೇದಿಸುತ್ತಿರುವಾಗಲೂ ಈತನ ಶರಗತಿಗಳ ಲಾಘವವಂತೂ ಶ್ಲಾಘನೀಯವು.

"ವೈರಿಗಳಲ್ಲಿರತಕ್ಕ ಸ್ವಲ್ಪವಾದ ಅಳುಕನ್ನೂ ಬಹುಬೇಗನೆ ತಿಳಕೊಳ್ಳುವುದು; ಬಹುವಾಗಿದ್ದರೂ ತನ್ನ ಅಳುಕನ್ನು ವೈರಿಗಳಿಗೆ ತಿಳಿಸದಿರುವುದು" ಎಂಬ ಈ ಗುಣಗಳು ಚಾಪಾಗಮಾಚಾರ್ಯರಾದ ದ್ರೋಣರಲ್ಲಾಗಲಿ, ವೀರಾಗ್ರಗಣ್ಯರಾದ ಗಾಂಗೇಯರಲ್ಲಾಗಲಿ ಇಲ್ಲ. ಹೀಗಿರುವಾಗ ಈ ಯೋಗ್ಯತಾವಿಶೇಷವು ನಿಷಾದರಲ್ಲಿರುವುದೆಂತು? ಹೇಗೆ ನೋಡಿದರೂ, ಇವನು ಕಿರಾತವೇಷಧರನಾದ ಮಹಾನುಭಾವನೆಂಬುದರಲ್ಲಿ ಸಂದೇಹವಿಲ್ಲ! "ವೈರಿಯು ರೋಗದಂತೆ ವಿನಾಶಕಾರಿಯು" ಎಂಬ ಲೋಕೋಕ್ತಿಯ ಸಾರವನ್ನು ಗ್ರಹಿಸುತ್ತ, ನನ್ನೊಡನೆ ಹೋರಾಡಬೇಕೆಂದು ಬಂದಿರುವ ಈತನ ಬಲವನ್ನು ಇನ್ನುಳಿದ ದಿವ್ಯಾಸ್ತ್ರಗಳ ಮೂಲಕ ನಿವಾರಿಸುವುದೇ ನನ್ನ ಮುಖ್ಯಕರ್ತವ್ಯವು. ಹೀಗಿರುವಾಗ ಬಗೆಹರಿಯದ ಇಂತಹ ವಿವಿಧವಿತರ್ಕದಿಂದ ನನಗೆ ಪ್ರಯೋಜನವಿಲ್ಲ. ಇವನೊಡನೆ ಹೋರಾಡುವುದೇ ಸಿದ್ಧವು. ಆಗುವುದಾಗಲಿ ನೋಡಿಕೊಳ್ಳುವೆನು."

ಇಂತಹ ಸ್ಥಿರಸಂಕಲ್ಪದಿಂದ ಹುರುಪುಗೊಂಡವನು ಬಹುಪ್ರಚಂಡನಾಗಿ ಮತ್ತೂ ಯುದ್ಧಸನ್ನದ್ಧನಾದನು.

---

೨೫ ಕಿರತಾರ್ಜುನರ ಶರಸಂಗ್ರಾಮಕೌಶಲ

ತಲೆದೋರಿದ ಸಂದೇಹವು ಹೀಗೆ ಕೊನೆಗಂಡೊಡನೆ, ಮೂರು ಲೋಕದ ಗಂಡನೆನಿಸಿದ ಪಾಂಡವನು, ಕೋಪಾಧಿಕ್ಯದಿಂದ ಪ್ರಚಂಡನೆನಿಸಿದನು. ಕೂಡಲೆ, ಮೋಡಮುಸುಕಿದ ಕಾಳರಾತ್ರಿಯು ಗಾಢಾಂಧಕಾರದ ಪ್ರಾಬಲ್ಯದಿಂದ ಲೋಕದ ಸರ್ವಸ್ವವನ್ನೂ ಆವರಿಸಿಕೊಳ್ಳುವಂತೆ ವೈರಿಯ ಸಾರವನ್ನು ಹೀರಿಬಿಡುವೆನೆಂದು ಮೂಡಿಗೆಯಿಂದ ಪ್ರಸ್ವಾಪನವೆಂಬ ದಿವ್ಯಾಸ್ತ್ರವನ್ನು ಹೊರಗೆಳೆದನು.

ಆಗ, ಅಂತರಿಕ್ಷವು ನಿರಂತರವೂ ಸುರಿಸಿದ ಅಂಜನವೃಷ್ಟಿಯಂತೆ, ಭೀಕರಾಕೃತಿಗೊಂಡು ಎದುರಿಸಿದ ತಮಾಸುರನಂತೆ, ಉಜ್ವಲಿಸಿ ಬಂದ ನೀಲಾಚಲದಂತೆ, ಮೂವಲಿಸಿ ಬಂದ ಕಾಲಭೈರವನಂತೆ, ಎತ್ತೆತ್ತಲೂ

ಘೋರಾಟವಿಯನ್ನಾವರಿಸಿದ ದವಾನಲದ ಧೂಮಸ್ತೋಮದಂತೆ, ಘೋರಾಂಧಕಾರವು ಬಿಡದೆ ಹರಸೈನ್ಯವನ್ನಾವರಿಸಿಕೊಂಡಿತು. ಆ ಮಬ್ಬಿನ ಅಬ್ಬರಕ್ಕೆ ಹರಸೈನ್ಯವೆಲ್ಲವೂ ಬೆಬ್ಬಳಿಸಿ ನಿದ್ರಾಭರದಿಂದ ತಲ್ಲಣಿಸಿ ಅರಿವುಗೆಟ್ಟ ಸಭೆಯಂತೆ ತಬ್ಬಿಬ್ಬಾದುದು. ಅಂಕೆಗೆಟ್ಟ ಸೊನ್ನೆಯಂತೆ ಕಿರಾತಸೈನ್ಯವು ದುರ್ಗತಿಗೀಡಾದುದನ್ನು ನೋಡಲು ಸಾಧ್ಯವಿಲ್ಲದಂತೆ ಕಗ್ಗತ್ತಲೆಯೆತ್ತೆತ್ತಲೂ ಮುಸಗಿತು. ನರನ ಭೀಕರಾಸ್ತ್ರದ ವಿಜೃಂಭಣೆಗೆ ಹೆದರಿದ ಹಲವರ ಕೈಗಳಿಂದ ಆಯುಧಗಳು, ದೈವವು ಪ್ರತಿಕೂಲವಾಗಿರಲು ಕಷ್ಟಪಟ್ಟ ಕೃಷಿಯ ಫಲದಂತೆ ಉದುರಿಹೋಗುತ್ತಿದ್ದವು. ಆಕಸ್ಮಿಕವಾಗಿ ಸಂಭವಿಸಿದ ಕಷ್ಟಕಾಲದಲ್ಲಿ ಬೇಡರಲ್ಲೊಂದು ವರ್ಗವು, ಪರಿಸ್ಥಿತಿಯು ಕ್ಷೋಭಿಸಿದಾಗ ಜನರು ಸತ್ಕುಲಪ್ರಸೂತನೂ ಗುಣವಂತನೂ ಧೈರ್ಯಶಾಲಿಯೂ ಆಗಿರುವ ಸನ್ಮಿತ್ರನನ್ನು ಹೊಂದಿಕೊಳ್ಳುವ ಹಾಗೆ ನಿರಂತರವಾದ ಅಭ್ಯಾಸದ ಬಲದಿಂದ ವಂಶಸಂಭೂತವೂ ಗುಣಾನ್ವಿತವೂ ಎನಿಸಿ ದೃಢವಾಗಿರುವ ಚಾಪದಂಡವನ್ನವಲಂಬಿಸಿಕೊಂಡಿತು. ಧೈರ್ಯಶಾಲಿಗಳೆನಿಸಬೇಕೆಂದು ಸಿಕ್ಕಿದಲ್ಲೇ ಮರಗಳನ್ನು ಬಲವಾಗಿ ಬಿಗಿದುಕೊಂಡ ಬೇರೆ ಕೆಲವರ ಬಾಹುಬಂಧನಗಳು ಹೆದರಿಕೆಯಿಂದ ಕಣ್ಣುಮುಚ್ಚಿಕೊಂಡಂತೆಯೇ ಸಡಿಲಾಗುತ್ತ ತರುಕಾಂಡಗಳನ್ನು ಸಡಿಲಾಗಿಸಿ ಬೀಳಿಸುವ ಆನೆಯ ಸೊಂಡಿಲುಗಳನ್ನು ಅನುಕರಿಸುತ್ತಿದ್ದುವು.

ಆ ಗಾಢಾಂಧಕಾರದ ದೆಸೆಯಿಂದ ಲೋಕವು ತತ್ತರಿಸುತ್ತಿತ್ತು. ಮಹರ್ಷಿಗಳೆಲ್ಲರೂ ಅನನ್ಯಚಿತ್ತರಾಗಿ ವಿಶ್ವದ ಶಾಂತಿಯನ್ನು ಕೋರುತ್ತಿದ್ದರು. ಚಂದ್ರಲೇಖೆಯು ಮಾಯಾಕಿರಾತನ ತಲೆಯಲ್ಲಿ ಕಾಣಿಸಿಕೊಳ್ಳದಂತೆ ತಲೆಮರಸಿಕೊಳ್ಳುತ್ತಿತ್ತು. ಹರನ ಪ್ರಭಾವದಿಂದ ಮೇರುಗಿರಿಯ ತೊರಲ ತುದಿಯಲ್ಲಿ ಉದಯಿಸಿ ತೋರುವಂತೆ ದಿನಕರಬಿಂಬವು ಮೆಲ್ಲನೆ ತಲೆದೋರಲಾರಂಭಿಸಿತು. ಮಾಯಾತಾಮಸಿಯು ಕ್ಷಯಪೀಡಿತೆಯಾಗಲು, ದಿಕ್ಕುಗಳು ನಗತೊಡಗಿದುವು. ಆಗಲೇ ದಿನಮಣಿಯ ಮಯೂಖಮಾಲೆಯು ಗಹಗಹಿಸುತ್ತ ಪ್ರಕೃತಿಯ ರಹಸ್ಯವನ್ನೆಲ್ಲೆಲ್ಲಿಯೂ ಬಯಲಾಗಿಸುವಂತೆ ಬೆಳಗುತ್ತಿತ್ತು. ಅಜ್ಞಾನವನ್ನು ಪರಿಹರಿಸಿ, ಮುಕ್ತ್ಯಂಗನೆಯ ಇರವನ್ನರಿಯಿಸುವ ತತ್ವದಂತೆ ದಿಗಂಗನೆಯನ್ನನುರಾಗಗೊಳಿಸುತ್ತ, ಪಾಟಲ

ವರ್ಣದ ಉಡಿಗೆಗಳಿಂದ ಮೇಘಮಂಡಲವನ್ನು ಕಳೆಗೂಡಿಸುತ್ತ, ಮೂಡಿ ಬೆಳಗುವ ದಿನಕರನು ಪ್ರಮಥರ ನೇತ್ರೋತ್ಪಲಗಳನ್ನು ವಿಕಾಸಗೊಳಿಸು ತ್ತಿದ್ದನು. ಆರಾಜಿಸುವ ತೇಜಃಪುಂಜವು ನರನ ಪ್ರಸ್ವಾಪನಾಸ್ತ್ರವನ್ನು ಪರಿಹರಿಸಲು, ಗಣಗಳೆಲ್ಲವೂ ಮೋಡಗಳಿಂದ ಬಿಡುಗಡೆಗೊಂಡು ಕಳೆ ಗೂಡಿ ಬೆಳಗುವ ದಿಗಂತಗಳಂತೆ ನಿಜಾಯುಧಗಳನ್ನು ಧರಿಸಿಕೊಂಡುವು.

ಅಭೇದ್ಯವಾಗಿ ಮೆರೆದ ಪ್ರಸ್ವಾಪನಾಸ್ತ್ರವನ್ನು ವೈರಿವಾರಣವು ಸುಲ ಭೋಪಾಯದಿಂದ ಭೇದಿಸುತ್ತಿದ್ದುದನ್ನು ನೋಡಿ ಗಾಂಡೀವಿಯು ಕೋಪ ದಿಂದ ಕಿಡಿಕಿಡಿಯಾಗಿ "ಇದನ್ನೀಗಲೇ ಬಂಧಿಸಿಬಿಡುವೆನೆ"ಂದು ಕೂಡಲೆ ನಾಗಪಾಶವನ್ನು ಪ್ರಯೋಗಿಸಿದನು. ಆಗ ವಿಚಿತ್ರತರವಾದ ಯುದ್ಧ ವನ್ನು ನೊಡುತ್ತಿದ್ದವರೆಲ್ಲರೂ ಬೆಕ್ಕಸಬೆರಗಾಗಿ ಧಾವಿಸುತ್ತಿದ್ದರು. ಪಳಂಚುವ ಮಿಂಚಿನ ಗೊಂಚಲಿನಂತೆ ಥಳಥಳಿಸುವ ನಾಲಗೆಗಳನ್ನು ಹೊರನೀಡುತ್ತ ಪ್ರಜ್ವಲಿಸುವ ಘೋರವಿಷಾನಲವನ್ನು ಹೊರಗೆಡಹುತ್ತ ಸರ್ಪಸಂತತಿಗಳೆತ್ತೆತ್ತಲೂ ವ್ಯಾಪಿಸಿದುವು. ಭೂವ್ಯೋಮಗಳೆಂಬ ಭಾವನೆಗೆ ಎಡೆಯಿಲ್ಲದಂತೆ ಎಲ್ಲೆಲ್ಲಿಯೂ ವ್ಯಾಳವೇ ಕಂಗೊಳಿಸಿತು. ಅನಂತಸಂತತಿ ಗಳೆನಿಸಿದ ಭೋಗಿಕುಲಗಳು ದಿಗ್ಗಜಗಳ ಸೊಂಡಿಲುಗಳಂತೆ ಅಂತರಿಕ್ಷ ವನ್ನು ವ್ಯಾಪಿಸಿಕೊಂಡು ತಂಡತಂಡವಾಗಿ ಕಂಡಕಡೆಗೋಡಾಡುತ್ತ, ಕ್ಷೋಭಗೊಂಡ ನಭೋಂಬುಧಿಯಲ್ಲಿ ಹೊರಳುವ ತರಂಗಮಾಲೆಗಳೆಂಬ ಭ್ರಮೆಯನ್ನು ಕಲ್ಪಿಸುತ್ತಿದ್ದುವು, ನಿಟ್ಟುಸಿರೆಂಬ ಧೂಮಸ್ತೋಮದ ಮೂಲಕ ಭಾಸ್ಕರಪ್ರಭೆಯನ್ನು ಮರೆಯಿಸುತ್ತ ತಲ್ಲಣಗೊಳಿಸುತ್ತಿದ್ದ ಫಣಿಕುಲಗಳು ತಮ್ಮವನಾದ ಸಿಂಹಿಕಾಪುತ್ರನಿಗೆ ದಿನಕರನೆಸಗಿದ ಅಪರಾ ಧವನ್ನು ಸ್ಮರಿಸಿಕೊಂಡು ಪೂರ್ವದ್ವೇಷದ ಸೇಡನ್ನು ತೀರಿಸಿಕೊಳ್ಳುವಂತೆ ತೋರುತ್ತಿದ್ದುವು. ದರ್ಶನಮಾತ್ರದಿಂದಲೇ ವಿನಾಶಕಾರಿಗಳಾದ ಮಹೋ ಲ್ಕೆಗಳಂತೆ ವಿಷದೃಷ್ಟಿಗಳೆನಿಸಿದ ಭೀಕರಸರ್ಪಗಳು ತಮ್ಮ ತೀಕ್ಷ್ಣದೃಷ್ಟಿಗಳ ಬಿರುನೋಟದಿಂದ ದಿಙ್ಮಂಡಲಗಳನ್ನು ಕೋಟಲೆಗೊಳಿಸುತ್ತ ದಿಗಂತಗಳಲ್ಲಿ ಮಂಡಳಿಸುತ್ತಿದ್ದುವು. ಹೀಗೆ ನಾಗಕುಲವು ಗಗನಚಾರಿಗಳ ಸಂಚಾರಕ್ಕೆ ಸಂಚಕಾರವಿತ್ತು, ದಿನಕರನ ಕಿರಣಜಾಲವನ್ನು ಮರೆಗೊಳಿಸಿ, ಭುಗಿಭುಗಿ ಲೆಂದು ಧಗಧಗಿಸುವಂತೆ ವಿಷಾನಲವನ್ನು ಬೆಳಗಿಸಿ, ಧೂಮಸ್ತೋಮ

ಗಳಿಂದ ದಿಙ್ಮಂಡಲಗಳನ್ನು ಕವಿಯಿಸಿ ವಿಜೃಂಭಿಸುತ್ತಿರಲು, ಅಂತರಿಕ್ಷ ವೆಲ್ಲೆಲ್ಲಿಯೂ ವೈರಿಗಳಾವರಿಸಿದ ತ್ರಿಪುರದಹನವನ್ನೇ ಅನುಕರಿಸುತ್ತಿತ್ತು.

ಆ ವೇಳೆಗೆ, ನಿಪುಣನಾದ ನಾಯಕನು ತನ್ನ ಮಂಡಲವನ್ನು ಉಪಾಯದ ಬಲದಿಂದಲೇ ನಿವಾರಿಸುವಂತೆ ಕಿರಾತನಾಯಕನು ಬುಸುಗುಟ್ಟುತ್ತ ಮುಂದೊತ್ತಿ ಬರುತ್ತಿದ್ದ ಸರ್ಪಸಂಕುಲವನ್ನು ನಿವಾರಿಸಬೇಕೆಂದು ಗರುಡ ಮಂತ್ರವನ್ನು ಉಚ್ಚರಿಸಿದನು. ಕೂಡಲೆ ಸ್ವರ್ಣಪಕ್ಷಗಳಿಂದೊಪ್ಪುವ ಗರುಡ ಪಕ್ಷಿಗಳು ಕಾಂತಿವಿಶೇಷದಿಂದ ಪಳಂಚುವ ಮಿಂಚಿನ ಸಂಚಯದಂತೆ ಬಿಡುಗಣ್ಣರೆನಿಸಿದ ದೇವತೆಗಳ ಕಣ್ಣುಗಳನ್ನು ಕುಕ್ಕಿಸುತ್ತ ಒತ್ತರದಿಂದ ಅಂತರಿಕ್ಷದಲ್ಲಿ ಗೋಚರಿಸಿದುವು. ಅವುಗಳ ರಭಸದ ಸಂಚಾರದಿಂದ ಮೈಗೂಡಿ ಮೂಡಿದ ಪಕ್ಷಾನಿಲವು ನಿಲವಿಲ್ಲದೆ ಕಾಡಿನ ಮರಮುಟ್ಟು ಗಳನ್ನು ಕೊಂಡೊಯ್ದು ನಭೋಮಂಡಲದಲ್ಲಿ ಮಂಡಿಸಿದ ತರಗೆಲೆಯ ತುಂಡುಗಳಂತೆ ಸುಳಿದಾಡಿಸಿತು. ಆ ಸುಂಟರಗಾಳಿಯ ರಭಸಕ್ಕೆ ಪಾದ ಗಳು ನಡುಗುತ್ತಿರಲು, ಗರುಡಪಕ್ಷಿಗಳ ಗರಿಗಳೆಂಬ ಹೊಂಬಣ್ಣದ ಆಸವ ವನ್ನು ಮಿತಿಮೀರಿ ಹೀರಿದ ಪ್ರಮತ್ತನಂತೆ ತೋರುತ್ತಿದ್ದ ಹಿಮವಂತನ ದೃಶ್ಯವು ಚಿಂತಾಜನಕವಾಗಿತ್ತು. ಬೇಗಬೇಗನೆ ಒಂದರ ಹಿಂದೊಂದರಂತೆ ತಂಡತಂಡವಾಗಿ ಹರಿದೋಡುತ್ತಿದ್ದ ಪಕ್ಷಿಗಳ ವಕ್ಷಸ್ಥಲಗಳು ಪದರು ಪದರಾಗಿ ಚಲಿಸುವ ಶರದಭ್ರಖಂಡಗಳಂತೆ ವಿಚಿತ್ರವಾಗಿ ಕಂಡುಬರು ತ್ತಿದ್ದುವು. ಅಂತರಿಕ್ಷದಲ್ಲಿ ಸೂರ್ಯಬಿಂಬವನ್ನು ಮರೆಯಿಸುವಂತೆ ಸಂಚರಿಸುತ್ತಿದ್ದ ಗರುಡಪಕ್ಷಿಗಳ ಪಕ್ಷಚ್ಛಾಯೆಯು ಪ್ರತಿಬಿಂಬಿಸುತ್ತ, ಭೂವ್ಯೋಮಾಕಾಶಗಳು ಸಲುವಳಿಯಾದ ಸಂಧ್ಯಾರಾಗದಿಂದ ರಂಜಿಸುವಂತೆ ಕಂಗೊಳಿಸಿದುವು. ಹೀಗೆ ತಲೆದೋರಿದ ಗರುಡಸೈನ್ಯವು ನೆಲಸಿಕೊಂಡಿದ್ದ ಮಹಾಭೋಗಿಗಳ ಗುಂಪನ್ನು ಸಿಕ್ಕಿದತ್ತ ಖಂಡಿಸುತ್ತ ಹೇಳಹೆಸರಿಲ್ಲದಂತೆ ಮಾಡಿ ವೈನತೇಯನ ಕುಲಗೌರವವನ್ನು ಪಾಲಿಸಿ ನೆಲೆಗೊಂಡಿತು. ಆಗಲೇ ನಡೆಯುತ್ತಿದ್ದ ಸಂಗರವೆಂಬ ಮಹಾಧ್ವರದಲ್ಲಿ ತೋರಿಕೊಂಡ ಉರಗಸಂ ದರ್ಶನವೆಂಬ ಅನಿಷ್ಟವು ಗರುಡಾಗಮವೆಂಬ ಪ್ರಾಯಶ್ಚಿತ್ತದ ಮೂಲಕ ಸಂಪೂರ್ಣವಾಗಿ ಶಾಂತವಾಯಿತು. ಆ ಮಹೋರಗಾಸ್ತ್ರವು ತನ್ನ ಪ್ರೇರಕನ ಮುಂದಿನ ಏಳಿಗೆಯನ್ನು ಕೋರುತ್ತ, ವಿರೋಧಿಗೆ ಜಯವನ್ನು ಕಲ್ಪಿಸುತ್ತ,

ಸಂಭವಿಸಿದ ಸೋಲದಿಂದ ಮೋಕ್ಷ ಹೊಂದುತ್ತ, ಬಡಿದಾಟವೂ ಮೋಕ್ಷ ಸಾಧಕವೆಂಬ ಸೂತ್ರವನ್ನವಲಂಬಿಸಿರುವ ಸಂಗರಧರ್ಮರಹಸ್ಯವನ್ನು ವಿಶದಪಡಿಸುವಂತೆ ಮುರಿಗೊಂಡಿತು.

ಇದನ್ನು ನೋಡಿ ತಡೆಯದೆ ಪಾಂಡವನು ಕೋಪಾನಲೋದ್ದೀಪಿತನಾಗಿ ಭುಗಿಭುಗಿಲೆಂದು ಪ್ರಜ್ವಲಿಸುವ ವೈಶ್ವಾನರಾಸ್ತ್ರವನ್ನು ತೆಗೆದು ಗಾಂಡೀವಧನುಸ್ಸಿಗೆ ತೊಡಿಸಿದನು. ಕೂಡಲೆ ಅದು ಸುತ್ತಲೂ ಜ್ವಾಲೆಗಳೆಂಬ ಕೇಸರಗಳನ್ನು ಕೆದರಿಕೊಂಡು ಮೇಘಪಙ್ಕ್ತಿಗಳನ್ನತಿಕ್ರಮಿಸಿ ಪ್ರಾಣಿಕೋಟಿಯನ್ನೇ ಸಂಹರಿಸಿಬಿಡಬೇಕೆಂಬ ಉತ್ಸಾಹಾತಿಶಯದೊಡನೆ ವಿಜೃಂಭಿಸಿತು. ಆ ಕೇಸುರಿಯು ಉಲ್ಲಂಘಿಸುವ ವರಕೇಸರಿಯಂತೆ ಪರಮಾದ್ಭುತಕಾರಿಯೆನಿಸಿ ಮುಂದೆಸೆಯಲ್ಲಿ ವ್ಯಾಪಿಸಿತು, ಎಸೆವ ತೇಜಸ್ಸಿನಿಂದ ಸ್ಪರ್ಧಿಸುವ ವಿಭಾಕರನ ಪ್ರಭಾಪುಂಜವನ್ನು ಮುಸುಳಿಸುತ್ತ, ಉಂಟಾದ ಆಕ್ರೋಶದಿಂದ ಕಿಡಿಗಳನ್ನು ಕಾರುತ್ತ ಮುಂದೊತ್ತುವ ಮಹಾಜ್ವಾಲೆಯು ಜ್ವಾಲಾಮುಖಿಯಂತೆ ಮಹಾಶಿಲೆಯೊಡೆದು ಹಾರುವ ಭೀಷಣಧ್ವನಿಯಂತೆ ಭರದಿಂದ ಪ್ರತಿಭಟಿಸುವೆನೆಂದು ಭುಭ್ಭುಭ್ಭುಗಿಲೆಂದಾರ್ಭಟಿಸುತ್ತಿತ್ತು. ಹೀಗೆ ಅಬ್ಬರದಿಂದ ಸಿಡಿಮಿಡಿಗೊಳ್ಳುವ ಸಂದರ್ಭವನ್ನರಿತು ಸಹಜಮಿತ್ರನಾದ ಮಾರುತನು ಕಲೆತು ಪ್ರೋತ್ಸಾಹಿಸುತ್ತಿದ್ದನು. ಅನಲವು ನಲುಗಿ ಕೆಲದಲ್ಲಿ ಬಂಗಾರದ ಎರಕದ ಕೋಟೆಕೊತ್ತಳದಂತೆ ಮಂಡಳಿಸಿ ಥಳಥಳಿಸುತ್ತಿತ್ತು. ಬಲದಲ್ಲಿ ಉತ್ತುಂಗಶೃಂಗವಿರಾಜಮಾನ ಶಿಲೋಚ್ಚಯದಂತೆ ಬಹು ಗಂಭೀರವೆನಿಸುತ್ತಿತ್ತು. ಮುಂದೆಸೆಯಲ್ಲಿ ನಂದ ಅಳಕಾಪುರದಂತೆ ಅತಿವ್ಯಾಪಿಯಾಗಿ ಮನೋಹರವೆನಿಸುತ್ತಿತ್ತು. ಮೇಲೆ ಉಲ್ಲಸಿತಪಲಾಶಮಹಾವನದಂತೆ ಕೆಂಪಗೆ ಕಂಗೊಳಿಸುತ್ತಿತ್ತು. ಆ ವೈಶ್ವಾನರಶರವು ವಿಳಂಬಿಸದೆ ಹೀಗೆ ಬಗೆಬಗೆಯ ರೀತಿಯಿಂದ ಕೌತುಕಪ್ರದವೆನಿಸಿ ವಿಜೃಂಭಿಸಿತು.

ಹೀಗೆ ನೆಗೆದು ಗಗನಮಂಡಲದಲ್ಲಿ ಧಗಧಗಿಸುವ ಬೆಂಕಿಯು ಬೇಗೆಗೆ ಕಾರ್ಮೋಡಗಳು ನೀರಾರಿ ಜಳ್ಳಾದ ಬೆಳ್ಮುಗಿಲಂತೆ ಬೆಳ್ಳಗೆ ಬೆಳಗಿದುವು. ಕಲ್ಪಾಂತರದಲ್ಲಿ ಲೋಕವನ್ನೇ ಗಿಳಂಕರಿಸುವ ಕಾಲಭೈರವನ ಚಲಿಸುವ ನಾಲಗೆಯಂತೆ ದಳ್ಳಿಸುವ ದಳ್ಳುರಿಯನ್ನು ನೋಡಿ ಬೇಡರೊಡೆಯನು

ನೀರಾರಿದ ಮೋಡವನ್ನು ಕರುಣೆಯಿಂದ ಮೊಗೆಯಿಸುವಂತೆ ಮೂಡಿಗೆಯಿಂದ ವರುಣಾಸ್ತ್ರವನ್ನು ಹೊರಡಿಸಿ ಪ್ರಯೋಗಿಸಿದನು. ಒಡನೊಡನೆ ನಭೋಮಂಡಲದಲ್ಲಿ ಕ್ಷೋಭಗೊಂಡ ಮೇಘಮಂಡಲಗಳು ಗಡಿಬಿಡಿಯಿಂದ ಓಡಿ ಬಂದು ಒಂದುಗೂಡಿದುವು. ಕೂಡಲೆ ಕಾರ್ಮೋಡದ ಕಾರೊಡಲ ಕಾಲಪುರುಷನು ಕೋಲ್ಮಿಂಚಿನ ಮುನ್ನೋಟಗಳೊಡನೆ ದಡಬಡನೆ ಸಿಡಿದಾರ್ಭಟಿಸುತ್ತ ಬಂದೆರಗಿದಂತೆ ಅತಿವೃಷ್ಟಿಗಾರಂಭಿಸಿತು. ಮೃಡನ ಜಟಾಜೂಟದಲ್ಲಿ ಪ್ರವಾಹರೂಪದಿಂದ ದುಮುಕುವ ಗಂಗೆಯಂತೆ ಏಕಪ್ರಕಾರವಾಗಿ ಸುರಿವ ವರ್ಷಧಾರೆಯ ಭರವು ಹೇಳಿತೀರದು. ಧಗಧಗಿಸುವ ಬೆಂಕಿಗೆ ಹೀಗೆ ಮಳೆ ಸುರಿಯುತ್ತಿರಲು, ಕಾದ ಲೋಹದಂತೆ ಅದೊಮ್ಮೆಗೆ ಭುಗ್ಗೆಂದರೂ ಸುಯ್ಯೆಂದು ಚಿರಿಚಿರಿಗುಟ್ಟುತ್ತ ಮೆಲ್ಲನೆ ಹಿಂಜರಿಯಲಾರಂಭಿಸಿತು. ಆ ಮಳೆಯೊಡನೆ ಉದುರಿದ ಆಲಿಕಲ್ಲುಗಳು ಮೊದಮೊದಲು ಬೆಂಕಿಯ ಜಳದಿಂದ ಗಳಗಳನೆ ಕುದಿದೆದ್ದ ಜಲಬುದ್ಬುದದಂತೆ ತೋರಿದರೂ, ಬರಬರುತ್ತ ಕರಿದು ಹಸಿಕಟ್ಟಿಗೆಯಂತೆ ಸಿಮಿಸಿಮಿದು ಎದ್ದ ಧೂಮಸ್ತೋಮವು ತುದಿಮೊದಲಿಲ್ಲದೆ ನೆಗೆನೆಗೆದು ಗಗನವನ್ನಾವರಿಸಿತು. ಆ ವೇಳೆಗೆ, ತರತರದಿಂದ ಉರಿವ ಬೆಂಕಿಯ ವರ್ಣವು ಪ್ರತಿಬಿಂಬಿಸಲು ಅಂಬರವಧುವು ವಿಚಿತ್ರಚೀನಾಂಬರದಿಂದ ಮೆರೆಯುವಂತೆ ತಲೆದೋರಿದ ಕಾಮನ ಬಿಲ್ಲು ತುದಿಮೊದಲಿಲ್ಲದೆ ವ್ಯಾಪಿಸಿದಂತೆ ಅಂತರಿಕ್ಷವು ಅನಂತಕಾಂತಿಯುತವೆನಿಸಿ ಕಂಗೊಳಿಸಿತು. ಅತಿಪ್ರಬಲವಾದ ಆ ಧನಂಜಯಾಸ್ತ್ರವು ವರುಣಾಸ್ತ್ರದ ಪ್ರತಿಘಾತಕ್ಕೆ ತಡೆಯದೆ ಕಂದಿ ಕುಂದಿ ಬಸವಳಿದು "ತೇಜಸ್ವಿಯಾದರೂ ಕೂಡ ಮೂಲವು ನಷ್ಟವಾದರೆ ಮರಳಿ ತಲೆಯೆತ್ತಲಾರನು" ಎಂಬ ತತ್ವವನ್ನು ತಿಳಿಸುತ್ತಿರುವಂತೆ ತಲೆಮರಸಿ ಕಣ್ಮರೆಗೊಂಡಿತು.

ಹೀಗೆ ಅಗ್ನಿಬಾಣವು ನಿರ್ವಾಣಹೊಂದಲು ನೀಲಾಚಲದ ಕಟಕಗಳಂತೆ ಕಂಗೊಳಿಸುವ ಮೇಘಪಟಲವು ರಂಗದ ಮುಖಜವನಿಕೆಯಂತೆ ಸರಿದು ಮರೆಯಾಗಲು, ಅಂಬರವು ತುಂಬಿದ ಕಳೆಯಿಂದ ರಾರಾಜಿಸುವ ದೃಶ್ಯದಂತೆ ಮಂಗಳಮಯವಾಗಿ ಕಂಗೊಳಿಸಿತು. ಪ್ರತಿಕೂಲವಾದ ದೈವವು ನ್ಯಾಯನಿಷ್ಠನ ಪೌರುಷವನ್ನು ಅಪಹರಿಸುವಂತೆ, ರಣಪಂಡಿತನೆನಿಸಿದ ಸವ್ಯಸಾಚಿಯು ಎದೆಗುಂದದೆ ಪುಳಿಂದನನ್ನು ಜೈಸುವೆನೆಂದು ಪ್ರಯೋಗಿ

ಸಿದ ದಿವ್ಯಾಸ್ತ್ರಗಳೆಲ್ಲವನ್ನೂ ಕಿರಾತನೆನಿಸಿದ ಹರನು ಬಿಡದೆ ಸಂಹರಿಸಿದನು. ತಿಳಿಗೊಳವು ಬೇಸಗೆಯ ಬೇಗೆಯಿಂದ ಬತ್ತಿ ಸಂಕಷ್ಟಕ್ಕೆ ಗುರಿಯಾದರೂ ಜನನಿವಹವು ಬೇರೆ ಜಲಾಶಯವನ್ನವಲಂಬಿಸಿ ಬದುಕಲು ಯತ್ನಿಸುವಂತೆ ನಡೆದ ಯುದ್ಧದಲ್ಲಿ ವಿಶೇಷವಿಶಿಖಗಳೆಲ್ಲವೂ ನಿಷಾದನಿಂದ ನಷ್ಟವಾಗಿ ವಿಗತಾಸ್ತ್ರಮಹಿಮನೆನಿಸಿದರೂ, ಸ್ವಭಾವದಿಂದಲೇ ಪ್ರಭಾವಶಾಲಿಯೆನಿಸಿದ ಅರ್ಜುನನು ನಂಬಿಕೆಯುಳ್ಳ ತನ್ನ ಭುಜಬಲದಿಂದಲೇ ಕಾದಾಡಿ ಬೇಡನನ್ನು ಗೆಲುವೆನೆಂದು ನಲವಿಂದ ಹುರುಪುಗೊಂಡು ಮುಂದೊತ್ತಿದನು.

---

೨೬ ಘೋರಯುದ್ಧ

ಲೋಕದಲ್ಲಿ ಹಿತವಂತರು ಅಗಲಿದರೂ ಧೀರರು ಎದೆಗೆಡದೆ ಮುಂದೊತ್ತಿ ಕಾರ್ಯದಲ್ಲಿ ಪ್ರವರ್ತಿಸುವಂತೆ ದಿವ್ಯಶರಗಳೆಲ್ಲ ಕಳೆದು ಹೋದರೂ, ನರನು ತಳಮಳಿಸದೆ ಪೌರುಷದಂತೆ ವಿರಾಜಿಸುವ ಧನುರ್ದಂಡವನ್ನವಲಂಬಿಸಿ ವಿಕ್ರಮಶಾಲಿಯಾದ ಕಿರಾತನೊಡನೆ ಯುದ್ಧವು ಸಂಬದ್ಧವೆನಿಸಿತೆಂದು ಉದ್ಬುದ್ಧನಾದನು. "ನಚ್ಚಿನ ಬಾಣಗಳನ್ನು ಈತನು ಕೊಚ್ಚಿದನೇ" ಎಂದು ಬೆಚ್ಚದೆ ಕೆಚ್ಚೆದೆಯಿಂದ ಹೆಚ್ಚಿದನು. ಸೋತುಹೋದೆನೆಂದು ಕಾತರಿಸದೆ, ಕೋಪಾತಿರೇಕದಿಂದ ಗತಿಗೆಡದೆ, ಹಲ್ಲುಗಳನ್ನು ಕಡಿಯುತ್ತ ಕಿಡಿಕಿಡಿಯಾದನು. ಕ್ರೀಡಾಸಕ್ತಚಿತ್ತನಾದ ಬಾಲಕನಂತೆ, ಧೂಮಸ್ತೋಮಾವೃತವಾದ ಪರ್ವತವಹ್ನಿಯಂತೆ ನಿತ್ತಲ್ಲಿ ನಿಲ್ಲದೆ ಚಲಿಸುತ್ತ ಕಂಡೂ ಕಾಣಿಸದಾದನು. ಅಪಾಯಕರವಾದ ವೈರಿಕಟಕವನ್ನು ಪ್ರವೇಶಿಸುವ ತಾಪಸನು, ಅಚಲವಾದ ಭುಜಾಲಂಬದಂತೆ ಪರರಿಂದ ಅಪಹರಿಸಿಕೊಳ್ಳಲಾರದೆ ಮೆರೆವ ನಿಜಧೈರ್ಯವನ್ನು ಅವಲಂಬಿಸಿಕೊಂಡಿದ್ದನು. ಆದರೂ ಕೂಡ, ಕುಲೀನಳೂ ಶೀಲವತಿಯೂ ಪ್ರಾಣಪ್ರಿಯಳೂ ಆಗಿರುವ ಮಾನಿನಿಯನ್ನು ನೋಡುತ್ತಿದ್ದಂತೆಯೇ ಪರರು ಅಪಹರಿಸಿದರೆ ಚಿತ್ತವು ತತ್ತರಿಸುವಂತೆ ವಂಶಾನುಗುಣವೂ ಪ್ರಾಣಾಧಿಕವೂ ಎನಿಸಿದ ಕೀರ್ತಿ

ಯನ್ನು ಕಾಡಾಡಿಯಾದ ಬೇಡನು ಕೆಡಿಸಿದನೆಂದು ಚಿಂತಾಕ್ರಾಂತವಾದ ಅಂತರಂಗವುಳ್ಳವನಾಗಿ ತೋರುತ್ತಿದ್ದನು. ಘೂರ್ಣಿಸುವ ತರಂಗಗಳೊಡನೆ ಭೋರ್ಗರೆಯುತ್ತ ಹಿಮಾಚಲವನ್ನೇ ತೇಲಿಸಬೇಕೆಂದು ಸಂಭ್ರಮಿಸಿ ದೇವಲೋಕದಿಂದ ರಭಸದೊಡನೆ ಪ್ರವಹಿಸಿಯೂ ಗಿರೀಶನ ಜಟಾಜೂಟದಿಂದ ಸಂಬದ್ಧವಾದ ಗಂಗಾನಿರ್ಝರದಂತೆ ಬೇಡರ ಹೆಸರನ್ನೇ ಅಡಗಿಸಿಬಿಡುವೆನೆಂಬ ಗರ್ವದಿಂದ ಹೋರಾಡಿದ ಅರ್ಜುನನೀಗ ಕಿರಾತಪತಿಯ ಸಂಗರದಿಂದ ಪರಿಹೃತವಾದ ಶರಶಕ್ತಿಯುಳ್ಳವನಾದನು. ಆದರೂ ಧೀರನಾದ ನರನು, ದಿವ್ಯಾಸ್ತ್ರಗಳು ಕಳೆದು ಹೋದುದಕ್ಕಾಗಿ ಬೇಸರಗೊಳ್ಳದೆ ಕರ್ತವ್ಯವನ್ನರಿತು ಗುರುವರನು ಬಾಲ್ಯದಂದು ಮನಮೆಚ್ಚಿ ಉಪದೇಶಿಸಿದ ಮೇರೆಗೆ ಮರೆಯದೆ ತನ್ನಲ್ಲಿರುವ ಶರಗಳಿಂದಲೇ ವೈರಿಯನ್ನು ಸಂಹರಿಸುವೆನೆಂದು ಮುಂದಾದನು.

ಆಗ ಎರಡನೆಯ ಮಹಾಯುದ್ಧದ ನಾಂದಿಯಂತೆ ಸರ್ವವನ್ನೂ ಸುಟ್ಟುರುಹುವೆನೆಂದು ಕ್ರೋಧಾರುಣನೇತ್ರಗಳಿಂದ ಕಿಡಿಗಳನ್ನು ಸೂಸುತ್ತ, ಮುಳಿದೆದ್ದ ಕಾಲಭೈರವನಂತೆ ರೋಷಭೀಷಣನಾದ ಫಲುಗುಣನು ಮುತ್ತಿದ ವೈರಿವರ್ಗವನ್ನು ದೃಷ್ಟಿಸಿ ನೋಡುತ್ತ, ದಿಗ್ವಾರಣವು ಗಿರಿಶಿಖರವನ್ನು ಫಕ್ಕನೆ ಕಿತ್ತು ಹೊಡೆವಂತೆ ಘನಗಂಭೀರವಾಗಿ ಧ್ವನಿಗೆಯ್ಯುವ ಧನುಸ್ಸನ್ನು ನಿಜಕರದಿಂದ ಮಿಡಿದು ನೋಡುತ್ತ, ಈ ಬೇಡಪಡೆಯನ್ನೀಗಲೇ ಕೊನೆಗಾಣಿಸುವೆನೆಂದು ಬತ್ತಳಿಕೆಗಳಿಂದ ತೆಗೆತೆಗೆದು ಬಾಣಗಳನ್ನು ಸುರಿಸಿದನು. ಆ ಶರಗಳ ಶಕ್ತಿಯೆಲ್ಲವೂ ಶಾಸ್ತ್ರಪರಿಣತನಲ್ಲಿ ಪ್ರಾಮಾಣಿಕತೆಯಂತೆ, ವೀತರಾಗನಲ್ಲಿ ಗುಣಾಸಹಿಷ್ಣುತೆಯಂತೆ,ಪರತತ್ವದಲ್ಲಿ ಸರಸ್ವತಿಯಂತೆ ಕಿರಾತಮೂರ್ತಿಯಲ್ಲಿ ಐಕ್ಯವಾದುವು. ಆದರೂ ಅದರಿಂದ ಕಿರಾತನ ದೇಹವು ಚಳಿಗಾಲದ ಬಿಸಿಲಿನಿಂದ ಹಿಮಾಲಯದ ತಪ್ಪಲಿನಂತೆ ಸಂತಾಪಗೊಳ್ಳಲಿಲ್ಲ. ಮದ್ದಾನೆಯ ದಂತಪ್ರಹತಿಗಳನ್ನು ತಳೆದೆಸೆವ ಹಿಮಾಚಲದಂತೆ, ಅಪರಾಧವೆಸಗಿದರೂ ಪುತ್ರವಾತ್ಸಲ್ಯವನ್ನು ತೋರಿಸುವ ತಂದೆಯಂತೆ, ಕಿರಾತನು ತಾಪಸನ ಶರಪ್ರಹಾರಗಳನ್ನು ತಾಳ್ಮೆಯಿಂದಲೇ ಸಹಿಸಿಕೊಂಡನು. ಮಾತ್ರವಲ್ಲದೆ, ಬ್ರಹ್ಮನೇ ಮೊದಲಾದ ದೇವತೆಗಳಿಗೆ ಕಾರಣನೂ ಸ್ಥಾವರಜಂಗಮಾತ್ಮಕವಾದ ಸೃಷ್ಟಿಗೆ ಕಲ್ಯಾಣಕಾರಕನೂ,ಪ್ರಪಂಚ ಲೀಲೆಗೆ

ಮಹಾನಟನೂ ಎನಿಸಿದ ಮಹಾದೇವನು ಸಂದರ್ಭೋಚಿತವಾದ ಕಾರ್ಯ ವನ್ನು ಸ್ಮರಿಸುತ್ತ ಹೀಗೆ ಯೋಚಿಸಿಕೊಂಡನು—"ಎದುರಾಳಿಯೊಡನೆ ಹೋರಾಡಿ ಬಲಗುಂದಿದರೂ, ಉತ್ಸಾಹವಳಿಯದೆ ಮುಂದೊತ್ತಿ ಪ್ರತಿಭಟಿ ಸುವಾತನ ಕೀರ್ತಿಕಿರಣಗಳು ಭಾಲಭಾಸ್ಕರನ ಕರಗಳಂತೆ ತೊಳಗಿ ಬೆಳ ಗುವುದರಲ್ಲಿ ಸಂದೇಹವಿಲ್ಲ. ವಿಕ್ರಮಕ್ಕೆ ಹೆದರದ ವೈರಿಗಳಿಲ್ಲ; ವೈರಿಗೆ ಹೆದರಿದರೆ ಏಳಿಗೆಯ ಹಂತವಿಲ್ಲ. ಶೌರ್ಯವಿಲ್ಲದ ಉತ್ಸಾಹವು ಮಿಣ್ಣನೆ ಉರಿವ ದೀಪದಂತೆ ನಿರ್ವಾಣೋನ್ಮುಖವು. ಹೆದರಿ ಎದೆಗೆಡಬಾರದು; ವೈರಿಯನ್ನು ಸೋಲಿಸಿದೆನೆಂದು ಗರ್ವಿಸುವುದು ಸೋಲನ್ನು ಕರೆದು ಕೊಳ್ಳುವುದು. "ಜಯಾಪಜಯುಗಳು ಹಗಲಿರುಳುಗಳಂತೆ ಒಂದರ ಹಿಂದೊಂದು" ಎಂಬ ತತ್ವದಂತೆ ಹೋರಾಡುವ ಇವನ ಉತ್ಸಾಹಕ್ಕೆ ಭಂಗ ವನ್ನುಂಟುಮಾಡದೆ ನಾನೀಗ ಸೋಲನ್ನು ತಂದುಕೊಳ್ಳುವುದೇ ವಿಹಿತವು." ಹೀಗೆ ಯೋಚಿಸಿ ಕಿರಾತನು ತಟ್ಟನೆ ಬಸವಳಿದು ಕಂಗೆಟ್ಟಂತೆ ನಟಿಸುತ್ತ ಧರೆಗುರುಳಿದನು.

ದೊರೆತಗೆಲವಿಂದ ನರನು ಹುರುಪುಗೊಂಡು ಪಡೆಯ ಬೇಡರೆಲ್ಲ ರನ್ನೂ ಬಿಡದೆ ಹೊಡೆಯುತ್ತಿದ್ದನು. ಆ ಎಸುಗೆಯ ಬೇಗೆಯನ್ನು ತಡೆ ಯಲಾರದೆ, ಅವರೆಲ್ಲರೂ ಸ್ವಭಾವವನ್ನು ಮರೆಯಿಸಲಾರದೆ, ಮುಂದಿನ ಗತಿಯೇನೆಂದು ತಿಳಿಯದಾದರು. ಕಾಲಮೇಘದಂತೆ ಮೊಳಗುವ ಗಾಂಡೀವವು ಬಿಡದೆ ಸರಳಮಳೆಯನ್ನು ಸುರಿಸುತ್ತಿರಲು, ಅಂಗಾಂಗಗಳ ನಡುಕದೊಡನೆ ಕಣ್ಣುಗತ್ತಲೆ ಕವಿದ ಪಡೆಯ ಪಾಡನ್ನು ಹೇಳಿ ತೀರದು. ಆಗ ಹಸ್ತಲಾಘವದಿಂದ ನಿರಂತರವೂ ಶರವರ್ಷವನ್ನು ಸುರಿಸುತ್ತಿದ್ದ ನರನು ಒಬ್ಬನೇ ಆಗಿದ್ದರೂ ಹೆದರಿ ತಬ್ಬಿಬ್ಬಾದ ಬೇಡರಿಗೆ ಸುತ್ತುಗೂಡಿ ಅನೇಕರು ಹೊಡೆಯುತ್ತಿದ್ದಂತೆ ತೋರುತ್ತಿತ್ತು. ಸವ್ಯಸಾಚಿಯ ವಿಸ್ಮಯಕರವಾದ ಶರಮೋಚನೆಗೆ ವಿಮೋಚನೆಯಿರಲಿಲ್ಲ. ಆ ರಣರಂಗದಲ್ಲೇ ಕೊನೆಗೊಳಿ ಸತಕ್ಕ ಮಾರ್ಗಣಪಾತಕ್ಕೆ ಹೆದರಿ ಪ್ರಮಥಗಣಗಳೆಲ್ಲವೂ ಮಾರಣದ ಕೋಲಾಹಲದೊಡನೆ ತಳಮಳಿಸುತ್ತಿದ್ದುವು. ಆ ವೇಳೆಗೆ, ಜಲಾಶಯ ದಲ್ಲಿ ತೆರೆಗಳು ಭೋರ್ಗರೆಯುತ್ತ ಸರಿಯುತ್ತಿರಲು ಪ್ರತಿಬಿಂಬಿಸಿ ತೋರುವ ದಿನಕರಬಿಂಬದಂತೆ ಕಿರಾತಮೂರ್ತಿಯು ಚಲಿಸುತ್ತ ಪಕ್ಕನೆ ನಿತ್ತುಕೊಂಡು

ದೋರ್ದಂಡಗಳಿಂದ ನಿಜಧನುರ್ದಂಡವನ್ನವಲಂಬಿಸಿ ಸರ್ವತೋಮುಖವಾಗಿ ಚಮತ್ಕಾರದೊಡನೆ ಧನುಷ್ಟಂಕಾರವೆಸಗಿದನು.

ಅದನ್ನು ಗಮನಿಸಿ ನೋಡುತ್ತಿದ್ದ ಅರ್ಜುನನ ಮನಸ್ಸಿನಲ್ಲಿ ಬಗೆ ಬಗೆಯ ಭಾವನಾತರಂಗಗಳೇಳತೊಡಗಿದುವು—"ಇವನು ಸಾಮಾನ್ಯ ಕಿರಾತನಲ್ಲ; ತಾಳಹೊಡೆವಂತೆ ಕಿವಿಗಳನ್ನಾಡಿಸುತ್ತ ಮುನ್ನುಗ್ಗುವ ದುಷ್ಟ ಮತಂಗಜದಂತೆ ಅನರ್ಥಕಾರಿಯಾದ ಯಾವನೋ ಸಾಹಸಿಯಾಗಿರಬೇಕು! ಆನೆಯು ಮುಂದಿರಬೇಡವೆಂಬ ನಾಣ್ಣುಡಿಯು ಎಚ್ಚರದಂತೆ ಬೇಡನಾದವನು ವಿಜಯನೆನಿಸಿದ ನನಗೂ ದುರ್ಜಯನಾಗಿರಬಹುದೆ?" ಹೀಗೆ ಯೋಚಿಸುತ್ತಿರುವಷ್ಟರಲ್ಲೇ ಬೇಡನ ಶರಜಾಲಗಳು ಬಿಡದೆ ಜಡಿದ ನರನ ಶರವೃಷ್ಟಿಯನ್ನು ಕಡೆಗಣಿಸಿ ತಡೆಗಟ್ಟಿದುವು. ಹಾಗೆಯೇ ಕಿರಾತಾರ್ಜುನರೊಬ್ಬರನ್ನೊಬ್ಬರು ಸೋಲಿಸಬೇಕೆಂದು ಸಮಸಾಹಸರಾಗಿ ವಿವಿಧರೀತಿಯ ಶರಪ್ರಯೋಗಗಳಿಂದ ಹೋರಾಡುತ್ತಿದ್ದರು. ಎಲ್ಲೆಲ್ಲಿಯೂ ನಿಲವಿಲ್ಲದ ಶರವೃಷ್ಟಿಯು ಮಹಾಪ್ರಳಯವು ಭೂಮ್ಯಂತರಿಕ್ಷಗಳನ್ನೇ ಗಿಳಂಕರಿಸುವಂತೆ ಭಾಸವಾಗುತ್ತಿತ್ತು.

ಒಮ್ಮೆ ಅರ್ಜುನನು ಸೋತಂತೆ ತೋರಿದರೆ, ಇನ್ನೊಮ್ಮೆ ಕಿರಾತನು. ಹೀಗೆ ಪರ್ಯಾಯವು ಮರಳಿ ಹೊರಳುತ್ತಿದ್ದರೂ, ನಿಜವಾದ ಸೋಲಗೆಲವಿಲ್ಲದುದರಿಂದ ಅವರಿಬ್ಬರೂ ಜೀವದ ಹಂಗುದೊರೆದು ಕಾದಾಡುತ್ತಿದ್ದರು. ಆಗ ಮುನಿದ ತಾಪಸನ ಎಸುಗೆಯು ಬಿಗುಪಾಗುತ್ತಿದ್ದುದನ್ನು ತಿಳಿದು ಕಿರಾತಮೂರ್ತಿಯು ತನ್ನ ನಿಜಪ್ರಭಾವವನ್ನವಲಂಬಿಸಿ, ಇನ್ನೀಗಲೇ ವಿಳಂಬವಿಲ್ಲದೆ ಯುದ್ಧವನ್ನು ಕೊನೆಗಾಣಿಸಬೇಕೆಂದೆಣಿಸುತ್ತ, ಭಾಸ್ಕರನು ಪ್ರಚಂಡಶಕ್ತಿಯಿಂದ ಜಲಾಶಯವನ್ನೇ ಬತ್ತಿಸಿ ಬಿಡುವಂತೆ ನರನ ಶರತತಿಗಳೆಲ್ಲವನ್ನೂ ತನ್ನೆಡೆಗೆ ಸೆಳೆಕೊಂಡನು. ಯುದ್ಧದಲ್ಲೇ ನಿಮಗ್ನನಾದ ಅರ್ಜುನನ ಕೈಗೆ ಬಾಣಗಳು ದೊರೆಯದೆ ಹೋಗಲು, ಕಾಡಾನೆಯು ಕುಡಿದು ಹೋದ ಸಂಗತಿಯನ್ನರಿಯದೆ ಬಾಯಾರಿದ ಮದಗಜವು ಪರ್ವತದ ಶಿಲಾಗರ್ತದಲ್ಲಿ ಸೊಂಡಿಲನ್ನು ನೀಡಿ ನೀರನ್ನು ಪರಿಶೋಧಿಸುವಂತೆ ತನ್ನ ಅಕ್ಷಯತೂಣೀರದಲ್ಲಿ ಹುದುಗಿರಬಹುದೆಂಬ ನಂಬಿಕೆಯಿಂದ ಕೈನೀಡಿ ಬತ್ತಳಿಕೆಯಲ್ಲಿ ಶರಗಳನ್ನು ಪರಿಶೋಧಿಸುತ್ತಿದ್ದನು. ಎರಡು ಬತ್ತ

ಳಿಕೆಗಳನ್ನೂ ಬಿಡದೆ ಹುಡುಕಿದರೂ ಬಯಕೆಯು ಕೈಗೂಡದಿರಲು ಬರಿಯ ಬತ್ತಳಿಕೆಗಳನ್ನು ಧರಿಸಿಕೊಂಡು ಬೆಂಡಾರಿದ ನರನು, ಯುಗಾಂತದಲ್ಲಿ ನೀರಾರಿದ ಪೂರ್ವಾಪರಾಂಬುಧಿಗಳೊಡನೆ ಶೂನ್ಯವಾದ ಲೋಕದ ಹಾಗೆ ಕ್ಷಣಕಾಲ ನಿರ್ವಿಣ್ಣನಾದನು. ತಮ್ಮ ವಿಪತ್ತಿಗಾಗಿ ಕೊರಗಲಾರದ ಮಹಾತ್ಮರು ಪರರ ಸಂಕಷ್ಟದಲ್ಲಿ ಮರುಗುವಂತೆ ತನ್ನ ಅಕ್ಷಯತೂಣೀರಗಳು ಆಕಸ್ಮಿಕವಾಗಿ ಹೀಗೆ ಬರಡಾದುದಕ್ಕಾಗಿ ದುಃಖಿಸಿದನಲ್ಲದೆ ಶರವಿಲ್ಲದ ದುರ್ಘಟನೆಗಲ್ಲ.

ತರ್ಕಸಭೆಯಲ್ಲಿ ವಾದಿಯು ಎದುರಾಳಿಯನ್ನು ನಿರ್ದಾಕ್ಷಿಣ್ಯವಾಗಿ ಬಿರುನುಡಿಗಳಿಂದ ಖಂಡಿಸುವಂತೆ ಕಿರಾತನಾಗ ಗರಿಗಟ್ಟಿದಕೂರಲಗುಗಳಿಂದ ಗುರಿಹಿಡಿದು ನರನ ಮರ್ಮಗಳಿಗೆ ಹೊಡೆಯುತ್ತ ಧರಿಸಿದ ಕವಚವನ್ನು ಪರಿಹರಿಸಿದನು. ಆಗ ಕೌಂತೇಯನು, ಪ್ರಚಂಡವಾದ ಬಿರುಗಾಳಿಯು ಕಾಲಮೇಘವನ್ನು ಪರಿಹರಿಸಲು ತೊಳಗುವ ಸೂರ್ಯಮಂಡಲದಂತೆ, ಒರೆಕಳಚಿದ ಖಡ್ಗದಂತೆ, ಹೆರೆಯುಗಿದ ಭುಜಂಗದಂತೆ, ಕಡೆದ ರತ್ನದಂತೆ, ಪ್ರತಿದ್ವಂದ್ವಿಯಾದ ಕಾಡಾನೆಯೊಡನೆ ಹೋರಾಡಬೇಕೆಂದು ಮೊಗವಟ್ಟವನ್ನು ನೀಗಿ ಬಿಗುಪಿನಿಂದ ಮಲೆವ ಮತಂಗಜದಂತೆ, ಮೇಘನಿರ್ಘೋಷವನ್ನು ಕೇಳಿ ಕೆರಳುತ್ತ ಗುಹೆಯಿಂದ ಹೊರಬಂದ ಸಿಂಹದಂತೆ ಧೂಮಸ್ತೋಮವಿಲ್ಲದೆ ಪ್ರಜ್ವಲಿಸುವ ನಿಶಾದವಾನಲದಂತೆ ನಿಜಕಾಂತಿಯಿಂದ ವಿರಾಜಿಸಿದನು. ಹರಿದು ಬೀಳುವ ಕವಚದೊಡನೆ ಬತ್ತಳಿಕೆಗಳೆರಡೂ ತಲೆಕೆಳಗಾಗಿ ಬೀಳುತ್ತ, ಯಜಮಾನನ ಸಂಕಷ್ಟದಲ್ಲಿ ತಲೆಬಗ್ಗಿಸಿಕೊಂಡು ಮನೋವ್ಯಥೆಯನ್ನು ಪ್ರಕಟಿಸುವ ನಚ್ಚಿನ ಬಂಟರ ಹಾಗೆ ತೋರುತ್ತಿದ್ದುವು.

ಸತ್ವಗುಣಸಂಪನ್ನನೂ ತಪಃಪ್ರಭಾವಾನ್ವಿತನೂ ಆದ ತಾಪಸನು, ಅಭೇದ್ಯವಾದ ಕಂಚುಕವು ಪರಿಹೃತವಾಗಲು ಮಿತಿಮೀರಿದ ಕೋಪತಾಪಗಳಿಂದುಂಟಾದ ತಿರಸ್ಕಾರವೆಂಬ ಕವಚವನ್ನು ಧರಿಸುತ್ತ, ಕಿರಾತನು ಸುರಿಸುವ ಸರಳಮಳೆಯನ್ನು ಲಕ್ಷಿಸದೆ ನಿರಂತರವೂ ಸುರಿವ ಶರಧಾರೆಗಳಿಂದ ಅಂಗಾಂಗಗಳು ಜರ್ಜರಿತವಾಗಿ ರಕ್ತಪ್ರವಾಹವು ಸುರಿಯುತ್ತಿದ್ದರೂ, ಅದರ ಪರಿವೆಯಿಲ್ಲದೆ ಬೊಬ್ಬಿರಿಯುತ್ತ ನಿಜದೋರ್ದಂಡಗಳಿಂದ ಧನುರ್ದಂಡವನ್ನು ಹಿಡಿದೆತ್ತಿಕೊಂಡು "ಈತನನ್ನೀಗಲೇ ಕೆಡಹಿ ಬಿಡು

ವೆನೆ"ಂದು ಕಡುಮುಳಿದು ರಭಸದಿಂದ ಬೇಡನನ್ನು ಹೊಡೆದನು. ಸಡಗರದಿಂದ ಭೋರ್ಗರೆಯುತ್ತ ಅನೇಕಮಾರ್ಗವಾಗಿ ಪ್ರವಹಿಸುವ ದೇವಗಂಗೆಯು ಜಹ್ನುಮಹರ್ಷಿಯ ಉದರದೊಳಗೆ ಲೀನವಾದಂತೆ ಆ ಗಾಂಡೀವಮಹಾಧನುವೂ ಬೇಡನಲ್ಲಿ ಅಡಗಿಕೊಂಡಿತು. ಸನ್ನಿವೇಶವು ಇಂದ್ರಜಾಲದಂತೆ ಕೇವಲ ವಿಸ್ಮಯಕಾರಿಯಾದರೂ ಕೂಡ ಸತ್ಫಲದಾಯಕವಾದ ವೀರವ್ರತವನ್ನು ಪಾಲಿಸಲೇ ಬೇಕೆಂದು ಪುಣ್ಯಕರವಾದ ರಣವೆಂಬ ಆಶ್ರಮದಲ್ಲಿ ನಿಯಮಿತಚಿತ್ತನಾದ ಆ ತಪಸ್ವಿಯು ಕಿರಾತನ ಶರಾಘಾತಗಳೆಂಬ ಜಪೋಪವಾಸಗಳಿಂದಲೇ ಮುಂದುವರಿಯುತ್ತ ತನ್ನ ಹಟಯೋಗವನ್ನು ಸಾಧಿಸಲು ಯತ್ನಿಸಿದನು. "ಇದೇನು! ಗಾಂಡೀವವನ್ನೂ ಕಳಕೊಂಡೆನೇ" ಎಂಬ ಕೋಪದಿಂದ ಅಪಾಯದ ಶಂಕೆಯಿಲ್ಲದೆ ವಿಗ್ರಹದೊಡಗೂಡಿ ಬಂದ ಸ್ವಾಭಿಮಾನದಂತೆ ಜಯವನಿತೆಗೆ ನಿವಾಸವೂ, ಪೌರುಷಕ್ಕೆ ನೆಲೆಯೂ, ಅರಾತಿಮಂಡಲಕ್ಕೆ ಅಲಂಘ್ಯವೂ ಎನಿಸಿ ಮೆರೆವ ಮಹಾಖಡ್ಗವನ್ನು ಧರಿಸಿಕೊಂಡು, ಪ್ರಭಾಕರನ ಕಿರಣಸಂಪರ್ಕದಿಂದ ಕಂಗೊಳಿಸುತ್ತ ತರಂಗಮಾಲಿಕೆಯುಳ್ಳ ವಾರಿಧಿಯಂತೆ ಗಂಭೀರನಾದ ಅರ್ಜುನನು ವೈರಿಯ ಶರಜಾಲವನ್ನು ಖಂಡಿಸುತ್ತ ರಣರಂಗದಲ್ಲಿ ವಿಚಿತ್ರಗತಿಯಿಂದ ಸಂಚರಿಸಿದನು.

ಆಗಲೇ ಗುರಿಹಿಡಿದು ಹೂಡಿದ ಕಿರಾತನ ಬಾಣವು ಅರ್ಜುನನ ಮುಷ್ಟಿಬಂಧದ ಸಮೀಪಕ್ಕೆರಗಿ ನೀಳವಾದ ಕರಾಳಖಡ್ಗವನ್ನು ತುಂಡಿಸಲು, ಅದು ಭೀಷಣವಾಗಿ ಸಿಡಿವ ಸಿಡಿಲ ಬಾಳಿನಂತೆ ಕೆಡೆದು ಕಣ್ಮರೆಗೊಂಡಿತು. ಹೀಗೆ ಬಾಣವು ಕಾಣೆಯಾಗಿ, ಕಂಚುಕವು ಹರಿಹಂಚಾಗಿ, ಬತ್ತಳಿಕೆಗಳು ಬಿತ್ತಿ ಕಿತ್ತುಹೋಗಿ, ಧನುರ್ದಂಡವು ತುಂಡಾಗಿ, ಖಡ್ಗವು ಹಿಡಿಕೆಯ ಬುಡದಿಂದಲೇ ಉಡಿದುಹೋಗಿ ಒಳಗೊಳಗೇ ತಳಮಳಿಸುತ್ತ ಕಳದಲ್ಲಿದ್ದ ತಾಪಸನ ದೃಶ್ಯವು ಸರ್ವನಾಶವೊದಗಿದ ಉದ್ಯಾನದಂತೆ ಸಾರಮಯವೆನಿಸಿ ಪ್ರೇಕ್ಷಣೀಯವಾಗಿತ್ತು. ವಿರೋಧಿಯು ಹೀಗೆ ತನ್ನ ಶಸ್ತ್ರಾಸ್ತ್ರಗಳನ್ನು ನಷ್ಟಪಡಿಸಿದುದರಿಂದ ಮುಳಿದೆದ್ದ ನರನು "ಈತನ ಶಕ್ತಿಯನ್ನು ಬಾಹುಬಲದಿಂದಲೇ ಕುಂದಿಸದೆ ಬಿಡಲಾರೆನೆ"ಂದು ಅಲ್ಲಿದ್ದ ಕಲ್ಲುಗಳಿಂದಲೇ ಪುಳಿಂದನನ್ನು ಹೊಡೆಯತೊಡಗಿದನು. ಆಲಿಕಲ್ಲಿನ ಮಳೆ

ಯಂತೆ ಸುರಿವ ಶಿಲಾವೃಷ್ಟಿಯನ್ನು ಕಿರಾತನು ನಾರಾಚಗಳಿಂದಲೇ ಪರಿಹರಿಸುವುದನ್ನು ನೋಡಿ ಗಂಡುಗಲಿಯಾದ ಪಾಂಡವನು ಕಡುಮುಳಿದು ಮರಗಳನ್ನು ಕಿತ್ತು ಹೊಡೆಯಲು ಉಪಕ್ರಮಿಸಿದನು. ಬೇಡನು ಅದೆಲ್ಲವನ್ನೂ ಹೆಚ್ಚಿನ ಉತ್ಸಾಹದಿಂದ ಕೊಚ್ಚಿ ರಣರಂಗದಲ್ಲಿ ಕೆಡಹಿದುದನ್ನು ನೋಡಿ ನರನು ಅಪ್ರತಿಮನಾದ ಮಲ್ಲನಂತೆ "ಮಲ್ಲಯುದ್ಧವಲ್ಲದೆ ಇವನ ಗರ್ವವು ನಿಲ್ಲಲಾರದೆ"ಂದೆಣಿಸಿ ರಭಸದಿಂದ ಪ್ರವಹಿಸುವ ಬಾಣನದಿಯ ಒಯ್ಲಿಗೆ ಮಹಾಮಕರದಂತೆ ಇದಿರಾಗಿ ಪ್ರವೇಶಿಸಿ ಶಿಲೆಯಂತೊಪ್ಪುವ ಪ್ರತಿಭಟನ ವಕ್ಷಸ್ಥಳವನ್ನು ತನ್ನ ಮುಷ್ಟಿಬಂಧಗಳಿಂದ ಬಲವಾಗಿ ಮೋದಿದನು.

ಆದರೂ ಕೂಡ, ಪಡೆಯಲಸಾಧ್ಯವಾದ ಫಲವನ್ನು ದೊರಕಿಸಿಕೊಳ್ಳಬೇಕೆಂದು ಮಡಿಲಲ್ಲಿ ಕುಳಿತುಕೊಂಡು ಕಾಡುವ ಬಾಲಕನ ಅವಿನಯವನ್ನು ಪುತ್ರವಾತ್ಸಲ್ಯದಿಂದಲೇ ಮನ್ನಿಸುವ ತಂದೆಯಂತೆ, ಹೊಂದಲಶಕ್ಯವಾದ ಗೆಲವಿನ ಕೀರ್ತಿಯನ್ನು ಸಂಪಾದಿಸಬೇಕೆಂಬ ಹಟದಿಂದ ಬಲವಾಗಿ ಗುದ್ದಾಡುವ ಅರ್ಜುನನ ಅಪರಾಧವನ್ನು ಕಿರಾತಮೂರ್ತಿಯು ಭಕ್ತವಾತ್ಸಲ್ಯದಿಂದಲೇ ಸಹಿಸಿಕೊಂಡನು.

೨೭ ಮಹೇಶ್ವರನ ಸಾಕ್ಷಾತ್ಕಾರ

ಪ್ರತಿಸ್ಪರ್ಧಿಯು ಉರಸ್ಥಳವನ್ನು ಹೊಡೆದು ಮಲ್ಲಯುದ್ಧಕ್ಕಾಗಿ ಸನ್ನದ್ಧನಾಗಿರುವುದನ್ನು ನೋಡಿ ಬಿಲ್ಲರೊಡೆಯನು ಧರ್ಮಾನುಸಾರವಾಗಿ ಬಿಲ್ಲುಬಾಣಗಳನ್ನುಳಿದು ಮುಷ್ಟಿಬಂಧಗಳಿಂದ ಪಾರ್ಥನನ್ನು ಪ್ರತಿಯಾಗಿ ಹೊಡೆದನು. ಬರಬರುತ್ತ ಅವರೊಡನೆ ಗುದ್ದಾಟಗಳು ಬಿಗುವಾಗುತ್ತಿರಲು, ಬಂಡೆಗಳೊಡೆದು ಸಿಡಿಯುತ್ತಿರುವಂತೆ ಕಂದರಗಳಲ್ಲಿ ಪ್ರತಿಧ್ವನಿಗಳು ಏಳುತ್ತಿದ್ದುವು.

ಹೀಗೆ ಕಿರಾತಾರ್ಜುನರು ಸುಖದುಃಖಗಳ ಅರಿವಿಲ್ಲದೆ ಹೋರಾಡುತ್ತಿರಲು, ಮೈಯ್ಯೊಡೆದು ಸೋರುವ ರಕ್ತದಿಂದಲೂ, ದಾರ್ಢ್ಯದಿಂದಲೂ,

ಪ್ರಚಂಡತೆಯಿಂದಲೂ ಯುಕ್ತರಾಗಿ ರಕ್ತಚಂದನವಿಲಿಪ್ತಗಾತ್ರರಂತೆ, ಸಂಧ್ಯಾಕಾಲದ ಮೋಡಗಳಂತೆ, ಕಲ್ಪಾಂತಭೈರವರಂತೆ ವಿಧವಿಧವಾಗಿ ತೋರುತ್ತಿದ್ದರು. ಬಿರುನೋಟದಿಂದ ಮಲೆಯುತ್ತ ಕಾಲ್ಕೆದರಿ ಧೂಳೆಬ್ಬಿಸುತ್ತ ತಿಗರಿಯಂತೆ ಸುತ್ತಲೂ ತಿರುಗುತ್ತ, ಅಬ್ಬರದ ಬೊಬ್ಬೆಯೊಡನೆ ನೆಗೆಯುತ್ತ, ಹದಗೆಟ್ಟು ತುಳಿಯುತ್ತ, ಅಡಿದಪ್ಪಿ ಬೀಳುತ್ತ, ಆರ್ಭಟಿಸುತ್ತ ಏಳುತ್ತ ಮದ್ದಾನೆಗಳಂತೆ ಆಘಾತಪ್ರತಿಘಾತಗಳಿಂದ ಹೋರಾಡುತ್ತಿದ್ದರು. ಆಗ ಧನಂಜಯನ ಕಂಧರವನ್ನು ಒಮ್ಮೆಗೇ ಗುದ್ದಿ ಮುದ್ದೆಮಾಡುವೆನೆಂದು ಬೇಡನು ಮುಷ್ಟಿಗಳನ್ನು ಬಲಿದು ಹೊಂಚುತ್ತಿದ್ದನು. ಅದನ್ನು ನೋಡಿ ಪಾಂಡವನು ಕಣ್ಣುಗಳನ್ನು ಕೆರಳಿಸುತ್ತ ಕೆಲಸರಿದು ಗಬಕ್ಕನೆ ಓಡಿಬಂದು ಬೇಡನ ಕೈಗಳೆರಡನ್ನೂ ಹಿಡಿದು ಅದುಮಿಕೊಂಡನು. ಬೇಡನು ಅದನ್ನು ಬಿಡಿಸಿಕೊಳ್ಳಲು ನಡೆದ ಉರುಡಾಟವು ಪೊಡವಿಯನ್ನೇ ಗಡಗಡನೆ ನಡುಗಿಸಿತು. ಪುಡಿಪುಡಿಯಾಗಿ ಹೇಳಹೆಸರಿಲ್ಲದಂತೆ ಆಗಬಾರದೆಂಬ ಹೆದರಿಕೆಯಿಂದ, ಅಚಲಗಳೆಲ್ಲವೂ ಅವರ ಚಲನವಲನಗಳನ್ನೇ ಅನುಸರಿಸುತ್ತಿದ್ದುವೆಂದರೆ ಆ ಹೋರಾಟವು ರುದ್ರನಾಟಕದಂತೆ ಬಹು ಭೀಷಣವಾಗಿ ಪರಿಣಮಿಸಿತು.

ಹೀಗೆ ಅವರಿಬ್ಬರೂ ರಭಸದಿಂದ ಕಾದಾಡುತ್ತಿದ್ದುದನ್ನು ನೋಡುತ್ತಿದ್ದ ಬೇಡಪಡೆಗೆ—"ಇದಿರಾಗಿ ನಿತ್ತವನು ನಮ್ಮವನು! ಅಲ್ಲ ಅರ್ಜುನನು! ಅದೋ ಬಿದ್ದವನು ತಾಪಸನು! ತಪ್ಪಿದೆವು ತಪ್ಪಿದೆವು! ಅಡಿತಪ್ಪಿ ಕೆಡೆದವನೇ ನಮ್ಮವನು! ಈಗ ಎದ್ದವನೇ ಕಿರಾತನು! ಹಾಗಲ್ಲ, ತಾಪಸನೆದ್ದವನು! ಹಾಹಾ! ಅಡಿಯಲ್ಲಿ ಬಿದ್ದವನೇ ಒಡೆಯನು! ತಡೆ ತಡೆ; ಪಾಂಡವನವನು" ಎಂಬುದಾಗಿ ವ್ಯಕ್ತಿ ಪರಿಚಯ ಮಾಡಿಕೊಳ್ಳುವುದರಲ್ಲಿ ಭ್ರಮೆಯುಂಟಾಗುತ್ತಿತ್ತು ಹೀಗೆ ಮಿಗಿಲಾದ ಅವರ ಹೋರಾಟವು ಅಭೂತಪೂರ್ವವೆನಿಸಿತು.

ಹೀಗೆ ಹೋರಾಡಿದರೆ ರಣವೆಂದಿಗೂ ಕೊನೆಗಾಣಲಾರದುದರಿಂದ ನೆಗೆದು ಮೇಲಿಂದ ಹಾರುವುದೇ ಸುಲಭೋಪಾಯವೆಂದು ತಿಳಿದು ಬೇಡನು ಬೇಗನೆ ಗಗನಕ್ಕೆ ನೆಗೆಯುತ್ತಿದ್ದುದನ್ನು ನೋಡಿ ಪಾಂಡವನು ನಾನೂ ಅವನನ್ನನುಸರಿಸಬೇಕೆಂದು ಗಡಿಬಿಡಿಯಿಂದ ಹಾರುತ್ತ ಎಟಕಿದ ಕಿರಾತನ

ಕಾಲುಗಳನ್ನು ತನ್ನ ಕೈಗಳಿಂದ ಬಲವಾಗಿ ಹಿಡಿದುಕೊಂಡನು. ಬಹು ಸಾಹಸದಿಂದ ಹೋರಾಡಿಯೂ ಬಳಲದೆ ಉತ್ಸಾಹಾತಿಶಯದಿಂದ ಹೀಗೆ ತನ್ನೊಡನೆ ಶಕ್ತಿಯನ್ನು ಪ್ರದರ್ಶಿಸುತ್ತಿದ್ದ ವಿಜಯೋತ್ಸುಕಚಿತ್ತನೊಡನೆ ಕಿರಾತಮೂರ್ತಿಯು ಪ್ರಸನ್ನನಾಗಿ ಹೃತ್ಪೂರ್ವಕವಾದ ಪ್ರೀತಿವಿಶ್ವಾಸಗಳನ್ನು ಪ್ರಕಟಿಸುವ ಹಾಗೆ ಆತನನ್ನು ಹಿಡಿದುಕೊಂಡು ಗಾಢವಾಗಿ ಆಲಿಂಗಿಸಿದನು. ಗಾಂಡೀವಿಯ ಆತುರದ ನಿಯಮನಿಷ್ಠೆಯ ತಪಸ್ಸಿಗೆ ಮನವೊಲಿಯದೆ, ನೆಟ್ಟಿರುವ ಭಕ್ತಿಭಾವದ ಸೇವೆಗೆ ಪ್ರಸನ್ನನಾಗದೆ, ಕ್ರಮಬದ್ಧವಾದ ಪೂಜಾಪುರಸ್ಕಾರಗಳಿಗೆ ಮೈದೋರದೆ, ಅಗೋಚರನೆನಿಸಿದ ಮಹೇಶ್ವರನು ಅಸಮಾನವಿಕ್ರಮದಿಂದ ಹೋರಾಡಿದ ವಿಜಯನ ಧೈರ್ಯಸಂಪತ್ತಿಗೊಲಿದು ಮನಮೆಚ್ಚಿ ಮೈದೋರಿದನೆಂದರೆ ಗುಣಗಳಲ್ಲಿ ಸತ್ವವೇ ಶ್ರೇಷ್ಠವಾಗಿರುವುದು.

ಹೋರಾಟದ ಕಡುಬೇಗೆಯಿಂದ ಬೆಂದು ಬಸವಳಿದ ಅರ್ಜುನನಿಗೆ ತಂಗಾಳಿಯ ಸ್ಪರ್ಶದಂತೆ, ಸುಧಾಸೇಚನೆಯಂತೆ, ಜ್ಯೋತ್ಸ್ನಾವಿಹಾರದಂತೆ ಒಮ್ಮಿಂದೊಮ್ಮೆಗೇ ಅಮಿತಾನಂದದ ಅರಿವಾದುದು. ಕೂಡಲೆ ಅವನು “ಇದ್ದಂತೆಯೇ ತನಗೆ ಹೀಗಾಗಲು ಕಾರಣವೇನಿರಬಹುದು ಎಂದು ಯೋಚಿಸಿ ನೋಡಿದನು. ಆಗ ತುದಿಮೊದಲಿಲ್ಲದ ಐಂದ್ರಜಾಲಿಕವಿದ್ಯೆಯಂತೆ ಎಲ್ಲವೂ ಅವನಿಗೆ ಅತ್ಯದ್ಭುತವೆನಿಸಿತು. “ಬೇಟೆಯ ಹಂದಿಗಾಗಿ ಬಂದು ಕಾಡಿದ ಕಾರೊಡಲ ಬೇಡನಿಲ್ಲ. ಬದಲಾಗಿ, ಹಿಮಶುಚಿಭಸ್ಮಭೂಷಿತನಾಗಿ ಬಾಲಚಂದ್ರನ ಕಲೆಗಳಿಂದ ಬೆಳಗುವ ದಿವ್ಯಸುಂದರವಿಗ್ರಹದೊಡನೆ ಸಾಕ್ಷಾತ್ ಮಹೇಶ್ವರನೇ ಪ್ರತ್ಯಕ್ಷನಾಗಿ ಮೆರೆಯುತ್ತಿರುವನು. ಹರಿದು ಕಳಚಿಹೋದ ಕವಚವು ತುಂಬಿದ ಖಡ್ಗವು ಅಖಂಡವಾಗಿ ಹಸ್ತವನ್ನಲಂಕರಿಸುತ್ತಿದೆ. ಧನಂಜಯನಿತ್ತು ಗಾಂಡೀವವೆಂದು ಕೊಂಡಾಡಿದ ಧನುರ್ದಂಡವೂ ಭುಜದಂಡವನ್ನವಲಂಬಿಸಿರುವುದು. ಶರಧಾರೆಗಳಿಂದ ಜರ್ಜರಿತವಾಗಿ ಹದಗೆಟ್ಟ ದೇಹವು ಮೊದಲಿನಂತೆಯೇ ಸುಖಮಯವಾಗಿರುವ ಅನುಭವವುಂಟಾಗುತ್ತಿದೆ. ಆಹಾ ಇದೇನು ಕನಸೋ ನೆನಸೋ!” ಎನ್ನುತ್ತ ನರನು ಬೆರಗಾಗಿ ತನ್ನ ಸಹಸ್ರಾಪರಾಧವನ್ನೂ ಮನ್ನಿಸಬೇಕೆಂದು ದೈನ್ಯದಿಂದ ಯಾಚಿಸಿಕೊಳ್ಳುವ ಅಪರಾಧಿ

ಯಂತೆ ಪ್ರಸನ್ನಭಾವದ ಮುಖಮುದ್ರೆಯಿಂದ ಕಂಗೊಳಿಸುವ ದೇವದೇವನ ಚರಣಕಮಲಗಳಲ್ಲಿ ದೊಪ್ಪನೆ ಕೆಡೆದನು.

ಆ ವೇಳೆಗೆ, ಮೋಡಗಳು ಮಳೆಹನಿಗಳನ್ನು ಸುರಿಸಿದುವು. ಸುರಲೋಕದಿಂದ ಪುಷ್ಪವೃಷ್ಟಿಗಳಾದುವು. ದೇವದುಂದುಭಿಧ್ವನಿಗಳು ಕೇಳಿಸಿದುವು. "ಈ ಸುಸಂದರ್ಭವನ್ನು ಸಂದರ್ಶಿಸದೆ ಕಳಕೊಳ್ಳಬಾರದೆ"ಂದು ಇಂದ್ರಾದಿಲೋಕಪಾಲಕರೆಲ್ಲರೂ ವಿಮಾನಗಳನ್ನೇರಿಕೊಂಡು ದ್ರುತಗತಿಯಿಂದ ಬರುತ್ತಿರಲು, ಆ ವಿಮಾನಗಳನ್ನು ಅಲಂಕರಿಸಿದ ಜಾತಿರತ್ನಗಳಿಂದ ಅಂಬರವು ತಾರಕಿತವಾದಂತೆ ಸ್ಫುರಿಸುತ್ತಿತ್ತು. ಅಂತಹ ದೊಡ್ಡದೊಡ್ಡ ವ್ಯೋಮಯಾನಗಳನ್ನು ಬೇಗಬೇಗನೆ ಕೊಂಡೊಯ್ಯುವ ಸಲುವಾಗಿ ರೆಕ್ಕೆಗಳನ್ನು ಬಡಿಯುತ್ತ ಕುತ್ತಿಗೆಯ ಹೊಂಗೆಜ್ಜೆಗಳ ಕಿರುದನಿಗಳನೆಬ್ಬಿಸುವ ರಾಜಹಂಸಗಳು ಅನಂತವಿತಾನಗಳಂತೆ ಕಂಗೊಳಿಸಿದುವು. ಆಗಲೇ ಸುರನಾರಿಯರ ಕರಗಳ ಮೂಲಕ ಬೀಳುವ ಮಂದಾರಮಾಲೆಗಳ ಮಕರಂದರಸಾಸ್ವಾದನೆಗೆಂದು ಮಾಲಾಕಾರವಾಗಿ ಹಾರಾಡುವ ಭ್ರಮರಗಳ ಗುಂಜಾರವವನ್ನು ಹಬ್ಬಿಸುತ್ತ ಮಂದಾನಿಲವು ಮೆಲ್ಲಮೆಲ್ಲನೆ ಬೀಸುತ್ತಿತ್ತು.

ಮಹಾಯುದ್ಧವು ಘೋರತರವಾಗಿ ಭರದಿಂದ ಮುಂದುವರಿಯುತ್ತಿದ್ದಾಗ "ವಿನಾಶ ಮುಖದಿಂದ ಲೋಕವನ್ನು ಪಾಲಿಸುವ ಉಪಾಯವೇನು! ಜಗದ್ರಕ್ಷಕನೂ ಮುನಿಯೂ ಮುನಿದು ಹೀಗೆ ಹೋರಾಡಿದರೆ, ಶಾಂತಿಸಂಧಾನದ ಯೋಚನೆಯನ್ನಾದರೂ ಸೂಚಿಸುವ ಶಕ್ತಿವಂತರಾರು! ಹರನು ರೋಷಭರಿತನಾದರೆ ಪರಿಣಾಮವೇನು" ಎಂಬ ಕಳವಳದಿಂದ ಕಂಗೆಟ್ಟು ನೋಡುತ್ತಿದ್ದ ಪ್ರಮಥಗಣವು, ದೃಶ್ಯವು ತನ್ನಂತೆಯೇ ಶುಭಪರ್ಯವಸಾನವಾಗಿ ಪರಿಣಮಿಸಿದುದನ್ನು ನೋಡಿ, ಹರ್ಷಭಾವದಿಂದ ಕಳೆಗೂಡಿತು. ಮತ್ತು ದೇವದೇವನನ್ನು ರಣಮುಖದಿಂದ ಮೆಚ್ಚಿಸಿದ ವಿಜಯನನ್ನು ಕುರಿತು "ದುಷ್ಟರನ್ನು ಸಂಹರಿಸಿ, ಭರತಮಾತೆಯ ವದನಾರವಿಂದವನ್ನು ವಿಕಾಸಗೊಳಿಸಿ, ಶಾಂತಿಯನ್ನು ನೆಲೆಗೊಳಿಸಿ, ನೆಮ್ಮದಿಯಿಂದ ಲೋಕವಿಖ್ಯಾತವೆನಿಸಿ ಮೆರೆಯತಕ್ಕ ಸ್ವರಾಜ್ಯವನ್ನು ಸ್ಥಾಪಿಸುವ ತಾಪಸವೇಷದಿಂದ ಮೆರೆವ ಮೂರುಲೋಕದ ಗಂಡನಾದ ಪಾಂಡವನನ್ನು ಕೊಂಡು ಕೊನೆದಾಡಿತು.

೨೮. ಪಾಶುಪತಪ್ರಾಪ್ತಿ

ಕಡುವೇಸಗೆಯ ಮುಂಗಾರು ಮಳೆಯಿಂದ ಚೇತರಿಸಿ ನಲವಿಂದ ಮುಂದಿನ ಕೆಲಸದಲ್ಲಿ ತೊಡಗುವ ಜನರಂತೆ ಪಾರ್ಥನು ಮಹೇಶ್ವರಸಾಕ್ಷಾತ್ಕಾರದಿಂದುಂಟಾದ ಸಂತೋಷಾಧಿಕ್ಯದಿಂದ ಮೈಮರೆತು ಫಕ್ಕನೆ ಎಚ್ಚರಗೊಂಡು ತನ್ನ ಉದ್ದೇಶದ ಸಿದ್ಧಿಗಾಗಿ ಹರನನ್ನು ಕುರಿತು ಹೀಗೆ ಪ್ರಾರ್ಥಿಸಿಕೊಂಡನು. ಅಜೇಯನೆನಿಸಿ ಮೆರೆವ ಪರಮೇಶ್ವರನೇ, ನಿನ್ನನ್ನುಮರೆಹೊಕ್ಕು ಮೃತ್ಯುವನ್ನು ಪರಿಹರಿಸಿದ ಜನರು ಪಾರಲೌಕಿಕಕಷ್ಟಗಳನ್ನು ಕಡೆಗಣಿಸುವರು. ದಯಾಮಯನೇ ನೀನು ಭಕ್ತಿಗಮ್ಯನು. ನಿನ್ನನ್ನು ಮರೆಹೊಗದವರು ವಿಪದ್ಗ್ರಸ್ತರಾಗುವರು; ಇಷ್ಟಸಂಪತ್ತಿನಿಂದ ಬಿಡುಗಡೆ ಹೊಂದುವರು. ಮಾತ್ರವಲ್ಲ, ಜನರ ನಿಂದೆಗೆ ಗುರಿಯಾಗುವರು. ದೇವದೇವ, ಅಸಮಾನಮಹಿಮನಾದ ನಿನ್ನನ್ನು ಪೂಜಿಸದವರ ಅನಿಷ್ಟಪರಂಪರೆಗಳನ್ನು ಹೇಳಿತೀರದು! ಜನ್ಮದುಃಖಗಳಿಂದ ತೊಳಲುವ ಸಂಸಾರಿಗಳು ಮೋಕ್ಷವನ್ನು ಬಯಸುತ್ತ ದಾನಶೀಲರಾಗಿ ಸದಾ ನಿನ್ನನ್ನಾರಾಧಿಸುವರು. ಶಂಕರನೇ, ನಿಸ್ಪೃಹನಾಗಿಯೂ ನೀನೇ ಮೋಕ್ಷದಾಯಕನು. ಪರಾರ್ಥಕ್ಕಾಗಿರುವ ನಿನ್ನ ಕರುಣೆಗೆ ಪಾರವಿಲ್ಲ. ದೇವದೇವ ನೀನು, ಐಹಿಕದಲ್ಲಿ ಪ್ರಯಾಸಕರವಾದ ಸಂಚಾರದ ಅಗತ್ಯವಿಲ್ಲದೆ ಕೇವಲ ಸ್ಮರಣೆಯಿಂದಲೇ ದೊರಕುವ ತೀರ್ಥವು! ನೆನಸುವುದರಿಂದಲೇ ಪರದಲ್ಲಿ ಫಲಿಸುವ ಪುಣ್ಯವು! ಸಂಸಾರಸಾಗರದಿಂದ ದೂರದಲ್ಲಿ ಗೋಚರಿಸುವ ಮೋಕ್ಷವು! ಭವನೇ, ಭವಿಗಳಿಗೆ ನಿನ್ನ ಸ್ಮರಣೆಯೇ ಭವಾರ್ಣವದಿಂದ ಪಾರಾಗಿಸುವ ಪರಮತಾರಕವು. ಲೋಕದಲ್ಲಿ ನೀನಲ್ಲದೆ ಬೇರೆ ಪರಮಪಾವನವಾದ ತೀರ್ಥವಿಲ್ಲ. ವರಪ್ರದಾಯಕನೇ, ತ್ರಿಕರಣಪೂರ್ವಕವಾಗಿ ನಿನ್ನನ್ನು ಸೇವಿಸುವವರು ಕೈವಲ್ಯಪದವಿಯನ್ನೇರಿ ವಿರಾಜಿಸುವರು. ಬುದ್ಧಿಯಿಲ್ಲದೆ ನಿನ್ನನ್ನು ದೂಷಿಸುವವರು ಘೋರತರವಾದ ನರಕದಲ್ಲಿ ಬಿದ್ದು ತಡೆಯಲಾರದ ಸಂಕಟದಿಂದ ಹೊರಳಾಡುವರು. ಸಜ್ಜನರ ಹಾಗೂ ದುರ್ಜನರ ಚಿತ್ತವ್ಯಾಪಾರದಲ್ಲಿ ಸೇರಿ ಪ್ರಚೋದಿಸುವ ನಿನ್ನ ಶಕ್ತಿಯು ಕೇವಲ ದುಜ್ಞೇಯವು. ಸಮಸ್ತಜೀವಜಾಲಗಳೂ ಕರ್ಮಕ್ಕೆ ತಕ್ಕಂತೆ ಫಲವನ್ನನುಭವಿಸುತ್ತಿರು

ವಾಗ, ಸಜ್ಜನರು ದುರ್ಜನರೆಂಬ ಭೇದಭಾವವಿಲ್ಲದೆ ಸಾಕ್ಷೀಭೂತನಾದ ನೀನು ಸರ್ವಸಮಾನನಾದ ಭೂತೇಶನು. ರಾಗದ್ವೇಷಾದಿಗಳಿಂದ ಕೂಡಿದ ಸಂಸಾರಿಗಳು ಮಂಗಳಮಯವಾದ ನಿನ್ನ ದಕ್ಷಿಣಾಮೂರ್ತಿಯ ನಿಜಸ್ವರೂಪವನ್ನು ತಿಳಿಯಲಾರರು. ಆದರೂ ಅವರ ಮುಕ್ತಿಗೆ ಭಕ್ತಿಪೂರ್ವಕವಾದ ನಿನ್ನ ನಾಮಸ್ಮರಣೆಯೇ ನಿದಾನವು. ನಿಜಸಂಗತಿಯು ಹೀಗಿರಲು, ಭವನೇ ಭಕ್ತರ ವಿಷಯದಲ್ಲಿ ನಿನಗಿರುವ ದಾಕ್ಷಿಣ್ಯವು ತಾನಾಗಿ ವ್ಯಕ್ತವಾಗುವುದು. ಈಶ್ವರನೇ ನೀನು ಸರ್ವೋತ್ಕೃಷ್ಟನೆಂದು ತಿಳಿದವರೇ ಜ್ಞಾನಿಗಳೆನಿಸುವರು. ಅಂತಹ ಜ್ಞಾನದ ಮೂಲಕ ನಿಜವನ್ನರಿತು ನಿನ್ನ ಸೇವೆಮಾಡುವವರನ್ನು ಸಾಧುಗಳೆನ್ನುವರು. ವಿವೇಚನಾಶೀಲರು ಕರ್ತವ್ಯವನ್ನಾಚರಿಸಿ ಶಾಶ್ವತಪದವಿಯನ್ನು ಪಡೆದುಕೊಳ್ಳುವರು.

ಜ್ಞಾನ, ಕರ್ಮ, ಮೋಕ್ಷ, ಇವೆಲ್ಲವೂ ನಿನ್ನ ಅಧೀನವಾಗಿರಲು, ಮಹೇಶ್ವರನೇ ನಿನ್ನ ಮಹಿಮೆಯು ಊಹನಾತೀತವು. ನಿಜಯೋಗ ಪ್ರಭಾವದ ಮೂಲಕ ಲೋಕೋಪಕಾರಿಗಳಾದ ಮುನಿಶ್ರೇಷ್ಠರಿಗೂ, ತಾಮಸವೃತ್ತಿಯನ್ನವಲಂಬಿಸಿ ಲೋಕಕಂಟಕರಾದ ದುಷ್ಟದಾನವರಿಗೂ ಕೂಡ ನೀನೇ ಮೋಕ್ಷಪ್ರದಾತನು. ಮರೆಹೊಂದಿದ ಶರಣರ ಪಾಪಗಗಳನ್ನು ಪರಿಹರಿಸುತ್ತ ಹರನೆನಿಸಿ ಮೆರೆವ ಪರಮೇಶ್ವರನೇ, ನಿನ್ನಮಹಿಮೆಯು ಅಚಿಂತ್ಯವು. ಮಾಯೆಯನ್ನತಿಕ್ರಮಿಸಿ ಮಹಿಮಾತಿಶಯದಿಂದ ಲೋಕವನ್ನು ಬೆಳಗಿಸುವ ದಯಾಮಯನೇ, ಕರ್ಮಾನುಸಾರವಾಗಿ ದೊರೆತು ಪರಿಹರಿಸಲಾರದೆ ಸಂಕಷ್ಟದಿಂದಲೇ ಅನುಭವಿಸಬೇಕಾದ ಪ್ರಾಪಂಚಿಕರ ನರಕಭಯವನ್ನು ನಿವಾರಿಸುವ ಸಲುವಾಗಿ ಲೀಲಾವಿಗ್ರಹವನ್ನು ಧರಿಸಿಕೊಂಡು ಗೋಚರಿಸುವುದರಿಂದಲೇ ನಿನ್ನ ಪರಾರ್ಥತೆಯು ವ್ಯಕ್ತವಾಗುವುದು.

ಗಿರೀಶನೇ, ರಾಗವಿರಹಿತಚಿತ್ತನಾಗಿಯೂ ನೀನು ವಿಲಾಸಪ್ರಿಯನು! ಅರ್ಧನಾರೀಶ್ವರನೆನಿಸಿಯೂ ಕಾಮಾಂತಕನು! ಜಗದ್ವಂದ್ಯನೆನಿಸಿಯೂ ಪ್ರಾತಃಸಂಧ್ಯೆಗಳಲ್ಲಿ ವಿಧಾತನನ್ನು ವಂದಿಸುವವನು! ದೇವದೇವನೇ, ಇಂತಹ ವಿಪರೀತ ವರ್ತನೆಯುಳ್ಳ ನಿನ್ನ ಚೇಷ್ಟೆಯು ತಿಳಿಯಲು ಅಸಾಧ್ಯವು. ಶಂಕರನೇ, ನಿನಗೆ ಒರಟಾದ ಗಜಾಜಿನವೇ ಉತ್ತರಿಗೆಯು! ತಲೆಯಲ್ಲಿ

ಜಗಜಗಿಸುವ ಮಾಣಿಕ್ಯವುಳ್ಳ ಮಹಾಸರ್ಪವೇ ಕಟಿಸೂತ್ರವು! ಬಾಗಿದ ಚಂದ್ರನೇ ಸೂಡಿದ ಕೇದಗೆಯು! ಅರ್ಧನಾರೀಶ್ವರನಾಗಿ ಲೋಕವಿರುದ್ಧವಾದ ಉಡಿಗೆ ತೊಡಿಗೆಗಳಿಂದ ವಿರಾಜಿಸುತ್ತಿರುವ ಮಹೇಶ್ವರನೇ, ನಿರಾಕಾರನೆನಿಸಿಯೂ ಸಾಕಾರನೆನಿಸಿ ಮೆರೆಯುವ ನಿನ್ನ ಚರಿತ್ರೆಯೇ ವಿಚಿತ್ರತರವಾದುದು. ಲೋಕದಲ್ಲಿರುವ ಜೀವಜಾಲಗಳೆಲ್ಲವೂ ಜನ್ಮಜರಾಮರಣಗಳೆಂಬ ನಿಯಮಕ್ಕೊಳಪಟ್ಟಿರುವಾಗ ನೀನೊಬ್ಬನೇ ಅದರಿಂದ ಹೊರಗಾದವನು. ನಿನಗೆ ಸರಿಯಾದ ಉಪಮಾನೋಪಮೇಯಗಳು ಲೋಕದಲ್ಲಿಲ್ಲದುದರಿಂದಲೇ ನೀನು ಸರ್ವಲೋಕೋತ್ತರನು.

ಸ್ಥಾವರಜಂಗಮಾತ್ಮಕವಾದ ಲೋಕವನ್ನು ಸೃಜಿಸಿದ ಪರಮಾತ್ಮನೇ, ನಿನ್ನ ದಯಾವಲೋಕನದಿಂದಲೇ ಲೋಕವ್ಯಾಪಾರಗಳೆಲ್ಲವೂ ಸಾಂಗವಾಗಿ ನೆರವೇರುವುವು. ಯೋಗಿಗಳು ನಿಯಮನಿಷ್ಠೆಗಳಲ್ಲಿ ನಿರತರಾಗುವುದಕ್ಕೂ ಕರ್ಮದ ಫಲವನ್ನನುಭವಿಸುವುದಕ್ಕೂ ನೀನೇ ಕಾರಣವು. ನಿನ್ನ ಕ್ರೋಧವೇ ಮಹಾಪ್ರಳಯವು. ತ್ರ್ಯಂಬಕನೂ, ತ್ರಿಗುಣಾತ್ಮಕನೂ, ತ್ರಿಜಗನ್ಮಯನೂ, ಎನಿಸಿ ಮೆರೆವ ಪರಮೇಶ್ವರನೇ, ಸೃಷ್ಟಿಕರ್ತನೂ ನೀನೇ; ವಿಶ್ವಂಭರನೂ ನೀನೇ; ಜಗತ್ಸಂಹಾರಕನೂ ನೀನೇ; ನರಸುರೋರಗದೈತ್ಯದಾನವರೆಂಬ ಭಿನ್ನಭಾವನೆಯಿಲ್ಲದೆ, ಎಲ್ಲರನ್ನೂ ಅಧಿಕಾರದಿಂದ ಸಲಹುತ್ತಿರುವ ಪರಮೇಶ್ವರನೇ, ನೀನೇ ಶರಣೆಂದೆರಗುವೆನು! ಶರಣರ ಸಂಕಷ್ಟಗಳನ್ನು ಪರಿಹರಿಸಿ ವರಪ್ರದನೆಂದು ಮೆರೆಯುತ್ತಿರುವ ಹರನೇ, ನೀನೇ ಸಲಹೆಂದು ನಮಿಸುವೆನು! ಭಕ್ತರ ಕಾಂಕ್ಷೆಗಳನ್ನು ನೆರವೇರಿಸಿ ಪರಿಪೂರ್ಣತೆಯಿಂದ ವಿರಾಜಿಸುವ ಶಂಕರನೇ ನೀನೇ ಪರಿಪಾಲಿಸೆಂದು ದೈನ್ಯದಿಂದ ಪಾದಗಳಲ್ಲಿ ಮಣಿದು ಬೇಡಿಕೊಳ್ಳುವೆನು.

ನಿನ್ನ ಯಾವ ಬಲದ ಮೂಲಕವಾಗಿ ನಿಖಿಲಬ್ರಹ್ಮಾಂಡವೂ ನೆಲಸಿರುವುದೋ; ನಿನ್ನ ಯಾವ ಬಲದ ಮೂಲಕವಾಗಿ ವರ್ಣಾತ್ಮಕಧ್ವನಿಯುಂಟಾಗುವುದೋ; ನಿನ್ನ ಯಾವ ಬಲದ ಮೂಲಕವಾಗಿ ಕಂಗೆಡಿಸುವ ದುರಿತಗಳೆಲ್ಲವೂ ನಿವಾರಣೆಹೊಂದುವುವೋ; ಆ ಪವನಾತ್ಮಕನಾಗಿ ಮೆರೆವ ಶಿವನೇ ನಿನ್ನನ್ನಭಿವಂದಿಸುವೆನು! ಉತ್ತಮವಾದ ಯೋಗಾಸನದಲ್ಲಿ ಕುಳಿತುಕೊಂಡು ಭಕ್ತರು ನಿನ್ನನ್ನು ಧ್ಯಾನಿಸುತ್ತಿರಲು, ಅವರ ಸುತ್ತಲೂ ಹರಡಿ

ಪೀಡಿಸುವ ಜನ್ಮಹೇತುಗಳಾದ ಕರ್ಮದ ಬೇರುಗಳನ್ನು ದಹಿಸುವ ಸಲು ವಾಗಿ ಜ್ವಾಲೆಗಳನ್ನು ಧರಿಸಿ ದಳ್ಳಿಸುವ ಪಾವಕಾತ್ಮಕನೆನಿಸಿ ಮೆರೆವ ಶಿವನೇ ನಿನ್ನನ್ನಭಿವಂದಿಸುವೆನು! ಸಕಲಕಾರಣಾತ್ಮಕನೇ ಭವನೇ, ಜನನಮರಣ ಗಳ ಭಯವೆಂಬ ಜ್ವಾಲೆಗಳೊಡನೆ ಧಗಧಗಿಸುವ ಸಂಸಾರಾಗ್ನಿಯಿಂದ ಬೆಂದು ನೊಂದ ಜನರೆಲ್ಲರೂ ತನ್ನನ್ನು ಹೊಂದಿ ಚೇತರಿಸಿ ಜೀವಿಸಬೇಕೆಂದು ಜೀವನಾತ್ಮಕನೆನಿಸಿ ಮೆರೆವ ಶಿವನೇ ನಿನ್ನನ್ನಭಿವಂದಿಸುವೆನು! ವಿಭುವೇ ಭವನೇ, ಸಮಸ್ತವಸ್ತುವ್ಯಾಪಕನೂ, ಅನಾವೃತನೂ, ಅತೀಂದ್ರಿಯನೂ, ಅವಿಜ್ಞೇಯನೂ ಎನಿಸಿ ವ್ಯೋಮರೂಪಾತ್ಮಕನಾಗಿ ಮೆರೆವ ಶಿವನೇ ನಿನ್ನನ್ನು ಅಭಿವಂದಿಸುವೆನು!

ಅತಿಸೂಕ್ಷ್ಮತರನಾಗಿದ್ದೂ ಜಗದಾಧಾರನಾಗಿ ಮೆರೆವ ಮಹಾನಟನೇ, ನಿನಗೆ ವಂದನೆಯು! ಸಮೀಪದಲ್ಲಿದ್ದೂ ಗೋಚರಿಸದೆ ಅಂತರ್ಯಾಮಿ ಯಾದ ಜಗದೀಶ್ವರನೇ ನಿನಗೆ ವಂದನೆಯು! ಗ್ರಹಿಸಲಾರದಂತೆ ದೂರದಲ್ಲಿ ಸ್ಥೂಲರೂಪದಿಂದ ಮೆರೆವ ಮಹಾವಿಭುವೇ ನಿನಗೆ ವಂದನೆಯು! ಜ್ಞಾನೇಂ ದ್ರಿಯಗಳ ಮೇರೆಮೀರಿ ವಿಹರಿಸುವ ಪರಮಪ್ರಭಾವಾನ್ವಿತನೇ, ಶಂಕರನೇ ನಿನಗೆ ಒಗುಮಿಗೆಯ ವಂದನೆಯು—ವಂದನೆಯು!

ಹರನೇ, ನೀನು ಕಿರಾತಮೂರ್ತಿಯಾಗಿ ಬಂದುದನ್ನು ನೋಡಿಯೂ ತಿಳಿಯದೆ ಹೋದೆನೇ? ಈಶ್ವರನೇ, ನಿನ್ನ ಸಂಧಾನರೂಪದ ಉಪದೇಶ ವನ್ನೂ ಗ್ರಹಿಸದಾದೆನೇ? ಬಗೆಬಗೆಯ ಶಸ್ತ್ರಾಸ್ತ್ರಗಳನ್ನು ಹೂಡಿ ಜಗದೊಡೆ ಯನಲ್ಲಿ ಅಪರಾಧವೆಸಗಿದೆನೇ? ಮಹಾದೇವ, ಅಪರಾಧವೆಸಗಿ ಶರಣಾಗತ ರಾದ ದುರಾತ್ಮರಿಗೂ ನೀನೇ ಗತಿಯಲ್ಲವೆ? ಮೃಡನೇ ಅಜ್ಞಾನಿಯಾಗಿ ಹೊಡೆದು ಶತಾಪರಾಧವೆಸಗಿದ ಬಡವನನ್ನು ಕಡೆಗಣಿಸದೆ ಕ್ಷಮಿಸಿ ಉದ್ಧ ರಿಸಬೇಕೆಂದು ಬೇಡಿಕೊಳ್ಳುವೆನು. ಧರ್ಮಪ್ರಿಯನಾದ ಪರಮ ಪ್ರಭುವೇ, ಪರಲೋಕದಲ್ಲಿರುವ ವಿಶ್ವಾಸದಿಂದ ಪರಿಶುದ್ಧವಾದ ವೈದಿಕ ಧರ್ಮವನ್ನನುಸರಿಸಿ ನಡೆಯುತ್ತಿರುವ ಧರ್ಮಾತ್ಮಜನಾದ ಯುಧಿಷ್ಠಿರ ನನ್ನು ಮೋಸಗೊಳಿಸಿದ ವೈರಿಗಳೊಡನೆ ಬಿಡದೆ ಹೋರಾಡಿ ಜಯಶೀಲ ನಾಗುವಂತೆ ಲೋಕೇಶ್ವರನೇ ಶಂಕರನೇ ನನಗೆ ಉತ್ತಮವಾದ ಅಸ್ತ್ರವಿದ್ಯೆ ಯನ್ನು ಉಪದೇಶಿಸಬೇಕು.

ಈ ರೀತಿಯ ಕೋರಿಕೆಯೊಡನೆ ವಿನಮಿತನಾದ ಅರ್ಜುನನನ್ನು ಶಂಕರನು ವಾತ್ಸಲ್ಯದಿಂದ ಹಿಡಿದೆತ್ತಿ ಮೈದಡವಿ ಸಮಾಧಾನಪಡಿಸಿದನು. ಮಾತ್ರವಲ್ಲ; ಆ ಮಹಾರುದ್ರನು ಸುತ್ರಾಮಸುತನಾದ ಪಾರ್ಥನಿಗೆ ಜ್ವಾಲಾಮಾಲೆಗಳಿಂದ ದೇದೀಪ್ಯಮಾನವಾಗಿ ಬೆಳಗುವ ರುದ್ರದೇವತಾತ್ಮಕವಾದ "ಪಾಶುಪತ"ವೆಂಬ ದಿವ್ಯಾಸ್ತ್ರವನ್ನೊಳಗೊಂಡ ಧನುರ್ವೇದವನ್ನು ಉಪದೇಶಿಸಿದನು. ಆ ಶುಭಮುಹೂರ್ತದಲ್ಲಿ ಲೋಕಕಲ್ಯಾಣವನ್ನು ಬಯಸುತ್ತ ದೇವತೆಗಳು ಜಯಜಯವೆಂದು ಕೊಂಡಾಡಿದರು. ಅತುಲಪ್ರಭಾವಾನ್ವಿತವಾದ ಧನುರ್ವೇದವು ಲೋಕವಂದ್ಯವಾದ ತೇಜಃಪುಂಜದೊಡನೆ ಜಾಜ್ವಲ್ಯಮಾನವಾಗಿ ವಿಜೃಂಭಿಸುತ್ತ, ಭೀಮಾಕೃತಿಯನ್ನು ಧರಿಸಿ ಮಹೇಶ್ವರನನ್ನು ತ್ರಿಪ್ರದಕ್ಷಿಣೆಗೆಯ್ದು ಬೀಳ್ಕೊಂಡು ಬಂದು ಜಗದೇಕವೀರನಾದ ವಿಜಯನೊಡನೆ ಸೇರಿಕೊಂಡಿತು.

ಕೂಡಲೆ ಇಂದ್ರಾದಿಲೋಕಪಾಲಕರೆಲ್ಲರೂ ಸೇರಿ ಜಯಘೋಷದೊಡನೆ ಅಲ್ಲಿಗೆ ಬಂದು ಮಹೇಶ್ವರನನ್ನು ಪ್ರಾರ್ಥಿಸಿಕೊಂಡರು. ಈಶ್ವರಾನುಜ್ಞೆಯನ್ನು ಶಿರಸಾವಹಿಸಿ, ಅಮಿತಾನಂದಭರಿತರಾಗಿ ಫಲುಗುಣನನ್ನು ಕುರಿತು ಹೀಗೆ ಹರಸಿದರು—"ವಿಜಯನೇ ನೀನು ಕಷ್ಟಸಾಧ್ಯವಾದ ತಪಸ್ಸಿನ ಮೂಲಕ ಜಗದೊಡೆಯನನ್ನು ಮೆಚ್ಚಿಸಿ ಮುಂದಿನ ಏಳಿಗೆಗೆ ಕಾರಣವೂ, ದುಷ್ಟಸಂಹಾರಕ್ಕೆ ಉಪಕರಣವೂ, ಶಿಷ್ಟಪರಿಪಾಲನೆಗೆ ಮೂಲವೂ ಎನಿಸಿದ ಪಾಶುಪತವೆಂಬ ರುದ್ರಮಾರ್ಗಣವನ್ನು ಸಂಪಾದಿಸಿಕೊಂಡಿರುವೆಯಷ್ಟೆ! ಅದು ಭಾರತನಾಟಕದ ರಂಗಪ್ರಸಾಧನೆಯಂತೆ ಬಹು ಸಂತೋಷಕರವು. ವೀರಪುಂಗವನೇ ನೀನು ಭಾರತವೀರನೆಂಬ ಖ್ಯಾತಿಯಿಂದ ಮೆರೆಯುತ್ತ ಎಂದೆಂದಿಗೂ ವಿಜಯಿಯೆನಿಸಿ ಲೋಕದಲ್ಲಿ ಶಾಶ್ವತವಾದ ಶಾಂತಿಯನ್ನು ನೆಲೆಗೊಳಿಸುತ್ತಿರು.

ಹೀಗೆ ಹೊಗಳುತ್ತ ವಾತ್ಸಲ್ಯಾತಿಶಯದಿಂದ ಹರಸುತ್ತ ವೀರಪ್ರವರನೆನಿಸಿದ ಪಾಂಡವನಿಗೆ ತಮ್ಮಲ್ಲಿರುವ ದಿವ್ಯಾಸ್ತ್ರಗಳೆಲ್ಲವನ್ನೂ ಉಪದೇಶಿಸಿದರು.

ದಿಕ್ಪಾಲಕರಿತ್ತ ದಿವ್ಯಾಸ್ತ್ರಗಳೆಲ್ಲವನ್ನೂ ಬಹು ಸಂತೋಷದಿಂದ ಪಡೆದುಕೊಂಡು ಅರ್ಜುನನು ವಿನಯದೊಡನೆ ಜಗದೊಡೆಯನ ಪಾದಪದ್ಮಗ

ಳಿಗೆ ಎರಗಿದನು. ಆತನನ್ನು ಶಂಕರನು ಹಿಡಿದೆತ್ತಿ "ಮಗುವೇ ಮೂರು ಲೋಕಗಳಲ್ಲಿಯೂ ಕೀರ್ತಿಯನ್ನು ನೆಲೆಗೊಳಿಸಿ ಜಯಾಂಗನೆಯ ಒಡನಾಡಿಯಾಗಿ, ಸಹೋದರರೊಂದಿಗೆ ಸುಖಸಂತೋಷದಿಂದ ಪೊಡವಿಯನ್ನು ಪಾಲಿಸುವುದರಲ್ಲಿ ತತ್ಪರನಾಗಿರು! ಆಶ್ರಮದಲ್ಲಿ ನಿನ್ನ ದಾರಿಯನ್ನೇ ಇದಿರು ನೋಡುತ್ತಿರುವ ಸಹೋದರರನ್ನೂ ಮಡದಿಯನ್ನೂ ಸಮಾಧಾನಗೊಳಿಸು! ಬೇಗನೆ ಹೋಗು" ಎಂದಾಜ್ಞಾಪಿಸಿ ಕೂಡಲೆ ಅಂತರ್ಹಿತನಾದನು.

ನರನು ಹರನ ನಿರೂಪವನ್ನು ಶಿರಸಾವಹಿಸಿ ಉದ್ದೇಶಸಿದ್ಧಿಯ ಒಸಗೆಯನ್ನು ತನ್ನವರಿಗೆ ತಿಳಿಸಬೇಕೆಂಬ ಲವಲವಿಕೆಯೊಡನೆ, ಬಂದ ದಾರಿಯನ್ನು ಹಿಡಿದು ಹೋಗಿ, ಆಶ್ರಮದಲ್ಲಿ ಧರ್ಮವಿಚಾರಮಾಡುತ್ತಿದ್ದ ಧರ್ಮಜನ ಪಾದಪದ್ಮಗಳಿಗೆ ವಿನಯಪೂರ್ವಕವಾಗಿ ನಮಸ್ಕರಿಸಿ, ಮಹೇಶ್ವರನ ಒಲವನ್ನೂ ದಿಕ್ಪಾಲಕರ ಔದಾರ್ಯವನ್ನೂ, ತನಗೆ ಬಂದ ಬಲವನ್ನೂ ವಿಜಯದ ನಿದಾನವನ್ನೂ ವಿವರಿಸಿ ತಿಳಿಸಿದನು.

ಒಪ್ಪೋಲೆ

ಪುಟ ಸಂಖ್ಯೆ	ಪಙ್ಕ್ತಿ	ತಪ್ಪು	ಒಪ್ಪು
7	20	ಕಮಲಯೋಗಿ	ಕಮಲಯೋನಿ
18	7	ಸೆಂಹಿಣಿ	ಸಿಂಹಿಣಿ
35	4	ಪೂಲ	ಮೂಲ
36	13	ನಿನ್ಯ	ನಿನ್ನ
46	17	ವೈರಿಕೃತವಾವ	ವೈರಿಕೃತವಾದ
47	23	ಪೋಖಲೆ	ಮೇಖಲೆ
54	7	ದೇದೀಪ್ಯಮಾನು	ದೇದೀಪ್ಯಮಾನ
55	15	ದೇವೆಂದ್ರ	ದೇವೇಂದ್ರ
56	21	ದುಸರ	ದುಸ್ತರ
58	5	ರಸಾಲಯಗಳು	ರಸಾಲಗಳು
66	20	ಶ್ಯಾಮುಲ	ಕೋಮಲ
71	23	ವುಷ್ಪ	ಪುಷ್ಪ
71	24	ತಪಶ್ಯಕ್ತಿ	ತಪಶ್ಯಕ್ತಿ
72	1	ಫುಲಿನಸಳ	ಪುಲಿನಸ್ಥಳ
73	16	ಆಸ್ಥಾನ	ಅಸ್ಥಾನ
76	5	ಅಲಿಮಾಲೆಗಳ	ಅಲಿಮಾಲೆಗಳ ಮೂಲಕ
81	1	ಗುಣಂಸಪತ್ತನ್ನು	ಗುಣಸಂಪತ್ತನ್ನು
85	19	ರಾಜ್ಯ, ನಾಲ್ವರು ತಮ್ಮಂದಿರು, ಪತ್ನಿ ಯಾದ ದ್ರೌಪದಿ, ತಾನು.	ತಾನು, ರಾಜ್ಯ, ನಾಲ್ವರು ತಮ್ಮಂದಿರು, ಪತ್ನಿಯಾದ ದ್ರೌಪದಿ.
92	26	ಸರ್ವಭೋಗ	ಸರ್ಪಭೋಗ
95	14	ಜಲಚರವೆನ್ನದೆ	ಜಲಚರವೆನ್ನದೆ ಎಲ್ಲವನ್ನೂ ಬಿಡದೆ ಕೆಡಹುವ.
104	6	ನಮ್ಮ ಮೇಲೆ	ನಿನ್ನ ಮೇಲೆ
112	5	ಸಜ್ಜನರಿಗ	ಸಜ್ಜನರಿಗೆ
116	9	ಗರಿಗುಹಾರಣ್ಯ	ಗಿರಿಗುಹಾರಣ್ಯ
119	12	ಆತನ	ಆತನು
119	16	ಕ್ರಿಡಾಂಗಣ	ಕ್ರೀಡಾಂಗಣ
121	17	ಮುತ್ತನ	ಮುತ್ತುನ
121	23	ಸನ್ನದ್ದರು	ಸನ್ನದ್ಧರು

ಶರಣವಚನಗಳು